# ಬುದ್ಧನ ಜೀವನ ಕಥೆ

## ಮಕ್ಕಳಿಗಾಗಿ

ಮೂಲ:

**ಪೂಜ್ಯ ಶ್ರೀ ಸಿರಿಧಮ್ಮ**

ಅನುವಾದಕರು

**ರುಕ್ಮಿಣಿ ಗಿರಿಮಾಜಿ**

ಪ್ರಕಾಶಕರು

ಮಹಾಬೋಧಿ ಸೊಸೈಟಿ

ಬುದ್ಧ ವಚನ ಟ್ರಸ್ಟ್

ಬೆಂಗಳೂರು -೯

**Buddhana Jeevana Kathe** Pages : 110 - a collection of Essence of Buddha's Life and Teaching by Ven. Siridhamma and translated into Kannada by Srimati Rukmini Girimaji

**Published by**

Buddha Vachana Trust,
14, Kalidasa Road,
Gandhinagar, Bangalore-560009,
Karnataka, India.

Tel : 080 - 2250684
Fax : 080 - 2264438
E mail Mahabodhi@vsnl.com

First Edition 2004
© Buddha Vachana Trust

Cover design by Sri C Chandrasekhara

Printed for free distribution by
**The Corporate Body of the Buddha Educational Foundation**
11F., 55 Hang Chow South Road Sec 1, Taipei, Taiwan, R.O.C.
Tel: 886-2-23951198 , Fax: 886-2-23913415
Email: overseas@budaedu.org
Website:http://www.budaedu.org
Mobile Web: m.budaedu.org
**This book is strictly for free distribution, it is not to be sold.**
ಈ ಪುಸ್ತಕ ಕೇವಲ ಉಚಿತ ಹಂಚಿಕೆಗಾಗಿ. ಮಾರಾಟ ಮಾಡಕೂಡದು

## *GRATITUDE*

*"Sabba danam dhamma danam jinati"*
*Of all gifts the gift of Dhamma excells*

*-Dhammapada*

*When the Bodhisatta Siddhatta strived hard under the Bodhi Tree, more than 2500 years ago, his efforts culminated into blooming of a Buddha, Supremely Enlightened One. Since then millions and million of hearts have been kindled with the Light of Dhamma. They all have achieved freedom from sufferings.*

*The Buddha out of immense compassion for all living beings walked from village to village and town to town teaching this noble Dhamma. His saintly disciples too followed that excellent tradition and they shine as exemplars and inspiration for many generations.*

*In today's modern times* ***The Corporate Body of the Buddha Educational Foundation in Taipei, Taiwan****, is practically spreading the Light of the Buddha throughout the world by printing and distributing Dhamma books freely. This is a result of the generosity and the hard work of good-hearted people of Taiwan. For last more than a decade Maha Bodhi Society is receiving these books and distributing in India.*

*On our request to print Kannada books they have so kindly consented. We the people of Karnataka in particular and of India in general offer our heartfelt gratitude to this great Foundation. May the merits accrued by their generous act conduce to good health, peace of mind, well being and wisdom of all those who are responsible for this supreme gift of Dhamma!*

***May all beings be happy!***

*Maha Bodhi Society*
*Buddha Vachana Trust*
*Bangalore*

# ಪ್ರಕಾಶಕರ ಬಿನ್ನಹ

ಭಾರತದ ಸಾಹಿತ್ಯ ಕಲೆ ಮತ್ತು ಸಂಸ್ಕೃತಿಗೆ ಬುದ್ಧ ಧರ್ಮದ ಕೊಡುಗೆ ಅಪಾರ. ಒಂದು ಹೊಸ ಆಯಾಮ, ಹೊಸ ರೂಪ, ಹೊಸ ದಿಕ್ಕು, ಚಲನೆ. ಹೀಗೆ ಹಲವು ಹೊಸತುಗಳನ್ನು ಜೋಡಿಸಿ, ವಿಶ್ವಮಾನ್ಯತೆ ಗಳಿಸಲು ಸಾಧ್ಯವಾಯಿತು.

ಪಾಲಿ ಭಾಷೆಯಲ್ಲಿರುವ ೩ ಪಿಟಕಗಳ ಅಗಾಧ ಸಾಹಿತ್ಯ ರಾಶಿ, ಅಜಂತ ಎಲ್ಲೋರಗಳಂತಹ ಕಲೆಯ ವೈಭವದ ಸ್ತೂಪ, ವಿಹಾರ, ಗುಹೆಗಳ ಮಹಾನತೆಯ ಛಾಪು, ಭಾರತದ ಪ್ರತಿ ಹಳ್ಳಿಯಲ್ಲಿಯೂ ಅಜರಾಮರವಾಗಿ ಸಾಂಸ್ಕೃತಿಕ ಸೇತುವಾಗಿ ಉಳಿದಿರುವ ''ಬೋಧಿವೃಕ್ಷ'' ಭಾರತೀಯ ಭವ್ಯ ಪರಂಪರೆಯಲ್ಲಿ ಹಾಸುಹೊಕ್ಕಾಗಿರುವ ಶಕಪುರುಷ ಭಗವಾನ್ ಬುದ್ಧರ ಉಪದೇಶ ಸಾರಸತ್ವಗಳು ಪ್ರಪಂಚದ ಮಾನವರ ಬದುಕನ್ನು ಹಸನುಗೊಳಿಸುವಲ್ಲಿ ಇಂದಿಗೂ ಮನಮುಟ್ಟುತ್ತಿವೆ.

ಇಂತಹ ಅಭೂತವಾದ ಭಗವಾನರ ನುಡಿಗಳನ್ನು ಜನಸಾಮಾನ್ಯರಿಗೆ ದೊರಕುವ ರೀತಿಯಲ್ಲಿ ಪ್ರಕಾಶನ ಮಾಡುವ ಜವಾಬ್ದಾರಿಯನ್ನು ಮಹಾಬೋಧಿ ಸೊಸೈಟಿ, ಬುದ್ಧ ವಚನ ಟ್ರಸ್ಟ್ ಬೆಂಗಳೂರು ರವರು ಆಸಕ್ತಿಯಿಂದ ವಹಿಸಿಕೊಂಡರು. ೧೯೫೬ರಿಂದ ಸುಮಾರು ೪೦ ವರ್ಷಗಳ ಕಾಲ ಅವಿರತವಾಗಿ ನಡೆಸುತ್ತಿದ್ದೇವೆ.

ಈ ಪುಸ್ತಕ ಪ್ರತಿಗಳನ್ನು ಮುದ್ರಿಸಿ, ಧಮ್ಮ ದಾನ ಕಾರ್ಯ ಮಾಡಿದಂತಹ ದಿ ಕಾರ್ಪೊರೇಟ್ ಬಾಡಿ ಆಫ್ ದಿ ಬುದ್ಧ ಎಜುಕೇಷನ್ ಫೌಂಡೇಷನ್ ತೈಪೆ ತೈವಾನ್‌ರವರಿಗೆ ನಾವು ಅತ್ಯಂತ ಉಪಕೃತರಾಗಿದ್ದೇವೆ.

ಕನ್ನಡ ಜನತೆ ಈ ಪುಸ್ತಕಗಳ ಉಪಯೋಗ ಪಡೆಯಲಿ ಬಾಳು ಹಸನಾಗಲಿ ಎಂದು ಹಾರೈಸುತ್ತೇವೆ.

ಪ್ರಕಾಶಕರು,<br>
ಮಹಾಬೋಧಿ ಸೊಸೈಟಿ,<br>
ಬುದ್ಧ ವಚನ ಟ್ರಸ್ಟ್, ಬೆಂಗಳೂರು.

# ಗೌತಮ ಬುದ್ಧ

## ೧. ರಾಜ ಶುದ್ಧೋದನ - ರಾಣಿ ಮಹಾಮಾಯಿ

ಅನೇಕ ವರ್ಷಗಳ ಹಿಂದೆ....

ಶಾಕ್ಯರ ದೊರೆಯಾದ ಕೋಲಿಯಾ ಜನಾಂಗದ ರಾಜಕುಮಾರಿಯಾದ ಮಹಾ ಮಾಯೆಯನ್ನು ವಿವಾಹವಾಗಿದ್ದನು. ಶಾಕ್ಯರು ಬಹಳ ಶೂರ-ವೀರ ಜನಾಂಗದವರಾಗಿದ್ದರು. ಕೋಲಿಯಾದವರು ಅವರ ನೆರೆ ರಾಜ್ಯದವರೇ. ಎರಡೂ ರಾಜ್ಯಗಳು ಭಾರತದ ಉತ್ತರದಲ್ಲಿದ್ದುವು. ಶಾಕ್ಯ ದೇಶದ ರಾಜಧಾನಿ ಕಪಿಲವಸ್ತು.

ಶುದ್ಧೋದನ ಮತ್ತು ಮಹಾಮಾಯೆ ಇಬ್ಬರೂ ಬಹಳ ಗುಣವಂತರೂ, ದಯಾಳುಗಳೂ ಆಗಿದ್ದುದರಿಂದ ರಾಜ್ಯದ ಪ್ರಜೆಗಳೆಲ್ಲರೂ ಅವರನ್ನು ತುಂಬಾ ಪ್ರೀತಿಸುತ್ತಿದ್ದರು. ಆದರೆ ಅವರಿಗೆ ಮಕ್ಕಳಿರಲಿಲ್ಲ. ಮಕ್ಕಳಿಗಾಗಿ ಅವರು ಬಹಳ ಹಂಬಲಿಸುತ್ತಿದ್ದರು.

ಒಂದು ಹುಣ್ಣಿಮೆಯ ದಿನ ಮಹಾರಾಣಿಯು ಒಂದು ಕನಸನ್ನು ಕಂಡಳು. ಏನೆಂದರೆ ನಾಲ್ಕು ಜನ ಅಪ್ಸರೆಯರು ಅವಳನ್ನು ಹಿಮಾಲಯದಲ್ಲಿದ್ದ ''ಅನೋತತ್ತಾ'' ಎಂಬ ಸರೋವರದ ಬಳಿ ಕರೆತಂದರು. ಅಲ್ಲಿ ಅವಳಿಗೆ ಸ್ನಾನ ಮಾಡಿಸಿ ಸ್ವರ್ಗದಲ್ಲಿ ದೇವತೆಗಳು ಉಡುವಂತಹ ವಸ್ತ್ರಗಳನ್ನು ಅವಳಿಗೆ ಉಡಿಸಿದರು. ನಂತರ ಒಂದು ಬಿಳಿ ಆನೆಯು ತನ್ನ ಸೊಂಡಿಲಿನಲ್ಲಿ ಒಂದು ಬಿಳಿಯ ಕಮಲದ ಹೂವನ್ನು ಎತ್ತಿಕೊಂಡು ಬಂದು ಅವಳಿಗೆ ಮೂರು ಪ್ರದಕ್ಷಿಣೆ ಹಾಕಿ ಹೊರಟುಹೋಯಿತು. ಅಷ್ಟರಲ್ಲಿ ಅವಳಿಗೆ ಎಚ್ಚರಿಕೆಯಾಗಿ ನಡೆದದ್ದೆಲ್ಲಾ ಸ್ವಪ್ನವೆಂದು ತಿಳಿಯಿತು.

ಮಾರನೆಯ ದಿನ ಬೆಳಿಗ್ಗೆ ರಾತ್ರಿ ತಾನು ಕಂಡ ಕನಸನ್ನು ರಾಜನಿಗೆ ಹೇಳಿದಳು. ರಾಜನಿಗೆ ಏನು ಹೇಳಬೇಕೋ ತೋಚಲಿಲ್ಲ. ಅವನು ಕೆಲವು ವಿದ್ವಾಂಸರನ್ನು ಕರೆಸಿ ಆ ಕನಸಿನ ಅರ್ಥವೇನೆಂದು ಕೇಳಿದನು.

ಅವರೆಂದರು, ''ಮಹಾಸ್ವಾಮಿ, ತಾವು ಬಲು ಅದೃಷ್ಟವಂತರು, ದೇವತೆಗಳು ಪವಿತ್ರನಾದ ಒಬ್ಬ ಕುಮಾರನನ್ನು ಗರ್ಭದಲ್ಲಿ ಧರಿಸಲಿಕ್ಕಾಗಿ ಮಹಾರಾಣಿಯವರನ್ನು ಆರಿಸಿಕೊಂಡಿದ್ದಾರೆ. ತಮಗೆ ಜನಿಸುವ ಆ ಕುಮಾರನು ಒಬ್ಬ ಮಹಾಪುರುಷನಾಗುತ್ತಾನೆ''. ಈ ವಿಷಯವನ್ನು ಕೇಳಿ ಮಹಾರಾಜರಿಗೂ, ಮಹಾರಾಣಿಯವರಿಗೂ ಬಹಳ ಸಂತೋಷವಾಯಿತು.

ಅವರು ದೇಶದ ಅನೇಕ ಗಣ್ಯರನ್ನೂ, ವಿದ್ವಾಂಸರನ್ನೂ ಭೋಜನಕೂಟಕ್ಕೆ ಆಹ್ವಾನಿಸಿ ಈ ಶುಭ ಸಮಾಚಾರವನ್ನು ಅವರಿಗೆ ತಿಳಿಯಪಡಿಸಿದರು.

ಅಷ್ಟೇ ಅಲ್ಲ. ದೇಶದ ಯಾವ ಪ್ರಜೆಯನ್ನು ಮರೆಯದೆ ಬಡಬಗ್ಗರನ್ನು ಕರೆಯಿಸಿ ಅವರಿಗೆ ಅನ್ನವಸ್ತ್ರಾದಿಗಳನ್ನು ಕೊಟ್ಟು ಸಂತೋಷಪಡಿಸಿದರು.

# ೨. ಲುಂಬಿನಿ ಉದ್ಯಾನದಲ್ಲಿ ಕುಮಾರನ ಜನನ

ಈ ಕನಸನ್ನು ಕಂಡ ರಾಣಿ ಗರ್ಭವತಿಯಾದಳು. ಹತ್ತು ತಿಂಗಳುಗಳಾದ ನಂತರ ಒಂದು ದಿನ ಆಕೆ ಮಹಾರಾಜನ ಬಳಿಗೆ ಬಂದು ಹೇಳಿದಳು-''ಸ್ವಾಮಿ, ನನಗೆ ಈಗ ಹೆರಿಗೆಯ ಸಮಯವಾಗಿದೆ. ನನ್ನನ್ನು ನನ್ನ ತವರು ಮನೆಗೆ ಕಳುಹಿಸಿಕೊಡಬೇಕು''. ಹೆರಿಗೆಗಾಗಿ ತವರು ಮನೆಗೆ ಹೋಗುವುದು ಭಾರತದ ಒಂದು ಸಂಪ್ರದಾಯವಾಗಿರುವುದರಿಂದ ದೊರೆಯು ಒಪ್ಪಿಕೊಂಡು ''ಆಗಲಿ, ನಿನ್ನ ಪ್ರಯಾಣಕ್ಕೆ ನಾನು ಎಲ್ಲಾ ಅನುಕೂಲಗಳನ್ನು ಮಾಡಿಕೊಡುತ್ತೇನೆಂದು'' ಹೇಳಿದನು.

ರಾಜನು ಕೆಲವು ಸೈನಿಕರನ್ನು ರಾಣಿಯು ಹೋಗುವ ದಾರಿಯನ್ನು ಸ್ವಚ್ಛ ಹಾಗೂ ಸುಗಮವಾಗಿ ಮಾಡಲು ಕಳಿಸಿದನು. ಇನ್ನು ಕೆಲವರನ್ನು ಅವಳ ಬೆಂಗಾವಲಿಗಾಗಿ ಹೋಗಲು ಕಳಿಸಿದನು. ರಾಣಿಯು ಕುಳಿತುಕೊಳ್ಳುವ ಪಲ್ಲಕ್ಕಿಯು ಅಂದವಾಗಿ ಅಲಂಕೃತಗೊಂಡಿತು. ರಾಣಿಯು ಕಪಿಲವಸ್ತುವನ್ನು ಬಿಟ್ಟು ತನ್ನ ತಂದೆಯ ಮನೆಗೆ ಪ್ರಯಾಣ ಮಾಡುವಾಗ ಅವಳ ಜೊತೆಯಲ್ಲಿ ಸೈನಿಕರ, ಬೆಂಗಾವಲಿನವರ, ಸಖಿಯರ ಒಂದು ದೊಡ್ಡ ಮೆರವಣಿಗೆಯೇ ಹೊರಟಿತು.

ಹೀಗೆ ಕೋಲಿಯಾ ದೇಶಕ್ಕೆ ಹೋಗುತ್ತಿರುವಾಗ ಅವರು ಒಂದು ಸುಂದರವಾದ ಉದ್ಯಾನವನದ ಮುಖಾಂತರವಾಗಿ ಹೊರಟರು. ಆ ಉದ್ಯಾನದ ಹೆಸರು ಲುಂಬಿನಿ ಎಂದು. ಆ ಉದ್ಯಾನವು ಹಿಮಾಲಯದ ತಪ್ಪಲಿನಲ್ಲಿರುವ ನೇಪಾಳವೆಂಬ ದೇಶದಲ್ಲಿತ್ತು. ಆಗ ವಸಂತ ಮಾಸವಾಗಿದ್ದುದರಿಂದ ಉದ್ಯಾನದ ಶಾಲವೃಕ್ಷಗಳಲ್ಲಿ ಸುಗಂಧಭರಿತವಾದ ಹೂವುಗಳು ಅರಳತೊಡಗಿದ್ದುವು. ಆ ವೃಕ್ಷಗಳ ಮೇಲೆ ಸಾವಿರಾರು ಪಕ್ಷಿಗಳು, ಜೇನ್ನೊಣಗಳು ಹಾಗೂ ಇತರ ದುಂದುಭಿಗಳಿದ್ದುವು.

ಆ ಸುಂದರ ಉದ್ಯಾನದಲ್ಲಿದ್ದ ಮರಗಳನ್ನೂ, ಸುಗಂಧಭರಿತ ಹೂವುಗಳನ್ನೂ, ಪಕ್ಷಿಗಳನ್ನೂ, ದುಂಬಿಗಳನ್ನೂ ಕಂಡು ರಾಣಿಯ ಮನಸ್ಸು ಆಕರ್ಷಿತವಾಯಿತು. ಆ ಉದ್ಯಾನವು ವಿಶ್ರಮಿಸಿಕೊಳ್ಳಲು ಒಳ್ಳೆಯ ಸ್ಥಳವೆನಿಸಿದ್ದರಿಂದ ರಾಣಿಯು ಸ್ವಲ್ಪ ಹೊತ್ತಿಗೆ ತನ್ನ ಪಲ್ಲಕ್ಕಿಯನ್ನು ಕೆಳಗಿಳಿಸಲು ಹೇಳಿದಳು. ಹೀಗೆ ಅವಳು ಒಂದು ಶಾಲವೃಕ್ಷದ ಕೆಳಗೆ ವಿಶ್ರಮಿಸಿಕೊಳ್ಳುತ್ತಿರುವಾಗ ಒಂದು ಗಂಡು ಮಗು ಹುಟ್ಟಿತು. ಅಂದು ಬಹಳ ಒಳ್ಳೆಯ ಶುಭ ದಿನವಾಗಿತ್ತು. ಅಂದು ವೈಶಾಖ ಶುದ್ಧ ಹುಣ್ಣಿಮೆಯಾಗಿತ್ತು. ಆಗ ಕ್ರಿಸ್ತಪೂರ್ವ ೬೨೩ನೇ ಇಸವಿಯಾಗಿತ್ತು.

ಹುಟ್ಟಿದ ಈ ಮಗುವು ಆಗಲೇ ಏಳು ಹೆಜ್ಜೆಗಳನ್ನಿಟ್ಟು ನಡೆಯತೊಡಗಿತೆಂದೂ, ಅದು ಇಟ್ಟ ಪ್ರತಿ ಹೆಜ್ಜೆಗೂ ಒಂದೊಂದು ಕಮಲ ಪುಷ್ಪಗಳು ಹುಟ್ಟಿ ಮಗುವಿನ ಪಾದಗಳು ನೆಲವನ್ನು ಸೋಕದೆ ಕಮಲ ಪುಷ್ಪಗಳ ಮೇಲೆ ನಡೆಯಿತು.

ತನಗೆ ಗಂಡು ಮಗು ಹುಟ್ಟಿದ ನಂತರ ಮಹಾಮಾಯಾ ರಾಣಿಯು ಕಪಿಲವಸ್ತುವಿಗೆ ಹಿಂದಿರುಗಿಹೋದಳು.

ರಾಜನಿಗೆ ಇದನ್ನು ಕೇಳಿ ಬಹಳ ಸಂತೋಷವಾಯಿತು. ರಾಜ್ಯದಲ್ಲೆಲ್ಲಾ ಪ್ರಜೆಗಳಿಗೆ ಸಂಭ್ರಮವೋ ಸಂಭ್ರಮ.

## ೩. ನಾಮಕರಣ ಮಹೋತ್ಸವ

ಮಹಾರಾಜನಾದ ಶುದ್ಧೋದನನ ಬಳಿ ಒಬ್ಬ ವಯಸ್ಕನಾದ ಆಚಾರ್ಯನಿದ್ದನು. ಈತನು ಬಹಳ ವಿದ್ವಾಂಸನೂ, ಬುದ್ಧಿವಂತನೂ ಆಗಿದ್ದುದರಿಂದ ಜನಗಳು ಇವನನ್ನು ಒಬ್ಬ ತಪಸ್ವಿಯೆಂದು ತಿಳಿದಿದ್ದರು. ಈತನ ನಿಜವಾದ ಹೆಸರು ಕಾಲದೇವಲ. ಆದರೆ ಜನರು ಈತನನ್ನು ಅಸಿತ ಮುನಿಯೆಂದು ಕರೆಯುತ್ತಿದ್ದರು. ಅಸಿತ ಮುನಿಯು ಕಾಡಿನಲ್ಲಿ ವಾಸಿಸುತ್ತಿದ್ದನು. ಈತನು ಮಹಾರಾಜನಿಗೆ ಪುತ್ರ ಜನನವಾದದ್ದನ್ನು ಕೇಳಿ ಬಹಳ ಸಂತೋಷಪಟ್ಟನು. ಏಕೆಂದರೆ ಇದು ರಾಜನ ಮೊದಲ ಶಿಶುವಾಗಿತ್ತು.

ಮಾರನೆಯ ದಿನ ಈತನು ಮಗುವನ್ನು ನೋಡಲು ಬಂದನು. ರಾಜನಿಗೆ ತನ್ನ ಹಳೆಯ ಗುರುವನ್ನು ಕಂಡು ಅತ್ಯಾನಂದವಾಯಿತು. ಅರಮನೆಯಲ್ಲಿ ತನ್ನ ಗುರುವನ್ನು ಕುಳ್ಳಿರಿಸಿ ರಾಜನು ತನ್ನ ಮಗುವನ್ನು ತಂದು ಗುರುಗಳ ಮುಂದೆ ಹಿಡಿದು ಹೇಳಿದನು-''ಗುರುಗಳೇ, ನನ್ನ ಮಗು ನಿನ್ನೆ ತಾನೇ ಹುಟ್ಟಿದೆ. ದಯವಿಟ್ಟು ಇವನ ಭವಿಷ್ಯವೇನೆಂದು ಹೇಳಿ''.

ಹೀಗೆಂದು ರಾಜನು ತನ್ನ ಮಗುವನ್ನು ಕೆಳಗೆ ಹಿಡಿದು ಗುರುಗಳು ಅದನ್ನು ಚೆನ್ನಾಗಿ ಪರಿಶೀಲಿಸಲು ಅಣಿಮಾಡಿದನು. ಆಗ ಆ ಮಗುವು ತನ್ನ ಪುಟ್ಟ ಪಾದವನ್ನು ಗುರುವಿನ ತಲೆಯ ಮೇಲಿಟ್ಟಿತು. ಅಸಿತಮುನಿಯು ಆಶ್ಚರ್ಯಗೊಂಡು, ಮಗುವನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಅದರ ಪಾದಗಳನ್ನು ಪರೀಕ್ಷಿಸಿದನು. ಅವನಿಗೆ ಕೂಸಿನ ಪಾದಗಳ ಮೇಲೆ ಕೆಲವು ಚಿಹ್ನೆಗಳು ಕಂಡವು- ಆಗ ಆತನು ಎದ್ದುನಿಂತು ಹೇಳಿದನು-''ಈ ಯುವರಾಜನು ಪ್ರಪಂಚಕ್ಕೆಲ್ಲಾ ಗುರುವಾಗುತ್ತಾನೆ''. ಮುನಿಯು ಪ್ರಸನ್ನನಾಗಿ ತನ್ನ ಎರಡೂ ಕೈಗಳನ್ನು ಜೋಡಿಸಿ ಮಗುವಿಗೆ ವಂದನೆಯನ್ನು ಮಾಡಿದನು. ರಾಜನು ಇದನ್ನು ನೋಡಿ ತಾನೂ ಅಂತೆಯೇ ಮಾಡಿದನು. ಇದು ರಾಜನ ಮೊದಲ ನಮಸ್ಕಾರವಾಗಿತ್ತು.

ಪ್ರತಿಯೊಬ್ಬರೂ ಮುನಿಯ ಭವಿಷ್ಯವಾಣಿಯಿಂದ ಸಂತಸಗೊಂಡರು.

ಐದನೆಯ ದಿನ ರಾಜನು ಐದು ಜನ ಆಚಾರ್ಯರನ್ನು ಕರೆಯಿಸಿ ನಾಮಕರಣೋತ್ಸವವನ್ನು ಮಾಡಬೇಕೆಂದು ತಿಳಿಸಿ ಮಗುವಿಗೆ ಒಂದು ಒಳ್ಳೆಯ ಹೆಸರನ್ನು ಸೂಚಿಸಲು ಕೇಳಿಕೊಂಡನು. ಅವರು ಮಗುವನ್ನು ಪರೀಕ್ಷಿಸಿ, ಅದರ ಮೈಮೇಲಿನ ಚಿಹ್ನೆಗಳನ್ನು ಪರಿಶೀಲಿಸಿ ಕೊನೆಗೊಂದು ನಿರ್ಣಯಕ್ಕೆ ಬಂದು - ಈ ಮಗುವು ತಾನು ರಾಜನಾಗಬೇಕೆಂದು ಅಪೇಕ್ಷಿಸಿದಲ್ಲಿ ದೊರೆಗಳಿಗೆ ದೊರೆಯಾಗುವನು. ಅವನು ಧಾರ್ಮಿಕ ಜೀವನವನ್ನು ಬಯಸಿದಲ್ಲಿ ಅವನು ಮಹಾ ಬುದ್ಧಿವಂತನಾಗುತ್ತಾನೆ- 'ಬುದ್ಧ'ನಾಗುತ್ತಾನೆ ಎಂದು ಹೇಳಿದರು.

ಅವರಲ್ಲಿ ಅತ್ಯಂತ ಕಿರಿಯನಾದ ಕೊಂಡಞ್ಞನೆಂಬ ಆಚಾರ್ಯನು ಹೇಳಿದನು-ಇವನು ಬುದ್ಧನಾಗುತ್ತಾನೆಯೇ ಹೊರತೂ ಬೇರೆ ಏನೂ ಆಗುವುದಿಲ್ಲ.

ಆಗ ಅವರೆಲ್ಲರೂ ಸೇರಿ ಮಗುವಿಗೆ 'ಸಿದ್ಧಾರ್ಥ'ನೆಂದು ನಾಮಕರಣ ಮಾಡಿದರು. ಸಿದ್ಧಾರ್ಥನೆಂದರೆ ಇಚ್ಛೆಯನ್ನು ಪೂರೈಸಿಕೊಂಡವನು .

# ೪. ವಿದ್ಯಾಭ್ಯಾಸ

ಮಗುವು ಹುಟ್ಟಿದ ಏಳನೆಯ ದಿನ ಮಹಾಮಾಯಾ ಮೃತಳಾದಳು. ರಾಜನಿಗೆ ಪ್ರಜಾಪತಿ ಗೌತಮಿ ಎನ್ನುವ ಇನ್ನೊಬ್ಬ ಹೆಂಡತಿಯಿದ್ದಳು. ಅವಳು ಮಹಾಮಾಯಳ ತಂಗಿ. ಮಹಾಮಾಯಾ ತೀರಿಕೊಂಡ ದಿನವೇ ಅವಳಿಗೆ ಒಂದು ಗಂಡುಮಗುವಾಗಿತ್ತು. ಪ್ರಜಾಪತಿ ಗೌತಮಿಯು ತನ್ನ ಮಗು ನಂದನನ್ನು ಒಬ್ಬ ದಾದಿಯ ವಶಕ್ಕೆ ಕೊಟ್ಟು ಸಿದ್ಧಾರ್ಥನನ್ನು ತನ್ನ ಸ್ವಂತ ಮಗುವಿನಂತೆ ಪಾಲಿಸುತ್ತಿದ್ದಳು. ಅವಳು ಮಗುವನ್ನು ತುಂಬಾ ಪ್ರೀತಿಸುತ್ತಿದ್ದಳು. ಸಿದ್ಧಾರ್ಥನಿಗೆ ತಾಯಿಯ ಜ್ಞಾಪಕವೇ ಇರಲಿಲ್ಲ.

ಸಿದ್ಧಾರ್ಥನು ಇನ್ನೂ ಎಳೆಯನಾಗಿರುವಾಗಲೇ ಶುದ್ಧೋದನನು ಅವನನ್ನು ಶಾಲೆಗೆ ಸೇರಿಸಿದನು. ಅವನ ತರಗತಿಯಲ್ಲಿ ಬಹಳ ದೊಡ್ಡ ಮನೆತನಗಳಿಂದ ಬಂದ ಅನೇಕ ಮಕ್ಕಳಿದ್ದರು. ಸಿದ್ಧಾರ್ಥನ ಉಪಾಧ್ಯಾಯರ ಹೆಸರು ಸರ್ವಮಿತ್ರ ಎಂದು.

ಸಿದ್ಧಾರ್ಥನು ಅನೇಕ ಭಾಷೆಗಳನ್ನು ಓದುವುದನ್ನೂ, ಬರೆಯುವುದನ್ನೂ ಕಲಿತನು. ಅಲ್ಲದೆ ಜೊತೆಗೆ ಗಣಿತ, ಚರಿತ್ರೆ, ಭೂಗೋಳ, ವಿಜ್ಞಾನಗಳನ್ನೂ, ಮುಷ್ಠಿಯುದ್ಧ, ಬಿಲ್ಲಿನ ವಿದ್ಯೆ, ಕುಸ್ತಿ ಹೀಗೆ ಅನೇಕ ವಿದ್ಯೆಗಳನ್ನು ಕಲಿತನು. ಶಾಲೆಯ ಇತರ ಮಕ್ಕಳಿಗಿಂತಲೂ ಶೀಘ್ರವಾಗಿ ಕಲಿಯತೊಡಗಿದ್ದನು. ಶಾಲೆಯಲ್ಲಿ ಅವನೇ ಎಲ್ಲರಿಗಿಂತಲೂ ಬುದ್ಧಿವಂತನಾಗಿ ಎಲ್ಲಾ ವಿಷಯಗಳಲ್ಲೂ ಮೊದಲಿಗನಾಗಿ, ಉಪಾಧ್ಯಾಯರಿಗಿಂತಲೂ ಬುದ್ಧಿವಂತನಾಗಿದ್ದನು. ತನಗಿಂತಲೂ ಹಿರಿಯರಾದವರನ್ನೂ, ಉಪಾಧ್ಯಾಯರನ್ನೂ ತನ್ನ ಸಂಶಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದನು. ತರಗತಿಯಲ್ಲಿ ಎಲ್ಲರಿಗಿಂತಲೂ ಎತ್ತರವಾಗಿದ್ದು ಬಲಶಾಲಿಯಾಗಿ ಸುಂದರನಾಗಿದ್ದನು. ಅವನು ಎಂದಾದರೂ ಸೋಮಾರಿಯಾಗಲೀ, ತುಂಟನಾಗಿಯಾಗಲೀ, ಉಪಾಧ್ಯಾಯರುಗಳಿಗೆ ಅವಿಧೇಯನಾಗಿಯಾಗಲೀ ಇರಲಿಲ್ಲ. ಅವನು ಎಲ್ಲರನ್ನೂ ಪ್ರೀತಿಸುತ್ತಿದ್ದನು. ಹಾಗೆಯೇ ಎಲ್ಲರೂ ಅವನನ್ನು ಪ್ರೀತಿಸುತ್ತಿದ್ದರು. ಅವನು ಎಲ್ಲರಿಗೂ ಮಿತ್ರನಾಗಿದ್ದನು. ಪ್ರಾಣಿಗಳನ್ನು ಹಿಂಸಿಸದೆ ದಯೆ ತೋರಿಸುತ್ತಿದ್ದನು.

# ೫. ದಯಾಳುವಾದ ಸಿದ್ಧಾರ್ಥ

ಯುವರಾಜಕುಮಾರ ಸಿದ್ಧಾರ್ಥನಿಗೆ ಮನುಷ್ಯರಲ್ಲಾಗಲೀ, ಮೃಗಗಳಲ್ಲಾಗಲೀ, ಕ್ರಿಮಿ-ಕೀಟಾದಿಗಳಲ್ಲಾಗಲೀ ಬಲು ಮರುಕ. ಅವನಿಗೆ ಅರ ಮನೆಯಲ್ಲಿ ಸಕಲ ಸೌಭಾಗ್ಯಗಳು ದೊರಕಿದ್ದವು. ಯಾವುದಕ್ಕೂ ಅವನು ಕಷ್ಟಪಡಬೇಕಾಗಿರಲಿಲ್ಲ. ಆದರೆ ಅವನಿಗೆ ಬಡವರನ್ನು, ತನ್ನನ್ನು ಸಂತೋಷವಾಗಿಡಲು ಯತ್ನಿಸುತ್ತಿದ್ದ ತನ್ನ ಸೇವಕರನ್ನು ಕಂಡರೆ ಬಹಳ ದಯೆಯುಂಟಾಗುತ್ತಿತ್ತು. ಅವರಿಗಾಗಿ ಮರುಗಿ ಅವರನ್ನು ಸಂತೋಷಪಡಿಸುತ್ತಿದ್ದನು.

ಒಂದು ದಿನ ಅವನು ಕಾಡಿನಲ್ಲಿ ತನ್ನ ಬಂಧುವಾದ ದೇವದತ್ತನೊಡನೆ ಆಡ್ಡಾಡುತ್ತಿದ್ದನು. ದೇವದತ್ತನ ಕೈಗಳಲ್ಲಿ ಬಿಲ್ಲುಬಾಣಗಳಿದ್ದುವು. ದೇವದತ್ತನು ಎತ್ತರದಲ್ಲಿ ಹಾರಾಡುತ್ತಿದ್ದ ಒಂದು ಹಂಸವನ್ನು ಕಂಡು, ಗುರಿಯಿಟ್ಟು ತನ್ನ ಬಾಣದಿಂದ ಹೊಡೆದು ಬೀಳಿಸಿದನು. ಇಬ್ಬರು ಹುಡುಗರು ಆ ಹಂಸದತ್ತ ಓಡಿದರು. ಸಿದ್ಧಾರ್ಥನು ದೇವದತ್ತನಿಗಿಂತ ಶೀಘ್ರವಾಗಿ ಓಡಿ ಆ ಹಂಸವನ್ನು ನೋಡಿದನು. ಅದು ಸತ್ತುಹೋಗಿರಲಿಲ್ಲ. ಸಿದ್ಧಾರ್ಥನು ಅದನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಅದರ ರೆಕ್ಕೆಯಲ್ಲಿ ಸಿಕ್ಕಿಹಾಕಿಕೊಂಡಿದ್ದ ಬಾಣವನ್ನು ಮೆಲ್ಲಗೆ ತೆಗೆದು, ಗಾಯವಾಗಿದ್ದ ಸ್ಥಳದಲ್ಲಿ ಕೆಲವು ಮೂಲಿಕೆಗಳ ರಸವನ್ನು ಹಿಂಡಿ, ತನ್ನ ಮೃದುವಾದ ಕೈಗಳಿಂದ ಹಂಸವನ್ನು ಸವರಿ ಅದರ ಭಯವನ್ನು ಹೋಗಲಾಡಿಸಿದನು. ಇಷ್ಟು ಹೊತ್ತಿಗೆ ಅಲ್ಲಿಗೆ ದೇವದತ್ತನೂ ಬಂದನು. ಬಂದು ಸಿದ್ಧಾರ್ಥನ ಕೈಲ್ಲಿದ್ದ ಹಂಸವನ್ನು ತನಗೆ ಕೊಡಬೇಕೆಂದು ಕೇಳಿದನು. ಸಿದ್ಧಾರ್ಥನು ಕೊಡಲಿಲ್ಲ. ದೇವದತ್ತನಿಗೆ ತುಂಬಾ ಕೋಪ ಬಂದಿತು. ಅವನು ಕೇಳಿದನು. ''ಆ ಹಂಸವನ್ನು ಹೊಡೆದು ಬೀಳಿಸಿದವನು ನಾನು. ಅದು ನನ್ನ ಕೈ ಸೇರಬೇಕು. ನನಗೆ ಕೊಡು''.

''ಇಲ್ಲ, ನಾನು ಕೊಡುವುದಿಲ್ಲ. ಅದು ನಿನ್ನ ಬಾಣದಿಂದ ಸತ್ತಿದ್ದರೆ ನಿನ್ನದಾಗುತ್ತಿತ್ತು. ಅದು ಸತ್ತಿಲ್ಲ. ಗಾಯಗೊಂಡಿದೆ. ಅದನ್ನು ನಾನು ಉಳಿಸಿದ್ದೇನೆ. ಆದ್ದರಿಂದ ಅದು ನನ್ನದು'' ಸಿದ್ಧಾರ್ಥನೆಂದನು.

ದೇವದತ್ತನು ಈ ಮಾತನ್ನು ಒಪ್ಪಲಿಲ್ಲ. ಆಗ ಸಿದ್ಧಾರ್ಥನು ''ನಡೆ, ತಿಳಿದವರ ಬಳಿ ಹೋಗಿ ಇದು ಸೇರಬೇಕಾದ್ದು ಯಾರಿಗೆ? ಎಂಬುದನ್ನು ವಿಚಾರಿಸೋಣ'' ಎಂದನು.

ಇಬ್ಬರೂ ನ್ಯಾಯಾಲಯಕ್ಕೆ ತೆರಳಿದರು. ತಂತಮ್ಮ ವಾದವನ್ನು ಮಂಡಿಸಿದರು. ಆಗ ನ್ಯಾಯಾಧೀಶರು ಹೇಳಿದರು. 'ಯಾರು ಈ ಪಕ್ಷಿಯನ್ನು ಬದುಕಿಸಿರುವರೋ, ಅವರೇ ಇದರ ಹಕ್ಕುದಾರರಾಗುತ್ತಾರೆಯೇ ವಿನಹಾ ಇದನ್ನು ಕೊಲ್ಲಲು ಬಯಸಿದವರು ಇದರ ಹಕ್ಕುದಾರರಾಗುವುದಿಲ್ಲ' ಈ ಗಾಯಗೊಂಡ ಹಂಸವು ಸಿದ್ಧಾರ್ಥನಿಗೆ ಸೇರಬೇಕು ಎಂದರು.

# ೬. ಸಿದ್ಧಾರ್ಥನ ಮದುವೆ

ಸಿದ್ಧಾರ್ಥನು ಬಹಳ ಸ್ವಲ್ಪ ಕಾಲದಲ್ಲೇ ತನ್ನ ವಿದ್ಯಾಭ್ಯಾಸವನ್ನೆಲ್ಲಾ ಮುಗಿಸಿದನು. ಅವನಿಗೆ ವಿದ್ಯೆ ಕಲಿಸಲು ಉತ್ತಮರಾದ ಉಪಾಧ್ಯಾಯರಿದ್ದರು. ಒಳ್ಳೆಯ ಸ್ನೇಹಿತರಿದ್ದರು. ಇರಲು ಅರಮನೆಯಿತ್ತು. ಉತ್ಕೃಷ್ಟವಾದ ಬಟ್ಟೆಬರೆಗಳಿದ್ದುವು. ತಿನ್ನಲು ಬೇಕಾದ ಪದಾರ್ಥಗಳಿದ್ದುವು. ಅವನ ತಂದೆಯು ಅವನ ವಾಸಕ್ಕಾಗಿ ಚಳಿಗಾಲ, ಬೇಸಿಗೆ ಮತ್ತು ಮಳೆಗಾಲಗಳಲ್ಲಿ ವಾಸಿಸಲು ಪ್ರತ್ಯೇಕವಾದ ಮೂರು ಅರಮನೆಗಳನ್ನು ಕಟ್ಟಿಸಿಕೊಟ್ಟಿದ್ದನು. ಅವನಿಗಾಗಿ ಒಂದು ಸುಂದರವಾದ ಉದ್ಯಾನವನ್ನು ನಿರ್ಮಿಸಿದ್ದನು. ಬೇಟೆಯಾಡಲು ಪ್ರಶಸ್ತವಾದ ಸ್ಥಳವು ನಿರ್ಮಾಣವಾಯಿತು. ಅಂದವಾದ ತಿಳಿನೀರಿನ ಸರೋವರಗಳು, ಅವುಗಳಲ್ಲಿ ಅರಳಿನಿಂತ ಕಮಲದ ಹೂಗಳು, ಹಂಸಗಳು, ಫಳಫಳನೆ ಹೊಳೆಯುವ ಮೀನುಗಳು ಎಲ್ಲಾ ಇದ್ದುವು.

ಅಸಿತ ಮತ್ತು ಕೊಂಡಣ್ಣರು ಅರಮನೆಗೆ ಬಂದು ರಾಜನಿಗೆ ಎಚ್ಚರಿಕೆಯನ್ನು ಕೊಟ್ಟರು-''ನಿನ್ನ ಮಗನು ಒಬ್ಬ ರೋಗಪೀಡಿತನನ್ನಾಗಲೀ, ಮುದುಕನನ್ನಾಗಲೀ, ಶವವನ್ನಾಗಲೀ, ಸನ್ಯಾಸಿಯನ್ನಾಗಲೀ ಕಂಡಿದ್ದೇ ಆದರೆ ಅವನು ಈ ನಿನ್ನ ಅರಮನೆಯನ್ನು ತೊರೆದು ಸನ್ಯಾಸಿಯಾಗಿ ಹೊರಟು ಹೋಗುತ್ತಾನೆ''.

ರಾಜನಿಗೆ ಈ ಮಾತುಗಳನ್ನು ಕೇಳಿ ಬಹಳ ಚಿಂತೆಯಾಯಿತು. ಅವನು ತನ್ನ ಮಗನ ಜೊತೆಗಿರಲು ಅನೇಕ ತರುಣರನ್ನು ಏರ್ಪಡಿಸಿದನು. ಅರಮನೆಗೆ ರೋಗಿಷ್ಠರಾಗಲೀ, ಮುದುಕರಾಗಲೀ, ಬರದಂತೆ ವ್ಯವಸ್ಥೆ ಮಾಡಿದನು. ಖಾಯಿಲೆಯವರ, ವಯಸ್ಸಾದವರ, ಸತ್ತವರ, ಹಾಗೂ ಸನ್ಯಾಸಿಗಳ ವಿಷಯವಾಗಿ ಯಾರೂ ಮಾತಾಡಬಾರದೆಂದು ಆಜ್ಞೆ ಮಾಡಿದನು. ಆದರೆ ಸಿದ್ಧಾರ್ಥನಿಗೆ ಅವುಗಳ ಬಗ್ಗೆ ತಿಳಿಯಬೇಕೆಂಬಾಸೆಯಿದ್ದುದರಿಂದ ತನ್ನ ಸುತ್ತಲಿರುವವರನ್ನು ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದನು.

ಒಂದು ದಿನ ರಾಜನು ಕೆಲವು ಮುಖ್ಯಸ್ಥರಾದ ವಿದ್ವಾಂಸರನ್ನು ಕರೆಸಿ-''ನನ್ನ ಮಗನು ಯಾವಾಗಲೂ ಏನೋ ಯೋಚನಾಕ್ರಾಂತನಾಗಿರುತ್ತಾನೆ. ಅವನನ್ನು ಸುಖವಾಗಿಯೂ, ಸಂತೋಷವಾಗಿಯೂ ಇರುವಂತೆ ಮಾಡುವ ಉಪಾಯವನ್ನು ತಿಳಿಸಿ''. ಅವರೆಂದರು-''ನಿನ್ನ ಮಗನಿಗೆ ಈಗ ಹದಿನಾರು ವರ್ಷಗಳಾಗಿವೆ. ಅವನಿಗೆ ತಕ್ಕವಳಾದ ಸುಂದರಿಯಾದ ಹೆಣ್ಣನ್ನು ಹುಡುಕೋಣವೆ''

ರಾಜನಿಗೆ ಒಪ್ಪಿಗೆಯಾಯ್ತು. ಅವನು ದೇಶದಲ್ಲಿರುವ ಸುಂದರಿಯರಾದ ಎಲ್ಲಾ ಕನ್ಯೆಯರನ್ನು ತನ್ನ ಅರಮನೆಗೆ ಬರಮಾಡಿಕೊಂಡನು. ಎಲ್ಲರೂ ಬಂದನಂತರ ಯುವರಾಜನನ್ನು ಕರೆಸಿ ಅವನಿಗೆ ಬೇಕಾದ ಕನ್ಯೆಯನ್ನು ಆರಿಸಿಕೊಳ್ಳುವಂತೆ ಹೇಳಿದನು.

ಅವರುಗಳಲ್ಲಿ ಯಶೋಧರೆಯೆಂಬ ಹುಡುಗಿ ಬಹಳ ಸುಂದರಿಯಾಗಿಯೂ, ದಯಾಸ್ವಭಾವವುಳ್ಳವಳಾಗಿಯೂ ಇದ್ದಳು. ಸಿದ್ಧಾರ್ಥನು ತಾನು ಇತರ ಹುಡುಗಿಯರಿಗೆ ಕೊಟ್ಟ ವಸ್ತುಗಳಿಗಿಂತಲೂ ಬಹಳ ಅಮೂಲ್ಯವಾದ ಉಡುಗೊರೆಯನ್ನು ಅವಳಿಗೆ ಕೊಟ್ಟನು. ರಾಜನಿಗೆ ಮಗನು ಆ ಹೆಣ್ಣನ್ನು ಒಪ್ಪಿದ್ದಾನೆಂದು ತಿಳಿಯಿತು. ರಾಜನು ಬಹಳ ಸಂತೋಷ ಸಂಭ್ರಮಗಳಿಂದ ಯಶೋಧರೆಯ ಜೊತೆಗೆ ಸಿದ್ಧಾರ್ಥನ ವಿವಾಹವನ್ನು ಮಾಡಿದನು.

## ೭. ಒಬ್ಬ ಮುದುಕ ಭಿಕ್ಷುಕ

ಇಷ್ಟೆಲ್ಲಾ ಏರ್ಪಾಟುಗಳನ್ನು ಮಾಡಿ ರಾಜನು ತೃಪ್ತಿಪಟ್ಟುಕೊಂಡನು. ಇನ್ನು ಪರವಾಗಿಲ್ಲ. ನನ್ನ ಮಗ ನಾನು ನಡೆದ ದಾರಿಯಲ್ಲಿ ನಡೆದು ನಂತರ ಈ ರಾಜ್ಯಕ್ಕೆ ದೊರೆಯಾಗುತ್ತಾನೆ. ಉದ್ಯಾನವನವನ್ನೂ ಒಳಗೊಂಡಂತೆ ಅರಮನೆಯ ಸುತ್ತಲೂ ಎತ್ತರವಾದ ಗೋಡೆಯನ್ನು ಕಟ್ಟುವಂತೆ ರಾಜನು ಆಜ್ಞಾಪಿಸಿದನು. ಆದರೆ ಒಬ್ಬ ಬಂದಿಯಂತೆ ವಾಸ ಮಾಡಲು ಯುವ ರಾಜನಿಗೆ ಇಷ್ಟವಾಗಲಿಲ್ಲ. ಅವನೊಂದು ದಿನ ತಂದೆಗೆ ಹೇಳಿದನು - ''ತಂದೆಯೇ, ನಾನು ಹೊರಗೆ ಹೋಗಿ ಜನಗಳು ಹೇಗೆ ಬದುಕುತ್ತಿದ್ದಾರೆಂಬುದನ್ನು ನೋಡಬೇಕು''.

''ಹಾಗೇ ಆಗಲಿ ಮಗೂ, ನೀನು ಅರಮನೆಯಿಂದ ಹೊರಗೆ ಹೋಗಿ ನನ್ನ ರಾಜ್ಯದಲ್ಲಿ ಪ್ರಜೆಗಳು ಹೇಗೆ ಬದುಕುತ್ತಿದ್ದಾರೆಂಬುದನ್ನು ನೋಡುವಿಯಂತೆ. ಸ್ವಲ್ಪ ತಾಳು. ನಾನು ನೀನು ಹೊರಗೆ ಹೋಗಿ ನೋಡಲು ಎಲ್ಲಾ ಏರ್ಪಾಟುಗಳನ್ನೂ ಮಾಡಿಕೊಡುತ್ತೇನೆ'' ಎಂದನು ರಾಜ.

ಅದರಂತೆ ಪಟ್ಟಣವನ್ನೆಲ್ಲಾ ಸಿಂಗರಿಸಿದ ಬಳಿಕ ಮಹಾರಾಜನು ಮಗನಿಗೆ ಹೋಗಲು ಅಪ್ಪಣೆ ಕೊಟ್ಟನು.

ಯುವರಾಜನು ರಾಜಧಾನಿಯ ಬೀದಿಗಳಲ್ಲಿ ಹೋಗುತ್ತಿರುವಾಗ ರಸ್ತೆಯ ಬದಿಯಲ್ಲಿದ್ದ ಒಂದು ಚಿಕ್ಕ ಗುಡಿಸಲಿನಿಂದ ಅಕಸ್ಮಾತ್ತಾಗಿ ಒಬ್ಬ ಮುದುಕನು ಹೊರಗೆ ಬಂದನು. ಅವನ ಕೂದಲುಗಳೆಲ್ಲಾ ಬೆಳ್ಳಗಾಗಿದ್ದುವು. ಅವನು ಹುಟ್ಟಿದ್ದುದು ಚಿಂದಿಚಿಂದಿಯಾದ ಬಟ್ಟೆ, ಮುಖವೆಲ್ಲಾ ಬಾಡಿ ಸುಕ್ಕುಗಟ್ಟಿದ್ದಿತು. ಕಣ್ಣುಗಳು ಆಳಕ್ಕೆ ಹೋಗಿ, ಕಾಂತಿಹೀನವಾಗಿ, ಕುರುಡಾಗಿತ್ತು. ಬಾಯಲ್ಲಿ ಹಲ್ಲುಗಳೇ ಇರಲಿಲ್ಲ. ಎದ್ದು ನಿಲ್ಲಲು ಕಾಲುಗಳು ನಡುಗುತ್ತಿದ್ದವು. ಚರ್ಮವೇ ಇಲ್ಲವೇನೋ ಎನ್ನುವಂತಹ ಒಣಗಿಹೋದ ಎರಡೂ ಕೈಗಳಿಂದ ಒಂದು ಕೋಲನ್ನು ಹಿಡಿದುಕೊಂಡು ಕೆಳಗೆ ಬೀಳದಂತೆ ಅದರ ಆಸರೆಯಿಂದ ಎದ್ದು ನಿಂತನು. ಆ ಮುದುಕನು ಹಾಗೆಯೇ ಎಳೆದುಕೊಂಡು ದಾರಿಯಲ್ಲಿ ಹೋಗುತ್ತಿರುವವರ ಕಡೆಗೆ ಲಕ್ಷ್ಯ ಕೊಡದೆ ನಡೆಯುತ್ತಿದ್ದನು. ಅವನ ಧ್ವನಿ ಬಹಳ ಕ್ಷೀಣವಾಗಿತ್ತು. ಸುತ್ತಲಿದ್ದ ಜನರನ್ನು ನೋಡಿ ತಿನ್ನಲು ಏನಾದರೂ ಕೊಡುವಂತೆ ಬೇಡುತ್ತಿದ್ದನು. ಏನೂ ಸಿಕ್ಕದಿದ್ದರೆ ಅವತ್ತೇ ಸತ್ತು ಹೋಗುತ್ತೇನೆನ್ನುತ್ತಿದ್ದನು. ಯುವರಾಜನು ಮುದುಕನನ್ನು ನೋಡಿದನು. ಅವನಿಗೆ ತಾನು ಏನು ನೋಡುತ್ತಿದ್ದೇನೆಂಬುದೇ ಅರ್ಥವಾಗಲಿಲ್ಲ. ಏಕೆಂದರೆ ಇಂತಹ ಹಣ್ಣು ಮುದುಕನನ್ನು ಅವನು ನೋಡುತ್ತಿರುವುದು ಮೊದಲನೇ ಸಲವಾಗಿತ್ತು.

''ಇದೇನು ಚನ್ನಾ ?'' ಯುವರಾಜನು ತನ್ನ ಸಾರಥಿಯನ್ನು ಕೇಳಿದನು. ''ಇವನು ಮನುಷ್ಯನಂತೂ ಅಲ್ಲ. ಅವನೇಕೆ ಬಗ್ಗಿದ್ದಾನೆ? ಅವನ ಕೂದಲುಗಳು ನನ್ನ ಕೂದಲುಗಳಂತೆ ಕಪ್ಪಗಿರದೆ ಬೆಳ್ಳಗೇಕಿವೆ ? ಅವನ ಶರೀರವೇಕೆ ನಡುಗುತ್ತಿದೆ ? ಅವನ ಕಣ್ಣುಗಳಿಗೇನು ತೊಂದರೆಯಾಗಿದೆ ? ಅವನ ಹಲ್ಲುಗಳೆಲ್ಲಿ ? ಕೆಲವರು ಹುಟ್ಟುವಾಗಲೇ ಹೀಗಿರುತ್ತಾರೆಯೇ ಹೇಳು ಚನ್ನಾ?''

ಚನ್ನನು ಅವನೊಬ್ಬ ಮುದುಕನೆಂದು ತಿಳಿಸಿ ಅವನು ಹುಟ್ಟುವಾಗಲೇ ಹೀಗಿರಲಿಲ್ಲವೆಂದನು. ''ಅವನು ಯೌವನದಲ್ಲಿರುವಾಗ ನಮ್ಮಂತೆಯೇ ಇದ್ದನು. ಈಗ ಅವನು ಮುದುಕನಾಗಿರುವುದರಿಂದ ಹೀಗಾಗಿದ್ದಾನೆ.'' ಎಂದು ಹೇಳಿ ಆ ದೃಶ್ಯವನ್ನು ಮರೆತುಬಿಡುವಂತೆ ಹೇಳಿದನು. ಆದರೆ ಇದರಿಂದ ಯುವರಾಜನಿಗೆ ತೃಪ್ತಿಯಾಗಲಿಲ್ಲ.

ಚನ್ನನು ಮತ್ತೆ ಹೇಳಿದನು-''ಪ್ರಪಂಚದಲ್ಲಿರುವ ಪ್ರತಿಯೊಬ್ಬನಿಗೂ ಮುಪ್ಪು ಬಂದೇ ಬರುತ್ತದೆ. ಅದು ಬಂದಾಗ ಎಲ್ಲರೂ ಇವನ ಹಾಗೆಯೇ ಆಗುತ್ತಾರೆ. ಇದನ್ನು ತಡೆಯಲು ಸಾಧ್ಯವಿಲ್ಲ.''

ಯುವರಾಜನು ತಕ್ಷಣ ಅರಮನೆಗೆ ಹಿಂದಿರುಗುವಂತೆ ಚನ್ನನಿಗೆ ಆಜ್ಞಾಪಿಸಿದನು. ಅವನಿಗೆ ಬಹಳ ದುಃಖವಾಗಿತ್ತು. ಅವನು ಇಂತಹ ಭಯಾನಕವಾದ ಮುಪ್ಪಿನ ಬಗ್ಗೆ ಆಲೋಚನೆ ಮಾಡಬೇಕಿತ್ತು. ಯುವರಾಜನಾಗಲೀ, ಬೇರೆ ಯಾರೇ ಆಗಲಿ ಒಂದಲ್ಲ ಒಂದು ದಿನ ಹೀಗೇ ಮುದುಕರಾಗಬೇಕು. ಬಲಹೀನರಾಗಬೇಕು. ದುಃಖವನ್ನನುಭವಿಸಬೇಕು. ಎಂತಹ ಧನವಂತರಾಗಲೀ, ದೊಡ್ಡಮನುಷ್ಯರಾಗಲೀ, ಶಕ್ತಿಶಾಲಿಗಳಾಗಲೀ, ಮುಪ್ಪನ್ನು ತಡೆಯಲಾರರು.

ಯುವರಾಜನಿಗೆ ನಿದ್ರೆ ಬರಲಿಲ್ಲ. ಅವನು ತನ್ನ ಹಾಸಿಗೆಯಲ್ಲಿ ಮಲಗಿ ಯೋಚಿಸುತ್ತಿದ್ದನು. ಒಂದಲ್ಲ ಒಂದು ದಿನ ಎಲ್ಲರೂ ಮುದುಕರಾಗಲೇಬೇಕು. ಕೂದಲುಗಳು ಬೆಳ್ಳಗಾಗಿ, ಚರ್ಮ ಸುಕ್ಕುಗಟ್ಟಿ, ಹಲ್ಲುಗಳು ಉದುರಿಹೋಗಿ ಆ ಭಿಕ್ಷುಕನಂತೆ ಕುರೂಪಿಗಳಾಗಲೇಬೇಕು. ಯಾರಾದರೂ ಇಂತಹ ಭಯಂಕರವಾದ ಸ್ಥಿತಿಯನ್ನು ತಡೆಯುವಂತಹ ಸಮರ್ಥರಿದ್ದಾರೆಯೇ ? ಈ ಮುಪ್ಪನ್ನು ನಿವಾರಿಸಬಲ್ಲರೆ? ಎಂಬುದನ್ನು ಅವನು ತಿಳಿದುಕೊಳ್ಳಬೇಕು.

ರಾಜನಿಗೆ ಈ ವಿಷಯ ಕೇಳಿ ಬಹಳ ದುಃಖವಾಯಿತು. ಚಿಂತೆಯೂ ಆಯಿತು. ಈ ಘಟನೆಯಿಂದ ಯುವರಾಜನೇನಾದರೂ ಅರಮನೆಯನ್ನು ಬಿಟ್ಟು ಹೋಗಿಬಿಡುತ್ತಾನೋ ಎಂದು ದಿಗಿಲಾಯಿತು. ಅವನು ಅರಮನೆಯಲ್ಲಿ ಇನ್ನಷ್ಟು ಸಂಗೀತ, ನೃತ್ಯ, ಔತಣಕೂಟಗಳನ್ನು ಏರ್ಪಡಿಸಿದನು. ಆದರೆ ಯುವರಾಜನು ಜನಗಳಿಗೆ ಯುವರಾಜನು ಬರುವುದು ತಿಳಿಯದಂತೆ ಒಂದು ದಿನ ಸಾಧಾರಣವಾಗಿ ಹೋಗಿ ಕಪಿಲವಸ್ತುವನ್ನು ನೋಡಿಕೊಂಡು ಬರಲು ತಂದೆಯನ್ನು ಅಪ್ಪಣೆ ಕೊಡುವಂತೆ ಬೇಡಿಕೊಂಡನು.

# ೮. ಒಬ್ಬ ಕಾಯಿಲೆ ಮನುಷ್ಯ

ಮಹಾರಾಜನಿಗೆ ಇಷ್ಟವಿಲ್ಲದಿದ್ದರೂ ಕೂಡಾ ಮಗನನ್ನು ನಗರ ನೋಡಲು ಕಳಿಸಬೇಕಾಯ್ತು. ಅವನನ್ನು ತಡೆಯುವುದರಲ್ಲಿ ಏನೂ ಅರ್ಥವಿಲ್ಲ. ಅದರಿಂದ ಅವನಿಗೆ ಇನ್ನೂ ದುಃಖವಾಗುವುದು. ಈ ಬಾರಿ ಯುವರಾಜನು ದೊಡ್ಡ ಮನುಷ್ಯರ ಮನೆಯ ಯುವಕರು ಧರಿಸುವಂತಹ ಉಡುಪನ್ನು ಧರಿಸಿ ಚೆನ್ನನೊಡನೆ ನಡೆದನು. ಅವನಿಗೆ ಜನಗಳು ತನ್ನನ್ನು ಯುವರಾಜನೆಂದು ಗುರುತಿಸುವುದು ಬೇಕಾಗಿರಲಿಲ್ಲ.

ಈ ಸಲ ನಗರವು ಮುಂಚೆ ನೋಡಿದ್ದಕ್ಕಿಂತಾ ಬೇರೆ ರೀತಿಯಾಗಿತ್ತು. ಗುಂಪು ಗುಂಪಾದ ಜನರು ಬಂದು ಯುವರಾಜನಿಗೆ ಜೈಕಾರ ಹಾಕಲಿಲ್ಲ, ಬಾವುಟಗಳಿರಲಿಲ್ಲ, ತೋರಣಗಳಿಲ್ಲ, ಹೂವಿನ ಹಾರಗಳಿಲ್ಲ, ಬೆಲೆಬಾಳುವ ಬಟ್ಟೆಗಳನ್ನು ಧರಿಸಿದ್ದ ನಾಗರೀಕರಿರಲಿಲ್ಲ, ಸಾಧಾರಣ ಜನಗಳು ಜೀವನಕ್ಕಾಗಿ ಕೆಲಸ ಕಾರ್ಯಗಳನ್ನು ಮಾಡಿಕೊಂಡಿದ್ದರು. ಒಬ್ಬ ಕಮ್ಮಾರನು ಚಾಕುಗಳನ್ನು ಮಾಡಲಿಕ್ಕಾಗಿ ಕಬ್ಬಿಣವನ್ನು ಬಡಿಯುತ್ತಿದ್ದನು. ಶಿಖೆಯಿಂದ ಅವನ ಮೈಯಲ್ಲಿ ಬೆವರು ಸುರಿಯುತ್ತಿತ್ತು. ಅಕ್ಕಸಾಲಿಗರು ಚಿನ್ನದ ಆಭರಣಗಳನ್ನು ಮಾಡುತ್ತಿದ್ದರು. ಅವರು ಅಡ್ಡಿಕೆಗಳನ್ನು, ಬಳೆ ಬೆಂಡೋಲೆಗಳನ್ನೂ, ಉಂಗುರಗಳನ್ನೂ, ವಜ್ರ, ಚಿನ್ನ ಮತ್ತು ಬೆಳ್ಳಿಗಳಿಂದ ತಯಾರಿಸುತ್ತಿದ್ದರು. ಬಟ್ಟೆಗಳಿಗೆ ಬಣ್ಣ ಹಾಕುವವರು ಬಟ್ಟೆಗಳಿಗೆ ಅಂದವಾದ ಬಣ್ಣಗಳನ್ನು ಹಾಕಿ ಒಣಹಾಕುತ್ತಿದ್ದರು. ರೊಟ್ಟಿಗಳನ್ನು ಮಾಡುವವರು ಮತ್ತು ಸಿಹಿ ತಿಂಡಿಗಳನ್ನು ತಯಾರಿಸುವವರು ತಮ್ಮ ತಿಂಡಿಗಳನ್ನು ಬಿಸಿ ಬಿಸಿಯಾಗಿ ಮಾಡಿ ಮಾರಾಟ ಮಾಡುತ್ತಿದ್ದರು. ಕೊಳ್ಳುವವರು ಆ ಬಿಸಿ ಬಿಸಿಯಾದ ತಿಂಡಿಗಳನ್ನು ಆಗಲೇ ಕೊಂಡು ತಿನ್ನುತ್ತಿದ್ದರು. ಯುವರಾಜನು ಈ ಮುಗ್ಧ ಪ್ರಜೆಗಳನ್ನು ನೋಡಿದನು. ಪ್ರತಿಯೊಬ್ಬರೂ ತಮ್ಮ ಕೆಲಸಗಳಲ್ಲಿ ಚುರುಕಾಗಿದ್ದರು. ಸಂತೋಷವಾಗಿದ್ದರು. ಮತ್ತು ತಂತಮ್ಮ ಕೆಲಸಗಳಲ್ಲಿ ಪ್ರಸನ್ನಚಿತ್ತರಾಗಿ ಮಗ್ನರಾಗಿದ್ದರು.

ಒಂದು ಕಡೆ ಯುವರಾಜನು ಒಬ್ಬ ಮನುಷ್ಯನು ನೆಲದ ಮೇಲೆ ಬಿದ್ದುಕೊಂಡು ನೋವಿನಿಂದ ಹೊರಳಾಡುತ್ತಾ ತನ್ನ ಹೊಟ್ಟೆಯನ್ನು ಎರಡೂ ಕೈಗಳಿಂದ ಒತ್ತಿಹಿಡಿದುಕೊಂಡು ನೋವಿನಿಂದ ಜೋರಾಗಿ ಕಿರುಚಿಕೊಳ್ಳುತ್ತಿರುವುದನ್ನು ಕಂಡನು. ಅವನ ಮುಖದ ಮೇಲೂ ಶರೀರದ ಮೇಲೂ ನೀಲಿಯ ಗುರುತುಗಳಿದ್ದುವು. ಅವನ ಕಣ್ಣು ಗುಡ್ಡೆಗಳು ತಿರುಗುತ್ತಿದ್ದುವು. ಅವನು ಉಸಿರಾಡಲು ಬಹಳ ಕಷ್ಟಪಡುತ್ತಿದ್ದನು.

ಮತ್ತೆ ಎರಡನೆಯ ಬಾರಿ ಯುವರಾಜನ ಜೀವನದಲ್ಲಿ ಬಹಳ ದುಃಖ ಉಂಟಾಯಿತು. ತಕ್ಷಣವೇ ಅವನು ಬಹಳ ಕನಿಕರದಿಂದ ಆ ಮನುಷ್ಯನ ಬಳಿ ಹೋಗಿ ತನ್ನ ಕೈಗಳಿಂದ ಅವನನ್ನೆತ್ತಿ, ಅವನ ತಲೆಯನ್ನು ತೊಡೆಯಮೇಲಿಟ್ಟುಕೊಂಡು ಅವನನ್ನು ಪ್ರೀತಿಯಿಂದ ತಟ್ಟುತ್ತಾ ಕೇಳಿದನು-''ಏನಯ್ಯಾ, ನಿನಗೇನಾಗುತ್ತಿದೆ ಹೇಳು ?'' ಆದರೆ ಆ ಮನುಷ್ಯನಿಗೆ ಮಾತನಾಡಲಾಗಲಿಲ್ಲ. ಅವನು ಸುಮ್ಮನೇ ಅಳತೊಡಗಿದನು.

ಯುವರಾಜನು ಚನ್ನನನ್ನು ಕೇಳಿದನು-''ಚನ್ನಾ, ಇವನಿಗೇನಾಗಿದೆ ? ಅವನಿಗೇಕೆ ಉಸಿರು ಬಿಡಲು ಆಗುತ್ತಿಲ್ಲ. ಮಾತನಾಡಲಾಗುತ್ತಿಲ್ಲ?''

ಯುವರಾಜರೇ, ಆ ಮನುಷ್ಯನನ್ನು ಹೀಗೆ ಎತ್ತಿಕೊಳ್ಳಬೇಡಿ. ಅವನು ಕಾಯಿಲೆ ಮನುಷ್ಯ. ಅವನ ರಕ್ತ ವಿಷಪೂರಿತವಾಗಿದೆ. ಅವನಿಗೆ ರೋಗವಾಗಿದೆ. ಆ ಜ್ವರವು ಅವನ ಮೈಯನ್ನೆಲ್ಲಾ ಸುಡುತ್ತಿದೆ. ಆದರಿಂದಲೇ ಅವನು ಮಾತನಾಡಲಾರ'' ಚನ್ನನೆಂದನು.

''ಇನ್ನು ಯಾರಾದರೂ ಇವನಂತೆಯೇ ಇದ್ದಾರೆಯೇ?''

''ಹೌದು, ನೀವು ಇವನನ್ನು ಹೀಗೆ ನಿಮ್ಮ ಇಷ್ಟು ಹತ್ತಿರ ಎತ್ತಿಕೊಂಡಿದ್ದರೆ ನಿಮಗೂ ಈ ರೋಗ ಬರುತ್ತದೆ. ದಯವಿಟ್ಟು ಅವನನ್ನು ಕೆಳಗೆ ಮಲಗಿಸಿ, ಇಲ್ಲದಿದ್ದರೆ ಆ ರೋಗ ಅವನಿಂದ ನಿಮಗೆ ಅಂಟಿಕೊಳ್ಳುತ್ತದೆ. ನೀವೂ ಸಹ ಇವನಂತೆಯೇ ಸಂಕಟಪಡಬೇಕಾಗುತ್ತದೆ.''

''ಈ ರೋಗವಲ್ಲದೆ ಇದಕ್ಕಿಂತಲೂ ಕೆಟ್ಟ ರೋಗಗಳಿವೆಯೇ ಚನ್ನಾ ?''

''ಹೌದು ಯುವರಾಜರೇ, ಇಂತಹ ಇನ್ನೂ ನೂರಾರು ಕಾಯಿಲೆಗಳು ಜನರನ್ನು ಬಾಧಿಸುತ್ತವೆ.''

''ಇದನ್ನು ಯಾರೂ ನಿವಾರಿಸಲಾರರೇ?'' ಎಲ್ಲರಿಗೂ ಕಾಯಿಲೆ ಬರುವುದೇ? ಕಾಯಿಲೆಯು ಇದ್ದಕ್ಕಿದ್ದಂತೆಯೇ ಬರುವುದುಂಟೇನು?

''ಹೌದು ಪ್ರಿಯ ಯುವರಾಜರೇ, ಎಲ್ಲರೂ ಕಾಯಿಲೆಯಿಂದ ನರಳಲೇಬೇಕು. ಯಾರೂ ಇದರಿಂದ ತಪ್ಪಿಸಿಕೊಳ್ಳಲಾರರು. ಇದು ಯಾವಾಗ ಬೇಕಾದರೂ ಬರಬಹುದು. ಬಹಳ ಜನರು ಖಾಯಿಲೆ ಬಿದ್ದು ಹೀಗೆ ನರಳುವರು''.

ಯುವರಾಜನಿಗೆ ಈ ಬಾರಿ ಬಹಳ ದುಃಖವಾಯಿತು. ಅವನು ಅರಮನೆಗೆ ಹಿಂದಿರುಗಿ ಈ ವಿಚಾರವಾಗಿ ಯೋಚಿಸತೊಡಗಿದನು.

# ೬. ಶವದ ದರ್ಶನ

ಅರಮನೆಗೆ ಹಿಂದಿರುಗಿದ ನಂತರ ಯುವರಾಜನು ಇನ್ನೂ ಬಹಳ ಅತೃಪ್ತಿಗೊಂಡು ಗಂಭೀರವಾಗಿ ಯೋಚಿಸತೊಡಗಿದನು. ಅವನು ಹೀಗೆ ಬದಲಾಗುವುದನ್ನು ಕಂಡು ಮಹಾರಾಜನಿಗೆ ಬಹಳ ದುಃಖವುಂಟಾಗುತ್ತಿತ್ತು. ಯುವರಾಜನು ಮತ್ತೆ ನಗರಕ್ಕೆ ಹೋಗಿ ಇನ್ನೂ ಸ್ವಲ್ಪ ಜನಜೀವನನ್ನು ನೋಡಿ ಬರುವೆನೆಂದೂ, ಇದಕ್ಕಾಗಿ ಅಪ್ಪಣೆ ಕೊಡಬೇಕೆಂದೂ ತಂದೆಯನ್ನು ಪ್ರಾರ್ಥಿಸಿದನು. ಅವನನ್ನು ತಡೆಯಲು ಬೇರೆ ಉಪಾಯ ಕಾಣದೆ ಮಹಾರಾಜನು ಅಪ್ಪಣೆ ಕೊಟ್ಟನು.

ಈ ಸಲವೂ ಸಹಾ ಸಾಧಾರಣ ಬಟ್ಟೆಗಳನ್ನು ಧರಿಸಿ ಯುವರಾಜನು ಕಪಿಲವಸ್ತುವಿನ ಬೀದಿ ಬೀದಿಗಳಲ್ಲಿ ಚೆನ್ನನೊಡನೆ ಸಂಚರಿಸತೊಡಗಿದನು. ಒಂದು ಕಡೆ ಅವನು ನಾಲ್ಕು ಜನರು ಒಂದು ಚಟ್ಟದ ಮೇಲೆ ಒಂದು ಶವವನ್ನು ಹೊತ್ತು ಬರುತ್ತಿರುವುದನ್ನೂ, ಅದರ ಮುಂದೆ ಅನೇಕರು ಅಳುತ್ತಾ ಬರತ್ತಿರುವುದನ್ನೂ ಕಂಡನು. ಆ ಸತ್ತು ಹೋದ ಮನುಷ್ಯನು ಕಲ್ಲಿನಂತೆ ಅಚಲನಾಗಿ ಬಾಯಲ್ಲಿ ಒಂದು ಮಾತನ್ನೂ ಆಡದೆ ಇದ್ದನು. ಶವವನ್ನು ಹೊತ್ತಿದ್ದ ಜನರು ಇನ್ನು ಸ್ವಲ್ಪ ದೂರ ನಡೆದು ಅಲ್ಲಿ ನೆಲದ ಮೇಲೆ ಒಟ್ಟಿದ್ದ ಕಟ್ಟಿಗೆಯ ರಾಶಿಯ ಮೇಲೆ ಶವವನ್ನು ಮಲಗಿಸಿ ಬೆಂಕಿಯನ್ನು ಹಚ್ಚಿದರು. ಬೆಂಕಿಯು ತನ್ನ ಕೆನ್ನಾಲಿಗೆಯಿಂದ ನಾಲ್ಕೂ ಕಡೆ ಧಗಧಗನೆ ಉರಿಯುತ್ತಿದ್ದರೂ ಸಹಾ ಅದರ ಮೇಲೆ ಮಲಗಿಸಿದ್ದ ಶವವು ಅಲುಗಾಡಲೇ ಇಲ್ಲ.

''ಇದೇನು ಚನ್ನಾ, ಕಟ್ಟಿಗೆ ರಾಶಿಯ ಮೇಲೆ ಮಲಗಿರುವ ಮನುಷ್ಯನು ಮಾತನ್ನೇ ಆಡದೆ ಇವರುಗಳನ್ನು ಬೆಂಕಿ ಹಚ್ಚಲು ಬಿಟ್ಟಿದ್ದಾನೆ''. ''ಅದು ಅವನಿಗೆ ಗೊತ್ತೇ ಆಗುವುದಿಲ್ಲ - ಅವನು ಸತ್ತುಹೋಗಿದ್ದಾನೆ'' ಚನ್ನನೆಂದನು.

''ಸತ್ತುಹೋಗಿದ್ದಾನೆಯೇ ? ಸಾವು ಎಂದು ಹೇಳುವುದು ಇದನ್ನೇ ಏನು ? ಎಲ್ಲರೂ ಇವನಂತೆಯೇ ಸಾಯಬೇಕಾಗುವುದೇನು ?

''ಹೌದು ಯುವರಾಜರೇ, ಬದುಕಿರುವವರೆಲ್ಲರೂ ಒಂದು ದಿನ ಸಾಯಲೇಬೇಕು. ಅದನ್ನು ತಡೆಯುವವರು ಯಾರೂ ಇಲ್ಲ'' ಎಂದ ಚೆನ್ನ.

ಯುವರಾಜನು ಬೆಚ್ಚಿಬಿದ್ದನು. ಅವನಿಗೆ ಆಶ್ಚರ್ಯವಾಯಿತು. ಅವನು ಮುಂದೆ ಮಾತನಾಡಲಿಲ್ಲ. ಇದೆಂತಹ ಭಯಂಕರ ವಿಷಯ. ಸಾವು ಎಲ್ಲರಿಗೂ ಬಂದೇ ಬರುವುದು. ಯಾರೂ ಅದರಿಂದ ತಪ್ಪಿಸಿಕೊಳ್ಳಲಾರರು. ಈ ಲೋಕದಲ್ಲಿ ಜನರನ್ನು ಸಾವಿನಿಂದ ತಪ್ಪಿಸುವ ಮಹಾತ್ಮರು ಯಾರೂ ಇಲ್ಲವೇ ? ಯುವರಾಜನು ಅರಮನೆಗೆ ಬಂದು ತನ್ನ ಕೊಠಡಿಯಲ್ಲಿ ಕುಳಿತು ಈ ಬಗ್ಗೆಯೇ ಯೋಚಿಸತೊಡಗಿದನು.

ಅವನಿಗೆ ಬಹಳ ದುಃಖವಾಯಿತು. ಪ್ರತಿಯೊಬ್ಬರೂ ಸಾಯಲೇಬೇಕು. ಇದನ್ನು ತಡಗಟ್ಟುವರು ಯಾರೂ ಇಲ್ಲವೆ ? ಓ, ಇದನ್ನು ತಡೆಗಟ್ಟುವ ದಾರಿ ಇರಲೇಬೇಕು. ನಾನು ಇದನ್ನು ಕಂಡುಹಿಡಿದು ಪ್ರಪಂಚಕ್ಕೆ ಸಹಾಯ ಮಾಡಬೇಕೆಂದು ಯೋಚಿಸಿದನು.

# ೧೦. ಒಬ್ಬ ಪರಿವ್ರಾಜಕ

ಯುವರಾಜನು ನಾಲ್ಕನೆಯ ಬಾರಿ ನಗರದಲ್ಲಿ ಸುತ್ತಾಡಲು ಹೋದಾಗ ಉದ್ಯಾನವನದಲ್ಲಿ ಕಾಷಾಯವನ್ನು ಧರಿಸಿದ್ದ ಒಬ್ಬ ಪರಿವ್ರಾಜಕನನ್ನು ನೋಡಿದನು. ಆ ಮನುಷ್ಯನು ತುಂಬಾ ಸಂತೋಷಚಿತ್ತನಾಗಿದ್ದನು.

ಯುವರಾಜನು ಚನ್ನನ್ನು ಕೇಳಿದನು- ಈ ಕಾಷಾಯವನ್ನು ಧರಿಸಿರುವ ವ್ಯಕ್ತಿ ಯಾರು ? ಅವನು ಹೇಗೆ ಇಷ್ಟು ಸಂತೋಷಚಿತ್ತನಾಗಿದ್ದಾನೆ ? ತಲೆಯನ್ನೆಲ್ಲಾ ಬೋಳಿಸಿಕೊಂಡಿದ್ದಾನೆ ? ಅವನು ಹೇಗೆ ಜೀವನ ನಡೆಸುತ್ತಾನೆ ? ಜೀವನಕ್ಕಾಗಿ ಏನು ಉಪಾಯವನ್ನು ಮಾಡುತ್ತಾನೆ ?

''ಅವನೊಬ್ಬ ಪರಿವ್ರಾಜಕ. ಒಂದು ಆಶ್ರಮದಲ್ಲಿ ವಾಸಿಸುತ್ತಾನೆ. ಮನೆಯಿಂದ ಮನೆಗೆ ಭಿಕ್ಷಕ್ಕೆ ಹೋಗಿ ಭಿಕ್ಷಾನ್ನವನ್ನು ತಿನ್ನುತ್ತಾನೆ. ಊರಿಂದೂರಿಗೆ ತಿರುಗಿ ಜನಗಳಿಗೆ ಸಂತೋಷವಾಗಿರುವುದನ್ನೂ, ಒಳ್ಳೆಯವರಾಗಿರುವುದನ್ನೂ ಬೋಧಿಸುತ್ತಾನೆ.

ಯುವರಾಜನಿಗೆ ಈಗ ಸಂತೋಷವಾಯಿತು. ನಾನು ಇವನಂತೆಯೇ ಆಗಬೇಕು ಎಂದುಕೊಂಡು ಉದ್ಯಾನದಿಂದ ಸಂತೋಷಚಿತ್ತನಾಗಿ ಹೊರಟನು.

ಯುವರಾಜನು ಆಯಾಸವಾಗುವವರೆಗೂ ನಡೆದು ಹೋಗುತ್ತಿದ್ದನು. ನಂತರ ಒಂದು ಮರದ ನೆರಳಿನಲ್ಲಿ ವಿಶ್ರಮಿಸಿಕೊಳ್ಳಲು ಕುಳಿತುಕೊಂಡನು. ಆಗ ಅವನಿಗೆ ಯುವರಾಣಿಯು ಒಂದು ಗಂಡುಮಗುವನ್ನು ಹಡೆದಿರುವ ಶುಭಸಮಾಚಾರ ತಲುಪಿತು. ಇದನ್ನು ಕೇಳಿ ಅವನಂದುಕೊಂಡನು. ''ನನಗೆ ರಾಹುಲನು ಹುಟ್ಟಿದ್ದಾನೆ. ಅದೊಂದು ಬಂಧನವಾಯಿತು''. ಆದ್ದರಿಂದ ಮಗುವಿನ ಹೆಸರು 'ರಾಹುಲ'ನೆಂದಾಯ್ತು.

ಯುವರಾಜನು ಉದ್ಯಾನವನದಿಂದ ಅರಮನೆಗೆ ಹಿಂದಿರುಗುವಾಗ ಒಬ್ಬಳು ಯುವತಿಯ ಕೊಠಡಿಯ ಮುಂದೆ ಹಾದು ಬರಬೇಕಾಯ್ತು. ಅವಳು ಕಿಟಕಿಯಿಂದ ಯುವರಾಜನು ಬರುವುದನ್ನು ಕಂಡಳು. ಸುಂದರನಾದ ಈ ಯುವರಾಜನನ್ನು ಕಂಡು ಅವಳಿಗೆ ತುಂಬಾ ಮೆಚ್ಚುಗೆಯಾಗಿ ಜೋರಾಗಿ ಹೇಳಿದಳು- ಎಂತಹ ಸುಂದರಾಂಗನಿವನು ? ಇವನನ್ನು ಪಡೆದ ತಾಯಿ-ತಂದೆಗಳಾಗಲೀ, ಹೆಂಡತಿಯಾಗಲೀ ಬಹಳ ಪುಣ್ಯಶಾಲಿಗಳಾಗಿರಬೇಕು.

ಯುವರಾಜನಿಗೆ ಈ ಮಾತು ಕೇಳಿಸಿ ಅವನು ತನ್ನ ಮನಸ್ಸಿನಲ್ಲಿ 'ಹೌದು, ನಿಜವಾದ ಹಾಗೂ ಸ್ವಾರ್ಥಪರವಾದ ಸಂತೋಷವೇನೆಂಬುದನ್ನು ಅರಿತರೆ ಎಲ್ಲರೂ ಇನ್ನೂ ಸಂತೋಷವಾಗಿರಬಹುದು' ಎಂದುಕೊಂಡನು.

# ೧೧. ಸಿದ್ಧಾರ್ಥನು ಅರಮನೆಯನ್ನು ತೊರೆದನು

ಮೊಮ್ಮಗನ ಹುಟ್ಟುಹಬ್ಬದ ಸಮಾರಂಭಕ್ಕಾಗಿ ಮಹಾರಾಜನು ಭೋಜನಕೂಟವನ್ನೂ, ನೃತ್ಯವನ್ನೂ ಏರ್ಪಡಿಸಿದನು. ಇದಕ್ಕಾಗಿ ದೇಶದ ಮಹಾನ್ ಸಂಗೀತಗಾರರನ್ನೂ, ನೃತ್ಯಕಲಾವಿದರನ್ನೂ ಕರೆಸಿದನು. ಮಗನು ಹುಟ್ಟಿದ್ದರೂ ಕೂಡಾ ಯುವರಾಜನು ಸಂತೋಷಪಡಲಿಲ್ಲ. ಯುವರಾಜನು ಅರಮನೆಯನ್ನು ತೋರೆದುಹೋಗಬಹುದು. ಆದ್ದರಿಂದ ಕೊನೆಯ ಬಾರಿಗೆ ಮಗನನ್ನು ಹಾಗೆ ಹೋಗದಿರಲು ತಡೆಯಬೇಕೆಂದು ಮಹಾರಾಜನಿಗೆ ಆಸೆ. ಅದಕ್ಕಾಗಿ ಈ ನೃತ್ಯ ಮತ್ತು ಭೋಜನಕೂಟ.

ಭೋಜನದಲ್ಲಿ ಬಹಳ ರುಚಿಕರವಾದ ತಿನಿಸುಗಳಿದ್ದುವು. ದೇಶದ ಬಹಳ ಸುಂದರಿಯರಾದ ನರ್ತಕಿಯರು ಯುವರಾಜನ ಮುಂದೆ ನರ್ತಿಸಿದರು. ಯುವರಾಜನು ಕೇವಲ ತನ್ನ ತಂದೆಯನ್ನು ಸಂತೋಷಗೊಳಿಸಲಿಕ್ಕಾಗಿ ಪಾಲ್ಗೊಂಡನು. ನಿಜವಾಗಿ ಹೇಳಬೇಕೆಂದರೆ ಆ ದಿನ ಯುವರಾಜನಿಗೆ ತುಂಬಾ ಆಯಾಸವಾಗಿತ್ತು. ಅಲ್ಲದೆ ಅವನು ಈ ಮುಪ್ಪು, ಖಾಯಿಲೆ, ದುಃಖ ಮತ್ತು ಸಾವುಗಳನ್ನು ತಡೆಗಟ್ಟುವುದರ ಬಗ್ಗೆ ಚಿಂತೆ ಮಾಡುತ್ತಿದ್ದನು. ಅವನಿಗೆ ಬಹಳ ಬೇಗ ನಿದ್ರೆ ಬಂದಿತು.

ಗಾಯಕರೂ ಮತ್ತು ನರ್ತಕಿಯರೂ ನಿದ್ರೆ ಮಾಡುತ್ತಿರುವ ಯುವರಾಜನ ಮುಂದೆ ತಮ್ಮ ಕಲೆಯ ಪ್ರದರ್ಶನವಾಗುತ್ತಿರುವುದನ್ನು ನೋಡಿ ಹಾಡುವುದನ್ನೂ, ನರ್ತಿಸುವುದನ್ನೂ ನಿಲ್ಲಿಸಿದರು. ನಿಜವಾಗಿ ಅವರೂ ಬಹಳ ದಣಿದಿದ್ದರು. ಅವರಿಗೂ ಗಾಢವಾದ ನಿದ್ರೆ ಬಂದಿತು. ಸ್ವಲ್ಪ ಸಮಯದ ನಂತರ ಯುವರಾಜನಿಗೆ ಎಚ್ಚರಿಕೆಯಾಯಿತು. ನೋಡುತ್ತಾನೆ. ಅದೆಂತಹ ದೃಶ್ಯ ? ತನ್ನನ್ನು ಸಂತೋಷಪಡಿಸಲಿಕ್ಕಾಗಿ ಈ ಕಲಾವಿದರು ಅದೆಷ್ಟು ಕಷ್ಟಪಟ್ಟಿದ್ದಾರೆ. ! ಇಂದು ಇಲ್ಲಿ ಈ ಮಂದಿರದಲ್ಲಿ ಆಸನಗಳ ಮೇಲೆ, ರತ್ನಕಂಬಳಿಯ ಮೇಲೆ ಎಲ್ಲದರಲ್ಲಿ ಹೇಗೆ ಬೇಕೋ ಹಾಗೆ ಅಸ್ತವ್ಯಸ್ತವಾಗಿ ಮಲಗಿದ್ದಾರಲ್ಲ ? ಕೆಲವು ಹುಡುಗಿಯರು ಹಂದಿಗಳಂತೆ ಗೊರಕೆ ಹೊಡೆಯುತ್ತಿದ್ದಾರೆ. ಅವರ ಬಾಯಿಗಳು ಅಗಲವಾಗಿ ತೆರೆದಿವೆ. ಕೆಲವರು ಹಸಿದ ದೆವ್ವಗಳಂತೆ ತಮ್ಮ ಹಲ್ಲುಗಳನ್ನು ಕಡಿಯುತ್ತಿದ್ದಾರೆ. ಅವರುಗಳೆಲ್ಲಾ ಎಷ್ಟು ಕೊಳಕರೂ, ಕುರೂಪಿಗಳೂ ಆಗಿದ್ದರೆಂದರೆ ಬಹಳ ಅಸಹ್ಯವೂ ಆಯಿತು, ದುಃಖವೂ ಆಯಿತು. ಅವನು ಮೆಲ್ಲಗೆ ಎದ್ದನು. ಯಾರನ್ನೂ ಎಬ್ಬಿಸದೆ ತನ್ನ ನಂಬಿಕಸ್ತ ಸೇವಕನಾದ ಚೆನ್ನನನ್ನು ಕರೆದು ತನ್ನ ಬಹಳ ಮುದ್ದಿನ ಕುದುರೆಯಾದ ಕಂಥಕನಿಗೆ ಜೀನನ್ನು ಹಾಕಿ ಬಹಳ ದೂರ ಪ್ರಯಾಣ ಮಾಡಬೇಕಾದ ಸಿದ್ಧತೆ ಮಾಡುವಂತೆ ಹೇಳಿದನು.

ಚನ್ನನು ಹೊರಡಲು ಸಿದ್ಧತೆ ನಡೆಸುತ್ತಿರುವಾಗ ಸಿದ್ಧಾರ್ಥನು ತನ್ನ ಮಗುವನ್ನು ಮೊದಲ ಬಾರಿ ನೋಡಲು ಒಳಗೆ ಹೋದನು. ಆಗ ಅವನ ಹೆಂಡತಿಯು ಮಗುವನ್ನು ಪಕ್ಕದಲ್ಲಿ ಮಲಗಿಸಿಕೊಂಡು ನಿದ್ರಿಸುತ್ತಿದ್ದಳು. ಅವಳ ಕೈ ಮಗುವಿನ ಮುಖವನ್ನು ಮುಚ್ಚಿಕೊಂಡಿತ್ತು. ಹೀಗಾಗಿ ಯುವರಾಜನಿಗೆ ಮಗುವಿನ ಮುಖವನ್ನು ನೋಡಲಾಗಲಿಲ್ಲ. ಅವನೇನಾದರೂ ಅವಳ ಕೈಯನ್ನು ಸರಿಸಿ ಮಗುವನ್ನು ನೋಡೋಣವೆಂದರೆ ಅವಳೆದ್ದುಬಿಡುತ್ತಿದ್ದಳು. ಆಗ ಅವನನ್ನು ಹೋಗಗೊಡುತ್ತಿರಲಿಲ್ಲ. ಹೀಗಾಗಿ

ಯುವರಾಜನು-''ಇರಲಿ ನಾನು ಕಂಡುಕೊಳ್ಳಬೇಕಾದ ಸತ್ಯವನ್ನು ಕಂಡುಕೊಂಡ ನಂತರ ಬಂದು ತಾಯಿಯನ್ನೂ, ಮಗುವನ್ನೂ ನೋಡುತ್ತೇನೆ ಎಂದುಕೊಂಡು ಅವಳನ್ನೆಬ್ಬಿಸಲಿಲ್ಲ.

ನಂತರ ಮೆಲ್ಲಗೆ ಅರಮನೆಯಿಂದ ಆ ಮಧ್ಯರಾತ್ರಿಯಲ್ಲಿ ಹೊರಬಿದ್ದು ತನ್ನ ಬಿಳಿಯ ಕುದುರೆ ಕಂಥಕನನ್ನೇರಿದನು. ಅವನ ನಂಬಿಗಸ್ತ ಸೇವಕನಾದ ಚೆನ್ನನು ಜೊತೆಯಲ್ಲಿ ಹೊರಟನು. ನಗರದ ಹೆಬ್ಬಾಗಿಲಿಗೆ ಬಂದನು. ಯಾರೂ ಅವನನ್ನು ತಡೆಯುವವರಿಲ್ಲ. ಅವನು ತನ್ನ ಇಷ್ಟಮಿತ್ರರನ್ನೂ, ಸಂಬಂಧಿಕರನ್ನೂ, ಹಿರಿಯರನ್ನೂ ತೊರೆದು ಬಂದುಬಿಟ್ಟಿದ್ದನು. ಕಪಿಲವಸ್ತುವನ್ನು ಕೊನೆಯ ಬಾರಿಗೆ ನೋಡಿದನು. ಅದು ಹುಣ್ಣಿಮೆಯ ಬೆಳಕಿನಲ್ಲಿ ನಿದ್ರಿಸುತ್ತಿತ್ತು. ಯುವರಾಜನು ಮುಪ್ಪು, ಖಾಯಿಲೆ ಹಾಗೂ ಮರಣವನ್ನು ತಡೆಗಟ್ಟುವ ದಾರಿಯನ್ನು ಹುಡುಕಲು ಹೋಗುತ್ತಿದ್ದನು.

ಅವನು ಅನೋಮಾ ನದಿಯ ದಡದ ಬಳಿ ಬಂದನು. ಅವನು ರಾಜಯೋಗ್ಯವಾದ ತನ್ನ ಉಡುಪುಗಳನ್ನೂ, ಆಭರಣಗಳನ್ನೂ ತೆಗೆದು ಚೆನ್ನನ ಕೈಗೆ ಕೊಟ್ಟು ಅದನ್ನು ತನ್ನ ತಂದೆಗೆ ತಲುಪಿಸುವಂತೆ ಹೇಳಿದನು. ನಂತರ ತನ್ನ ಕತ್ತಿಯನ್ನು ತೆಗೆದುಕೊಂಡು ತನ್ನ ಉದ್ದವಾಗಿದ್ದ ತಲೆಯ ಕೂದಲನ್ನು ಕತ್ತರಿಸಿ ಹಾಕಿದನನು. ಕಾಷಾಯ ವಸ್ತ್ರಗಳನ್ನು ಧರಿಸಿದನು. ಭಿಕ್ಷಾಪಾತ್ರೆಯನ್ನು ಕೈಯಲ್ಲಿ ಹಿಡಿದು ಚನ್ನನನ್ನು ಹಿಂತಿರುಗಿ ಹೋಗಲು ಹೇಳಿದನು. ಚನ್ನನು - ಇನ್ನು ನೀವಿಲ್ಲದೆ ನಾನು ಅರಮನೆಯಲ್ಲಿರಲಾರೆ ಸ್ವಾಮಿ, ನಾನು ನಿಮ್ಮೊಡನೆ ಬರುತ್ತೇನೆ ಎಂದು ದುಃಖದಿಂದ ಹೇಳಿದನು.

''ಹಾಗೆ ಮಾಡಬೇಡ ಚೆನ್ನಾ - ಈ ವಸ್ತ್ರಗಳನ್ನೂ, ಆಭರಣಗಳನ್ನೂ ತೆಗೆದುಕೊಂಡು ಹೋಗಿ ನನ್ನ ತಂದೆಗೆ ಕೊಡು. ನನ್ನ ತಾಯಿಯಾಗಲೀ, ಹೆಂಡತಿಯಾಗಲೀ ನನಗಾಗಿ ದುಃಖಿಸಬಾರದೆಂದು ಅವರಿಗೆ ಹೇಳು. ನಾನು ಮುಪ್ಪು, ಕಾಯಿಲೆ ಹಾಗೂ ಸಾವುಗಳನ್ನು ತಡೆಗಟ್ಟುವ ಹಾದಿಯನ್ನು ಹುಡುಕಲು ಹೋಗುತ್ತಿದ್ದೇನೆಂದು ಅವರಿಗೆ ತಿಳಿಸು.

ನಾನು ಈ ಸತ್ಯವನ್ನು ಕಂಡುಕೊಂಡೊಡನೆಯೇ ಅರಮನೆಗೆ ಹಿಂದಿರುಗಿ ಬಂದು ನನ್ನ ತಂದೆ, ತಾಯಿ ಮತ್ತು ಪ್ರಪಂಚದ ಎಲ್ಲರಿಗೂ ಇದನ್ನು ತಿಳಿಸುತ್ತೇನೆ. ಆಗ ಅವರೆಲ್ಲರಿಗೂ ಸಂತೋಷವಾಗುತ್ತದೆ.

ಚನ್ನನು ಹಿಂದಿರುಗಿ ಹೋಗಲು ನಡೆದನು. ಆದರೆ ಕುದುರೆ ಹಿಂದಿರುಗಿ ಹೋಗಲು ನಿರಾಕರಿಸಿತು. ಯುವರಾಜನು ಕುದುರೆಯ ಜೊತೆಗೆ ಒಳ್ಳೆಯ ಮಾತನಾಡಿ ಅದರ ಬೆನ್ನನ್ನು ತಟ್ಟಿ ಹೇಳಿದನು. ''ಕಂಥಕಾ, ದಯವಿಟ್ಟು ನನ್ನ ಸ್ನೇಹಿತನೊಂದಿಗೆ ಹೋಗು . ನನಗಾಗಿ ಕಾಯಬೇಡ''.

ಇಬ್ಬರೂ ಹೊರಟರು. ಸ್ವಲ್ಪ ದೂರ ಹೋದ ನಂತರ ಕುದುರೆಯು ಯುವರಾಜನನ್ನು ಕೊನೆಯ ಬಾರಿಗೆ ನೋಡಲು ಸ್ವಲ್ಪ ನಿಂತಿತು. ಚನ್ನನಿಗೆ ಅದರ ಮನಸ್ಸು ಗೊತ್ತಾಗಿ ಹೇಳಿದನು. ''ಗೆಳೆಯಾ, ನಮ್ಮ ಯಜಮಾನನು ನಮಗೆ ಸುಖವನ್ನು ತರಲು ಹೋಗುತ್ತಿದ್ದಾನೆ. ದುಃಖಪಡಬೇಡ. ಆತನುಬೇಗ ಹಿಂದಿರುಗುತ್ತಾನೆ. ಬಾ, ಇನ್ನು ಹೋಗೋಣ''.

ಕುದುರೆಗೆ ಬಹಳ ದುಃಖವಾಯಿತು. ಅದರ ಕಣ್ಣುಗಳಿಂದ ಕಣ್ಣೀರು ಹರಿಯತೊಡಗಿತು. ಅದು ಕೆಲವು ನಿಮಿಷ ತನ್ನ ಯಜಮಾನನನ್ನು ನೆಟ್ಟ ದಷ್ಟಿಯಿಂದ ನೋಡುತ್ತಿತ್ತು. ನಂತರ ದುಃಖದಿಂದ ಸತ್ತುಹೋಯಿತು.

## ೧೨. ಬಿಂಬಿಸಾರನ ಪ್ರಸ್ತಾಪ

ಅನೋಮಾ ನದಿಯ ಬಳಿ ಭಿಕ್ಷುಕನ ವೇಷವನ್ನು ಧರಿಸಿದ ಯುವರಾಜನು ಊರಿಂದ ಊರಿಗೆ ಅಲೆಯತೊಡಗಿದನು. ಸ್ವಲ್ಪ ಸಮಯದ ನಂತರ ಆತನು ಬಿಂಬಿಸಾರನು ವಾಸಿಸುತ್ತಿದ್ದ ರಾಜಗೃಹಕ್ಕೆ ಬಂದನು. ಇಲ್ಲಿ ತನ್ನ ಕೈಲಿ ಭಿಕ್ಷಾಪಾತ್ರೆ ಹಿಡಿದ ಯುವರಾಜನು ಬೀದಿ ಬೀದಿಗಳಲ್ಲಿ ತಿರುಗುತ್ತಾ, ಮನೆ ಮನೆಗೆ ಹೋಗಿ ಭಿಕ್ಷೆ ಬೇಡತೊಡಗಿದನು. ಇತರ ಸನ್ಯಾಸಿಗಳಂತೆ ತನ್ನ ಜೀವನವನ್ನು ನಡೆಸತೊಡಗಿದನು.

ಈಗ ಅವನಿಗೆ ವಾಸಿಸಲು ಮನೆಯಿಲ್ಲ, ಮಾತನಾಡಲು ಜೊತೆಗೆ ಸ್ನೇಹಿತರಿಲ್ಲ, ಉಣ್ಣಲು ಊಟವಿಲ್ಲ. ಜನಗಳು ಕೊಡುವ ಭಿಕ್ಷೆಯೇ ಅವನಿಗೆ ಆಹಾರ. ಜನರು ಅವನನ್ನು ಪರಿವ್ರಾಜಕನೆಂದು ಕರೆದರು, ಮುನಿ ಎಂದು ಕರೆದರು, ಮತ್ತೆ ಕೆಲವರು ಗೌತಮ ಸನ್ಯಾಸಿ ಎಂದರು. ಯಾರೂ ಸಿದ್ಧಾರ್ಥನೆಂದು ಕರೆಯಲಿಲ್ಲ.

ಅವನು ನೋಡಲು ಬಹಳ ಸುಂದರನಾಗಿದ್ದನು, ಯುವಕನಾಗಿದ್ದನು, ಬಹಳ ಶುಚಿಯಾಗಿರುತ್ತಿದ್ದನು. ಜನಗಳೊಡನೆ ದಯೆಯಿಂದ, ವಿಶ್ವಾಸದಿಂದ ಮಾತನಾಡುತ್ತಿದ್ದನು. ಅವನು ಜನರನ್ನು ಏನೂ ಬೇಡುತ್ತಿರಲಿಲ್ಲ. ಆದರೆ ಜನಗಳೇ ಅವನ ಭಿಕ್ಷಾಪಾತ್ರೆಯಲ್ಲಿ ಭಿಕ್ಷೆ ಹಾಕಿ ಸಂತೋಷಪಡುತ್ತಿದ್ದರು.

ಕೆಲವು ಜನರು ಬಿಂಬಿಸಾರನ ಬಳಿ ಹೋಗಿ ಹೇಳಿದರು-''ದೊರೆಯೇ, ಇಲ್ಲಿಗೆ ಒಬ್ಬ ಯುವಕನು ಬಂದಿದ್ದಾನೆ. ಜನರು ಅವನನ್ನು ಗೌತಮ ಋಷಿ ಎನ್ನುತ್ತಾರೆ- ಅವನು ಬಹಳ ಚೊಕ್ಕಟವಾಗಿದ್ದಾನೆ, ದಯಾಪೂರಿತನಾಗಿದ್ದಾನೆ, ವಿನಮ್ರನಾಗಿದ್ದಾನೆ, ಇತರ ಭಿಕ್ಷುಕರಂತಿಲ್ಲ''.

ಬಿಂಬಿಸಾರ ಮಹಾರಾಜನು, ''ಗೌತಮ''ನೆಂಬ ಹೆಸರು ಕೇಳುತ್ತಲೇ ಅವನು ತನ್ನ ಸ್ನೇಹಿತ ಶುದ್ಧೋದನನ ಮಗನೆಂದು ತಿಳಿಯಿತು. ಅವನು ಗೌತಮನ ಬಳಿ ಬಂದು ಕೇಳಿದನು-''ಇದೇಕೆ ನೀನು ಸನ್ಯಾಸಿಯಾದೆ ? ತಂದೆಯ ಜೊತೆಗೆ ಜಗಳವಾಡಿದೆಯಾ ? ಊರಿಂದೂರಿಗೆ ಏಕೆ ಅಲೆಯುತ್ತಿರವೆ ? ಇಲ್ಲೇ ಇದ್ದುಬಿಡು. ನಾನು ನಿನಗೆ ಅರ್ಧ ರಾಜ್ಯವನ್ನು ಕೊಡುತ್ತೇನೆ''.

ತುಂಬಾ ಧನ್ಯವಾದಗಳು ದೊರೆಯೇ. ನಾನು ನನ್ನ ತಂದೆ, ತಾಯಿ, ಹೆಂಡತಿ, ನೀನು ಹೀಗೆ ಎಲ್ಲರನ್ನೂ ಪ್ರೀತಿಸುತ್ತೇನೆ. ನಾನು ಮುಪ್ಪು, ಕಾಯಿಲೆ, ದುಃಖ ಮತ್ತು ಸಾವುಗಳನ್ನು ತಡೆಗಟ್ಟಲು ಹೊರಟಿದ್ದೇನೆ'' ಎಂದು ನುಡಿದು ಯುವರಾಜನು ಅಲ್ಲಿಂದ ಹೊರಟುಹೋದನು.

# ೧೩. ಆಲಾರ ಕಾಲಾಮ ಮತ್ತು ಉದ್ದಕ ರಾಮಪುತ್ತ

ಸಿದ್ಧಾರ್ಥನು ತನ್ನ ಅರಮನೆಯನ್ನೂ, ವೈಭವವನ್ನೂ ತ್ಯಜಿಸಿ ಸನ್ಯಾಸಿಯಾಗಿ ಹೊರಟದ್ದನ್ನು ಕೇಳಿ ಅವನ ಐದು ಜನ ಮಿತ್ರರಾದ ಕೊಂಡಞ್ಞನೂ ಸನ್ಯಾಸಿಯಾಗಿ ಹೊರಟನು. ಅವನು ಎಲ್ಲರಿಗಿಂತಲೂ ಬುದ್ಧಿವಂತನೂ, ಚಿಕ್ಕವನೂ ಆಗಿದ್ದನು. ಉಳಿದ ನಾಲ್ಕು ಜನರಾದ ಭದ್ದಿಯಾ, ವಪ್ಪ, ಮಹಾನಾಮ ಮತ್ತು ಅಸ್ಸಜಿ ಎಂಬುವವರೂ ಕೂಡಾ ಕಾಷಾಯವನ್ನು ಧರಿಸಿ ಮನೆಯನ್ನು ತೊರೆದು ಹೊರಟರು. ಮನೆಯಿಂದ ಮನೆಗೆ ಊರಿನಿಂದ ಊರಿಗೆ ಹೋಗಿ ಭಿಕ್ಷಾಟನೆ ಮಾಡತೊಡಗಿದರು.

ಆ ಸಮಯದಲ್ಲಿ ಭಾರತದಲ್ಲಿ ಅನೇಕ ಧಾರ್ಮಿಕ ಗುರುಗಳಿರುತ್ತಿದ್ದರು. ಅವರಲ್ಲಿ ಆಲಾರ ಕಾಲಾಮನೆಂಬುವನು ಬಹಳ ದೊಡ್ಡ ವಿದ್ವಾಂಸನಾಗಿದ್ದನು ಮತ್ತು ಸುಪ್ರಸಿದ್ಧನಾಗಿದ್ದನು. ಸನ್ಯಾಸಿ ಗೌತಮನು ತನ್ನ ಐವರೂ ಸ್ನೇಹಿತರ ಜೊತೆಯಲ್ಲಿ ವಿದ್ಯೆ ಕಲಿಯಲು ಅವನಲ್ಲಿಗೆ ಹೋದನು. ಅಲ್ಲಿಯೇ ಇದ್ದುಕೊಂಡು ಆಲಾರನು ಹೇಳಿಕೊಟ್ಟ ಶಾಸ್ತ್ರಗಳನ್ನು ಬಹಳ ನಿಷ್ಠೆಯಿಂದಲೂ, ವಿಧೇಯತೆಯಿಂದಲೂ ಕಲಿತುಕೊಂಡನು. ಅವನು ಬಹಳ ಕಷ್ಟಪಟ್ಟು ಕಲಿಯುತ್ತಿದುದರಿಂದಲೂ, ಬಹಳ ಬುದ್ಧಿವಂತನಾಗಿದ್ದುದರಿಂದಲೂ ಆಲಾರನಿಗೆ ಗೌತಮನನ್ನು ಕಂಡರೆ ತುಂಬಾ ಪ್ರೀತಿಯಿತ್ತು. ಕೊನೆಯಲ್ಲಿ ಗೌತಮನಿಗೆ ಕಲಿಸುವುದು ಇನ್ನು ಏನೂ ಉಳಿದಿರಲಿಲ್ಲ.

ಆಗ ಆಲಾರನು ಹೇಳಿದನು-''ನಾನು ನನಗೆ ತಿಳಿದುದನ್ನೆಲ್ಲಾ ನಿನಗೆ ಕಲಿಸಿದ್ದೇನೆ. ಇನ್ನೇನೂ ಉಳಿದಿಲ್ಲ. ನೀನು ನನ್ನಷ್ಟೇ ವಿದ್ವಾಂಸನಾಗಿದ್ದೀಯೆ. ನೀನು ಇಲ್ಲೇ ಇದ್ದು, ನನ್ನ ಸ್ಥಾನದಲ್ಲಿ ನಿಂತು ವಿದ್ಯಾರ್ಥಿಗಳಿಗೆ ಕಲಿಸಿಕೊಡು''.

ಗೌತಮನಿಗೆ ಆಶ್ಚರ್ಯವಾಯಿತು. ''ನೀವು ಇನ್ನೇನೂ ಕಲಿಸುವುದು ಉಳಿದಿಲ್ಲವೆ. ಈ ಮುಪ್ಪು, ರೋಗ, ದುಃಖ ಮತ್ತು ಸಾವನ್ನು ತಡೆಗಟ್ಟುವುದನ್ನು ಕಲಿಸಿಕೊಡಲಾರಿರಾ ?'' ಎಂದು ಕೇಳಿದನು. ''ಇಲ್ಲ, ನಾನು ಕಲಿಸಲಾರೆ. ಇದರ ವಿಚಾರವಾಗಿ ನನಗೇನೂ ತಿಳಿಯದು. ನಾನೇ ಅಲ್ಲ ಯಾರೂ ಇದನ್ನು ಕಲಿಸಲಾರರು''.

ನಂತರ ಗೌತಮನು ತನ್ನ ಐದು ಜನ ಸ್ನೇಹಿತರೊಂದಿಗೆ ಅಲ್ಲಿಂದ ಹೊರಟು ಎಲ್ಲರೂ ತಾವು ಕಲಿತದ್ದೆಲ್ಲವನ್ನೂ ಅಭ್ಯಾಸ ಮಾಡಿಕೊಳ್ಳುತ್ತಿದ್ದರು. ಕೊನೆಗೆ ಬಹಳ ಬುದ್ಧಿವಂತನಾದ ಇನ್ನೊಬ್ಬ ವಿದ್ವಾಂಸನಿರುವುದು ಅವರಿಗೆ ತಿಳಿಯಿತು. ಅವನ ಹೆಸರು ಉದ್ದಕ ರಾಮಪುತ್ತ. ಅವನಲ್ಲಿಗೆ ಹೋಗಿ ವಿದ್ಯೆ ಕಲಿತರು. ಇಲ್ಲಿಯೂ ಸಹಾ ಗೌತಮನು ತನ್ನ ಗುರುವಿಗೆ ವಿಧೇಯನಾಗಿ ಶ್ರದ್ಧೆಯಿಂದ ಕಲಿತು ಗುರುವಿನ ಪ್ರೀತಿಗೆ ಪಾತ್ರನಾದನು.

ಉದ್ದಕನೂ ಸಹಾ ಮುಪ್ಪು, ರೋಗ, ದುಃಖ ಹಾಗೂ ಸಾವುಗಳ ಬಗ್ಗೆ ಅವುಗಳನ್ನು ತಡೆಗಟ್ಟುವ ಬಗ್ಗೆ ತಿಳಿಸದಾದನು. ಅವನೇ ಅಲ್ಲ ಈ ವಿಚಾರ ಯಾರಿಗೂ ತಿಳಿಯದು. ಆದ್ದರಿಂದ ಗೌತಮನು ತನ್ನ ಸ್ನೇಹಿತರೊಂದಿಗೆ ಅಲ್ಲಿಂದ ಹೊರಟು, ದುಃಖಗಳ ಮೂಲವನ್ನು ಕಾಯಕ್ಲೇಶದಿಂದಲೂ, ತಪಸ್ಸಿನಿಂದಲೂ ಕಂಡುಹಿಡಿಯುವ ನಿರ್ಧಾರ ಮಾಡಿದನು.

# ೧೪. ದೇಹ ದಂಡನೆ

ಉದ್ದಕನಿಂದ ಬೀಳ್ಕೊಂಡು ತನ್ನ ಐದು ಜನ ಸ್ನೇಹಿತರೊಂದಿಗೆ ಹೊರಟ ಗೌತಮನು ಯಥಾಪ್ರಕಾರ ಊರಿಂದ ಊರಿಗೆ ಅಲೆಯುತ್ತಾ ಬಂದನು. ಕೊನೆಗೆ ಉಪವಾಸ ಮಾಡಲು ನಿರ್ಧರಿಸಿದನು. ಏಕೆಂದರೆ ಉಪವಾಸದಿಂದ ಜ್ಞಾನವು ಲಭಿಸುವುದೆಂದು ತಿಳಿದನು. ಮೊದ ಮೊದಲು ಆಹಾರವನ್ನು ಸ್ವಲ್ಪವಾಗಿ ಸ್ವೀಕರಿಸುತ್ತಿದ್ದನು. ನಂತರ ದಿನಕ್ಕೆ ಒಂದೇ ಹೊತ್ತು ಊಟ. ತದನಂತರ ಎರಡುಮೂರು ದಿನಕ್ಕೊಮ್ಮೆ ಸ್ವಲ್ಪ ಆಹಾರ. ತಿಂಗಳುಗಟ್ಟಲೆ ಹೀಗೆ ನಡೆಯಿತು. ನಂತರ ಬೇರೆ ಬೇರೆ ಎಲೆಗಳ ರಸವನ್ನೂ, ಹಣ್ಣುಗಳ ರಸವನ್ನೂ ಸ್ವೀಕರಿಸುತ್ತಿದ್ದನು. ಹೀಗಾಗಿ ಅವನು ಸೊರಗತೊಡಗಿದನು. ಅವನ ಶರೀರವು ಕೃಶವಾಗತೊಡಗಿತು. ಕಾಲುಗಳು ಬೊಂಬಿನಂತೆ ಒಣಗಿದುವು. ಬೆನ್ನು ಹುರಿಯು ಹಗ್ಗದಂತೆ ಹೊಸೆದುಕೊಂಡಿತು. ಎದೆಯ ಪಕ್ಕದ ಎಲುಬುಗಳು, ಕಟ್ಟಿಮುಗಿಸದ ಛಾವಣಿಯಂತಾಯ್ತು. ಕಣ್ಣುಗಳು ಆಳವನ್ನು ಸೇರಿದವು. ದೇಹದ ಚರ್ಮ ಒಣಗಿ ಸುಕ್ಕುಗಟ್ಟಿತು. ಕೂದಲುಗಳು ಮಾಯವಾದವು. ನೋಡಲಿಕ್ಕೆ ಅವನೊಬ್ಬ ಅಸ್ಥಿ-ಪಂಜರದಂತೆ ಕಂಡುಬರುತ್ತಿದ್ದನು. ಮೂಳೆಗಳೆಲ್ಲಾ ಮಾಂಸವನ್ನು ಕಳೆದುಕೊಂಡು ನಿಂತವು. ಅವನು ಹಸಿವೆಯಿಂದಲೂ, ನೋವಿನಿಂದಲೂ ಬಹಳ ಬಾಧೆಪಟ್ಟನು. ಹೀಗೆಲ್ಲಾ ಕಷ್ಟಪಟ್ಟರೇನೇ ಸಿದ್ಧಿಯಾಗುವುದು ಎಂದು ಯೋಚಿಸಿದನು. ಹೀಗೆಯೇ ಕುಳಿತು ಧ್ಯಾನ ಮಾಡತೊಡಗಿದನು. ಆದರೆ ಏನೂ ಪ್ರಯೋಜನವಾಗಲಿಲ್ಲ.

ನಂತರ ಇನ್ನೊಂದು ರೀತಿಯಿಂದ ದೇಹದಂಡನೆಗೆ ತೊಡಗಿದನು. ಉಸಿರನ್ನು ಬಹಳ ಹೊತ್ತು ಬಿಗಿ ಹಿಡಿಯುತ್ತಿದ್ದನು. ವಿಪರೀತವಾಗಿ ತಲೆನೋವು, ಕಿವಿಯಲ್ಲಿ ಶೂಲೆ, ಮೈಕೈಗಳಲ್ಲೆಲ್ಲ ತೀವ್ರ ನೋವುಂಟಾಗುವವರೆಗೂ ಉಸಿರನ್ನು ಬಿಗಿ ಹಿಡಿದಿರುತ್ತಿದ್ದನು. ನಂತರ ಒಂಟಿಯಾಗಿರುವುದನ್ನು ಅಭ್ಯಾಸ ಮಾಡಿದನು. ಹುಣ್ಣಿಮೆ ಅಮಾವಾಸ್ಯೆಗಳಂದು ಕಾಡಿಗೋ, ಸ್ಮಶಾನಕ್ಕೋ ಅಥವಾ ಇನ್ನಾವುದಾದರೂ ಯಾರೂ ಇಲ್ಲದ ಸ್ಥಳಕ್ಕೆ ಹೋಗಿ ಧ್ಯಾನ ಮಾಡತೊಡಗಿದನು. ಮೊದ ಮೊದಲು ಈ ಸ್ಥಳಗಳಲ್ಲಿ ಆತನಿಗೆ ಭಯವಾಗುತ್ತಿತ್ತು. ಅದರಲ್ಲೂ ಕಾಡು ಮೃಗಗಳನ್ನು ಕಂಡರೆ ಹೆಚ್ಚು ಭಯವಾಗುತ್ತಿತ್ತು. ಆದರೆ ಆತನೆಂದೂ ಹೆದರಿ ಓಡಿಹೋಗುತ್ತಿರಲಿಲ್ಲ. ಆತನು ಆ ಸ್ಥಳಗಳಲ್ಲಿ ಧೈರ್ಯದಿಂದ ಕುಳಿತು ಧ್ಯಾನ ಮಾಡತೊಡಗಿದನು.

ಈ ದಿನಗಳಲ್ಲಿ ಆತನು ಸ್ಮಶಾನದಲ್ಲಿ ಸಿಗುವ ಕೊಳಕು ಚಿಂದಿಗಳನ್ನು ಉಡಬೇಕಾಗುತ್ತಿತ್ತು. ಸುಡು ಬೇಸಿಗೆಯಲ್ಲಿ ಆತನು ರಾತ್ರಿ ಹೊತ್ತಿನಲ್ಲಿ ಒಳಗೂ, ಮಧ್ಯಾಹ್ನದಲ್ಲಿ ಸುಡುವ ಬಿಸಿಲಿನಲ್ಲೂ ಇರುತ್ತಿದ್ದನು. ಚಳಿಗಾಲದಲ್ಲಿ ಮಧ್ಯರಾತ್ರಿಯಲ್ಲಿ ಮಂಜಿನಂತಹ ಕೊರೆಯುವ ನೀರಿನಲ್ಲಿ ಸ್ನಾನಮಾಡುತ್ತಿದ್ದನು. ಹಾಗೆಯೇ ಬಹಳ ಹೊತ್ತು ಇದ್ದುಬಿಡುತ್ತಿದ್ದನು. ಇದೆಲ್ಲಾ ಶರೀರವನ್ನು ದಂಡಿಸಲಿಕ್ಕಾಗಿ ಮಾಡುತ್ತಿದ್ದನು.

ಆರು ವರ್ಷಗಳಷ್ಟು ದೀರ್ಘಕಾಲ ಆತನು ನಾನಾ ವಿಧವಾದ ತೊಂದರೆಗಳನ್ನು ಸಹಿಸಿಕೊಂಡು ಇಂತಹ ಕಷ್ಟಗಳಿಂದ ದೇಹವನ್ನು ದಂಡಿಸುತ್ತಿದ್ದನು. ಆದರೆ ಅವನು ಬಯಸಿದ್ದೊಂದೂ ಆಗಲಿಲ್ಲ. ಕೊನೆಯಲ್ಲಿ ಜ್ಞಾನವನ್ನು ಪಡೆಯಲು ಈ ಮಾರ್ಗಗಳು ಸರಿಯಲ್ಲವೆನಿಸಿತು. ಒಂದು ದಿನ ಉರುವೇಲ ಎಂಬ ಸ್ಥಳದಲ್ಲಿ ಆತನು ಮೂರ್ಛೆ ಹೋದನು. ಒಬ್ಬ ಮೇಕೆ ಕಾಯುವ ಹುಡುಗನು ಬಂದು ಅವನಿಗೆ ಸ್ವಲ್ಪ ಹಾಲನ್ನು ಕುಡಿಸಿದನು. ದೇಹದಲ್ಲಿ ಸ್ವಲ್ಪ ಶಕ್ತಿ ಬಂದಂತಾಯಿತು. ನಂತರ ಆತನು ಹೆಚ್ಚು ಹೆಚ್ಚು ಹಾಲನ್ನು ಕುಡಿದು, ಊಟವನ್ನು ಮಾಡುತ್ತಾ ತನ್ನ ಶರೀರವನ್ನು ಧೃಡಕಾಯವಾಗಿ ಮಾಡಿಕೊಂಡನು. ಅವನ ಐದು ಜನ ಸ್ನೇಹಿತರು ಅವನು ಉಪವಾಸ ಮಾಡುವುದಿಲ್ಲವೆಂದು ತಿಳಿದು ಅವನನ್ನು ಬಿಟ್ಟು ಹೊರಟುಹೋದರು.

## ೧೫. ಸುಜಾತಳಿಂದ ಗೌತಮನಿಗೆ ಪಾಯಸದ ಕೊಡುಗೆ

ಸೇನಾನಿ ಎಂಬ ಹಳ್ಳಿಯಲ್ಲಿ ಒಬ್ಬ ಸುಂದರಳಾದ ತರುಣಿಯಾದ ಸಿರಿವಂತ ಹುಡುಗಿಯಿದ್ದಳು. ಅವಳಿಗೆ ತಾನು ಮದುವೆಯಾಗಿ ಒಂದು ಗಂಡು ಮಗುವನ್ನು ಪಡೆಯಬೇಕೆಂಬ ಆಸೆಯಿತ್ತು. ಅವಳು ಬಹಳ ವರ್ಷ ಇದಕ್ಕಾಗಿ ಕಾದಳು. ಆದರೆ ಪ್ರಯೋಜನವಾಗಲಿಲ್ಲ. ಜನಗಳು ಅವಳಿಗೆ ಹೇಳಿದರು - ''ನೀನು ನೆರಂಜಾರಾ ನದಿಯ ತೀರದಲ್ಲಿರುವ ಅರಳಿಮರದ ಬಳಿ ಹೋಗಿ ಅದನ್ನು ನಿನಗೆ ಒಬ್ಬ ಗಂಡನನ್ನೂ, ಮಗುವನ್ನೂ ಕರುಣಿಸುವಂತೆ ಕೇಳಿಕೊಂಡರೆ ನಿನ್ನ ಬಯಕೆ ಈಡೇರುವುದು''. ಆಗಿನ ಕಾಲದಲ್ಲಿ ಜನರು ತಮ್ಮ ಕೋರಿಕೆಗಳನ್ನು ಈಡೇರಿಸಿಕೊಳ್ಳಲು ಮರಗಳನ್ನೂ, ವಿಗ್ರಹಗಳನ್ನೂ ಪೂಜಿಸುತ್ತಿದ್ದರು. ಅವಳು ಜನಗಳು ಹೇಳಿದಂತೆ ಮಾಡಿದಳು. ಕೊನೆಗೆ ಅವಳಿಗೆ ಒಬ್ಬ ಯುವಕನೊಂದಿಗೆ ಮದುವೆಯಾಯ್ತು. ಅವಳಂದುಕೊಂಡಂತೆ ಗಂಡುಮಗುವೂ ಆಯಿತು. ನಂತರ ಅವಳು ಬಹಳ ಸಂತೋಷಪಟ್ಟು ತಾನು ಬೇಡಿಕೊಂಡಿದ್ದಂತೆ ಆ ವೃಕ್ಷದೇವತೆಗೆ ಪೂಜೆ ಮಾಡಬೇಕೆಂದುಕೊಂಡು ತನ್ನ ಆಳನ್ನು ಕರೆದು ಮರದ ಬುಡದಲ್ಲಿ ಚೆನ್ನಾಗಿ ಗುಡಿಸಿ, ಶುಚಿಗೊಳಿಸಲು ಹೇಳಿದಳು.

ಆ ಸುಂದರಳಾದ ತರುಣಿಯ ಹೆಸರು ಸುಜಾತಾ ಎಂದು. ಅವಳ ಹತ್ತಿರ ಒಂದು ಸಾವಿರ ಹಸುಗಳಿದ್ದುವು. ಅವುಗಳು ಸಿಹಿಯಾದ ಹಾಲನ್ನು ಕೊಡಬೇಕೆಂದು ಅವಳು ''ವಾಲ್ಮಿ'' ಎಂಬ ಬಳ್ಳಿಗಳನ್ನು ಅವುಗಳಿಗೆ ತಿನ್ನಿಸುತ್ತಿದ್ದಳು. ನಂತರ ಅವಳು ಆ ಒಂದು ಸಾವಿರ ಹಸುಗಳ ಹಾಲನ್ನು ಕರೆದು ಐನೂರು ಹಸುಗಳಿಗೆ ಅದನ್ನು ಕುಡಿಸಿದಳು. ಆಮೇಲೆ ಆ ಐನೂರು ಹಸುಗಳ ಹಾಲನ್ನು ಮತ್ತೆ ಇನ್ನೂರೈವತ್ತು ಹಸುಗಳಿಗೆ ಹೀಗೆ ಮಾಡುತ್ತಾ ಕೊನೆಗೆ ಎಂಟು ಹಸುಗಳಿಗೆ ಕುಡಿಸಿದಳು. ಹೀಗೆ ಮಾಡುವುದರಿಂದ ಗಟ್ಟಿಯಾದ, ರುಚಿಕರವಾದ ಹಾಲು ಸಿಗುವುದೆಂದು ಅವಳ ಎಣಿಕೆ. ಹೀಗೆ ಕರೆದ ಹಾಲಿನಿಂದ ಪಾಯಸವನ್ನು ತಯಾರಿಸಿದಳು. ಆಗ ಇದ್ದಕ್ಕಿದ್ದ ಹಾಗೆಯೇ ಅವಳ ಸೇವಕಿಯು ಓಡೋಡಿ ಬಂದಳು. ಅವಳ ಮುಖದಲ್ಲಿ ಆನಂದ, ಆಶ್ಚರ್ಯಗಳು ತುಂಬಿದ್ದುವು. ಅವಳು ಹೇಳಿದಳು-''ಸುಜಾತಾ ಅಮ್ಮಾವರೇ, ನೀವು ಮಾಡಿದ ಪಾಯಸವನ್ನುಣ್ಣಲು ಅರಳೀ ಮರದ ದೇವತೆ ಕೆಳಗಿಳಿದು ಬಂದಿದೆ. ಆತನು ಮರದ ಕೆಳಗೆ ಧ್ಯಾನ ಮಾಡುತ್ತಾ ಕುಳಿತಿದ್ದಾನೆ. ಅಮ್ಮಾ, ನೀವು ಮಾಡಿದ ಅನ್ನವನ್ನು ತಿನ್ನಲಿಕ್ಕಾಗಿ ದೇವರೇ ಬಂದಿದ್ದಾನೆ. ನೀವೆಂತಹ ಅದೃಷ್ಟಶಾಲಿಯಮ್ಮಾ!''

ಸುಜಾತಳಿಗೂ ಸಂತೋಷದಿಂದ ಏನೂ ತೋಚದಂತಾಯ್ತು. ಅವಳು ತನ್ನ ಸೇವಕಿಯೊಡನೆ ಕುಣಿಯತೊಡಗಿದಳು. ಇನ್ನೂ ಹೆಚ್ಚು ಶ್ರದ್ಧೆಯಿಂದ ಪರಮಾನ್ನವನ್ನು ಮಾಡಿದರು.

ಸ್ವಾದಿಷ್ಟವಾದ ಪರಮಾನ್ನವನ್ನು ತೆಗೆದುಕೊಂಡು ಅವರಿಬ್ಬರೂ ಅರಳೀ ಮರದ ಬಳಿಗೆ ಬಂದರು. ಸುನೀತಳಿಗೆ ಆ ವೃಕ್ಷ ದೇವರನ್ನು ಕಂಡು ಸಂತೋಷ ಸಂಭ್ರಮಗಳಾದುವು. ಆ ದೇವರು ತುಂಬಾ ಸುಂದರನಾಗಿದ್ದನು. ಕುಳಿತು ಧ್ಯಾನ ಮಾಡುತ್ತಿದ್ದನು. ಅವಳಿಗೆ ಅವನು ಗೌತಮ ಮುನಿಯೆಂದು ತಿಳಿದಿರಲಿಲ್ಲ. ಅವಳು ಆತನಿಗೆ ಪಾಯಸವನ್ನು ಚಿನ್ನದ ಪಾತ್ರೆಯ ಜೊತೆ ನೀಡುತ್ತಾ ಹೇಳಿದಳು - ''ನನ್ನ ಬಯಕೆ ಈಡೇರಿದಂತೆ ನಿನ್ನ ಇಚ್ಛೆಯೂ ನೆರವೇರಲಿ''.

ಗೌತಮನು ಆ ಗಟ್ಟಿ ಪಾಯಸವನ್ನು ನಲವತ್ತೊಂಬತ್ತು ತುತ್ತುಗಳನ್ನು ಮಾಡಿ ತಿಂದನು. ಖಾಲಿಯಾದ ಚಿನ್ನದ ಪಾತ್ರೆಯನ್ನು ''ನಾನು ಇಂದು ಬೋಧಿಯನ್ನು ಪಡೆಯುವುದಾದರೆ ಈ ಪಾತ್ರೆ ನದಿಯ ಪ್ರವಾಹದ ವಿರುದ್ಧ ತೇಲಲಿ'' ಎಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿ ನದಿಯಲ್ಲಿ ಎಸೆದನು. ಅವನ ಸಂಕಲ್ಪದಂತೆ ಅದು ಪ್ರವಾಹದ ವಿರುದ್ಧ ತೇಲಿತು !

## ೧೬. ಜ್ಞಾನೋದಯ - ಬುದ್ಧತ್ವ

ನಂತರ ಬಂದು ಅಲ್ಲಿ ಧ್ಯಾನ ಮಾಡಲಿಕ್ಕಾಗಿ ಪ್ರಶಸ್ತವಾದ ಒಂದು ಸ್ಥಳವನ್ನು ಹುಡುಕಿದನು. ಆತನು ಬೋಧಿವೃಕ್ಷದ ಕೆಳಗೆ ಪೂರ್ವದಿಕ್ಕಿಗೆ ಕುಳಿತು ಸಂಕಲ್ಪ ಮಾಡಿದನು - ''ನನ್ನ ಶರೀರದ ಚರ್ಮ, ನರ-ನಾಡಿಗಳು, ಮೂಳೆಗಳು ಎಲ್ಲವೂ ಸವೆದುಹೋದರೂ, ನನ್ನ ದೇಹದಲ್ಲಿರುವ ರಕ್ತವು ಒಣಗಿಹೋದರೂ ಕೂಡಾ ಈ ಸ್ಥಳವನ್ನು ಮನುಷ್ಯನಿಗೆ ಸುಖವನ್ನು ಕೊಡುವ ಜ್ಞಾನೋದಯವಾಗುವವರೆಗೂ ಬಿಡಲಾರೆ. ಇಲ್ಲಿಂದ ಏಳಲಾರೆ''. ಆಗ ಮಾರನು (ಕೆಟ್ಟ ಶಕ್ತಿ) ಗಿರಿಮೇಖಲ ಎಂಬ ಆನೆಯ ಮೇಲೆ ಬಂದು ಬೋಧಿಸತ್ವನ ಜೊತೆ ಮಾನಸಿಕವಾಗಿ ಯುದ್ಧ ಗೈದನು. ಗೌತಮನು ತನ್ನ ಪಾರಮಿತಗಳ (ಉತ್ತಮ ಗುಣಗಳ) ಬಲದಿಂದ ಅವನನ್ನು ಶಾಂತಿಯಿಂದ ಸೋಲಿಸಿದನು.

ಆ ದಿನ ವೈಶಾಖ ಮಾಸದ ಹುಣ್ಣಿಮೆಯಾಗಿತ್ತು. ಆತನು ಧ್ಯಾನಮುದ್ರೆಯಲ್ಲಿ ಕುಳಿತು ಉಸಿರಿನ ಮೇಲೆ ಮಾಡತೊಡಗಿದನು - ಆದಿನ ಹಾಗೆ ಧ್ಯಾನ ಮಾಡಿ ಅವನ ಮನಸ್ಸನ್ನು ಎಲ್ಲ ಕೆಟ್ಟ ಯೋಚನೆಗಳ ನಾಶ ಮಾಡಿದ್ದವು. ಪ್ರಾಪಂಚಿಕ ವಸ್ತುಗಳನ್ನು ಪಡೆಯುವಾಸೆ. ಪರಮ ಪವಿತ್ರವಾದ ಸನ್ಯಾಸ ಜೀವನದ ಬಗ್ಗೆ ಆಸಕ್ತಿ ಇಲ್ಲದಿರುವುದು, ಹಸಿವೆ, ಬಾಯಾರಿಕೆ, ಇಷ್ಟಾನಿಷ್ಟಗಳು, ಸೋಮಾರಿತನ, ಜಡತ್ವ, ದೆವ್ವಗಳ ಬಗ್ಗೆ ಭಯ, ಅನುಮಾನ, ಹೆಡ್ಡತನ, ಮೊಂಡುತನ, ಎಲ್ಲವೂ ತನಗೆ ಬೇಕೆಂಬಾಸೆ, ತನ್ನನ್ನು ಎಲ್ಲರೂ ಹೊಗಳಬೇಕು, ತನಗೆ ಮರ್ಯಾದೆ ಮಾಡಬೇಕು, ಕೀರ್ತಿಗಾಗಿ ಕೆಲಸ ಮಾಡುವ, ತನ್ನ ಬಗ್ಗೆ ತಾನೇ ಮಹಾತ್ಮನೆಂದು ತಿಳಿಯುವುದು, ಬೇರೆಯವರನ್ನು ನಿಕೃಷ್ಟವಾಗಿ ನೋಡುವುದು ಇಂತಹ ಭಾವನೆಗಳೆಲ್ಲಾ ಮನಸ್ಸಿನಿಂದ ತೆಗೆದುಹಾಕಿದನು. ಆದರೆ ಅವನ ನಿರ್ಧಾರ ಅಚಲವಾಗಿತ್ತು. ಅವನು ಇನ್ನೂ ಮೌನಿಯಾದನು. ಮನಸ್ಸು ಗಟ್ಟಿಯಾಯಿತು. ಏಕಾಗ್ರತೆ ಬಲವಾಯಿತು. ಕೊನೆಗೆ ದುಷ್ಟ ವಿಚಾರಗಳನ್ನೆಲ್ಲಾ ಮನಸ್ಸಿನಿಂದ ಹೊರ ಹಾಕಿದನು. ರಾತ್ರಿಯ ಮೊದಲ ಜಾವದಲ್ಲಿ ಅವನಿಗೆ ಅವನ ಹಿಂದಿನ ಜನ್ಮಗಳ ಬಗ್ಗೆ ತಿಳಿಯುವ ಶಕ್ತಿ ಬಂದಿತು.

ರಾತ್ರಿಯ ಎರಡನೇ ಜಾವದಲ್ಲಿ ಪ್ರಾಣಿಗಳ ಸಾಯುವ ಮತ್ತು ಪುನಃ ಹುಟ್ಟುವುದನ್ನು ಕಾಣುವ ಶಕ್ತಿ ಬಂದಿತು. ರಾತ್ರಿಯ ಮೂರನೇ ಜಾವದಲ್ಲಿ ಅಂದರೆ ಬೆಳಗಾಗುತ್ತಾ ಬಂದಾಗ ಅವನಿಗೆ ಎಲ್ಲ ದುಷ್ಟತನಗಳ ಕಾರಣವನ್ನೂ, ಅವುಗಳನ್ನೂ ಸದೆಬಡೆಯುವ ವಿಧಾನವನ್ನೂ ಅರಿತನು. ರಾತ್ರಿಯ ಮೂರನೆಯ ಜಾವದಲ್ಲಿ ಮನಸ್ಸಿನ ಆಸವಗಳನ್ನು ನಾಶಮಾಡಿ ಆತನೊಬ್ಬ ಜ್ಞಾನಿಯಾಗಿ ಜನಗಳು ಕೇಳುವ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡುವ ಸಾಮರ್ಥ್ಯವನ್ನು ಪಡೆದನು. ಅವನ ಮನಸ್ಸಿನಲ್ಲಿ ಎಲ್ಲ ಉತ್ತರಗಳೂ ಇದ್ದೇ ಇದ್ದುವು. ಅದೀಗ ಪ್ರಕಟವಾದುವು. ಅವನು ಮತ್ತಷ್ಟು ಮೌನಿಯಾದನು, ಧೈರ್ಯವಂತನಾದನು. ಅವನಿಗೆ ಈಗ ಮುಪ್ಪನ್ನೂ, ಕಾಯಿಲೆಯನ್ನೂ, ದುಃಖವನ್ನೂ ಕೊನೆಗಾಣಿಸುವ ರಹಸ್ಯ ತಿಳಿಯಿತು. ಅವನಿಗೆ ಈಗ ನಿಜವಾದ ಶಾಂತಿ, ಸುಖ, ಸ್ವಾತಂತ್ರ್ಯಗಳು ದೊರಕಿದುವು. ಸಾಧಾರಣ ಮನುಷ್ಯನಿಗೆ ತಿಳಿಯಲಾಗದ ವಿಚಾರ ಅವನಿಗೆ ತಿಳಿಯಿತು. ಅವನು ಸಂಪೂರ್ಣತ್ವವನ್ನು ಪಡೆದನು. ಅವನು ಬೋಧಿ ಪಡೆದು ಬುದ್ಧನಾದನು.

## ೧೭. ಜ್ಞಾನೋದಯವಾದ ಮೇಲೆ ಏಳು ವಾರಗಳು

### ಬೋಧಿ ವೃಕ್ಷದ ಕೆಳಗೆ

ಬುದ್ಧನು ಜ್ಞಾನೋದಯವಾದ ಮೊದಲನೆಯ ವಾರವನ್ನೆಲ್ಲಾ ಬೋಧಿವೃಕ್ಷದ ಕೆಳಗೆ ಕುಳಿತು ಮುಕ್ತ ಮನಸ್ಸಿನ ಆನಂದವನ್ನು ಅಥವಾ ನಿರಂತರವಾದ ಶಾಂತಿಯನ್ನು ಸಂತೋಷವಾಗಿ ಅನುಭವಿಸಿದನು. ಈಗ ಅವನ ಮನಸ್ಸನ್ನು ಕಲಕುವ ಯಾವುದೇ ಆಲೋಚನೆಗಳಿಲ್ಲದೆ ಅದು ಸ್ವತಂತ್ರವಾಗಿತ್ತು.

### ತನಗೆ ಆಶ್ರಯ ಕೊಟ್ಟ ಬೋಧಿವೃಕ್ಷ

ಎರಡನೆಯ ವಾರ ತನಗೆ ಆಶ್ರಯ ಕೊಟ್ಟಿದ್ದ ಬೋಧಿವೃಕ್ಷವನ್ನು ವಂದಿಸುತ್ತಾ ತನ್ನ ಕೃತಜ್ಞತೆಗಳನ್ನು ಅರ್ಪಿಸಿದನು. ಏಕೆಂದರೆ ಇದೇ ಬೋಧಿವೃಕ್ಷದ ಕೆಳಗೆ ತಾನೇ ಅವನು ಬುದ್ಧತ್ವ ಪಡೆಯಲು ಮಾನಸಿಕವಾಗಿ ಹೋರಾಡಿದ್ದುದು. ಅವನು ಕೆಲವು ಅಡಿಗಳ ದೂರದಲ್ಲಿ ನಿಂತು ನೆಟ್ಟ ದೃಷ್ಟಿಯಿಂದ, ಅಲುಗಾಡದೆ ಬೋಧಿವೃಕ್ಷವನ್ನೇ ನೋಡುತ್ತಿದ್ದನು. ಅವನ ಕಣ್ಣುಗಳು ಇಡೀ ವಾರ ಬೋಧಿವೃಕ್ಷವನ್ನೇ ನೋಡುತ್ತಿದ್ದುವು. ಅವನು ಬೋಧಿವೃಕ್ಷದಲ್ಲಿ ಕೃತಜ್ಞತೆಯ ಬುದ್ಧಶಕ್ತಿಯನ್ನು ತುಂಬಿಸಿದನು.

ಈ ಮಹತ್ತರವಾದ ಉದಾಹರಣೆಯನ್ನು ಇಟ್ಟುಕೊಂಡು ಈಗಲೂ ಬೌದ್ಧರೆಲ್ಲರೂ ಬೋಧಿವೃಕ್ಷಕ್ಕೆ ನಮಸ್ಕರಿಸುತ್ತಾರೆ. ಅದಕ್ಕೆ ಮಹತ್ತರ ಸ್ಥಾನಕೊಡುತ್ತಾರೆ. ಅದು ಮೊದಲಿನ ಬೋಧಿವೃಕ್ಷವಾಗಿರಬಹುದು ಅಥವಾ ಅದರ ಸಸಿಗಳಾಗಿರಬಹುದು.

## ಬಂಗಾರದ ಸೇತುವೆ

ಮೂರನೆಯ ವಾರ ಮತ್ತೆ ಧ್ಯಾನವನ್ನು ಮಾಡಲು ತೊಡಗಿದನು. ಈ ಬಾರಿ ಅವನು ದಿವ್ಯದೃಷ್ಟಿಯಿಂದ ಸ್ವರ್ಗದಲ್ಲಿರುವ ದೇವತೆಗಳು ಅವನಿಗೆ ಜ್ಞಾನೋದಯವಾಗಿದೆಯೆಂಬುದರ ಬಗ್ಗೆ ಸ್ವಲ್ಪ ಅನುಮಾನದಲ್ಲಿದ್ದರುವುದನ್ನು ಕಂಡನು. ಏಕೆಂದರೆ ಅವನು ಇನ್ನೂ ಬೋಧಿವೃಕ್ಷದ ಬಳಿಯೇ ವಾಸವಾಗಿದ್ದನು. ಆಗ ತನಗೆ ಸಂಪೂರ್ಣವಾದ ಜ್ಞಾನೋದಯವಾಗಿದೆ ಎಂಬುದನ್ನು ಖಚಿತಪಡಿಸಲಿಕ್ಕಾಗಿ ಬುದ್ಧನು ಆಕಾಶದಲ್ಲಿ ಒಂದು ಬಂಗಾರದ ಸೇತುವೆಯನ್ನು ನಿರ್ಮಾಣ ಮಾಡಿ, ಒಂದು ವಾರ ಅದರ ಮೇಲೆ 'ಚಂಕಮನ' ನಡೆಯುವ ಧ್ಯಾನ ಮಾಡಿದನು.

## ರತ್ನಘರ

ನಾಲ್ಕನೆಯ ವಾರ ಬುದ್ಧನು ಕುಳಿತು ಶ್ರೇಷ್ಠವಾದ ಅಭಿಧರ್ಮದ ಬಗ್ಗೆ ಚಿಂತಿಸತೊಡಗಿದನು. ಅವನ ಶರೀರ ಮತ್ತು ಮನಸ್ಸುಗಳು ಎಷ್ಟು ಪವಿತ್ರವಾಗಿತ್ತೆಂದರೆ ಅವನ ಶರೀರದಿಂದ ಬಣ್ಣಬಣ್ಣದ ಕಿರಣಗಳು ಹೊರಬರತೊಡಗಿದುವು. ಅವು ರತ್ನಗಳಂತೆ ಹೊಳೆಯುತ್ತಿದ್ದು ತನ್ನ ಸುತ್ತಲು ಆ ಪ್ರಕಾಶದ ಕೊಠಡಿಯೇ ನಿರ್ಮಾಣವಾಗಿತ್ತು. ನೀಲಿ, ಹಳದಿ, ಬಿಳಿ, ಕೆಂಪು, ಕಿತ್ತಳೆ ಮತ್ತು ಇವುಗಳೆಲ್ಲವೂ ಕಲೆತ ಬಣ್ಣಗಳು ಮೂಡಿಬರತೊಡಗಿದುವು. ಆ ವಾರದ ನಂತರ ಈ ಆರು ಬಣ್ಣಗಳು ಅವನ ಇಡೀ ಶರೀರದ ಸುತ್ತಲೂ ಬೆಳಗುತ್ತಿದ್ದುವು. ಈ ಎಲ್ಲ ಬಣ್ಣಗಳೂ ಬುದ್ಧನ ಮಹತ್ತರ ವಾದ ಗುಣಗಳನ್ನು ಪ್ರತಿಪಾದಿಸುತ್ತಿದ್ದುವು. ಹಳದಿಯು ಪವಿತ್ರತೆಯನ್ನೂ, ಬಿಳಿ-ನಿರ್ಮಲತೆಯನ್ನೂ, ಕಿತ್ತಳೆಯು ಆಶೆಯಿಲ್ಲದಿರುವುದನ್ನೂ, ನೀಲಿಯು - ನಂಬಿಕೆಯನ್ನೂ, ಕೆಂಪು - ವಿವೇಕವನ್ನೂ, ಈ ಎಲ್ಲ ಬಣ್ಣಗಳೂ ಕಲೆತ ಬಣ್ಣವು, ಈ ಎಲ್ಲಾ ಮಹತ್ತರ ಗುಣಗಳನ್ನೂ ಪ್ರತಿಪಾದಿಸಿದುವು. ಹೀಗೇ ನಾವೂ ಸಹಾ ನಮ್ಮ ಶರೀರ ಮತ್ತು ಮನಸ್ಸುಗಳನ್ನು ಇದೇ ರೀತಿ ಪರಿಶುದ್ಧವಾಗಿ ಬೆಳೆಸಿದರೆ ಇಂತಹ ಪ್ರಕಾಶಗಳನ್ನು ಪಡೆಯಬಹುದು. ಈ ಬಣ್ಣಗಳನ್ನು ಆಧರಿಸಿ ಇಂದು ಅಂತರರಾಷ್ಟ್ರೀಯ ಬೌದ್ಧ ಧ್ವಜವನ್ನು ನಿರ್ಮಿಸಲಾಗಿದೆ.

## ಮುವ್ವರು ಹುಡುಗಿಯರು

ಐದನೇ ವಾರದಲ್ಲಿ ಬುದ್ಧನು ಬೋಧಿವೃಕ್ಷದ ಬಳಿಯಲ್ಲೇ ಅಜಪಾಲ ಆಲದ ಮರದ ಕೆಳಗೆ ಕುಳಿತು ಚಿಂತನೆ ಮಾಡುತ್ತಿರುವಾಗ ತಣ್ಹಾ, ರತಿ ಮತ್ತು ರಾಗ ರೆಂಬ ಮೂವರು ಬಹಳ ಸುಂದರಿಯರಾದ ಆಕರ್ಷಕ ಹುಡುಗಿಯರು ಬಂದು ಬುದ್ಧನ ಚಿಂತನೆಯನ್ನು ಕೆಡಿಸಲು ಅವನ ಮುಂದೆ ಮೋಹಕವಾಗಿ ನರ್ತಿಸತೊಡಗಿದರು. ತಮ್ಮ ನೃತ್ಯವನ್ನು ಬುದ್ಧನು ನೋಡಲೆಂದು ಬಗೆ ಬಗೆಯಾಗಿ ಪ್ರಚೋದನೆ ಮಾಡತೊಡಗಿದರು. ಆದರೆ ಬುದ್ಧನು ತನ್ನ ಮುಚ್ಚಿದ ಕಣ್ಣುಗಳನ್ನು ತೆರೆಯದೆ ಧ್ಯಾನಮಗ್ನನಾಗಿಬಿಟ್ಟಿದ್ದನು. ಹೀಗೆ ಅನೇಕ ಗಂಟೆಗಳು ಕಳೆದವು. ಆಗ ಆ ಹುಡುಗಿಯರೇ ಬಹಳ ಆಯಾಸಗೊಂಡು ಅಲ್ಲಿಂದ ಹೊರಟುಹೋದರು.

**ಮುಚಲಿಂದ ವೃಕ್ಷ**

ಆರನೇ ವಾರದಲ್ಲಿ ಬುದ್ಧನು ಮುಚಲಿಂದವೆಂಬ ಮರದ ಕೆಳಗೆ ಕುಳಿತು ಧ್ಯಾನಮಾಡತೊಡಗಿದನು. ಧಾರಾಕಾರವಾಗಿ ಮಳೆ ಸುರಿಯತೊಡಗಿತು. ಆಗ ಭಾರಿಯಾದ ಮುಚಲಿಂದ ನಾಗಸರ್ಪವೊಂದು ಬಂದು ಅವನ ಶರೀರವನ್ನು ಏಳು ಸುತ್ತುಗಳಿಂದ ಸುತ್ತಿ ತನ್ನ ದೊಡ್ಡ ಹೆಡೆಯನ್ನು ಬುದ್ಧನ ತಲೆಯ ಮೇಲೆ ಬಿಚ್ಚಿನಿಂತು ಆ ಮಳೆಯಿಂದ ಅವನು ತೊಯ್ಯದಂತೆ ರಕ್ಷಿಸಿತು. ಮಳೆ ನಿಂತ ನಂತರ ನಾಗರಾಜನು ಒಬ್ಬ ಯುವಕನಾಗಿ ಪರಿವರ್ತನೆಗೊಂಡು ಬುದ್ಧನಿಗೆ ನಮಸ್ಕರಿಸಿ ಹೊರಟುಹೋದನು. ಈ ಹಾವು ದೇವಲೋಕದಿಂದ ಬಂದಿದ್ದಿತು. ಆಗ ಬುದ್ಧನು ಹೇಳಿದನು -

ಯಾವ ಮನುಷ್ಯನು ಸಂತೃಪ್ತಿಯಿಂದಿರುತ್ತಾನೋ ಅವನು ಸುಖಿಯಾಗಿರುತ್ತಾನೆ. ಯಾರು ಸತ್ಯದ ಬಗ್ಗೆ ಕೇಳುತ್ತಾರೋ, ಯಾರು ಸತ್ಯವನ್ನು ಕಾಣುತ್ತಾರೋ ಅವರಿಗೆ ಸುಖ ದೊರಕುತ್ತದೆ. ಯಾರು ಪ್ರಪಂಚದ ಜೀವರಾಶಿಗಳ ಬಗ್ಗೆ ದಯೆ ಇಡುವರೋ ಅವರು ಸುಖಿಗಳು. ಯಾರು ಈ ಪ್ರಪಂಚದ ಬಗ್ಗೆ ಮೋಹವಿಲ್ಲದೆ, ಆಸೆಗಳಿಲ್ಲದೆ ಇರುವರೋ ಅವರು ಸುಖಿಗಳು. ಹಾಗೆಯೇ ನಾನು-ನನ್ನದು ಎಂಬ ಮಮತ್ವ ಇಲ್ಲದಿರುವುದೇ ಶ್ರೇಷ್ಠವಾದ ಸುಖ''.

**ರಾಜಾಯತನ ವೃಕ್ಷ**

ಏಳನೇ ವಾರದಲ್ಲಿ ರಾಜಾಯತನವೆಂಬ ಮರದ ಕೆಳಗೆ ತಪಸ್ಸು ಮಾಡತೊಡಗಿದನು.

ಐವತ್ತನೇ ದಿನ ಬೆಳಿಗ್ಗೆ ಅಂದರೆ ಅಲ್ಲಿಗೆ ಬುದ್ಧನು ಉಪವಾಸವನ್ನು ಆರಂಭಿಸಿ ಏಳು ವಾರಗಳಾಗಿತ್ತು- ಅಂದು ಅವನ ಬಳಿಗೆ ಇಬ್ಬರು ವರ್ತಕರು ಬಂದರು. ಒಬ್ಬನ ಹೆಸರು ತಪ್ಪುಸ್ಸ. ಇನ್ನೊಬ್ಬನು ಭಲ್ಲಿಕ. ಅವರು ಬೇರೆ ಊರಿಗೆ ಇನ್ನೊಂದು ದಾರಿಯಿಂದ ಹೋಗುತ್ತಿದ್ದರು. ಅವರು ಬುದ್ಧನಿಗೆ ಅಕ್ಕಿಯ ರೊಟ್ಟಿಗಳನ್ನೂ, ಜೇನುತುಪ್ಪವನ್ನೂ ಕೊಟ್ಟರು.

ಆ ಇಬ್ಬರು ವರ್ತಕರು, ಬುದ್ಧ ಮತ್ತು ಧರ್ಮ ಇವೆರಡರ ಸರಣವನ್ನು ಪಡೆದು ಬುದ್ಧನ ಮೊಟ್ಟಮೊದಲ ಗೃಹಸ್ಥ ಶಿಷ್ಯರಾದರು. ಆಗ ಭಿಕ್ಷು ಸಂಘ ಇರಲಿಲ್ಲ. ಅವರು ತಮಗೆ ಏನಾದರೂ ಪವಿತ್ರವಾದ ವಸ್ತುವನ್ನುಗುರುತಿಗಾಗಿ ಕೊಡಬೇಕೆಂದು ಬುದ್ಧನನ್ನು ಕೇಳಿಕೊಂಡರು. ಆಗ ಬುದ್ಧನು ತನ್ನ ತಲೆಯಿಂದ ಕೆಲವು ಕೂದಲುಗಳನ್ನು ಕಿತ್ತುಕೊಟ್ಟನು. ಈ ಕೂದಲುಗಳು ಕೇಶಧಾತು ಅಂದರೆ ಕೂದಲ ಸ್ಮೃತಿ ಚಿಹ್ನೆ ಎಂದು ಕರೆಯಿಸಿಕೊಂಡಿತು. ತಪ್ಪುಸ್ಸ ಮತ್ತು ಭಲ್ಲಿಕರು ಈ ಸ್ಮೃತಿ ಚಿಹ್ನೆಯನ್ನು ತಮ್ಮೊಂದಿಗೆ ಕೊಂಡೊಯ್ದು ಈಗಿನ ಒಂದು ಸ್ತೂಪವನ್ನು ಮ್ಯನ್ಮಾದಲ್ಲಿ ಕಟ್ಟಿ ಅದರಲ್ಲಿ ಈ ಕೂದಲುಗಳನ್ನು ಪ್ರತಿಷ್ಠಾಪಿಸಿದರು. ಪಗೋಡ ಈಗಲೂ ಆ ಸ್ತೂಪ ರಂಗೂನಿನಲ್ಲಿದೆ

ಊಟವಾದ ನಂತರ ಬುದ್ಧನು ಆಲೋಚಿಸತೊಡಗಿದನು. ತನ್ನ ಧರ್ಮವನ್ನು ಜನಗಳಿಗೆ ಬೋಧಿಸಲು ಆತುರನಾಗಿದ್ದನು. ಆದರೆ ಜನಗಳಿಗೆ ತನ್ನ ಈ ಶ್ರೇಷ್ಠ ಹಾಗೂ ಗಂಭೀರವಾದ ಧರ್ಮವು ಅರ್ಥವಾಗುವುದೋ ಇಲ್ಲವೋ ಎಂದು ಯೋಚಿಸತೊಡಗಿದನು. ಏಕೆಂದರೆ ಸಾಧಾರಣ ಜನರು ಅಜ್ಞಾನಿಗಳಾಗಿದ್ದರು. ಆಗ ಬ್ರಹ್ಮ ಸಹಂಪತಿ - ಮೂರು ಲೋಕದ ಶ್ರೇಷ್ಠ ಬ್ರಹ್ಮ ದೇವತೆ (ಮಾನವ, ದೇವ ಮತ್ತು ಬ್ರಹ್ಮಲೋಕ) ಬಂದು ಎಲ್ಲರಿಗೂ ಅವನ ಧರ್ಮವನ್ನು ಉಪದೇಶಿಸುವಂತೆ ಬುದ್ಧನಲ್ಲಿ ಕಳಕಳಿಯಿಂದ ನಮಸ್ಕರಿಸಿ ಬೇಡಿಕೊಂಡನು. ಬುದ್ಧನು ಸಂತೋಷದಿಂದ ಒಪ್ಪಿಕೊಂಡನು.

## ೧೮. ಬುದ್ಧನು ತನ್ನ ಐವರು ಶಿಷ್ಯರನ್ನು ಭೇಟಿ ಮಾಡಿದನು

ಬುದ್ಧನು ಜನರಿಗೆ, ವಿವೇಕಿಗಳೂ, ಒಳ್ಳೆಯವರೂ ಮತ್ತು ಜನರಿಗೆ ಸೇವೆಯನ್ನು ಮಾಡುವ ಬಗೆ ಹೇಗೆ ಎಂಬುದನ್ನು ತಿಳಿಸಿಕೊಡಬೇಕೆಂದುಕೊಂಡನು. ಐವತ್ತನೆಯ ದಿನ ಬುದ್ಧನು ಯೋಚಿಸಿದನು- ಈಗ ಅಸಿತ, ಅಲಾರ ಮತ್ತು ಉದ್ದಾಕರು ಸತ್ತು ಹೋಗಿದ್ದಾರೆ. ಆದರೆ ನನ್ನ ಶಿಷ್ಯರಾದ ಕೊಂಡಣ್ಣ, ಭದ್ದಿಯ, ವಪ್ಪ, ಮಹಾನಾಮ ಮತ್ತು ಅಸ್ಸಜೀ ಇವರು ಕಾಶಿಯಲ್ಲಿದ್ದಾರೆ. ನಾನು ಅಲ್ಲಿಗೆ ಹೋಗಿ ಅವರಿಗೆ ಬೋಧಿಸಬೇಕು ಎಂದು ಹೊರಟನು.

ನಂತರ ಅವನು ಅಲ್ಲಿಂದ ನೂರು ಮೈಲಿಗಳ ದೂರದಲ್ಲಿರುವ ಕಾಶಿಗೆ ನಡೆದೇ ಹೊರಟನು. ಹೀಗೆ ಹಗಲು ರಾತ್ರಿ ನಡೆಯುತ್ತಾ ಕೊನೆಗೆ ಒಂದು ದಿನ ಸಂಜೆ ಈ ಐದು ಜನ ಸನ್ಯಾಸಿಗಳಿರುವ ಕಾಡಿಗೆ ಬಂದನು. ಅದರ ಹೆಸರು ಜಿಂಕೆಗಳ ಉದ್ಯಾನ.

ಬುದ್ಧನು ತಮ್ಮೆಡೆಗೆ ಬರುತ್ತಿರುವುದನ್ನು ಕಂಡು ಒಬ್ಬನು ಇನ್ನೊಬ್ಬನಿಗೆ ಹೇಳಿದನು-''ಅಲ್ಲಿ ನೋಡಿ, ಆ ಗೌತಮ ಮುನಿ ಬರುತ್ತಿದ್ದಾನೆ. ತಾನು ಉಪವಾಸ ಮಾಡುವುದನ್ನು ಬಿಟ್ಟು ಮೋಜು ಮಾಡುತ್ತಾನೆ. ಅವನಿಗೆ ಕಷ್ಟಪಡುವುದು ಬೇಕಿಲ್ಲ, ಸುಖಸಂಪತ್ತುಗಳು ಬೇಕು. ನಾವು ಅವನೊಂದಿಗೆ ಮಾತನಾಡುವುದು ಬೇಡ. ಅವನಿಗೆ ಮರ್ಯಾದೆಯನ್ನು ಮಾಡಬೇಡಿ. ನಾವು ಅವನ ಭಿಕ್ಷಾಪಾತ್ರೆಯನ್ನು ಅವನ ಕೈಯಿಂದ ತೆಗೆದುಕೊಳ್ಳುವುದು ಬೇಡ. ಅವನ ಕಾವಿ ಹೊದಿಕೆಯನ್ನು ತೆಗೆದುಕೊಳ್ಳುವುದು ಬೇಡ. ಅಲ್ಲಿ ಒಂದು ಚಾಪೆಯನ್ನು ಹಾಸಿಬಿಡೋಣ. ಅವನು ಬೇಕಾದರೆ ಅದರ ಮೇಲೆ ಕುಳಿತುಕೊಳ್ಳಲಿ. ಬೇಡದಿದ್ದರೆ ನಿಂತೇ ಇರಲಿ. ಆ ಕೆಲಸಕ್ಕೆ ಬಾರದ ಸನ್ಯಾಸಿಗೆ ಮರ್ಯಾದೆ ಬೇರೆ ಕೇಡು''.

ಆದರೆ ಬುದ್ಧನು ಹತ್ತಿರ ಬರುಬರುತ್ತಾ ಅವನಲ್ಲಿ ಏನೋ ಬದಲಾವಣೆ ಕಂಡರು. ಅವನು ತಮ್ಮ ಜೊತೆಯಲ್ಲಿ ಓದುತ್ತಿದ್ದಾಗ ಇದ್ದ ಹಾಗಿಲ್ಲ ಏನೋ ಬದಲಾವಣೆ. ಅವರು ಹಿಂದೆ ಕಂಡಿರದ ಏನೋ ಘನತೆ, ಏನೋ ಗಾಂಭೀರ್ಯ. ಅವರು ಈ ಮೊದಲು ಅಂದುಕೊಂಡಿದ್ದ ವಿಚಾರಗಳೆಲ್ಲಾ ಅವರಿಗೆ ಮರೆತೇಹೋದುವು. ಈಗ ಆತನನ್ನು ನೋಡಿದ ಕೂಡಲೇ ಒಬ್ಬನು ಆತನನ್ನು ಎದುರುಗೊಳ್ಳಲು ಓಡಿದನು. ಇನ್ನೊಬ್ಬನು ಅವನ ಕೈಯಿಂದ ಭಿಕ್ಷಾಪಾತ್ರೆಯನ್ನೂ, ಚೀವರವನ್ನೂ ಪಡೆದುಕೊಂಡನು. ಮತ್ತೊಬ್ಬನು ಆತನಿಗೆ ಆಸನವನ್ನು ಸಿದ್ಧಪಡಿಸಿದನು. ಮೂರನೆಯವನು ಬುದ್ಧನ ಪಾದಗಳನ್ನು ತೊಳೆಯಲು ನೀರನ್ನು ತೆಗೆದುಕೊಂಡು ಬಂದನು.

ಆಸನದ ಮೇಲೆ ಕುಳಿತು ಬುದ್ಧನು ಅವರಿಗೆ ಹೇಳಿದನು-''ಸನ್ಯಾಸಿಗಳೇ, ಕೇಳಿಸಿಕೊಳ್ಳಿ, ಸಾವಿಲ್ಲದೆ ಇರುವ ಸ್ಥಿತಿಯನ್ನು ಕಂಡುಹಿಡಿದಿದ್ದೇನೆ. ನಿಮಗೆ ಹೇಳುತ್ತೇನೆ, ನಿಮಗೆ ಉಪದೇಶಿಸುತ್ತೇನೆ. ನೀವು ಕೇಳಿಸಿಕೊಂಡು ಅದನ್ನು ಅಭ್ಯಾಸ ಮಾಡುತ್ತಾ ಬಂದರೆ ಎಂದಿಗೋ ಅಲ್ಲ, ಇಂದಿಗೇ, ಇದೇ ಜೀವಮಾನದಲ್ಲಿಯೇ ನಾನು ಹೇಳುವುದು ನಿಜವೆಂದು ನಂಬುತ್ತೀರಿ. ಜನನಕ್ಕೂ ಮರಣಕ್ಕೂ ಆಚೆಯಿರುವ ಒಂದು ಸ್ಥಿತಿಯನ್ನು ನೀವೇ ತಿಳಿಯುತ್ತೀರಿ.

ಈ ಐದು ಜನ ಸನ್ಯಾಸಿಗಳಿಗೂ ತಮ್ಮ ಹಿಂದಿನ ಗುರುಗಳು ಹೀಗೆ ಮಾತನಾಡುತ್ತಿರುವುದನ್ನು ಕೇಳಿ ಆಶ್ಚರ್ಯವಾಯಿತು. ಆತನು ಉಪವಾಸ ಕಷ್ಟಸಾಧ್ಯವಾದ ಉಪವಾಸ ಮಾಡುವುದನ್ನು ಬಿಟ್ಟಿರುವುದನ್ನು ಅವರು ನೋಡಿದ್ದರು. ಸತ್ಯವನ್ನು ಕಂಡುಕೊಳ್ಳಲು ಬೇಕಾದ ಕಠಿಣ ಪರಿಶ್ರಮವನ್ನು ಆತನು ನಿಲ್ಲಿಸಿಬಿಟ್ಟಿದ್ದಾನೆಂದು ತಿಳಿದಿದ್ದರು. ಆದರೆ ಈಗ ನಿಜವಾಗಿಯೂ ಆತ ತಮ್ಮೆದುರಿಗೇ ಬಂದು ತಾನು ಸತ್ಯವನ್ನು ಕಂಡಿರುವುದಾಗಿ ಹೇಳುತ್ತಿದ್ದಾನೆ. ಅವರಿಗೆ ನಂಬಲಾಗಲಿಲ್ಲ. ಹಾಗೆಂದು ಆತನಿಗೆ ಹೇಳಿಯೂಬಿಟ್ಟರು-''ಗೆಳೆಯ ಗೌತಮನೇ, ನಾವೆಲ್ಲಾ ಒಟ್ಟಿಗೇ ಜೊತೆಯಲ್ಲಿದ್ದಾಗ ನಮ್ಮ ಭಾರತ ದೇಶದಲ್ಲಿ ಯಾರೂ ಕೇಳದೇ ಇರದ, ಮಾಡದೇ ಇರದ ಕಠಿಣವಾದ ತಪಸ್ಸನ್ನೂ, ದೇಹದಂಡನೆಯನ್ನೂ ನೀನು ಮಾಡುತ್ತಿದ್ದೆ. ಅದಕ್ಕಾಗಿಯೇ ನಾವೆಲ್ಲಾ ನಿನ್ನನ್ನು ಗುರುವೆಂದು ಸ್ವೀಕರಿಸಿದೆವು. ಆದರೆ ನೀನೆಷ್ಟೇ ಕಷ್ಟಪಟ್ಟರೂ ಆ ಸತ್ಯವನ್ನು ಕಾಣದೆ, ಈಗ ನೀನು ವೈಭವದಲ್ಲಿರುವೆ, ಕಷ್ಟಪಡುತ್ತಿಲ್ಲ, ಸುಖಕರವಾಗಿ ಜೀವಿಸುತ್ತಿರುವೆ. ಇಂತಹ ನೀನು ಸತ್ಯವನ್ನು ಕಾಣುವುದು ಹೇಗೆ ಸಾಧ್ಯವಾಗುವುದು ?''

ಬುದ್ಧನು ಉತ್ತರಿಸಿದನು-''ಸನ್ಯಾಸಿಗಳೇ, ನೀವು ತಪ್ಪು ತಿಳಿದಿದ್ದೀರಿ. ನಾನು ನನ್ನ ಸಾಧನೆಗಳನ್ನು ಬಿಟ್ಟಿಲ್ಲ. ನಾನು ವಿಲಾಸ-ವೈಭವಗಳ ಜೀವನವನ್ನು ನಡೆಸುತ್ತಲೂ ಇಲ್ಲ, ನಾನು ನಿಜವಾಗಿಯೂ ಪರಮಜ್ಞಾನವನ್ನು ಪಡೆದಿದ್ದೇನೆ ನನ್ನ ಒಳಗಣ್ಣುಗಳು ತೆರೆದಿವೆ. ನೀವೂ ಸಹಾ ಅದನ್ನು ಹೇಗೆ ಪಡೆಯಬಹುದೆಂಬುದನ್ನು ನಾನು ನಿಮಗೆ ಕಲಿಸಬಲ್ಲೆ.''

ಆ ಸನ್ಯಾಸಿಗಳು ಅವನು ಹೇಳುವುದನ್ನು ಕೇಳಿಸಿಕೊಳ್ಳಲು ಒಪ್ಪಿದಾಗ ಬುದ್ಧನು ತನ್ನ ಮೊದಲ ಉಪದೇಶವನ್ನು ಈ ಐವರಿಗೆ ಮಾಡಿದನು. ಬುದ್ಧನು ಅವರಿಗೆ ಎರಡು ವಿಪರೀತ ವಿಚಾರಗಳನ್ನು ಬಿಡಲು ಹೇಳಿದನು - ಒಂದು ಕಾಮಭೋಗಗಳಲ್ಲಿ ಮನಬಂದಂತೆ ವರ್ತಿಸುವುದು, ಇನ್ನೊಂದು ಶರೀರದ ಅತಿದಂಡನೆ. ಇವನ್ನು ಬಿಟ್ಟು ತನ್ನ ಉಪದೇಶದಂತೆ ವರ್ತಿಸಬೇಕೆಂದನು. ಅವನು ಅವರಿಗೆ ನಾಲ್ಕು ಶ್ರೇಷ್ಠವಾದ ಸತ್ಯಗಳನ್ನು ಅರ್ಥಮಾಡಿಕೊಳ್ಳುವಂತೆಯೂ, ಶ್ರೇಷ್ಠವಾದ ಅಷ್ಟಾಂಗಿಕ ಮಾರ್ಗದಲ್ಲಿ ಹೋಗುವುದನ್ನೂ ಅಥವಾ ಬುದ್ಧನ ಜೀವನದಲ್ಲಿ ಅನುಸರಿಸುವಂತೆಯೂ ಉಪದೇಶಿಸಿದನು. ಆ ಉಪದೇಶವನ್ನು 'ಧಮ್ಮಚಕ್ಕಪವತ್ತನ ಸುತ್ತ' ಎಂದು ಕರೆಯುತ್ತಾರೆ.

# ೧೯. ಯಶ ಮತ್ತು ಅವನ ಐವತ್ತು ನಾಲ್ಕು ಜನ ಸ್ನೇಹಿತರು

ನಿರಂತರವಾದ ಸುಖವು ದೊರೆಯಲೆಂಬ ಹಾರೈಕೆಯಿಂದ ಬುದ್ಧನ ತನ್ನ ಐವರು ಶಿಷ್ಯರಿಗೆ ಉಪದೇಶ ಮಾಡಿದನು. ಅವರಲ್ಲಿ ಎಲ್ಲರಿಗಿಂತಲೂ ಬುದ್ಧಿವಂತನಾದ ಕೊಂಡಞ್ಞನೆಂಬುವನು ಈ ಉಪದೇಶವನ್ನು ಒಂದೇ ಮನಸ್ಸಿನಿಂದ ಕೇಳಿ ಬುದ್ಧನು ಮಾಡಿದ ಇಡೀ ಉಪದೇಶವನ್ನು ಚೆನ್ನಾಗಿ ಅರ್ಥಮಾಡಿಕೊಂಡನು. ಅವರೆಲ್ಲ ಅಲ್ಲಿ ಸ್ವಲ್ಪ ಕಾಲವಿದ್ದರು.

ಕಾಶಿಯ ಇಸಿಪಟನ ಎಂಬಲ್ಲಿರುವ ಜಿಂಕೆಯ ಉದ್ಯಾನದಲ್ಲಿ ಬುದ್ಧನು ತಂಗಿರುವಾಗ ಅಲ್ಲಿಗೆ ಒಬ್ಬ ಪಕ್ಕದ ಊರಿನಿಂದ ಯಸನೆಂಬ ಸಾಹುಕಾರ ಯುವಕನು ಬಂದನು. ಬುದ್ಧನ ಉಪದೇಶವನ್ನು ಕೇಳಿದ ಆ ಯುವಕನು ತುಂಬಾ ಸಂತೋಷಪಟ್ಟು ಅದರಿಂದ ಪ್ರಭಾವಿತನಾಗಿ ತಾನೂ ಸಹಾ ಬೌದ್ಧ ಭಿಕ್ಷುವಾಗಿ ಇನ್ನೂ ಹೆಚ್ಚಾಗಿ ಕೇಳಬಹುದು ಮತ್ತು ಕಲಿಯಬಹುದು ಎಂದುಕೊಂಡು ಸನ್ಯಾಸಿಯಾದನು.

ಅದೇ ದಿನ ಸಂಜೆ ಒಬ್ಬ ವಯಸ್ಸಾದ ಮನುಷ್ಯನು ಬುದ್ಧನಿದ್ದಲ್ಲಿಗೆ ಬಂದು ತನ್ನ ಮಗನು ಬುದ್ಧನನ್ನು ನೋಡಬೇಕೆಂದು ಮನೆ ಬಿಟ್ಟು ಹೋದವನು ಇದುವರೆಗೂ ಬಂದಿಲ್ಲ. ಅವನ ತಾಯಿ ಮಗನು ಬರಲಿಲ್ಲವೆಂದು ಅಳುತ್ತಿದ್ದಾಳೆ. ದಾರಿಯಲ್ಲಿ ಯಾರಾದರೂ ಕಳ್ಳರು ಅವನನ್ನು ಕೊಂದುಹಾಕಿರಬಹುದೆಂದು ಭಯಗೊಂಡಿದ್ದಾಳೆ ಎಂದು ಹೇಳಿದನು. ಬುದ್ಧನು ಆ ಮನುಷ್ಯನ ಮಗನು ಸನ್ಯಾಸಿಯಾಗಿದ್ದಾನೆಂದು ತಿಳಿಸಿ ಆತನಿಗೂ ಧರ್ಮೋಪದೇಶ ಮಾಡಿದನು. ಅವನ ಚೆನ್ನಾದ ಉಪದೇಶವನ್ನು ಕೇಳಿ ಆತನು ತಾನೂ ಬುದ್ಧನ ಶಿಷ್ಯನಾಗ ಬಯಸಿದನು. ಬುದ್ಧನು ಅವನನ್ನು ತನ್ನ ಶಿಷ್ಯನನ್ನಾಗಿ ಸ್ವೀಕರಿಸಿದನು.

ಯಸನ ತಂದೆ ಒಬ್ಬ ಕೋಟ್ಯಾಧಿಪತಿಯಾಗಿದ್ದನು. ಅವನು ಬುದ್ಧನನ್ನು ಮತ್ತು ಅವನ ಆರು ಜನ ಸನ್ಯಾಸಿ ಶಿಷ್ಯರನ್ನು ತನ್ನ ಮನೆಗೆ ಭೋಜನಕ್ಕೆ ಆಮಂತ್ರಿಸಿದನು. ಬುದ್ಧನು ಒಪ್ಪಿಕೊಂಡು ತನ್ನ ಶಿಷ್ಯರೊಡನೆ ಅವನ ಮನೆಗೆ ಹೋದನು. ಭೋಜನಾನಂತರ ಬುದ್ಧನು ಯಸನ ತಾಯಿಗೂ ಮತ್ತು ಯಸನ ಹೆಂಡತಿಯಾಗಿದ್ದವಳಿಗೂ ಧರ್ಮೋಪದೇಶ ಮಾಡಿದನು.

ಯಸನಿಗೆ ಐವತ್ತು ನಾಲ್ಕು ಜನ ಸ್ನೇಹಿತರಿದ್ದರು. ಅವರು ಬುದ್ಧನನ್ನು ನೋಡಲು ಬಂದಿದ್ದರು. ಅಲ್ಲಿ, ಯಸನು ಭಿಕ್ಷುವಾಗಿರುವುದನ್ನು ಕಂಡರು. ಅಲ್ಲಿ ಅವರೂ ಸಹಾ ಬುದ್ಧನ ಉಪದೇಶವನ್ನು ಕೇಳಿ ತಾವೂ ಸಹಾ ಯಸನಂತೆ ಸನ್ಯಾಸಿಗಳಾಗಬೇಕೆಂದು ಕೇಳಿಕೊಂಡರು. ಬುದ್ಧನು ಅವರಿಗೆಲ್ಲಾ ಸನ್ಯಾಸ ದೀಕ್ಷೆ ಕೊಟ್ಟನು. ಈ ರೀತಿ ಅಲ್ಪಕಾಲದಲ್ಲೇ ಅರವತ್ತು ಜನರು ಬೌದ್ಧ ಭಿಕ್ಷುಗಳಾದರು.

# ೨೦. ಕಸ್ಸಪ ಸೋದರರು

ಹೀಗೆ ಭಿಕ್ಷುಗಳಾದ ಅರವತ್ತು ಜನರನ್ನು ಬುದ್ಧನು ಬೇರೆ ಬೇರೆ ನಗರಗಳಿಗೆ ಹೋಗಿ ಅಲ್ಲೆಲ್ಲಾ ಜನಗಳಿಗೆ ಬೌದ್ಧ ಧರ್ಮದ ಉಪದೇಶವನ್ನು ಮಾಡಬೇಕೆಂದು ಆಜ್ಞಾಪಿಸಿ ಕಳಿಸಿಕೊಟ್ಟನು. ನಂತರ ತಾನೂ ಸಹಾ ದಕ್ಷಿಣದ ಕಡೆ ಹೊರಟು ಮಗಧ ರಾಜ್ಯದ ಹಾದಿಯಲ್ಲಿ ನಡೆದು ಕೊನೆಗೆ ಉರವೇಲವನ್ನು ತಲುಪಿದನು.

ಅಲ್ಲಿಯ ನದಿಯ ದಡದಲ್ಲಿ ಮೂರು ಜನ ಸಹೋದರರು ವಾಸಿಸುತ್ತಿದ್ದರು. ಅವರ ಹೆಸರು ಕ್ರಮವಾಗಿ ಉರವೇಲ ಕಸ್ಸಪ, ನದಿ ಕಸ್ಸಪ ಮತ್ತು ಗಯಾ ಕಸ್ಸಪ ಎಂಬುದಾಗಿತ್ತು. ಅವರು ಬೇರೆ ಬೇರೆಯಾಗಿ ೫೦೦, ೩೦೦ ಮತ್ತು ೨೦೦ ಜನ ಶಿಷ್ಯರೊಡನೆ ವಾಸಿಸುತ್ತಿದ್ದರು.

ಒಂದು ಸಂಜೆ ಬುದ್ಧನು ಉರವೇಲ ಕಸ್ಸಪನ ಗುಡಿಸಿಲಿಗೆ ಹೋಗಿ - ''ನಿನಗೆ ತೊಂದರೆಯಾಗದಿದ್ದಲ್ಲಿ ನಾನು ಈ ರಾತ್ರಿ ನಿನ್ನ ಅಡಿಗೆ ಮನೆಯಲ್ಲಿ ತಂಗಲೆ ?'' ಎಂದು ಕೇಳಿದನು.

ಉರವೇಲನು - ''ನೀನು ಈ ರಾತ್ರಿ ಇಲ್ಲಿ ಕಳೆದರೆ ನನಗೇನೂ ತೊಂದರೆಯಾಗುವುದಿಲ್ಲ ಗೌತಮ ಮಹಾನುಭಾವನೇ, ಆದರೆ ಅಡುಗೆ ಮನೆಯಲ್ಲಿ ಒಂದು ಭಯಂಕರವಾದ ಸರ್ಪವಿದೆ - ಅದು ನಿನ್ನನ್ನೇನು ಮಾಡುವುದೋ ಎಂದು ಅಂಜುತ್ತೇನೆ'' ಎಂದನು.

''ಓ, ಅದೇನೂ ಪರವಾಗಿಲ್ಲ. ನಿನಗೆ ತೊಂದರೆಯಾಗದಿದ್ದರೆ ನಾನು ಈ ರಾತ್ರಿ ಇಲ್ಲಿ ಇರಲೇ ?'' ಎಂದು ಬುದ್ಧನು ಕೇಳಿದನು.

''ಒಳ್ಳೆಯದು, ಹೋಗಿ ಮಲಗಿಕೋ, ನಿನಗೆ ಶುಭವಾಗಲಿ, ರಾತ್ರಿಯ ವಂದನೆಗಳು'' ಎಂದನು ಉರವೇಲ ಕಸ್ಸಪನು.

ಬುದ್ಧನು ಅವನಿಗೂ ರಾತ್ರಿಯ ವಂದನೆಯನ್ನು ತಿಳಿಸಿ ಅಡುಗೆ ಮನೆಗೆ ಹೋಗಿ ನೆಲದ ಮೇಲೆ ಒಣ ಹುಲ್ಲನ್ನು ಹಾಸಿಕೊಂಡು ಕುಳಿತುಕೊಂಡನು. ಸರ್ಪವು ಬಹಳವಾಗಿ ಸಿಟ್ಟುಗೊಂಡು ತನ್ನ ಬಾಯನ್ನು ಅಗಲವಾಗಿ ತೆರೆದು ಬುದ್ಧನನ್ನು ಕಚ್ಚಲು ಬಂದಿತು.

''ಈ ಬಡನಾಗರಾಜನಿಗೆ ನಾನು ಏನೂ ತೊಂದರೆ ಕೊಡುವುದಿಲ್ಲ. ಆದರೆ ನನ್ನ ಪ್ರೀತಿ ಮತ್ತು ದಯೆಯಿಂದ ಬಗ್ಗಿಸುತ್ತೇನೆ'' ಎಂದು ಬುದ್ಧನು ಯೋಚಿಸಿದನು.

ಸರ್ಪವು ಎಷ್ಟೆಷ್ಟು ಕೋಪಗೊಳ್ಳುತ್ತದೋ ಬುದ್ಧನು ಅಷ್ಟು ಅಷ್ಟು ಅದರ ಬಗ್ಗೆ ದಯೆಯನ್ನು ತೋರಿದನು. ಆ ಸರ್ಪರಾಜನು ಬುದ್ಧನಿಗೆ ಕೆಡಕನ್ನು ಮಾಡದಾದನು. ಬೆಳಗಿನ ಝಾವದಲ್ಲಿ ಎದ್ದ ಉರವೇಲನು, ಹಾವು ಬುದ್ಧನನ್ನು ಕೊಂದುಹಾಕಿರಬೇಕೆಂದು ಭಾವಿಸಿ ಬುದ್ಧನಿಗೆ ಉತ್ತರಕ್ರಿಯಾದಿಗಳನ್ನು ಮಾಡುವೆನೆಂದು ಬಂದನು.

ಅವನು ಗುಡಿಸಿಲಿಗೆ ಹೋದಾಗ ಬುದ್ಧನು ಧ್ಯಾನದಲ್ಲಿ ಮಗ್ನನಾಗಿರುವುದನ್ನು ಕಂಡು ಹಾವು ಅವನನ್ನು ಕಚ್ಚಲಿಲ್ಲವೆ ? ಎಂದು ಕೇಳಿದನು.

''ಅದು ಇಲ್ಲಿದೆ ನೋಡು'' ಎಂದು ಬುದ್ಧನು ತನ್ನ ಭಿಕ್ಷಾಪಾತ್ರೆಯನ್ನು ತೆರೆಯುತ್ತಲೇ ಹಾವು ಬುಸ್ಸೆಂದು ಬಂದಿತು - ಉರವೇಲನು ಗಾಬರಿಯಾಗಿ ತನ್ನ ಪ್ರಾಣರಕ್ಷಣೆ ಮಾಡಿಕೊಳ್ಳಲು ಓಡತೊಡಗಿದನು. ಬುದ್ಧನು ಅವನನ್ನು ತಡೆದು ತನ್ನಲ್ಲಿ ಇಂತಹ ಭಯಂಕರ ಸರ್ಪಗಳನ್ನು ಮಣಿಸುವ ಮಂತ್ರವಿದೆಯೆಂದನು.

ಉರವೇಲನು ತನ್ನಲ್ಲಿ ಬಹಳ ಮಂತ್ರಶಕ್ತಿಯಿದೆಯೆಂದು ಗರ್ವಿಷ್ಠನಾಗಿದ್ದನು. ''ನಾನೂ ಸಹಾ ಆ ಮಂತ್ರವನ್ನು ಕಲಿಯಲೇ? ಎಂದು ಬುದ್ಧನನ್ನು ಕೇಳಿದನು. ಈಗ ಅವನಿಗೆ ತನಗಿಂತಲೂ ಬುದ್ಧನ ಶಕ್ತಿಯೇ ಮೇಲಾಗಿ ತೋರಿತು. ಹೀಗಾಗಿ ಅವನು ಬುದ್ಧನ ಶಿಷ್ಯನಾದನು.

ತಮ್ಮ ಅಣ್ಣನು ಬುದ್ಧನ ಶಿಷ್ಯನಾದುದನ್ನು ಕಂಡು ಅವನ ತಮ್ಮಂದಿರೂ ಹಾಗೂ ಇವರೆಲ್ಲರ ಒಂದು ಸಾವಿರ ಶಿಷ್ಯರೂ ಕೂಡಾ ಬುದ್ಧನ ಅನುಯಾಯಿಗಳಾದರು.

## ೨೧. ಬುದ್ಧನು ಮನೆಗೆ ಹಿಂದಿರುಗಿದನು

ಶುದ್ಧೋದನನಿಗೆ ಬುದ್ಧನು ರಾಜಗೃಹದಲ್ಲಿದ್ದು ಜನಗಳಿಗೆ ಧರ್ಮೋಪದೇಶ ಮಾಡುತ್ತಿರುವುದು ತಿಳಿದುಬಂದಿತು. ಆಗ ಆತನು ತನ್ನ ಜನರನ್ನು ಒಬ್ಬರಾದ ನಂತರ ಒಬ್ಬರಂತೆ ಒಂಭತ್ತು ಜನರನ್ನು, ಬುದ್ಧನನ್ನು ಕಪಿಲವಸ್ತುವಿಗೆ ಬರಹೇಳಿ ಕಳುಹಿಸಿದನು. ಆದರೆ ಅವರೆಲ್ಲರೂ ಬುದ್ಧನ ಧರ್ಮೋಪದೇಶವನ್ನು ಕೇಳುತ್ತಾ ದೊರೆಯು ಹೇಳಿಕಳಿಸಿದ ವಾರ್ತೆಯನ್ನು ಹೇಳಲು ಮರೆತೇಬಿಟ್ಟರು. ಅಷ್ಟೇ ಅಲ್ಲ, ತಾವೂ ಭಿಕ್ಖುಗಳಾಗಿಬಿಟ್ಟರು.

ದೊರೆಯು ಬುದ್ಧನು ಬಂದರೆ ಅವನು ಇಳಿದುಕೊಳ್ಳಲಿಕ್ಕಾಗಿ ನಿಗ್ರೋಧವೆಂಬ ಉದ್ಯಾನದಲ್ಲಿ ಎಲ್ಲ ಏರ್ಪಾಡುಗಳನ್ನು ಮಾಡಿದನು. ಆದರೆ ಬುದ್ಧನು ಬರಲಿಲ್ಲ. ಆಗ ದೊರೆಯು ಬುದ್ಧನ ಜೊತೆಯಲ್ಲಿ ಆಡಿಕೊಂಡಿರುತ್ತಿದ್ದ ಕಾಲುದಯಿ ಎಂಬ ಅವನ ಸ್ನೇಹಿತನನ್ನು ಬುದ್ಧನ ಬಳಿ ಕಳಿಸಿದನು. ಆಗ ಮಾತ್ರವೇ ಬುದ್ಧನಿಗೆ ತಂದೆಯ ಸಂದೇಶ ತಿಳಿದುದು. ಬುದ್ಧನು ಅರಮನೆಗೆ ಬರಲು ಒಪ್ಪಿಕೊಂಡನು.

ಕಪಿಲವಸ್ತುವಿಗೆ ಬುದ್ಧನು ಬಂದಿರುವ ಸಮಾಚಾರ ತಿಳಿಯುತ್ತಲೇ ಜನಗಳು ಗುಂಪುಗುಂಪಾಗಿ ಬುದ್ಧನನ್ನು ನೋಡಲು ಬಂದರು. ಯುವರಾಜ ಸಿದ್ಧಾರ್ಥನ ನೆಂಟರುಗಳು ಹೇಳಿದರು - ಇವನು ನಮ್ಮ ತಮ್ಮನಾಗಬೇಕು, ಇವನು ನಮ್ಮ ಸೋದರನ ಮಗ, ಇವನು ನಮ್ಮ ಮೊಮ್ಮಗ''. ಅವರು ತಮ್ಮ ಮಕ್ಕಳಿಗೆ ಹೇಳಿದರು. ನೀವು ಮುಂದೆ ಹೋಗಿ ಅವನಿಗೆ ನಮಸ್ಕಾರ ಮಾಡಿ. ನಾವು ನಿಮ್ಮ ಹಿಂದೆ ಇರುತ್ತೇವೆ.

ಇಷ್ಟಾದರೂ ಸ್ವಲ್ಪ ಜನರಿಗೆ ಬೋಧಿಯ ಬಗ್ಗೆ ಅರ್ಥವಾಗಿಲ್ಲವೆಂದು ಬುದ್ಧನಿಗೆ ತಿಳಿಯಿತು. ಬುದ್ಧನು ತಾನು ಸ್ವತಃ ಜ್ಞಾನಿಯಾಗಿದ್ದರೂ ಅವರು ಅವನಿಗಿಂತ ದೊಡ್ಡವರೆಂದು ತಿಳಿದನು. ಅವನು ಅವರಿಗೆಲ್ಲಾ ಒಂದು ಪವಾಡವನ್ನು ತೋರಿಸಿದನು. ಅದರ ಹೆಸರು ''ಅವಳಿ ಪವಾಡ''. ದೊರೆಯು ಇದನ್ನು ನೋಡಿ ಬುದ್ಧನನ್ನು ಗೌರವಿಸಿದನು.

ಮಾರನೆಯ ದಿನ ಬುದ್ಧನು ಭಿಕ್ಷಾಪಾತ್ರೆಯನ್ನು ತೆಗೆದುಕೊಂಡು ಮನೆ-ಮನೆಗೆ ಭಿಕ್ಷಕ್ಕೆ ಹೋಗತೊಡಗಿದನು. ದೊರೆಗೆ ಇದನ್ನು ಕಂಡು ಅಸಮಾಧಾನವಾಯಿತು. ಅವನು ಬುದ್ಧನ ಬಳಿ ಓಡಿಹೋಗಿ ಹೇಳಿದನು-''ಮಗನೇ ನನಗೇಕೆ ಅವಮಾನ ಮಾಡುತ್ತೀಯೇ, ನನ್ನನ್ನು ಹೀಗೇಕೆ ನಾಶಮಾಡುತ್ತೀಯೆ ? ನಿನಗೆ ಅರಮನೆಯಲ್ಲಿ ಊಟವಿಲ್ಲವೆ ? ಈ ನಗರದಲ್ಲಿ ಬಂಗಾರದ ರಥದಲ್ಲಿ ಕುಳಿತು ಸಂಚರಿಸುತ್ತಿದ್ದ ನೀನು ಈ ರೀತಿ ಭಿಕ್ಷೆ ಬೇಡುವುದು ಸರಿಯೆ ? ನನ್ನನ್ನೇಕೆ ನಾಚಿಕೆಗೊಳ್ಳುವಂತೆ ಮಾಡುತ್ತಿರವೆ ?''

''ನಾನು ನಿಮಗೆ ನಾಚಿಕೆಯಾಗುವಂಥ ಕೆಲಸ ಮಾಡುತ್ತಿಲ್ಲ ತಂದೆಯೇ, ಇದು ನಮ್ಮ ಪದ್ಧತಿ'' ಎಂದನು ಬುದ್ಧ.

''ಇದು ಹೇಗೆ ಸಾಧ್ಯ ? ನಮ್ಮ ಮನೆತನದಲ್ಲಿ ಯಾರೂ ಹೀಗೆ ಭಿಕ್ಷೆ ಬೇಡಿದುದಿಲ್ಲ. ಇದು ನಮ್ಮ ಪದ್ಧತಿ ಎಂದು ಹೇಗೆ ಹೇಳುತ್ತೀಯೆ ?

''ದೊರೆಯೇ, ಇದು ನಿಮ್ಮ ರಾಜಮನೆತನದ ಪದ್ಧತಿಯಲ್ಲ. ಇದು ಬುದ್ಧನ ಪದ್ಧತಿ. ಹಿಂದಿನ ಬುದ್ಧರೆಲ್ಲಾ ಹೀಗೆಯೇ ಭಿಕ್ಷೆ ಬೇಡಿದ್ದಾರೆ !''

ಆದರೂ ದೊರೆಯು ಬುದ್ಧನನ್ನು ಅರಮನೆಯಲ್ಲಿ ಊಟ ಮಾಡಬೇಕೆಂದು ಬೇಡಿಕೊಂಡಾಗ ಬುದ್ಧನು ಅರಮನೆಗೆ ಊಟ ಮಾಡಲು ಹೋದನು.

## ೨೨. ಯುವರಾಣಿ ಯಶೋಧರೆ

ಬುದ್ಧನು ಊಟ ಮಾಡಿದ ನಂತರ ಅವನು ಯುವರಾಜ ಸಿದ್ಧಾರ್ಥನೆಂದು ತಿಳಿದು ಎಲ್ಲರೂ ಅವನ ಬಳಿ ಬಂದು ಮರ್ಯಾದೆಯಿಂದ ಮಾತನಾಡಿಸತೊಡಗಿದರು. ಆದರೆ ಯುವರಾಣಿ ಯಶೋಧರೆ ಮಾತ್ರ ಬರಲಿಲ್ಲ. ಎಲ್ಲರಿಗೂ ಅವನನ್ನು ನೋಡಿ ಆಶ್ಚರ್ಯವಾಯಿತು. ತಮ್ಮ ಯುವರಾಜನು ಹೀಗೆ ಕಾವಿ ಧರಿಸಿ ಸನ್ಯಾಸಿಯಾಗಿ ಎಲ್ಲರಿಂದಲೂ ವಂದಿತನಾಗಿರುವುದು ಅವರಿಗೆಲ್ಲಾ ಸಂತೋಷವಾಯಿತು.

ಯಶೋಧರೆಯು ತನ್ನ ಕೊಠಡಿಯಲ್ಲಿ ಕುಳಿತು ಯೋಚಿಸುತ್ತದ್ದಳು-''ಯುವರಾಜ ಸಿದ್ಧಾರ್ಥನು ಈಗ ಜ್ಞಾನಿಯಾಗಿದ್ದಾನೆ, ಬುದ್ಧನಾಗಿದ್ದಾನೆ, ಈಗ ಅವನು ಬೌದ್ಧಮತಕ್ಕೆ ಸೇರಿದವನಾಗಿದ್ದಾನೆ. ನಾನು ಈಗ ಅವನ ಬಳಿಗೆ ಹೋಗಬೇಕೇ ? ಅವನಿಗೆ ಈಗ ನಾನು ಬೇಕಾಗಿಲ್ಲ. ಆದರೂ ನಾನು ಹೋಗುವುದು ಸರಿಯಾಗುವುದೆ ? ಇರಲಿ, ನಾನು ಎದುರು ನೋಡುತ್ತೇನೆ. ಅವನೇನಾದರೂ ಇಲ್ಲಿಗೆ ಬಂದರೆ ಅವನನ್ನು ಗೌರವಿಸುತ್ತೇನೆ''.

ಸ್ವಲ್ಪ ಹೊತ್ತಾದ ನಂತರ ಬುದ್ಧನು 'ಯಶೋಧರೆಯೆಲ್ಲಿ' ಎಂದು ಕೇಳಿದನು.

''ಅವಳು ತನ್ನ ಕೊಠಡಿಯಲ್ಲಿದ್ದಾಳೆ'' ಎಂದು ರಾಜನು ಹೇಳಿದನು.

''ನಾವು ಅಲ್ಲಿಗೆ ಹೋಗೋಣ ಬನ್ನಿ'' ಎಂದು ತನ್ನ ಭಿಕ್ಷಾಪಾತ್ರೆಯನ್ನು ತಂದೆಯ ಕೈಗೆ ಕೊಟ್ಟು ಅವಳ ಕೊಠಡಿಗೆ ಹೋದನು. ಅವನು ಕೊಠಡಿಯನ್ನು ಪ್ರವೇಶಿಸಿ ಹೇಳಿದನು-''ಅವಳು ಹೇಗೆ ಬೇಕಾದರೂ ನನ್ನನ್ನು ಮರ್ಯಾದಿಸಲಿ. ಏನೂ ಹೇಳಬೇಡಿ'.

ಬುದ್ಧನು ತನ್ನ ಕೊಠಡಿಗೆ ಬರುತ್ತಿರುವುದನ್ನು ಕೇಳಿ ಯಶೋಧರೆಯು ತನ್ನ ಸಖಿಯರನ್ನು ಕರೆದು ಅವರು ಬುದ್ಧನನ್ನು ಎದುರುಗೊಳ್ಳಲು ಹೋಗುವಾಗ ಹಳದಿಯ ವಸ್ತ್ರಗಳನ್ನು ಧರಿಸುವಂತೆ ಹೇಳಿದಳು. ಬುದ್ಧನು ಅವಳ ಕೊಠಡಿಯನ್ನು ಪ್ರವೇಶಿಸಿ ಆಸನದಲ್ಲಿ ಕುಳಿತುಕೊಳ್ಳುವುದಕ್ಕೆ ಮೊದಲೇ ಯಶೋಧರೆ ಓಡಿಬಂದು ಅವನ ಪಾದಗಳ ಮೇಲೆ ಬಿದ್ದು ತನ್ನ ತಲೆಯನ್ನು ಅವನ ಪಾದಗಳ ಮೇಲಿರಿಸಿ ಒಂದೇ ಸಮನೆ ಅಳತೊಡಗಿದಳು. ಅವನ ಪಾದಗಳು ಅವಳ ಕಣ್ಣೀರಿನಿಂದ ತೊಯ್ದು ಹೋದುವು. ಬುದ್ಧನು ಮೌನವಾಗಿದ್ದನು. ಅವಳು ಅತ್ತು ಅತ್ತು ಆಯಾಸಗೊಂಡಳು. ಅಳುವನ್ನು ನಿಲ್ಲಿಸುವವರೆಗೂ ಎಲ್ಲರೂ ಮೌನದಿಂದಿದ್ದರು. ನಂತರ ಅವಳು ಬುದ್ಧನ ಪಾದಗಳನ್ನು ತೊಳೆದು ಭಕ್ತಿಯಿಂದ ಒಂದು ಕಡೆ ಕುಳಿತುಕೊಂಡಳು.

ಆಗ ಅವಳ ಮಾವನಾದ ಶುದ್ಧೋದನನು ಹೇಳಿದನು - ಪ್ರಭುವೇ, ನನ್ನ ಸೊಸೆಗೆ ನೀನು ಬಟ್ಟೆಯನ್ನು ಧರಿಸಿರುವಿ ಎಂದು ತಿಳಿದಾಗ ತಾನೂ ಕಾವಿಯನ್ನು ಧರಿಸಿದಳು. ನೀನು ಒಂದೇ ಹೊತ್ತು ಭೋಜನ ಮಾಡುವೆ ಎಂದು ತಿಳಿದಾಗ ತಾನೂ ಹಾಗೆಯೇ ಮಾಡಿದಳು. ನೀನು ಮೆತ್ತನೆಯ ಗಾದಿಗಳ ಮೇಲೆ ಮಲಗುವುದಿಲ್ಲವೆಂದು ತಿಳಿದಾಗ ತಾನೂ ಹಾಗೆಯೇ ಮಾಡಿದಳು. ನೀನು ಹೂವಿನ ಹಾರಗಳನ್ನೂ, ಸುಗಂಧದ್ರವ್ಯಗಳನ್ನೂ ತ್ಯಜಿಸಿದೆ ಎಂದು ತಿಳಿದಾಗ ತಾನೂ ಅವುಗಳನ್ನು ತ್ಯಜಿಸಿದಳು. ಅವಳ ನೆಂಟರಿಷ್ಟರು ಅವಳನ್ನು ತಮ್ಮ ಮನೆಯಲ್ಲಿರುವಂತೆ ಕೇಳಿಕೊಂಡಾಗ ಅವಳು ಆ ಕಡೆ ತಿರುಗಿಯೂ ನೋಡಲಿಲ್ಲ. ನನ್ನ ಸೊಸೆ ಇಂಥ ಗುಣವಂತಳು''.

''ದೊರೆಯೇ, ಈ ಜನ್ಮದಲ್ಲಿ ಮಾತ್ರವಲ್ಲ, ಹಿಂದಿನ ಜನ್ಮದಲ್ಲಿ ಈಕೆ ಪತಿಪರಾಯಣೆಯಾಗಿ ನನ್ನನ್ನು ನೋಡಿಕೊಂಡಿದ್ದಳು'' ಎಂದು ಬುದ್ಧನು ಹಿಂದಿನ ಜನ್ಮದ ''ಚಂದಕಿನ್ನರ'' ಜಾತಕದ ಕಥೆಯನ್ನು ಹೇಳಿದನು.

## ೨೩. ರಾಜಕುಮಾರ ನಂದ

ಯುವರಾಜ ನಂದನು ಯುವರಾಜ ಸಿದ್ಧಾರ್ಥನ ಮಲತಮ್ಮ. ಅವನಿಗೆ ಮುವ್ವತ್ತೈದು ವರ್ಷಗಳಾದಾಗ ಶುದ್ಧೋದನನು ಅವನಿಗೆ ಸಿದ್ಧಾರ್ಥನ ಸ್ಥಾನವನ್ನು ಕೊಟ್ಟು ಜನಪದ ಕಲ್ಯಾಣಿಯೆಂಬ ರಾಜಕುಮಾರಿಯೊಂದಿಗೆ ಮದುವೆ ಮಾಡಿಸಬೇಕೆಂದಾಲೋಚಿಸಿ ಅದಕ್ಕಾಗಿ ಬುದ್ಧನು ಕಪಿಲವಸ್ತುವಿಗೆ ಬರುವುದನ್ನೇ ನಿರೀಕ್ಷಿಸುತ್ತಿದ್ದನು. ಬುದ್ಧನು ಬಂದ ಮಾರನೆಯ ದಿನ ಮಹಾರಾಜನು ಎಲ್ಲಾ ಏರ್ಪಾಡುಗಳನ್ನು ಮಾಡಿ ಬುದ್ಧನು ಮದುವೆಗೆ ಬಂದು ಮದುಮಕ್ಕಳನ್ನು ಆಶೀರ್ವದಿಸಬೇಕೆಂದು ಕರೆದನು. ಬುದ್ಧನು ಹಾಗೆಯೇ ಬಂದು ಅಲ್ಲಿ ಭೋಜನಮಾಡಿ ಎಲ್ಲರನ್ನೂ ಆಶೀರ್ವದಿಸಿ ತನ್ನ ಭಿಕ್ಷಾಪಾತ್ರೆಯನ್ನು ನಂದನ ಕೈಗೆ ಕೊಟ್ಟು ಹೊರಟುಹೋದನು.

ಬುದ್ಧನು ಈ ಭಿಕ್ಷಾಪಾತ್ರೆಯನ್ನು ಬಾಗಿಲ ಬಳಿ ತೆಗೆದುಕೊಳ್ಳುತ್ತಾನೆಂದು ನಂದನು ಯೋಚಿಸಿದನು. ಆದರೆ ಬುದ್ಧನು ಆ ಪಾತ್ರೆಯನ್ನು ತೆಗೆದುಕೊಳ್ಳದೇ ನೇರವಾಗಿ ಹೊರಟುಹೋದನು. ಮತ್ತೆ ಬುದ್ಧನು ಅದನ್ನು ಅರಮನೆಯ ಹೆಬ್ಬಾಗಿಲಿನಲ್ಲಿ ತನ್ನ ಬಳಿಯಿಂದ ತೆಗೆದುಕೊಳ್ಳುತ್ತಾನೆಂದು ನಂದನು ತಿಳಿದನು. ಅವನ ವಧುವಾದ ಜನಪದ ಕಲ್ಯಾಣಿಯು ನಂದನು ಬುದ್ಧನನ್ನು ಹಿಂಬಾಲಿಸಿ ಹೋಗುತ್ತಿರುವುದನ್ನು ಕಂಡು ತನ್ನ ಗಂಡನು ಬುದ್ಧನನ್ನು ಕಳಿಸಿ ಬರುತ್ತಾನೆಂದುಕೊಂಡಳು. ಅವಳು ತನ್ನ ಗಂಡನನ್ನು ಬೇಗ ಬರುವಂತೆ ಹೇಳಿದಳು. ನಂದನು ಆ ಭಿಕ್ಷಾಪಾತ್ರೆಯನ್ನು ಬುದ್ಧನಿಗೆ ಹಿಂದಿರುಗಿಸಿ ಕೊಡಲು ವಿಹಾರಕ್ಕೆ ಹೋದಾಗ ಬುದ್ಧನು ಅವನನ್ನು 'ನಂದ, ನೀನು ಸನ್ಯಾಸಿಯಾಗಲು ಇಷ್ಟಪಡುವೆಯ ?' ಎಂದು ಕೇಳಿದನು.

''ಹೌದು'', ಎಂದು ನಂದನು ಹೇಳಲು ಬುದ್ಧನು ಅವನಿಗೆ ದೀಕ್ಷೆ ಕೊಟ್ಟನು. ಆ ನಂತರ ನಂದನು ಯಾವಾಗಲೂ ದುಃಖಿತನಾಗಿರುತ್ತಿದ್ದನು. ಅವನು ಯಾವಾಗಲೂ ತನ್ನ ರೂಪವತಿಯಾದ ಹೆಂಡತಿಯನ್ನು ನೆನೆಸಿಕೊಳ್ಳುತ್ತಿದ್ದನು. ಇತರ ಸನ್ಯಾಸಿಗಳು ಇದನ್ನು ಕಂಡು ಅವನ ದುಃಖಕ್ಕೆ ಕಾರಣವನ್ನು ಕೇಳಿದರು. ನಂದನು-'ಸೋದರರೇ, ನನಗೆ ಈ ಸನ್ಯಾಸ ಇಷ್ಟವಾಗುತ್ತಿಲ್ಲ, ನನಗೆ ಬಹಳ ನಿರಾಶೆಯಾಗಿದೆ, ನಾನು ಮನಗೆ ಹೋಗಬೇಕು' ಎಂದನು.

ಆ ಸನ್ಯಾಸಿಗಳು ಹೋಗಿ ಬುದ್ಧನಿಗೆ ಈ ವಿಷಯವನ್ನು ತಿಳಿಸಿದರು. ಬುದ್ಧನು ಅವನಿಗೆ ಸುಟ್ಟು ಕರಕಲಾದ ಒಂದು ಕೋತಿಯನ್ನೂ, ಕೆಲವು ಅಪ್ಸರೆಯರನ್ನೂ, ತೋರಿಸಿ 'ನಂದಾ, ಹೇಳು ಯಾರು ಸುಂದರಿಯರಾಗಿದ್ದಾರೆ. ಈ ಅಪ್ಸರೆಯರೋ ? ನಿನ್ನ ಹೆಂಡತಿಯೋ ?'

ನಂದನು ಹೇಳಿದನು-''ಮಹಾನುಭಾವರೇ, ಈ ಅಪ್ಸರೆಯರನ್ನು ಕಂಡಾದ ಮೇಲೆ ಜನಪದ ಕಲ್ಯಾಣಿಯು ಈ ಸುಟ್ಟ ಕೋತಿಯಂತೆ ಕಾಣುತ್ತಾಳೆ''.

''ನಂದಾ, ಧೈರ್ಯವನ್ನು ತಂದುಕೋ, ನಾನು ಹೇಳುವಂತೆ ನೀನು ಕಷ್ಟಪಟ್ಟು ನಡೆದುಕೊಳ್ಳುವಿಯಾದರೆ, ನೀನು ಇಂತಹ ಅಪ್ಸರೆಯರನ್ನು ಪಡೆಯಬಹುದು'' ಎಂದ ಬುದ್ಧ.

''ಹಾಗಾಗುವುದಾದರೆ ನಾನು ಸಂತೋಷದಿಂದ ಸನ್ಯಾಸಿಯಾಗಿ ಜೀವಿಸುತ್ತೇನೆ'', ಎಂದು ಹೇಳಿ ನಂದನು ಬುದ್ಧನ ಉಪದೇಶವನ್ನು ಶ್ರದ್ಧೆಯಿಂದ ಕೇಳಿ ಸ್ವಲ್ಪ ಕಾಲದಲ್ಲೇ ಸತ್ಯವನ್ನು ಕಂಡುಕೊಂಡು ತನ್ನ ಎಲ್ಲಾ ಆಸೆಗಳಿಂದಲೂ ಮುಕ್ತನಾಗಿ ಬಹಳ ಪವಿತ್ರನೂ, ವಿವೇಕಿಯೂ ಆದನು. ನಂತರ ಅವನು ಮನೆಗೆ ಹೋಗಲೇ ಇಲ್ಲ.

# ೨೪. ರಾಜಕುಮಾರ ರಾಹುಲ

ಸಿದ್ಧಾರ್ಥನು ಮನೆಯನ್ನು ತೊರೆದು ಹೋದ ದಿನವೇ ರಾಹುಲನು ಹುಟ್ಟಿದ್ದುದು. ಅವನಿಗೀಗ ಏಳು ವರ್ಷಗಳಾಗಿವೆ. ಅವನನ್ನು ಅವನ ತಾಯಿ ಯಶೋಧರೆಯೂ, ತಾತನೂ ಪೋಷಿಸಿದರು. ಏಳು ವರ್ಷಗಳ ನಂತರ ಬುದ್ಧನು ಮನೆಗೆ ಬಂದಿದ್ದನು ಯಶೋಧರೆಯು ಮಗನಿಗೆ ಒಳ್ಳೆಯ ಬಟ್ಟೆಗಳನ್ನು ತೊಡಿಸಿದಳು. ಬುದ್ಧನು ಊಟ ಮಾಡುತ್ತಿರುವಾಗ ಯಶೋಧರೆಯು ಅವನ ಕಡೆ ಬೆರಳು ಮಾಡಿ ರಾಹುಲನಿಗೆ ತೋರಿಸಿ ರಾಹುಲನನ್ನು ಕೇಳಿದಳು-''ಮಗೂ, ಅವರು ಯಾರು ಹೇಳು ನೋಡೋಣ ?''

''ಅವರು ಬುದ್ಧ ಅಮ್ಮಾ'', ರಾಹುಲನೆಂದ.

ಯಶೋಧರೆಯ ಕಣ್ಣುಗಳು ತುಂಬಿಬಂದವು. ಅವಳು ಹೇಳಿದಳು. ಆ ಬಂಗಾರ ಬಣ್ಣದ ಬಟ್ಟೆಯನ್ನುಟ್ಟು, ಇಪ್ಪತ್ತು ಸಾವಿರ ಸನ್ಯಾಸಿಗಳೊಂದಿಗೆ ಬ್ರಹ್ಮದೇವರಂತೆ ಕುಳಿತಿರುವ ಆ ಸನ್ಯಾಸಿ ನಿಮ್ಮ ತಂದೆಯಾಗಿದ್ದರು. ಅವರಿಗೆ ಬೇಕಾದಷ್ಟು ಆಸ್ತಿ-ಪಾಸ್ತಿಗಳಿದ್ದುವು. ಆತನು ಮನೆಯನ್ನು ಬಿಟ್ಟು ಹೋದಮೇಲೆ ಅದೆಲ್ಲಾ ಏನಾಯಿತೋ ತಿಳಿಯದು. ನೀನು ಹೋಗಿ ನಿನ್ನ ಆಸ್ತಿಯ ವಿಚಾರವಾಗಿ ನಿನ್ನ ತಂದೆಯನ್ನು ವಿಚಾರಿಸಿ ಹೀಗೆ ಹೇಳು-''ತಂದೆಯೇ, ನಾನು ರಾಜಕುಮಾರ ರಾಹುಲ. ನಾನು ರಾಜನಾದ ಮೇಲೆ ಎಲ್ಲ ರಾಜರ ರಾಜ, ಮಹಾರಾಜನಾಗುತ್ತೇನೆ. ನನಗೆ ನನ್ನ ಆಸ್ತಿಯನ್ನು ಕೊಡಿ. ತಂದೆಯ ಆಸ್ತಿಗೆ ಮಗನು ತಾನೇ ಉತ್ತರಾಧಿಕಾರಿಯಾಗಬೇಕು ?''

ಏನೂ ಅರಿಯದ ಮುಗ್ಧ ರಾಹುಲನು ಬುದ್ಧನ ಬಳಿಗೆ ಬಂದನು. ಬುದ್ಧನ ಒಂದು ಬೆರಳನ್ನು ಹಿಡಿದುಕೊಂಡು, ಅವನ ಮುಖವನ್ನು ನೊಡುತ್ತಾ, ತಾಯಿ ಹೇಳಿದುದನ್ನೆಲ್ಲಾ ಹೇಳಿ ''ತಂದೆಯೇ, ನಿಮ್ಮ ನೆರಳನ್ನು ನೋಡಿದರೂ ಕೂಡಾ ನನಗೆ ಸಂತೋಷವಾಗುತ್ತದೆ'' ಎಂದನು.

ಭೋಜನದ ನಂತರ ಬುದ್ಧನು ಅರಮನೆಯಿಂದ ಹೊರಟಾಗ ರಾಹುಲನು ಸಹಾ ಅವನನ್ನು ಹಿಂಬಾಲಿಸಿ ಹೋಗಿ-''ನನಗೆ ನನ್ನ ಆಸ್ತಿಯನ್ನು ಕೊಡಿ. ನಾನು ಮಹಾರಾಜನಾಗುತ್ತೇನೆ. ನನಗೆ ಐಶ್ವರ್ಯ ಬೇಕು. ನಿಮ್ಮ ಬಳಿ ಬೇಕಾದಷ್ಟಿದೆ. ನನ್ನ ಹಿರಿಯರ ಆಸ್ತಿಯನ್ನು ನನಗೆ ಕೊಡಿ''. ರಾಹುಲನನ್ನು ಯಾರೂ ತಡೆಯಲಿಲ್ಲ. ಬುದ್ಧನು ಸಹಾ ಹಿಂಬಾಲಿಸಿ ಬರುತ್ತಿರುವ ರಾಹುಲನನ್ನು ತಡೆಯಲಿಲ್ಲ. ಉದ್ಯಾನಕ್ಕೆ ಬಂದಮೇಲೆ ಬುದ್ಧನು ಈ ರಾಹುಲನು ನನ್ನ ಆಸ್ತಿಯನ್ನು ಕೇಳುತ್ತಿದ್ದಾನೆ. ಈ ಐಶ್ವರ್ಯವು ಕೇವಲ ಪ್ರಪಂಚಕ್ಕೆ ಸಂಬಂಧಪಟ್ಟಿದೆ. ಇದರಿಂದ ಅನೇಕ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಇದು ಬೇಡ. ನಾನು ಬೋಧಿವೃಕ್ಷದ ಕೆಳಗೆ ಕೂತು ಯಾವ ದಿವ್ಯವಾದ ಐಶ್ವರ್ಯವನ್ನು ಸಂಪಾದಿಸಿದ್ದೇನೆಯೋ ಅದನ್ನು ಅವನಿಗೆ ಕೊಡುತ್ತೇನೆ. ಅವನನ್ನು ಸನ್ಯಾಸದಲ್ಲಿ ನಿಲ್ಲಿಸುತ್ತೇನೆ ಎಂದು ಯೋಚಿಸಿದನು.

ಅವರೆಲ್ಲಾ ವಿಹಾರಕ್ಕೆ ಹಿಂದಿರುಗಿದರು. ಬುದ್ಧನು ತನ್ನ ಒಬ್ಬ ಶಿಷ್ಯನಾದ ಸಾರಿಪುತ್ರನನ್ನು ಕರೆದು ರಾಹುಲನಿಗೆ ಸನ್ಯಾಸ ದೀಕ್ಷೆಯನ್ನು ಕೊಡುವಂತೆ ತಿಳಿಸಿದನು.

ಶುದ್ಧೋದನನಿಗೆ ತನ್ನ ಮೊಮ್ಮಗ ರಾಹುಲನು ಭಿಕ್ಷುವಾದುದನ್ನು ಕೇಳಿ ಬಹಳ ದುಃಖವಾಯಿತು. ಆತನು ಬುದ್ಧನ ಬಳಿಗೆ ಬಂದು ಬಹಳ ಗೌರವದಿಂದ ಕೈಮುಗಿದು ಇನ್ನು ಮುಂದೆ ತಂದೆ ತಾಯಿಗಳ ಅಪ್ಪಣೆ ಪಡೆಯದೆ ಯಾರನ್ನೂ ಭಿಕ್ಷುಗಳನ್ನಾಗಿ ಮಾಡಿಕೊಳ್ಳಬಾರದೆಂದು ಬುದ್ಧನಲ್ಲಿ ವಿನಂತಿಸಿಕೊಂಡನು. ''ನೀನು ಮನೆಯನ್ನು ಬಿಟ್ಟುಹೋದಾಗ ನನಗೆಷ್ಟು ದುಃಖವಾಯಿತೆಂದು ನೀನರಿಯಲಾರೆ. ನಂತರ ನಂದನನ್ನು ನೋಡಿಕೊಂಡು ಕಾಲಕಳೆಯುತ್ತಿದ್ದೆ. ನೀನು ನಂದನನ್ನೂ ಭಿಕ್ಷು ಮಾಡಿಬಿಟ್ಟೆ. ಆಮೇಲೆ ಈ ಮಗುವಿನ ಮೇಲೆ ನನ್ನ ಎಲ್ಲಾ ಆಸೆ-ಆಕಾಂಕ್ಷೆಗಳನ್ನಿಟ್ಟುಕೊಂಡು ಅವನಿಗೆ ರಾಜಪಟ್ಟ ಕಟ್ಟಲು ಅವಣಿಸಿದ್ದೆ. ನೀನು ಅವನನ್ನೂ ನನ್ನಿಂದ ಕಿತ್ತುಕೊಂಡು ಭಿಕ್ಷು ಮಾಡಿ ನನ್ನ ಎದೆಯನ್ನೇ ಒಡೆದುಬಿಟ್ಟೆ. ಇನ್ನು ಮೇಲೆ ದಯಮಾಡಿ ತಾಯಿ ತಂದೆಗಳ ಅಪ್ಪಣೆ ಪಡೆಯದೆ ಹೀಗೆ ಯಾರನ್ನೂ ಸನ್ಯಾಸಿಯಾಗಿ ಮಾಡಬೇಡ''. ಬುದ್ದನು ಹಾಗೆಯೇ ಆಗಲೆಂದು ಒಪ್ಪಿಕೊಂಡನು.

## ೨೫. ಇಬ್ಬರು ಮುಖ್ಯ ಶಿಷ್ಯರು

ರಾಜಗೃಹದ ಬಳಿ ಎರಡು ಹಳ್ಳಿಗಳಿದ್ದುವು. ಒಂದು ಹಳ್ಳಿಯ ಹೆಸರು 'ಉಪತಿಸ್ಸ', ಇನ್ನೊಂದರ ಹೆಸರು 'ಕೋಲಿಟ'. ಇಲ್ಲಿನ ಹಳ್ಳಿಯ ಯಜಮಾನರ ಹೆಸರು ಇದೇ ಆಗಿತ್ತು. ಎರಡು ಮನೆತನಗಳಿಗೂ ತುಂಬಾ ಸ್ನೇಹವಿತ್ತು.

ಒಂದುದಿನ ಉಪತಿಸ್ಸನ ಹೆಂಡತಿ ಒಂದು ಗಂಡು ಮಗುವನ್ನು ಹೆತ್ತಳು. ಅದೇ ದಿನ ಕೋಲಿಟನ ಹೆಂಡತಿ ಮೊಗ್ಗಲಿಯು ಸಹಾ ಒಂದು ಗಂಡು ಮಗುವಿಗೆ ಜನ್ಮವಿತ್ತಳು. ಉಪತಿಸ್ಸನ ಮಗ ಉಪತಿಸ್ಸ ಅಥವಾ ಸಾಲಿಯ ಮಗನಾದ್ದರಿಂದ 'ಸಾರಿಪುತ್ರ' ಎಂದಾಯಿತು. ಹೀಗೆಯೇ ಕೋಲಿಟನ ಮಗನ ಹೆಸರೂ ಕೂಡಾ ಕೋಲಿಟ ಅಥವಾ ಮೊಗ್ಗಲಿಯ ಮಗನಾದ್ದರಿಂದ ಮೊಗ್ಗಲಾಯನ. ಈ ಇಬ್ಬರೂ ಮಕ್ಕಳಾಗಿದ್ದಾಗಲಿಂದ ಬಹಳ ಒಳ್ಳೆಯ ಸ್ನೇಹಿತರಾಗಿದ್ದರು.

ಅವರು ದೊಡ್ಡವರಾದಾಗ ಇಬ್ಬರೂ ನಾಟಕಗಳನ್ನು ನೋಡಲು ಹೋಗುತ್ತಿದ್ದರು. ಒಂದು ದಿನ ಅವರು ''ಗಿರಗ್ಗಸಮಜ್ಜ'' ಅಂದರೆ ''ಬೆಟ್ಟದ ಹಬ್ಬ'' ಎಂಬ ಜಾತ್ರೆಯನ್ನು ನೋಡಲು ಹೋಗಿದ್ದರು. ಇಬ್ಬರಿಗೂ ಈ ಜಾತ್ರೆಯಲ್ಲಿ ನೋಡುವುದರಲ್ಲಿ ಸಿಗುವ ಆನಂದಕ್ಕಿಂತ ಹೆಚ್ಚಿನ ಆನಂದ ಇನ್ನಾವುದರಲ್ಲಾದರೂ ಸಿಗುವುದೋ ನೋಡೋಣ ಎಂದುಕೊಂಡು ಮನೆ ಬಿಟ್ಟು ಹೊರಟರು.

ಆ ಸಮಯದಲ್ಲಿ ರಾಜಗೃಹದ ಬಳಿ ಸಂಜಯನೆಂಬ ಪ್ರಸಿದ್ಧನಾದ ಧಾರ್ಮಿಕ ಗುರುವಿದ್ದನು. ಇವರಿಬ್ಬರೂ ಅವನ ಬಳಿ ಕಲಿಯಲು ಹೋದರು. ಕೆಲವು ದಿನಗಳ ನಂತರ ಅವರಿಗೆ ಈ ಗುರುವಿನ ಬೋಧನೆಯಲ್ಲಿ ಏನೂ ತೃಪ್ತಿ ಸಿಗಲಿಲ್ಲ. ಹೋಗುವುದನ್ನು ನಿಲ್ಲಿಸಿಬಿಟ್ಟರು. ಅವರಿಗೆ ಈ ಗುರುವು ಹೇಳಿಕೊಟ್ಟಿದ್ದಕ್ಕಿಂತಲೂ, ಇನ್ನು ಹೆಚ್ಚಿನದೇನೋ ತಿಳಿಯಬೇಕಿತ್ತು. ಅವರು ಮರಣವಿಲ್ಲದಿರುವುದು

ಹೇಗೆ ಎಂಬುದನ್ನು ಕಲಿಯಲಾಶಿಸಿದರು. ಅವರಿಬ್ಬರೂ ಜೀವನದ ನೈಜತ್ವದ ಬಗ್ಗೆ ತಮ್ಮ ವಿದ್ಯಾಭ್ಯಾಸ, ಧ್ಯಾನ, ಚಿಂತನೆ ಹೀಗೆ ಎಲ್ಲಾ ವಿಧಗಳಿಂದಲೂ ತಿಳಿದುಕೊಳ್ಳಲೂ ಮನಸ್ಸು ಮಾಡಿ, ಯಾರೂ ಇದನ್ನು ಮೊದಲು ಕಂಡುಹಿಡಿಯುವನೋ ಅವನು ಇನ್ನೊಬ್ಬನಿಗೆ ತಿಳಿಸಬೇಕೆಂದು ಪರಸ್ಪರರು ವಚನಬದ್ಧರಾದರು.

ಒಂದು ಬೆಳಿಗ್ಗೆ ಉಪತಿಸ್ಸನು ರಾಜಗೃಹದ ರಾಜಮಾರ್ಗದಲ್ಲಿ ನಡೆದುಹೋಗುತ್ತಿದ್ದಾಗ ಸ್ವಲ್ಪ ದೂರದಲ್ಲಿ ಸನ್ಯಾಸಿಯೊಬ್ಬನು ಮನೆಯಿಂದ ಮನೆಗೆ ಭಿಕ್ಷಕ್ಕೆ ಹೋಗುತ್ತಿರುವುದನ್ನು ಕಂಡನು. ಅವನು ಆ ಸನ್ಯಾಸಿಯನ್ನು ನೋಡಿದಾಗ ಸನ್ಯಾಸಿಯು ಬಹಳ ಪ್ರಸನ್ನನಾಗಿರುವುದನ್ನು ಕಂಡನು. ಅವನು ಬಹಳ ಶಾಂತನೂ, ಸಾಧುಸ್ವಭಾವದವನೂ ಆಗಿದ್ದನು. ಅವನು ಮನೆಯ ಬಾಗಿಲಲ್ಲಿ ಮೌನವಾಗಿ ನಿಂತು ಗೃಹಸ್ಥರು ಭಿಕ್ಷವನ್ನು ತಂದುಹಾಕುವವರೆಗೂ ಕಾದಿದ್ದು ನಂತರ ಅಲ್ಲಿಂದ ಹೊರಡುತ್ತಿದ್ದನು. ಆ ಸನ್ಯಾಸಿಯು ಹತ್ತಿರ ಬಂದಾಗ ಉಪತಿಸ್ಸನ ಮೆಚ್ಚುಗೆಯು ಆಶ್ಚರ್ಯ ಮತ್ತು ಗೌರವಗಳಾಗಿ ಮಾರ್ಪಟ್ಟಿತು. ಏಕೆಂದರೆ ಆ ಸಾಧುವಿನ ನೋಟವು ಉಪತಿಸ್ಸನನು ಇದುವರೆಗೂ ಯಾವ ಸಾಧುವಿನ ಮುಖದ ಮೇಲೂ ಕಾಣದಿದ್ದಂತಹ ಮೋಹಕವಾದ ನೋಟವಾಗಿತ್ತು. ಅಷ್ಟೇ ಅಲ್ಲ ಆ ನೋಟವು ಸಂಪೂರ್ಣ ಶಾಂತಿಯುತವಾಗಿ ಅಲುಗಾಡದೆ ಅಚಲವಾಗಿ ನಿಂತಿದ್ದ ಸರೋವರದ ನೀರಿನಂತಿತ್ತು. ''ಇವನು ಯಾರು?'' ಉಪತಿಸ್ಸನು ತನ್ನೊಳಗೆ ಅಂದುಕೊಂಡನು. ''ನಾನು ಏನನ್ನು ಕಾಣಬೇಕೆಂದಿರುವೆನೋ ಅದು ಇವನಿಗೆ ತಿಳಿದರಬೇಕು. ಅಥವಾ ಇವನು ಅಂತಹ ಮಹಾನ್ ಗುರುವಿನ ಶಿಷ್ಯನಾಗಿರಬೇಕು. ಇವನ ಗುರು ಯಾರಿರಬಹುದು ? ಇವನು ಯಾವ ಗುರುವಿನ ಉಪದೇಶವನ್ನು ಪಡೆಯುತ್ತಿದ್ದಾನೆ. ನಾನು ಅವನ ಬಳಿ ಹೋಗಿ ತಿಳಿಯುತ್ತೇನೆ''.

ಆ ಸನ್ಯಾಸಿಯು ಒಂದು ಸುತ್ತು ಎಲ್ಲ ಮನೆಗಳಿಗೂ ಹೋಗಿ ಈಗ ನಗರದ ಹೆಬ್ಬಾಗಿಲಿನಿಂದ ಹೊರಗೆ ಹೋಗಬೇಕೆಂದಿರುವಾಗ ಉಪತಿಸ್ಸನು ಅವನ ಬಳಿ ಹೋಗಿ ಬಹಳ ನಮ್ರತೆಯಿಂದ ಕೇಳಿದನು-''ಪೂಜ್ಯನೇ, ನಿನ್ನ ಓಡಾಟವೇ ಬಹಳ ಸಂತೋಷಕರವಾಗಿದೆ ನಿನ್ನ ಮುಖವು ಬಹಳ ನಿರ್ಮಲವಾಗಿಯೂ, ಪ್ರಕಾಶಮಾನವಾಗಿಯೂ ಇದೆ. ನಿನ್ನ ಗುರು ಯಾರು ? ಅವರ ಹೆಸರೇನು ? ಅವರು ಏನನ್ನು ಬೋಧಿಸುತ್ತಾರೆ ?''

''ನಾನು ಅದನ್ನು ನಿನಗೆ ಸಂತೋಷವಾಗಿ ತಿಳಿಸುತ್ತೇನೆ ತಮ್ಮಾ. ಶಾಕ್ಯಕುಲದ ಸನ್ಯಾಸಿಯೊಬ್ಬರಿದ್ದಾರೆ. ಅವರು ಮನೆಮಠವಿಲ್ಲದ ಜೀವನವನ್ನು ನಡೆಸಲಿಕ್ಕಾಗಿ ತಮ್ಮ ಮನೆಯನ್ನೂ, ತಮ್ಮ ದೇಶವನ್ನೂ ತೊರೆದಿದ್ದಾರೆ. ಅವರಂತೆ ನಡೆಯಲು ನಾನೂ ನನ್ನ ಮನೆಯನ್ನು ತೊರೆದು ಬಂದಿದ್ದೇನೆ. ಆತನೇ ನನ್ನ ಗುರು. ನಾನು ಅವರ ಉಪದೇಶವನ್ನು ಕಲಿತು ಅದನ್ನು ಅಭ್ಯಾಸ ಮಾಡುತ್ತಿದ್ದೇನೆ.''

ಅವರ ಉಪದೇಶವೇನು ? ಅವರು ಏನನ್ನು ಬೋಧಿಸುತ್ತಾರೆ ? ನಾನೂ ಅದನ್ನು ತಿಳಿಯಬೇಕೆಂದಿದ್ದೇನೆ. ಉಪತಿಸ್ಸನು ಆತುರನಾಗಿ ಕೇಳಿದನು. ತಾನೂ ಮತ್ತು ತನ್ನ ಸ್ನೇಹಿತನಾದ ಕೋಲಿಟನೂ ತಿಳಿಯಬೇಕೆಂದಿರುವ ಜೀವನವದ ನೈಜತ್ವವನ್ನು ಈ ಗುರುವು ಅರಿತಿರುವನೋ ಹೇಗೋ ? ಇದಕ್ಕಾಗಿ ಅಲ್ಲವೆ ಅವರು ಹಂಬಲಿಸುತ್ತಿರುವುದು.

''ನಾನು ಹೊಸದಾಗಿ ಬುದ್ಧನ ಶಿಷ್ಯನಾಗಿ ಬಂದಿದ್ದೇನೆ. ನಾನು ಕೆಲವೇ ಸಮಯದಿಂದ ಬುದ್ಧನ ಉಪದೇಶವನ್ನು ಕೇಳುತ್ತಿದ್ದೇನೆ. ಆದ್ದರಿಂದ ಆತನ ಉಪದೇಶದ ಬಗ್ಗೆ ನನಗೆ ಬಹಳಷ್ಟು ತಿಳಿದಿಲ್ಲ. ನೀನು ಕೇಳುವ ಚಿಕ್ಕಪುಟ್ಟ ವಿಚಾರಗಳನ್ನೆಲ್ಲಾ ನಾನು ಹೇಳಲಾರೆ. ನಿನಗೆ ಬೇಕೆಂದರೆ ಕೆಲವೇ ಶಬ್ದಗಳಲ್ಲಿ ಅವರ ಉಪದೇಶದ ಸಾರಾಂಶವನ್ನು ಹೇಳಬಲ್ಲೆ''.

'ಅಷ್ಟೇ ನನಗೆ ಬೇಕಾದುದು. ಸಾರಾಂಶ ಮಾತ್ರ ಸಾಕು. ಅದರ ಬಗ್ಗೆ ಬಹಳ ಬೇಡ' ಉಪತಿಸ್ಸನೆಂದನು.

''ಆಗಲಿ ಬಹಳ ಒಳ್ಳೆಯದು ಹಾಗಾದರೆ ಕೇಳು.'' ಬುದ್ಧನು ಬೋಧಿಸಿದ್ದೇನೆಂದರೆ - ಎಲ್ಲದಕ್ಕೂ ಒಂದು ಕಾರಣವಿದೆ. ಅದನ್ನು ಬುದ್ದನು ತಿಳಿದಿದ್ದಾನೆ. ಕಾರಣವಿಲ್ಲದೆ ಫಲಿತಾಂಶವಿಲ್ಲ ಎಂಬುದನ್ನು ಬುದ್ಧನು ಬಲ್ಲ'' ಇದೇ ಆತನ ಉಪದೇಶದ ಸಾರ.

ಉಪತಿಸ್ಸನು ಭೇಟಿ ಮಾಡಿ ಮಾತನಾಡಿದ ಭಿಕ್ಷುವಿನ ಹೆಸರು ಅಸ್ಸಜಿ. ಅಸ್ಸಜಿಯು ಬುದ್ಧನ ಮೊಟ್ಟಮೊದಲ ಐವರು ಶಿಷ್ಯರಲ್ಲಿ ಒಬ್ಬನು. ಅವನು ಬುದ್ಧನ ಮೊದಲ ಉಪದೇಶವನ್ನು ಕೇಳಿದ್ದವನಾಗಿದ್ದನು.

ಅಸ್ಸಜಿಯು ಕೇವಲ ಎರಡೇ ಸಾಲಿನ ವಾಕ್ಯಗಳನ್ನಾಡಿದ್ದನು. ಉಪತಿಸ್ಸನು ಬಹಳ ಬುದ್ಧಿವಂತನಾಗಿದ್ದನು. ಅವನು ಇನ್ನೆರಡು ಸಾಲಿನ ವಾಕ್ಯಗಳನ್ನು ಅರ್ಥಮಾಡಿಕೊಂಡು ಇಡೀ ಚರಣವನ್ನು ಅರ್ಥಮಾಡಿಕೊಂಡನು. ಅವನು ಪ್ರಪಂಚದಲ್ಲಿ ಸೃಷ್ಟಿಯಾದವುಗಳೆಲ್ಲದರ ನೈಜತೆಯನ್ನರಿತನು. ಮತ್ತು ಯಾವ್ಯಾವುದು ಸೃಷ್ಟಿಯಾಗಿವೆಯೋ ಅವೆಲ್ಲಾ ನಾಶವಾಗುವುದನ್ನೂ ತಿಳಿದುಕೊಂಡನು. ಅವನು ಭಿಕ್ಷುವಿಗೆ ಹೇಳಿದನು- ನೀನು ನಿನ್ನ ಗುರುವಿನಿಂದ ಈ ಉಪದೇಶವನ್ನು ಪಡೆದಿದ್ದರೆ ನೀನು ದುಃಖದಿಂದ ಹೊರತಾಗಿರುವುದನ್ನೂ ಸಾವಿನಿಂದ ಹೊರತಾಗಿರುವುದನ್ನೂ ಇದನ್ನು ಹತ್ತಾರು ವರ್ಷಗಳು ಸಾಧನೆ ಮಾಡಿದ ಋಷಿಗಳೂ ಕಂಡುಕೊಂಡಿಲ್ಲ. ಅದನ್ನು ನೀನು ಕಂಡುಕೊಂಡಿರುವೆ. ನಂತರ ಆ ಸಾಧಕನಿಗೆ ವಂದಿಸಿ ಅಲ್ಲಿಂದ ಹೊರಟನು. ಅವನು ಕೋಲಿಟನನ್ನು ಸಂಧಿಸಿ ಅವನಿಗೆ ತಾವು ಯಾವುದನ್ನು ಪಡೆಯಬೇಕೆಂದಿದ್ದರೋ ಅದನ್ನು ತಾನು ಪಡೆದಿದ್ದೇನೆಂದು ತಿಳಿಸಬೇಕಾಗಿತ್ತು. ಅದಕ್ಕಾಗಿ ಆತನನ್ನು ಹುಡುಕುತ್ತಾ ಹೊರಟನು.

ಸ್ವಲ್ಪ ಕಾಲದನಂತರ ಅವನು ತನ್ನ ಗೆಳೆಯನನ್ನು ಸಂಧಿಸಿದನು. ಇವನು ಬಂದು ಮಾತನಾಡುವುದಕ್ಕೆ ಮುಂಚೆಯೇ ಕೋಲಿಟನು ಹೇಳಿದನು- ಸೋದರನೇ, ನಿನ್ನ ಮುಖವು ಇಷ್ಟು ನಿರ್ಮಲವಾಗಿದೆ. ಏನು ಕೊಟ್ಟಕೊನೆಗೆ ನೀನು ಜೀವನದ ಸತ್ಯತೆಯ ಬಗ್ಗೆ ತಿಳಿದುಕೊಂಡೆಯಾ ?

ಹೌದು, ಹೌದು ಉಪತಿಸ್ಸನು ಸಂತೋಷದಿಂದ ಹೇಳಿದನು. ನಾನು ಜೀವನದ ಸತ್ಯವನ್ನು ಕಂಡುಕೊಂಡಿದ್ದೇನೆ.

''ಅದು ಹೇಗೆ? ಅದು ಹೇಗೆ?'' ಕೋಲಿಟನು ಕೇಳಿದನು.

ಉಪತಿಸ್ಸನು ಅದನ್ನೇ ತಿಳಿದುಕೊಂಡ ರೀತಿಯನ್ನು ತಿಳಿಸಿ ಹೇಳಿದಾಗ ಅದನ್ನು ಕೋಲಿಟನೂ ಕಂಡುಕೊಂಡನು. ನಂತರ ಇಬ್ಬರೂ ಬುದ್ಧನನ್ನು ನೋಡಲು ಹೊರಟರು. ಆ ಇಬ್ಬರೂ ಅದಾಗಲೇ ಬುದ್ಧನ ಧರ್ಮೋಪದೇಶವನ್ನು ಚೆನ್ನಾಗಿ ತಿಳಿದುಕೊಂಡಿದ್ದುದರಿಂದ ಅವರಿಗೆ ಸನ್ಯಾಸ ದೀಕ್ಷೆ ಕೊಡಲು ಬುದ್ಧನಿಗೆ ಸುಲಭವಾಯಿತು. ಸ್ವಲ್ಪ ಕಾಲದಲ್ಲೇ ಬುದ್ಧನು ಅವರಿಬ್ಬರನ್ನೂ ಪ್ರಮುಖ ಶಿಷ್ಯರನ್ನಾಗಿ ಮಾಡಿಕೊಂಡನು. ಬೌದ್ಧರ ಇತಿಹಾಸದಲ್ಲಿ ಸಾರಿಪುತ್ರನ ಬುದ್ಧಿವಿವೇಕವನ್ನೂ ಮೊಗ್ಗಲಾಯನನ ಪವಾಡ ಸದೃಶ ಶಕ್ತಿಯನ್ನೂ ಬಹಳವಾಗಿ ಬಣ್ಣಿಸಲಾಗಿದೆ.

## ೨೬. ಬುದ್ಧನ ದಿನಚರಿ

ಬುದ್ಧನ ದಿನಚರಿಯನ್ನು ಐದು ಭಾಗಗಳಾಗಿ ವಿಂಗಡಿಸಲಾಗಿದೆ.

೧) ಬೆಳಗಿನ ದಿನಚರಿ : (ಬೆಳಗಿನ ೪ ಘಂಟೆಯಿಂದ ಮಧ್ಯಾಹ್ನ ೧೨ರವರೆಗೆ)

ಬುದ್ಧನು ಬೆಳಗಿನ ಝಾವ ನಾಲ್ಕು ಘಂಟೆಗೇ ಎದ್ದು ಮುಖ ಮಾರ್ಜನ ಸ್ನಾನ ಇತ್ಯಾದಿಗಳನ್ನು ಮುಗಿಸಿಕೊಂಡು ಒಂದು ಘಂಟೆಯ ಕಾಲ ಧ್ಯಾನ ಮಾಡುತ್ತಿದ್ದನು. ೫ ಘಂಟೆಯಿಂದ ೬ ಘಂಟೆಯವರೆಗೆ 'ಮಹಾಕರುಣಾ ಸಮಾಪತ್ತಿ' ತನ್ನ ಒಳಗಣ್ಣಿನಿಂದ ಸುತ್ತಲೂ ಯಾರಿಗಾದರೂ ತನ್ನಿಂದ ಏನಾದರೂ ಸಹಾಯವಾಗಬೇಕಿದೆಯೇ ಎಂದು ವೀಕ್ಷಿಸುತ್ತಿದ್ದನು. ೬ ಘಂಟೆಗೆ ಚೀವರವನ್ನು ಧರಿಸಿ ಹತ್ತಿರದ ಹಳ್ಳಿಗೆ ಭಿಕ್ಷೆಗಾಗಿ ಹೊರಡುವನು. ಯಾರಿಗಾದರೂ ಸಹಾಯ ಬೇಕೆನಿಸಿದಾಗ ತಕ್ಷಣವೇ ತನ್ನ ಶಿಷ್ಯರೊಂದಿಗಾಗಲೀ ಅಥವಾ ತಾನೊಬ್ಬನೇ ಆಗಲಿ ಹೋಗುವನು.

ನಂತರ ತನ್ನ ದೃಷ್ಟಿಯನ್ನು ಭೂಮಿಯ ಮೇಲಿರಿಸಿ ಮನೆಯಿಂದ ಮನೆಗೆ ಭಿಕ್ಷಾಟನೆಗೆ ಹೋಗುವನು. ಅಲ್ಲಿ ಮೌನವಾಗಿ ನಿಂತು ಗೃಹಸ್ಥರು ಕೊಟ್ಟ ಭಿಕ್ಷೆಯನ್ನು ಸ್ವೀಕರಿಸುವನು. ತನ್ನ ಶಿಷ್ಯರು ಜೊತೆಗಿದ್ದರೆ ಅವರನ್ನು ತನ್ನ ಹಿಂದೆ ಸಾಲಾಗಿ ಕರೆದುಕೊಂಡು ಹೋಗುವನು. ಜನಗಳು ಅವನನ್ನು ಊಟಕ್ಕೆ ಕರೆದರೆ ಅವರ ಮನೆಗೆ ಹೋಗುವನು. ಭೋಜನಾನಂತರ ಅಲ್ಲಿ ನೆರೆದಿರುವ ಜನರಿಗೂ ತನ್ನ ಸನ್ಯಾಸಿ ಶಿಷ್ಯರಿಗೂ ಧರ್ಮೋಪದೇಶ ಮಾಡುವನು. ಯಾರಾದರೂ ಸನ್ಯಾಸಿಗಳಾಗಬಯಸಿದಲ್ಲಿ ಅವರಿಗೆ ದೀಕ್ಷೆ ಕೊಡುವನು.

೨) ಮಧ್ಯಾಹ್ನದ ದಿನಚರಿ : (ಮಧ್ಯಾಹ್ನ ೧೨ ರಿಂದ ಸಂಜೆ ೬ ಘಂಟೆಯವರೆಗೆ)

ಈ ಸಮಯದಲ್ಲಿ ಭಿಕ್ಷುಗಳು ತಮಗೇನಾದರೂ ಸಂದೇಹವಿದ್ದಲ್ಲಿ ಅವುಗಳನ್ನು ನಿವಾರಿಸಿಕೊಳ್ಳಲು ಬರುವರು. ಅವನು ಅವರ ಸಂದೇಹವನ್ನು ದೂರ ಮಾಡಿ ಧ್ಯಾನ ಚಿಂತನೆ ಮಾಡಬೇಕಾದ ವಿಷಯವನ್ನು ಸೂಚಿಸುವನು. ಅವರೆಲ್ಲರೂ ಹೊರಟುಹೋದ ಮೇಲೆ ತನ್ನ ಕೊಠಡಿಗೆ ಹೋಗಿ ಅಂತರ್ಮುಖನಾಗಿ ಯಾರಿಗೆ ಏನಾದರೂ ಸಹಾಯ ಬೇಕೋ ? ಅಥವಾ ಯಾರಾದರೂ ತನ್ನ ಸಹಾಯವನ್ನು ನಿರೀಕ್ಷಿಸುತ್ತಿರುವರೋ ಎಂಬುದನ್ನು ನೋಡುವನು. ಯಾರಿಗಾದರೂ ಹಾಗೆ ಅಗತ್ಯವಿದ್ದಲ್ಲಿ ಹೋಗುವನು. ಇಲ್ಲವೇ ತನ್ನ ಕೊಠಡಿಯಿಂದ ಹೊರಗೆ ಬಂದು ತನ್ನ ದರ್ಶನಕ್ಕಾಗಿ

ಕಾದಿರುವ ನೂರಾರು ಜನರನ್ನು ಸಭಾಂಗಣದಲ್ಲಿ ಭೇಟಿ ಮಾಡುವನು. ಅವನು ತನ್ನ ಬೋಧನೆಯನ್ನು ಎಷ್ಟು ಚೆನ್ನಾಗಿ ಮಾಡುತ್ತಿದ್ದನೆಂದರೆ ಕುಳಿತಿರುವವರು ತಮ್ಮೊಬ್ಬನಿಗಾಗಿಯೇ ಅವನು ಉಪದೇಶ ನೀಡುತ್ತಿದ್ದಾನೆಂದು ತಿಳಿಯುತ್ತಿದ್ದರು ವಿವೇಕಿಗಳಿಗೆ ಸಂತೋಷವನ್ನುಂಟು ಮಾಡಿ ಅವರ ಬುದ್ಧಿಯನ್ನು ಪ್ರಚೋದಿಸಿ, ಈ ಪ್ರಪಂಚದ ಕತ್ತಲೆಯನ್ನು ಹರಿದು ಬೆಳಕನ್ನು ತೋರುತ್ತಿದ್ದನು.

೩) ರಾತ್ರಿಯ ಮೊದಲ ಜಾವ : (ಸಂಜೆ ೬ ಘಂಟೆಯಿಂದ ೧೦ ಘಂಟೆ ರಾತ್ರಿಯವರೆಗೆ)

ಈ ಸಮಯದಲ್ಲಿ ಭಿಕ್ಷುಗಳು ಬುದ್ಧನಿಂದ ಉಪದೇಶ ಪಡೆಯಲಿಕ್ಕಾಗಲೀ ಅಥವಾ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಲಿ ಬರುವರು. ಭಿಕ್ಷುಗಳೇ ಅಲ್ಲದೆ ಇತರ ಜನರೂ ರಾತ್ರಿಯಲ್ಲಿ ಬರುತ್ತಿದ್ದರು.

೪) ರಾತ್ರಿಯ ಎರಡನೇ ಜಾವ : (ರಾತ್ರಿ ೧೦ರಿಂದ ಬೆಳಗಿನ ಝಾವದ ೨ ಘಂಟೆವರೆಗೆ)

ಈ ಸಮಯದಲ್ಲಿ ದೇವತೆಗಳು ಬುದ್ಧನಿಂದ ಜೀವನದ ಸತ್ಯವನ್ನು ತಿಳಿಯಲು ಬರುವರು. ಅವರು ಮನುಷ್ಯರಿಗೆ ಕಾಣಿಸುತ್ತಿರಲಿಲ್ಲ. ಬುದ್ಧನು ದೇವ ಮನುಷ್ಯರ ಪರಮ ಗುರುವಾಗಿದ್ದನು.

೫) ಮೂರನೆಯ ಜಾವ ಅಥವಾ ಕೊನೆಯ ಜಾವ : (೨ ಘಂಟೆಯಿಂದ ಬೆಳಿಗ್ಗೆ ೪ರ ವರೆಗೆ)

೨ ಘಂಟೆಯಿಂದ ೩ ಘಂಟೆವರೆಗೆ ಬುದ್ಧನು 'ಚಂಕಮನ' (ನಡೆಯುವ ಧ್ಯಾನ) ಮಾಡುತ್ತಿದ್ದನು. ೩ರಿಂದ ೪ರವರೆಗೆ ಬಲಗಡೆಗೆ ಸಿಂಹದಂತೆ ನಿದ್ರಿಸುವನು. ಎದ್ದನಂತರ ಮತ್ತೆ ದಿನಚರಿಯ ಪುನರಾವರ್ತನೆಯಾಗುವುದು.

ಇಡೀ ದಿನ ಹೀಗೆ ಬುದ್ಧನು ಕರ್ತವ್ಯನಿರತನಾಗಿರುತ್ತಿದ್ದನು. ಬುದ್ಧನಾಗಿ ೪೫ ವರ್ಷಗಳ ಕಾಲ ಜನರಿಗೆ ಧರ್ಮಮಾರ್ಗವನ್ನು ಬೋಧಿಸುತ್ತಿದ್ದ ಕಾಲದಲ್ಲಿ ಬುದ್ಧನು ನಿದ್ರೆ ಮಾಡುತ್ತಿದ್ದುದು ಒಂದು ಘಂಟೆ ಮಾತ್ರ . ಬೆಳಗಿನ ಝಾವದಲ್ಲಿ ಆತನು ಇಡೀ ವಿಶ್ವವನ್ನೇ ತನ್ನ ಕಣ್ಣುಗಳಿಂದ ನೋಡಿ ಆಶೀರ್ವದಿಸುತ್ತಿದ್ದನು. ಮತ್ತು ಎಲ್ಲರನ್ನೂ ಪ್ರೀತಿಯಿಂದ ಕಂಡು ಲಕ್ಷಗಟ್ಟಲೇ ಜನರಿಗೆ ಸಂತೋಷವನ್ನುಂಟು ಮಾಡುತ್ತಿದ್ದನು. ಅವನು ತನ್ನ ೩೫ನೇ ವಯಸ್ಸಿನಲ್ಲಿ ಬುದ್ಧನಾಗಿ ೪೫ ವರ್ಷಗಳ ಕಾಲ ಜನಗಳಿಗೆ ಧರ್ಮೋಪದೇಶ ಮಾಡಿ ತನ್ನ ೮೦ನೇ ವಯಸ್ಸಿನಲ್ಲಿ ನಿರ್ವಾಣವನ್ನು ಪಡೆದನು.

# ೨೭. ಅಸಹಾಯಕನಾದ ಸೋಪಕ

ಒಂದು ಸಲ ಸೋಪಕನೆಂಬ ಬಡಹುಡುಗನೊಬ್ಬನಿದ್ದನು. ಅವನ ಚಿಕ್ಕವಯಸ್ಸಿನಲ್ಲೇ ತಂದೆ ತೀರಿಕೊಂಡನು. ತಾಯಿಯು ಇನ್ನೊಬ್ಬನನ್ನು ಮದುವೆ ಮಾಡಿಕೊಂಡಳು. ಆ ಮನುಷ್ಯನು ಬಹಳ ದುಷ್ಟ ಮತ್ತು ಕ್ರೂರಿ ಅವನಿಗೆ ಸೋಪಕನನ್ನು ಕಂಡರೆ ಆಗುತ್ತಿರಲಿಲ್ಲ. ಈ ಹುಡುಗನಿಂದ ತನೆಗ ಏನೂ ಪ್ರಯೋಜನವಿಲ್ಲವೆಂದು ತಿಳಿದು ಹೇಗಾದರೂ ಅವನನ್ನು ನಿವಾರಿಸಬೇಕೆಂದು ಯೋಚಿಸುತ್ತಿದ್ದನು. ಸೋಪಕನಾದರೋ ಏನೂ ತಿಳಿಯದ ಮುಗ್ಧ ಬಾಲಕ. ಆ ಮಲತಂದೆ ಯೋಚಿಸಿದನು- ಈ ಹುಡುಗನನ್ನು ನಾನು ದ್ವೇಷಿಸುತ್ತೇನೆ. ಏನಾದರೂ ಮಾಡಿಬಿಡೋಣವೆಂದರೆ ಇವನ ಮೇಲೆ ಇವನ ತಾಯಿಗೆ ಬಹಳ ಪ್ರೀತಿಯಿದೆ. ಇರಲಿ, ಏನಾದರೂ ಉಪಾಯ ಮಾಡೋಣವೆಂದು ಒಂದು ದಿನ ಸೋಪಕನಿಗೆ ಹೇಳಿದನು-ನನ್ನ ಮುದ್ದು ಮಗನೇ ಬಾ. ಹೊರಗೆ ಹೋಗಿ ತಿರುಗಾಡಿಕೊಂಡು ಬರೋಣ.

ಸೋಪಕನಿಗೆ ಆಶ್ಚರ್ಯವಾಯಿತು-''ಇದೇನು, ನಮ್ಮ ತಂದೆ ನನಗೆ ಇಷ್ಟು ಪ್ರೀತಿ ತೋರಿಸುತ್ತಿದ್ದಾನೆ. ನನ್ನ ಅಮ್ಮ ಏನಾದರೂ ಹೀಗೆ ಹೇಳಿರಬೇಕು'' ಎಂದುಕೊಂಡು ಹೊರಡಲು ಸಿದ್ಧನಾದನು. ಆ ಮಲ ತಂದೆಯು ಅವನನ್ನು ಸ್ಮಶಾನಕ್ಕೆ ಕರೆದುಕೊಂಡು ಹೋದನು. ಅಲ್ಲಿ ಕೊಳೆತು ನಾರುವ ಶವಗಳಿಂದ ದುರ್ವಾಸನೆ ಬರುತ್ತಿತ್ತು. ಅಂತಹ ಒಂದು ಶವಕ್ಕೆ ಈ ಹುಡುಗನನ್ನು ಕಟ್ಟಿಹಾಕಿ ಹೊರಟುಬಿಟ್ಟನು. ಹುಡುಗನು-''ಬೇಡ ತಂದೆ, ಈ ದುರ್ವಾಸನೆಯನ್ನು ನಾನು ಸಹಿಸಲಾರೆ. ನನಗೆ ಭಯವಾಗುತ್ತಿದೆ'' ಎಂದು ಅಳುತ್ತಿದ್ದರೂ ಕೇಳಿಸಿಕೊಳ್ಳದೆ ನಡೆದುಬಿಟ್ಟನು.

ರಾತ್ರಿಯಾಗುತ್ತಾ ಆಗುತ್ತಾ ಸೋಪಕನ ಭಯ ಹೆಚ್ಚುತ್ತಿತ್ತು ಸ್ಮಶಾನದಲ್ಲಿ ಯಾರೂ ಇರಲಿಲ್ಲ. ಸೋಪಕನಿಗೆ ಎಷ್ಟು ಭಯವಾಯಿತೆಂದರೆ ಅವನ ಮೈಮೇಲಿನ ಕೂದಲುಗಳು ಎದ್ದುನಿಂತು, ಅವನು ಬೆವರತೊಡಗಿ ಇಡೀ ಶರೀರ ಬೆವರಿನಿಂದ ಒದ್ದೆಯಾಗಿ ಹೋಯಿತು. ನರಿಗಳು, ಚಿರತೆಗಳು, ಹುಲಿಗಳು ಮತ್ತು ಇತರ ಪ್ರಾಣಿಗಳು ಕೂಗುತ್ತಿರುವುದನ್ನು ಕೇಳಿ ಭಯಗೊಂಡು ಆ ಬಾಲಕನು ಇನ್ನೂ ಜೋರಾಗಿ ಅಳಲಾರಂಭಿಸಿದನು. ಅವನು ತಾನೊಬ್ಬನೇ ಅಸಹಾಯಕನಾಗಿ, ಅಲ್ಲಿ ಯಾರೂ ತನ್ನನ್ನು ರಕ್ಷಿಸುವವರು ಇಲ್ಲವೆಂದು ತಿಳಿದನು.

ಆಗ ಅಲ್ಲಿಗೆ ಒಬ್ಬ ಸುಂದರನಾದ, ಪ್ರಕಾಶಮಾನನಾದ ಗಣ್ಯನಾದೊಬ್ಬ ವ್ಯಕ್ತಿ ಅವನಿಗೆ ಕಾಣಿಸಿಕೊಂಡನು. ಅವನು ಸೋಪಕನ ಬಳಿ ಬಂದು ಬಹಳ ಪ್ರೀತಿಯಿಂದ ಹೇಳಿದನು. -''ಅಳಬೇಡ, ಸೋಪಕಾ, ನಾನಿಲ್ಲಿದ್ದೇನೆ, ಹೆದರಬೇಡ'' ಮತ್ತೆ ಒಂದು ಕ್ಷಣದಲ್ಲಿ ಸೋಪಕನ ಬಂಧನಗಳೆಲ್ಲಾ ಹರಿದುಹೋಗಿ ಅವನು ಜೇತವನದ ಮಂದಿರದಲ್ಲಿ ಬುದ್ಧನ ಎದುರಿಗೆ ನಿಂತಿದ್ದನು.

ಸೋಪಕನಿಗೆ ತನ್ನ ಕಣ್ಣು ಕಿವಿಗಳನ್ನು ನಂಬಲಾಗಲಿಲ್ಲ. ಬುದ್ಧನು ಸ್ಮಶಾನದಿಂದ ಬಹು ದೂರವಿದ್ದನು. ಆದರೂ ಅವನಿಗೆ ಸೋಪಕನ ಅಳುವು ಕೇಳಿಸಿತು. ಆತನು ಒಂದು ಪ್ರಕಾಶವನ್ನು ಸೃಷ್ಟಿಸಿ

ಅದನ್ನು ಸೋಪಕನ ಬಳಿ ಕಳಿಸಿದನು. ಅದು ಹೋಗಿ ಬಾಲಕನ್ನು ಬಂಧಿಸಿದ್ದ ಹಗ್ಗವನ್ನು ಕಡಿದುಹಾಕಿತು. ಆ ಹುಡುಗನು ಮಂದಿರಕ್ಕೆ ಬಂದೊಡನೆಯೇ ಬುದ್ಧನು ಅವನಿಗೆ ಸ್ನಾನ ಮಾಡಿಸಿ, ಅವನಿಗೆ ತಿನ್ನಲು ಕೊಟ್ಟು ಉಡಲು ಬಟ್ಟೆಗಳನ್ನು ಕೊಟ್ಟನು.

ಆ ದುರುಳ ಗಂಡನು ಮನೆಗೆ ಬಂದೊಡನೆಯೇ ಸೋಪಕನ ತಾಯಿಯು ''ನನ್ನ ಮಗನೆಲ್ಲಿ ?'' ಎಂದು ಕೇಳಿದಳು. ಅವನು ನನಗಿಂತಲೂ ಮೊದಲೇ ಬಂದನು ಬಂದು ನಿದ್ರೆ ಮಾಡಿರಬೇಕು ಎಂದುಕೊಂಡೆ ಎಂದು ಆತನು ಹೇಳಿದನು. ಆದರೆ ತಾಯಿಗೆ ರಾತ್ರಿಯೆಲ್ಲಾ ನಿದ್ರೆಯೇ ಬರಲಿಲ್ಲ. ಅವಳು ಸೋಪಕನನ್ನು ನೆನೆಸಿಕೊಳ್ಳುತ್ತಾ ಅಳುತ್ತಲೇ ಇದ್ದಳು.

ಮಾರನೆಯ ದಿನ ಬೆಳಿಗ್ಗೆ ಆಕೆಯು ಹೀಗೆ ಯೋಚಿಸಿದಳು- ಬುದ್ಧನಿಗೆ ಭೂತ, ಭವಿಷ್ಯತ್, ವರ್ತಮಾನಗಳೆಲ್ಲವೂ ಗೊತ್ತು ನಾನು ಮಂದಿರಕ್ಕೆ ಹೋಗಿ ನನ್ನ ಮಗನೆಲ್ಲಿ ಎಂದು ಬುದ್ಧನನ್ನು ಕೇಳುತ್ತೇನೆ ಎಂದು ಅಳುತ್ತಾ, ಕರೆಯುತ್ತಾ ಆಕೆ ವಿಹಾರಕ್ಕೆ ಹೋದಳು.

ಬುದ್ಧನು ಆಕೆಯನ್ನು ''ತಂಗೀ, ನೀನೇಕೆ ಅಳುತ್ತಿದ್ದಿ ?'' ಎಂದು ಕೇಳಿದನು. ''ಪ್ರಭುವೇ, ನನಗಿರುವನು ಒಬ್ಬನೇ ಮಗ. ಅವನು ನಿನ್ನೆ ರಾತ್ರಿಯಿಂದ ಕಾಣೆಯಾಗಿದ್ದಾನೆ. ನನ್ನ ಗಂಡನು ನನ್ನ ಮಗನನ್ನು ತಿರುಗಾಡಲು ಜೊತೆಗೆ ಕರೆದುಕೊಂಡು ಹೋದನು. ಬರುವಾಗ ಆತನೊಬ್ಬನೇ ಮನೆಗೆ ಬಂದನು. ವಿಚಾರಿಸಿದ್ದಲ್ಲಿ ನನಗೇನೂ ಗೊತ್ತಿಲ್ಲ ಎನ್ನುತ್ತಾನೆ'' ಆಕೆ ಹೇಳಿದಳು.

ಬುದ್ಧನು ಹೇಳಿದನು. - ''ಚಿಂತಿಸಬೇಡ. ನಿನ್ನ ಮಗ ಸುಖವಾಗಿದ್ದಾನೆ. ಇಲ್ಲಿದ್ದಾನೆ ನೋಡು'' ಎಂದು ಸೋಪಕನನ್ನು ತೋರಿಸಿದನು. ಸೋಪಕನು ಸನ್ಯಾಸಿಯಾಗಿದ್ದನು. ಮೊದಲಿನ ಹುಡುಗನಾಗಿರಲಿಲ್ಲ. ತಾಯಿಗೆ ಮಗನನ್ನು ಕಂಡು ಸಂತೋಷವಾಯಿತು. ನಂತರ ಆಕೆಯು ಬುದ್ಧನಿಂದ ಉಪದೇಶವನ್ನು ಕೇಳಿ ಆತನನ್ನು ಬಹುವಾಗಿ ವಂದಿಸಿ ಮನೆಗೆ ಹೋದಳು. ಆಕೆ ಬುದ್ಧನ ಅನುಯಾಯಿಯಾದಳು.

## ೨೮. ಪಟಾಚಾರ

ಬುದ್ಧನ ಕಾಲದಲ್ಲಿ ಭಾರತದಲ್ಲಿ ಒಬ್ಬ ಕೋಟ್ಯಾಧೀಶ್ವರನಿದ್ದನು. ಅವನಿದ್ದ ನಗರದ ಹೆಸರು ಸಾವತ್ತಿ. ಅವನಿಗೆ ಬಹಳ ಸುಂದರಿಯಾದ ಮಗಳೊಬ್ಬಳಿದ್ದಳು. ಅವಳ ಹೆಸರು ಪಟಾಚಾರ. ಅವಳಿಗೆ ಒಬ್ಬ ಸೋದರನಿದ್ದನು. ಅವಳ ತಾಯಿ ತಂದೆಗಳು ಅವಳನ್ನು ಎಷ್ಟು ಪ್ರೀತಿಸುತ್ತಿದ್ದರೆಂದರೆ ಅವಳನ್ನು ತಮ್ಮ ಮಹಲಿನ ಏಳನೆಯ ಅಂತಸ್ತಿನಲ್ಲಿಟ್ಟಿದ್ದರು. ಅವಳನ್ನು ಹೊರಗೆಲ್ಲೂ ಹೋಗಲು ಬಿಡುತ್ತಿರಲಿಲ್ಲ.

ಅವಳಿಗೆ ಹದಿನಾರು ವರ್ಷ ವಯಸ್ಸಾದಾಗ ಅವಳ ತಾಯಿ ತಂದೆಯರು ಅವಳನ್ನು ಇನ್ನೊಬ್ಬ ಕೋಟ್ಯಾಧೀಶನ ಮಗನಿಗೆ ಕೊಟ್ಟು ವಿವಾಹ ಮಾಡಬೇಕೆಂದು ನಿಶ್ಚಯಿಸಿದರು. ಆದರೆ ಅವಳಾಗಲೇ ತನ್ನ ಆಳು ಮಗನನ್ನು ಪ್ರೀತಿಸುತ್ತಿದ್ದಳು. ಮದುವೆಗೆ ಒಂದು ದಿನ ಮೊದಲು ಅವಳು ತನ್ನ ಆಳು

ಮಗನಿಗೆ ಹೇಳಿದಳು-''ನನ್ನ ತಂದೆ -ತಾಯಿಗಳು ನನಗಾಗಿ ಇಂತಹ ಕೋಟ್ಯಾಧೀಶನ ಮಗನನ್ನು ಹುಡುಕಿ ಮದುವೆ ಮಾಡಲಿದ್ದಾರೆ. ನಾನೇನಾದರೂ ಒಂದು ಸಲ ಗಂಡನ ಮನೆಗೆ ಹೋದೆನೆಂದರೆ ನಿನಗೆ ಅಲ್ಲಿಗೆ ಬರಲು ಸಾಧ್ಯವೇ ಆಗದು. ಆದ್ದರಿಂದ ನೀನು ನಿಜವಾಗಿಯೂ ನನ್ನನ್ನು ಪ್ರೀತಿಸುವುದಾದರೆ ಒಂದು ಕ್ಷಣವೂ ತಡಮಾಡದೇ ನನ್ನನ್ನು ಇಲ್ಲಿಂದ ಕರೆದುಕೊಂಡು ಹೋಗಲು ಉಪಾಯ ಮಾಡು''.

ಬಹಳ ಒಳ್ಳೆಯದು, ನಾನು ನಾಳೆ ಮುಂಜಾನೆ ನಗರದ ಹೊರಬಾಗಿಲಿನಲ್ಲಿ ಕಾಯುತ್ತಿರುತ್ತೇನೆ. ನೀನು ಹೇಗಾದರೂ ಮಾಡಿ ಬಂದುಬಿಡು. ಅಲ್ಲಿ ನನ್ನನ್ನು ಸಂಧಿಸು. ಮಾರನೆಯ ದಿನ ಮೊದಲೇ ಮಾತನಾಡಿಕೊಂಡಿದ್ದಂತೆ ಪಟಾಚಾರ ಸೇವಕಳಂತೆ ಬಟ್ಟೆ ಧರಿಸಿ ನೀರಿನ ಕೊಡವನ್ನೆತ್ತಿಕೊಂಡು ನೀರು ತರುವಂತೆ ಹೊರಟಳು. ಅವಳು ತನ್ನ ಪ್ರಿಯತಮನನ್ನು ಸಂಧಿಸಿ ಅವನೊಡನೆ ಬಹಳ ದೂರ ಓಡಿಹೋದಳು.

ಸ್ವಲ್ಪ ಸಮಯವಾದ ನಂತರ ಪಟಾಚಾರ ಗರ್ಭಿಣಿಯಾದಳು. ಹೆರಿಗೆಯ ಸಮಯ ಬಂದಾಗ ತನ್ನ ಗಂಡನಿಗೆ ಹೇಳಿದಳು.-''ಇಲ್ಲಿ ನನಗೆ ಸಹಾಯ ಮಾಡುವವರು ಯಾರೂ ಇಲ್ಲ. ನಾನು ನನ್ನ ತವರು ಮನೆಗೆ ಹೋಗುತ್ತೇನೆ. ಎಷ್ಟಾದರೂ ತಾಯಿ-ತಂದೆಯರಿಗೆ ತಮ್ಮ ಮಕ್ಕಳ ಮೇಲೆ ಪ್ರೀತಿ ಇದ್ದೇ ಇರುತ್ತದೆ. ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋಗು. ನಾನು ಅಲ್ಲಿ ಅವರ ರಕ್ಷಣೆಯಲ್ಲಿ ಮಗುವನ್ನು ಹೆರುತ್ತೇನೆ.''

ಗಂಡನೆಂದನು-ನೀನೇನು ಹೇಳುತ್ತಿದ್ದೀಯೇ ? ನಿನ್ನ ತಾಯಿತಂದೆಗಳೇನಾದರೂ ನನ್ನನ್ನು ನೋಡಿದರೆ ಸಿಗಿದುಹಾಕಿಬಿಡುತ್ತಾರೆ. ನಾನು ಖಂಡಿತಾ ಬರುವುದಿಲ್ಲ.

ಅವಳು ಅವನನ್ನು ಮತ್ತೆ ಮತ್ತೆ ಕೇಳಿಕೊಂಡಳು. ಪ್ರತಿ ಬಾರಿಯೂ ಅವನು ನಿರಾಕರಿಸುತ್ತಲೇ ಇದ್ದನು. ಒಂದು ದಿನ ಅವಳ ಗಂಡನು ಹೊರಗೆ ಹೋಗಿದ್ದಾಗ ಅವಳು ನೆರಮನೆಗೆ ಹೋಗಿ ಹೇಳಿದಳು-''ನನ್ನ ಗಂಡನೇನಾದರೂ ನಿಮ್ಮನ್ನು ಕೇಳಿದರೆ, ನಾನು ನನ್ನ ತಂದೆ ಮನೆಗೆ ಹೋದನೆಂದು ತಿಳಿಸಿ''. ಎಂದು ಹೊರಟುಹೋದಳು. ಸಂಜೆ ಮನೆಗೆ ಬಂದಾಗ ಪಕ್ಕದ ಮನೆಯವರು ಈ ವಿಚಾರವನ್ನು ತಿಳಿಸಿದರು.

ತಕ್ಷಣವೇ ಅವನು ಅವಳನ್ನು ಹುಡುಕಿಕೊಂಡು ಬಂದು ಮನೆಗೆ ಹಿಂದಿರುಗಿ ಬರುವಂತೆ ಕೇಳಿಕೊಂಡನು. ಅವಳು ನಿರಾಕರಿಸಿ ಮುಂದೆ ಹೊರಡುತ್ತಾಳೆ. ಅವನೂ ಅವಳ ಹಿಂದೆಯೇ ಹೋಗುತ್ತಾನೆ. ನಂತರ ಒಂದು ಸ್ಥಳಕ್ಕೆ ಬರುತ್ತಾರೆ. ಅಲ್ಲಿ ಅವಳಿಗೆ ಹೆರಿಗೆ ನೋವು ಪ್ರಾರಂಭವಾಗುತ್ತದೆ. ಅಲ್ಲಿ ಅವಳಿಗೆ ಗಂಡು ಮಗು ಹುಟ್ಟುತ್ತದೆ. ಆಗ ಅವಳು ಇನ್ನು ತಂದೆಯ ಮನೆಗೆ ಹೋಗಿ ಪ್ರಯೋಜನವಿವಲ್ಲವೆಂದು ಗಂಡನ ಜೊತೆಗೆ ಬರುತ್ತಾಳೆ.

ಮತ್ತೆ ಕೆಲವು ಕಾಲದ ಮೇಲೆ ಗರ್ಭಿಣಿಯಾಗಿ ಮೊದಲಿನಂತೆ ಗಂಡನು ಮನೆಯಲ್ಲಿಲ್ಲದೆ ಇದ್ದಾಗ ತವರು ಮನೆಗೆ ಹೊರಡುತ್ತಾಳೆ. ಯಥಾಪ್ರಕಾರ ಗಂಡನು ಅವಳ ಬೆನ್ನತ್ತಿ ಹೋದನು. ಅವಳು ಬರಲು ನಿರಾಕರಿಸಿದಳು.

ಹೀಗೆಯೇ ಅವರು ಹೋಗುತ್ತಿರುವಾಗ ಭಯಂಕರವಾದ ಬಿರುಗಾಳಿ ಎದ್ದಿತು. ಆಕಾಶದಲ್ಲಿ ಮಿಂಚು ಹೊಳೆಯತೊಡಗಿತು. ನಂತರ ಬಲವಾಗಿ ಗಾಳಿ ಬೀಸಿ ಜೋರಾಗಿ ಮಳೆ ಬರತೊಡಗಿತು. ಪಟಾಚಾರ ಗಂಡನಿಗೆ ಹೇಳಿದಳು. ''ನನಗೆ ಹರಿಗೆ ನೋವು ಆರಂಭವಾಗಿದೆ. ನಾನು ತಡೆಯಲಾರೆ ಈ ಮಳೆಯಲ್ಲಿ ನನಗಾಗಿ ಒಂದು ಸ್ಥಳವನ್ನು ಹುಡುಕು.''

ಅವಳ ಬಳಿ ಗಂಡನ ಒಂದು ಕೊಡಲಿ ಇತ್ತು. ಅವನು ಹೋಗಿ ಒಂದು ಗುಡಿಸಲನ್ನು ಕಟ್ಟಲಿಕ್ಕಾಗಿ ಕಟ್ಟಿಗೆಗಳನ್ನು ಹುಡುಕಲಾರಂಭಿಸಿದನು. ಅಲ್ಲಿ ಒಂದು ಹುತ್ತದ ಮೇಲೆ ಗುಂಪಾಗಿ ಪೊದೆ ಬೆಳೆದಿದ್ದಿತು. ಅವನು ಅದನ್ನು ಕಡಿದುಕೊಂಡು ಬರಲು ಹೊರಟನು. ಅವನು ಒಂದು ಕಟ್ಟಿಗೆಯನ್ನು ಕಡಿದುಕೊಳ್ಳಲು ನಾಲ್ಕೈದು ಏಟು ಹಾಕಿದೊಡನೆಯೇ ಹುತ್ತದಿಂದ ಒಂದು ವಿಷಪೂರಿತ ಸರ್ಪವು ಬಂದು ಅವನನ್ನು ಕಚ್ಚಿತು. ತಕ್ಷಣವೇ ಅವನು ಕೆಳಗೆ ಬಿದ್ದು ಸತ್ತುಹೋದನು.

ಪಟಾಚಾರ ತನ್ನ ಗಂಡನಿಗಾಗಿ ಕಾದೂ ಕಾದಳು. ಅವಳಿಗೆ ಹೆರಿಗೆ ನೋವು ಹೆಚ್ಚಾಗಿ ಇನ್ನೊಂದು ಗಂಡುಮಗುವನ್ನು ಹೆತ್ತಳು. ಈಗ ಎರಡು ಮಕ್ಕಳಾದವು. ಆ ಕಂದಮ್ಮಗಳು, ಚಳಿ-ಮಳೆಗಳನ್ನು ತಡೆಯಲಾರದೆ ಜೋರಾಗಿ ಅಳತೊಡಗಿದವು. ತಾಯಿಗೆ ಏನೂ ಮಾಡಲು ತೋಚಲಿಲ್ಲ. ಅವಳು ಎರಡೂ ಮಕ್ಕಳನ್ನು ಮಡಿಲಿನಲ್ಲಿ ಎತ್ತಿಕೊಂಡು ತನ್ನ ಕೈಗಳನ್ನು ಒತ್ತಿಹಿಡಿದು ಅವುಗಳನ್ನು ಅವುಚಿಕೊಂಡು ನಿಂತಳು. ರಾತ್ರಿಯೆಲ್ಲಾ ಹೀಗೆಯೇ ಕಳೆಯಿತು.

ಬೆಳಗಾಗುತ್ತಲೇ ಆಕೆಯು ಮಾಂಸದ ಮುದ್ದೆಯಂತ್ತಿದ್ದ ಹಸುಗೂಸನ್ನು ಬೆನ್ನಿಗೆ ಕಟ್ಟಿಕೊಂಡು ಇನ್ನೊಂದು ಮಗುವಿಗೆ ತನ್ನ ಕೈಬೆರಳನ್ನು ಹಿಡಿದುಕೊಳ್ಳುವಂತೆ ಹೇಳಿ ''ನಡೆಯಪ್ಪಾ, ನಿಮ್ಮ ತಂದೆ ನಮ್ಮನ್ನು ಬಿಟ್ಟು ಹೋಗಿದ್ದಾರೆ'' ಎಂದು ಹೊರಟಳು. ಅವಳು ತನ್ನ ಗಂಡನು ಹೊರಟ ಹಾದಿಯಲ್ಲೇ ನಡೆದಾಗ ಅಲ್ಲಿ ಹುತ್ತದ ಬಳಿ ಅವನು ಸತ್ತುಬಿದ್ದಿರುವುದು ಕಂಡಿತು. ಅವನ ಮೈ ನೀಲಿ ಬಣ್ಣಕ್ಕೆ ತಿರುಗಿ, ದೇಹ ಕೊರಡಾಗಿತ್ತು. ಇದೆಲ್ಲಾ ನನ್ನಿಂದಲೇ ಆಗಿದ್ದು. ನನ್ನ ಗಂಡ ಬೀದಿಯಲ್ಲಿ ಸಾಯಬೇಕಾಯಿತು. ಅಳುತ್ತಾ ಕರೆಯುತ್ತಾ ಹೊರಟಳು.

ಅವಳಿಗೆ ದಾರಿಯಲ್ಲಿ ಒಂದು ನದಿ ಸಿಕ್ಕಿತು. ಅದರ ಹೆಸರು ''ಅಚಿರಾವತಿ''. ಅದು ತುಂಬಿ ಹರಿಯುತ್ತಿದ್ದಿತಾದರೂ ಆಳ ಸೊಂಟದವರೆಗೆ ಮಾತ್ರವಿತ್ತು. ಅವಳು ಆ ನದಿಯ ದಡಕ್ಕೆ ಬಂದು ಹೇಳಿಕೊಂಡಳು.- ''ನಾನು ಬಹಳ ದುರ್ಬಲಳಾಗಿದ್ದೇನ. ನಿನ್ನೆಯಿಂದ ಹೊಟ್ಟೆಗೇನೂ ಇಲ್ಲ. ಸಾಕಷ್ಟು ರಕ್ತವೂ ಹೋಗಿದೆ. ನಾನು ಎರಡು ಮಕ್ಕಳನ್ನು ಎತ್ತಿಕೊಂಡು ನದಿಯನ್ನು ದಾಟಲಾರೆ.'' ಅವಳು ದೊಡ್ಡ ಮಗುವನ್ನು ದಡದಲ್ಲಿ ಕೂಡಿಸಿ ಚಿಕ್ಕ ಕೂಸನ್ನು ಎತ್ತಿಕೊಂಡು ನದಿಯನ್ನು ದಾಟಿ ಆಚೆಕಡೆ ಹೋಗಿ ಒಂದು ಗಿಡದ ಕೆಲವು ಕೊಂಬೆಗಳನ್ನು ಕಿತ್ತು ಅವುಗಳನ್ನು ನೆಲದ ಮೇಲೆ ಅಗಲವಾಗಿ ಹಾಸಿ ಕೂಸನ್ನು ಅದರ ಮೇಲೆ ಮಲಗಿಸಿದಳು. ನಂತರ ಇನ್ನೊಂದು ಮಗುವನ್ನು ಕರೆತರಲು ಹೊರಟಳು.

ಅವಳು ಇನ್ನೂ ಮಧ್ಯ ನದಿಗೆ ಬಂದಿದ್ದಳೋ ಇಲ್ಲವೋ ಒಂದು ಹದ್ದು ಆಕಾಶದಿಂದ ಮಗುವನ್ನು ನೋಡಿ ಅದು ಮಾಂಸದ ಮುದ್ದೆಯೆಂದು ಭ್ರಮಿಸಿ ಅದನ್ನು ಎತ್ತಿಕೊಂಡು ಹೋಗಲು ಕೆಳಗಿಳಯತೊಡಗಿತು. ತಾಯಿಯು ಹೀಗೆ ಹದ್ದು ಮಗುವನ್ನೆತ್ತಿಕೊಳ್ಳಲು ಬರುತ್ತಿರುವುದನ್ನು ನೋಡಿ ಜೋರಾಗಿ ''ಸೂ, ಸೂ'' ಎಂದು ಕೂಗಿಕೊಂಡಳು. ಈಚೆಯ ದಡದಲ್ಲಿದ್ದ ಮಗುವು ತನ್ನ ತಾಯಿ ತನ್ನನ್ನು ಕರೆಯುತ್ತಿದ್ದಾಳೆ ಎಂದುಕೊಂಡು ಓಡಿಬಂದು ನದಿಯಲ್ಲಿ ಬಿದ್ದು ಕೊಚ್ಚಿಹೋಗಲಾರಂಭಿಸಿತು. ಅವಳು ಅದನ್ನು ಉಳಿಸಲು ಪ್ರಯತ್ನಪಡುತ್ತಿದ್ದಾಗ ಈ ಕಡೆ ಮಗು ನೀರಿನಲ್ಲಿ ಕೊಚ್ಚಿಕೊಂಡು ಹೋದರೆ ಹದ್ದು ಎಳೆಯ ಕೂಸನ್ನು ಎತ್ತಿಕೊಂಡು ಹೊರಟುಹೋಯಿತು.

ಈಗ ಪಟಾಚಾರಳ ದುಃಖಕ್ಕೆ ಮಿತಿಯೇ ಇರಲಿಲ್ಲ. ಒಂದು ಕಡೆ ಎರಡು ಮಕ್ಕಳು ಹೋದವು. ಇನ್ನೊಂದು ಕಡೆ ಗಂಡನೂ ಹೋದ.

ಅವಳು ಅಳುತ್ತಾ ಹೋಗುತ್ತಿದ್ದಳು. ದಾರಿಯಲ್ಲಿ ಒಬ್ಬ ಮನುಷ್ಯನನ್ನು ನೋಡಿದಳು. ಅವನನ್ನು ಕೇಳಿದಳು- ಅಯ್ಯಾ, ನೀನು ಯಾವ ಊರಿಗೆ ಹೋಗುತ್ತಿದ್ದೀಯೆ ?

''ಸಾವತ್ತಿಗೆ'', ಅವನೆಂದನು.

''ಸಾವತ್ತಿಯಲ್ಲಿ ಇಂಥ ಮನೆಯಲ್ಲಿ ಇಂಥವರಿದ್ದಾರೆ. ನಿನಗೆ ಅವರ ಪರಿಚಯವಿದೆಯೆ ?''

''ನನಗೆ ಅವರು ಗೊತ್ತು ತಾಯಿ. ಆದರೆ ಆ ವಿಚಾರ ಕೇಳಬೇಡಮ್ಮಾ. ಬೇರೆ ಯಾರನ್ನಾದರೂ ಕೇಳು.''

''ಅಯ್ಯಾ, ನನಗೆ ಗೊತ್ತಿರುವವರು ಅವರೊಬ್ಬರೇ. ದಯವಿಟ್ಟು ಅವರ ವಿಚಾರವನ್ನು ತಿಳಿಸು.''

''ನೀನು ಬಲವಂತ ಮಾಡುತ್ತಿರುವುದರಿಂದ ಹೇಳುತ್ತೇನೆ. ನಿನ್ನೆ ರಾತ್ರಿ ಭಾರಿ ಮಳೆ ಬಂದ ವಿಚಾರ ನಿನಗೆ ಗೊತ್ತಲ್ಲವೆ?''

''ಹೌದು, ಅದು ನನ್ನ ಮೇಲೇ ಬಂದ ಹಾಗಿತ್ತು. ಯಾಕೆಂದರೆ ಅದರಿಂದ ನನಗೆ ತುಂಬಾ ನಷ್ಟವಾಯಿತು.''

''ಆ ಬಿರುಸಾದ ಮಳೆಯಲ್ಲಿ ಅವರ ಮನೆ ಮುರಿದು ಬತ್ತು. ಗೋಡೆಗಳು ಆ ಗಂಡ ಹೆಂಡಿರ ಮತ್ತು ಒಬ್ಬನೇ ಮಗನ ಮೇಲೆ ಬಿದ್ದವು.''

''ಓ, ಬೇಡ ಬೇಡ, ಅವರೆಲ್ಲಾ ಸತ್ತುಹೋದರೆಂದು ಹೇಳಬೇಡಿ.''

''ಹೌದು, ಅಲ್ಲಿ ಉರಿಯುತ್ತಿರುವ ಬೆಂಕಿಯನ್ನು ನೋಡು''. ದೂರದಲ್ಲಿ ಕಾಣುತ್ತಿದ್ದ ಅಗ್ನಿಜ್ವಾಲೆಯ ಕಡೆ ಬೆಟ್ಟುಮಾಡಿ ತೋರಿದನು.

ಹೌದು ನನಗೆ ಕಾಣುತ್ತಿದೆ. ಪಟಾಚಾರ ಹೇಳಿದಳು.

''ಅದೇ ಅವರ ಚಿತೆ''.

ಇದನ್ನು ಕೇಳಿದೊಡನೆಯೇ ಪಟಾಚಾರ ಕೆಳಗೆ ಬಿದ್ದು ಉರುಳಾಡಿ ಅಳತೊಡಗಿದಳು. ಕೆಲವು ಜನರು ಬಂದು ಅವಳನ್ನು ಜೇತವನದ ವಿಹಾರಕ್ಕೆ ಕರೆದೊಯ್ದರು. ಬುದ್ಧನು ಅಲ್ಲಿ ಧರ್ಮೋಪದೇಶ ಮಾಡುತ್ತಿದ್ದನು. ಬುದ್ಧನು ಅಲ್ಲಿರುವ ಕೆಲವು ಹೆಂಗಸರಿಗೆ ಆಕೆಯನ್ನು ಮೀಯಿಸಿ, ಬಟ್ಟೆಗಳನ್ನು ತೊಡಿಸಿ ಭೋಜನ ಮಾಡಿಸಿ ಕರೆತರುವಂತೆ ಹೇಳಿದನು. ಅವಳನ್ನು ತನ್ನ ಮೃದುವಾಣಿಯಿಂದ ಸಮಾಧಾನಪಡಿಸತೊಡಗಿದನು. ಬುದ್ಧನು ತನ್ನ ಧರ್ಮೋಪದೇಶವನ್ನು ಮುಗಿಸಿದಾಗ ಅವಳು ಅದನ್ನು ಚೆನ್ನಾಗಿ ಅರಿತುಕೊಂಡು ಮನಸ್ಸನ್ನು ಸಮಾಧಾನಪಡಿಸಿಕೊಂಡು ತನಗೆ ಸನ್ಯಾಸ ಕೊಡುವಂತೆ ಕೇಳಿಕೊಂಡಳು. ಬುದ್ಧನು ಹಾಗೆಯೇ ಮಾಡಿದನು.

## ೨೯. ಡಕಾಯಿತ ಅಂಗುಲಿಮಾಲಾ

ಅಂಗುಲಿಮಾಲನು ಕೋಸಲ ದೇಶದ ರಾಜನ ಮಂತ್ರಿಯ ಮಗ. ಅವನ ತಂದೆಯ ಹೆಸರು ಭಾಗ್ಗವ, ತಾಯಿ ಮಾಂತಂಗಿ. ಅವನ ನಿಜವಾದ ಹೆಸರು ಅಹಿಂಸಕ.

ಅವನು ಹುಟ್ಟಿದಾಗ ರಾಜ್ಯದಲ್ಲಿದ್ದ ಆಯುಧಗಳೆಲ್ಲಾ ತಮ್ಮಷ್ಟಕ್ಕೆ ತಾವೇ ಬಹಳ ಪ್ರಕಾಶಮಾನವಾಗಿ ಬೆಳಗತೊಡಗಿದವು. ರಾಜನಿಗೆ ಇದನ್ನು ನೋಡಿ ಬಹಳ ಭಯವಾಯಿತು. ಮಾರನೆಯ ದಿನ ರಾಜನು ತನ್ನ ಮಂತ್ರಿಯನ್ನು ಕರೆದು ಹೀಗೇಕಾಯಿತೆಂದು ವಿಚಾರಿಸಲು ಹೇಳಿದನು. ಆಗ ಮಂತ್ರಿಯು ಹೇಳಿದನು- ''ನನ್ನ ಹೆಂಡತಿಯು ಒಂದು ಗಂಡುಮಗುವನ್ನು ಹೆತ್ತಿದ್ದಾಳೆ ಮಹಾಸ್ವಾಮಿ''.

''ಆದರೆ ಆಯುಧಗಳು ಹೀಗೇಕೆ ಮಿರುಗಬೇಕು?'' ದೊರೆಯು ಕೇಳಿದನು.

''ಮಹಾಸ್ವಾಮಿ, ನನ್ನ ಮಗನು ಒಬ್ಬ ಡಕಾಯಿತನಾಗುತ್ತಾನಂತೆ. ಅದ್ಭುತನಾದ ಡಕಾಯಿತ.''

''ಅವನು ಒಬ್ಬನೇ ದರೋಡೆ ಮಾಡುತ್ತಾನಂತೋ ಅಥವಾ ಒಂದು ಗುಂಪನ್ನು ಕಟ್ಟುತ್ತಾನೋ?''

''ಒಬ್ಬನೇ ಮಹಾಸ್ವಾಮಿ'' ಎಂದ ಮಂತ್ರಿ.

''ಏನಾದರಾಗಲೀ, ನಾವೇಕೆ ಇವನನ್ನು ಈಗಲೇ ಕೊಲ್ಲಬಾರದು ?''

''ಈಗ ಬೇಡ ಮಹಾಸ್ವಾಮಿ, ಅವನೊಬ್ಬನೇ ಇದ್ದರೆ ಅವನು ದರೋಡೆ ಮಾಡಿದಾಗ ಮಾಲು ಸಮೇತ ಹಿಡಿಯಬಹುದು.''

ಅಹಿಂಸಕನಿಗೆ ಶಾಲೆಗೆ ಹೋಗುವ ವಯಸ್ಸು ಬಂದ ಕೂಡಲೇ ತಂದೆಯು ಅವನನ್ನು ವಿದ್ಯಾಭ್ಯಾಸಕ್ಕಾಗಿ ತಕ್ಷಶಿಲೆಗೆ ಕಳುಹಿಸಿದನು. ಅಹಿಂಸಕನು ಬಹಳ ಗಟ್ಟಿಮುಟ್ಟಾಗಿದ್ದನು. ಬಹಳ ಜಾಣನಾಗಿದ್ದನು. ಮತ್ತು ಶಾಲೆಯಲ್ಲಿರುವ ಮಕ್ಕಳಿಗಿಂತಲೂ ವಿಧೇಯನಾಗಿದ್ದನು. ಇತರ ಹುಡುಗರು

ಇವನನ್ನು ಕಂಡು ಅಸೂಯೆಪಡತೊಡಗಿದರು. ಅವನ ವಿದ್ಯಾಭ್ಯಾಸ ಮುಗಿಯಲು ಗುರುಗಳು ಹೇಳಿದರು. ಇನ್ನು ನಿನ್ನ ವಿದ್ಯಾಭ್ಯಾಸ ಮುಗಿದಿದೆ. ನೀನು ಶಾಲೆ ಬಿಟ್ಟು ಹೋಗುವುದಕ್ಕೆ ಮುಂಚೆ ಗುರುದಕ್ಷಿಣೆಯನ್ನು ಕೊಡಬೇಕು.

''ನಾನು ಎಷ್ಟು ಹಣ ಕೊಡಬೇಕು ಗುರುಗಳೇ?''

''ನೀನು ನನಗೆ ಹಣ ಕೊಡುವುದು ಬೇಡ. ಆದರೆ ನನಗೆ ಮನುಷ್ಯರ ಬಲಹಸ್ತದ ಒಂದು ಸಾವಿರ ಹೆಬ್ಬೆರಳುಗಳನ್ನು ತಾ'' ಎಂದರು ಗುರುಗಳು. ಹೀಗೆ ಒಂದು ಸಾವಿರ ಹೆಬ್ಬೆರಳುಗಳನ್ನು ತರುವುದು ಬಹಳ ಕಷ್ಟವಾದರೂ ಕೂಡಾ ಅಹಿಂಸಕನು ಅದನ್ನು ಒಪ್ಪಿಕೊಂಡು ಹೊರಡಲು ಸಿದ್ಧನಾದನು. ಆಗ ಗುರುಗಳು ಕರೆದು ಹೇಳಿದರು. ಒಬ್ಬನೇ ಮನುಷ್ಯನ ಬಲಹಸ್ತದ ಎರಡು ಬೆರಳುಗಳನ್ನು ತರಬಾರದು. ಇದನ್ನು ಜ್ಞಾಪಲ್ಲಿಟ್ಟುಕೋ''. ಉಪಾಧ್ಯಾಯರು ಏನು ಯೋಚಿಸಿದರೆಂದರೆ ಅಂಗುಲಿಮಾಲ ಸಾವಿರ ಬೆರಳುಗಳನ್ನು ತರಲಾರ ಒಂದೇ ಒಂದನ್ನು ತರಬಹುದು. ಆಗ ಅವನನ್ನು ನಾನು ಶಿಕ್ಷಿಸುತ್ತೇನೆ.

ಅಂಗುಲಿಮಾಲನಿಗೆ ಮನುಷ್ಯರ ಬೆರಳುಗಳನ್ನು ಕತ್ತರಿಸಿ ಅಭ್ಯಾಸವಿರಲಿಲ್ಲ- ಏಕೆಂದರೆ ಇದುವರೆಗೂ ಅವನು ಯಾರಿಗೂ ತೊಂದರೆ ಮಾಡಿರಲಿಲ್ಲ. ಆದರೆ ಅವನು ಗುರುಗಳಿಗೆ ಕೊಟ್ಟ ಮಾತನ್ನು ತಪ್ಪಲಾರ. ಹೀಗಾಗಿ ಕೈಯಲ್ಲಿ ಕತ್ತಿಯನ್ನು ಹಿಡಿದು ಹೊರಟು ಕೊನೆಗೆ ಕೋಸಲ ರಾಜ್ಯವನ್ನು ತಲುಪಿದನು.

ಅಂಗುಲಿಮಾಲನು ಮುಖ್ಯರಸ್ತೆಗೆ ಹೊಂದಿಕೊಂಡಿದ್ದ ಒಂದು ಹತ್ತಿರದ ಕಾಡಿನಲ್ಲಿ ವಾಸಮಾಡಿಕೊಂಡು ಆ ಮಾರ್ಗದಲ್ಲಿ ಹೋಗುವವರನ್ನೆಲ್ಲಾ ಕೊಂದು ಅವರ ಬಲಗೈ ಬೆರಳನ್ನು ಕತ್ತರಿಸಿ ಒಂದು ಮರಕ್ಕೆ ನೇತು ಹಾಕುತ್ತಿದ್ದನು. ಕಾಗೆಗಳು, ಹದ್ದುಗಳು ಬಂದು ಆ ಬೆರಳಿನ ಮಾಂಸ- ರಕ್ತಗಳನ್ನೆಲ್ಲಾ ತಿಂದು ಬರಿಯ ಮೂಳೆಯನ್ನು ಬಿಡುತ್ತಿದ್ದುವು. ಅವನು ಹೀಗೆ ಮೂಳೆಗಳ ಹಾರವನ್ನು ಮಾಡಿ ಅದನ್ನು ಧರಿಸುತ್ತಿದ್ದನು. (ಅಂಗುಲಿ - ಬೆರಳು, ಮಾಲ-ಹಾರ).

ಈಗವನು ಕ್ರೂರಿ, ರಕ್ತ ಪಿಪಾಸು, ನಿರ್ದಯನಾಗಿ ಪ್ರತಿನಿತ್ಯ ಕಂಡವರ ಕೈ ಕತ್ತರಿಸುತ್ತಾ ಬೆರಳುಗಳನ್ನು ಮಾಲೆ ಮಾಡಿ ಹಾಕಿಕೊಳ್ಳುತ್ತಿದ್ದನು. ಆಗ ಜನಗಳು ಒಬ್ಬಂಟಿಗರಾಗಿ ಹೋಗದೆ ಮೂರು, ನಾಲ್ಕು, ಎಂಟು, ಹತ್ತು ಮತ್ತು ಇಪ್ಪತ್ತು, ಮೂವತ್ತು ಜನಗಳು ಗುಂಪಾಗಿ ಹೋಗುತ್ತಿದ್ದರು. ಆದರೆ ಅಂಗುಲಿಮಾಲನು ಕೂಗಿ ಹೇಳುತ್ತಿದ್ದನು- ನಾನು ಅಂಗುಲಿಮಾಲ ಇಲ್ಲಿದ್ದೇನೆ. ಓಡಿಹೋಗಬೇಡಿ. ಜನಗಳು ಅವನಿಗೆ ಹೆದರಿ ಓಡಲಾರದೆ ಅಲ್ಲೇ ನಿಂತುಬಿಡುತ್ತಿದ್ದರು. ಆಗ ಅವನು ಅವರನ್ನೆಲ್ಲಾ ಕೊಂದು ಅವರ ಬೆರಳುಗಳನ್ನು ಕತ್ತರಿಸುತ್ತಿದ್ದನು. ಆಗ ಜನಗಳು ಆ ಮಾರ್ಗದಲ್ಲಿ ಹೋಗುವುದನ್ನೇ ಬಿಟ್ಟುಬಿಟ್ಟರು. ಅಂಗುಲಿಮಾಲನು ಇನ್ನೊಂದು ದಿಕ್ಕಿಗೆ ಹೋಗಿ ಅಲ್ಲಿ ಪುನಃ ಜನರನ್ನು ಕೊಲ್ಲತೊಡಗಿದನು. ಕೋಸಲ ದೇಶದ ರಾಜನು ಈ ಡಕಾಯಿತನನ್ನು ಹಿಡಿಯಲು ಒಂದು ದೊಡ್ಡ ಸೈನ್ಯವನ್ನೇ ಕಳಿಸಿದನು. ಅಂಗುಲಿಮಾಲನ ತಾಯಿಯು ರಾಜನ ಈ ಏರ್ಪಾಡನ್ನು ಕಂಡು ಬಹಳ

ಗಾಬರಿಯಾದಳು. ತನ್ನ ಗಂಡನಿಗೆ ಹೇಳಿದಳು. ''ನೋಡಿ, ನಮ್ಮ ಮಗ ಒಬ್ಬ ಡಕಾಯಿತನಾಗಿದ್ದಾನೆ. ಮಹಾರಾಜರೇ ಅವನನ್ನು ಹಿಡಿಸಿ ಕೊಲ್ಲುತ್ತಾರಂತೆ. ನೀವು ಹೇಗಾದರೂ ಮಾಡಿ ತಪ್ಪಿಸಲಾಗುವುದೆ ?''

''ಪ್ರಿಯಳೆ, ಈಗ ಅವನು ಬಹಳ ಭಯಂಕರನಾಗಿದ್ದಾನೆ. ಅವನು ಸಂಪೂರ್ಣವಾಗಿ ಬದಲಾಯಿಸಿದ್ದಾನೆ. ನಾನು ಹೋದರೆ ನನ್ನನ್ನೂ ಕೊಂದುಬಿಡುತ್ತಾನೆ. ಹಾಗೆ ಕೊಲ್ಲಿಸಿಕೊಳ್ಳುವುದು ನನಗಿಷ್ಟವಿಲ್ಲ.'' ಆದರೆ ತಾಯಿಯದು ಬಹಳ ಮೃದು ಹೃದಯ. ಅವಳು ತನ್ನನ್ನು ಪ್ರೀತಿಸಿಕೊಳ್ಳುವುದಕ್ಕಿಂತಲೂ ಮಗನನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದಳು. ಆಗ ಅವಳು ನಾನೇ ಕಾಡಿಗೆ ಹೋಗಿ ನನ್ನ ಮಗನನ್ನು ಉಳಿಸುತ್ತೇನೆ ಎಂದು ಕೆಲವು ಸಾಮಾನುಗಳನ್ನು ತೆಗೆದುಕೊಂಡು ಕಾಡಿನ ಕಡೆ ಹೊರಟಳು.

ಇಲ್ಲಿಗೆ ಅಂಗುಲಿಮಾಲ ೯೯೯ ಜನರನ್ನು ಕೊಂದಿದ್ದನು. ಅವನು ತಿಂಗಳುಗಳ ಗಟ್ಟಲೆ ಕಾಡಿನಲ್ಲೇ ಇದ್ದುದರಿಂದ ಸ್ನಾನ-ನಿದ್ರೆ-ಊಟ, ಒಗೆದ ಬಟ್ಟೆ ಯಾವುದೇ ಸಾಧ್ಯವಿರಲಿಲ್ಲ. ಅವನ ಮೈಯೆಲ್ಲಾ ಅಂಟಂಟು. ಅವನು ತನ್ನ ಈ ಜೀವನವನ್ನು ಕಂಡು ಅಸಹ್ಯಪಡುತ್ತಿದ್ದನು. ಅವನು ಸುಂದರವಾದ ಜೀವನವನ್ನು ನಡೆಸಲು ಆಸೆಪಟ್ಟನು. ಅವನು ಆದಿನ ಹೀಗೆ ಯೋಚಿಸಿದನು-''ತಾನು ಇದುವರೆಗೆ ೯೯೯ ಜನರನ್ನು ಕೊಂದಿದ್ದೇನೆ. ಗುರುದಕ್ಷಿಣೆಗೆ ಇನ್ನೊಂದು ಬೆರಳಾದರೆ ಸಾಕು. ಈ ದಿನ ಸ್ವತಃ ನನ್ನ ಅಮ್ಮನೇ ಬಂದರೂ ಅವಳನ್ನು ಕೊಂದು ಒಂದು ಸಾವಿರ ಬೆರಳುಗಳನ್ನು ಪೂರ್ತಿ ಮಾಡುತ್ತೇನೆ.'' ಒಂದು ದಿನ ಬುದ್ಧನು ಬೆಳಿಗ್ಗೆ ಎದ್ದು ಪ್ರಪಂಚದ ಸುತ್ತಲೂ ತನ್ನ ಒಳಗಣ್ಣನ್ನು ಆಡಿಸಿದಾಗ ಅವನಿಗೆ ಅಂಗುಲಿಮಾಲ ಕಂಡನು. ಅವನು ಈಗ ತಾನು ಒಳ್ಳೆಯ ಯೋಗ್ಯ ಮನುಷ್ಯನಾಗಬೇಕೆಂದು ಯೋಚನೆ ಮಾಡಿದ್ದು ಗೊತ್ತಾಯಿತು. ಇನ್ನು ಉಳಿದ ಒಂದೇ ಬೆರಳಿಗಾಗಿ ತಾಯಿಯನ್ನಾದರೂ ಕೊಲ್ಲುವ ಅವನ ವಿಚಾರವೂ ತಿಳಿಯಿತು. ಆಗ ಬುದ್ಧನು ನಾನು ಈಗ ಹೋಗಿ ಅಂಗುಲಿಮಾಲನನ್ನು ಪರಿವರ್ತಿಸಬೇಕು ಹಾಗೂ ಅವನ ಅಮ್ಮನನ್ನು ರಕ್ಷಿಸಬೇಕು ಎಂದುಕೊಂಡು ಭಿಕ್ಷಾಪಾತ್ರೆಯನ್ನು ಎತ್ತಿಕೊಂಡು ಹೊರಟನು. ಅಷ್ಟು ಹೊತ್ತಿಗೆ ಅಂಗುಲಿಮಾಲನ ಅಮ್ಮ ಹೊರಟೇಬಿಟ್ಟಿದ್ದಳು. ಆದರೆ ಬುದ್ಧನು ಅವಳನ್ನು ಹಿಂದೆ ಹಾಕಿ ತಾನು ಮುಂದೆ ಹೊರಟನು.

ಹಳ್ಳಿಯ ಜನಗಳು ಈ ಸನ್ಯಾಸಿಯನ್ನು ಕಂಡು-''ಸ್ವಾಮಿ, ತಾವು ದಯವಿಟ್ಟು ಆ ಕಡೆ ಹೋಗಬೇಡಿ. ಈ ಕಾಡಿನಲ್ಲಿ ಒಬ್ಬ ಹಂತಕನಿದ್ದಾನೆ. ಅವನ ಹೆಸರು ಅಂಗುಲಿಮಾಲ. ಇದುವರೆಗೂ ಅವನು ಅನೇಕ ಜನರನ್ನು ಕೊಂದಿದ್ದಾನೆ. ಅವನೊಬ್ಬ ಕ್ರೂರಿ, ರಾಕ್ಷಸ, ದಯಾ ವಿಹೀನ. ಅವನು ತಮ್ಮನ್ನೂ ಕೊಲ್ಲುತ್ತಾನೆ. ಅವನಿಗೆ ಯಾರಲ್ಲೂ ಗೌರವವಿಲ್ಲ. ಎಷ್ಟೋ ಜನ ತಮ್ಮ ಮನೆ-ಮಠಗಳನ್ನು ತೊರೆದು ಬೇರೆ ಬೇರೆ ಹಳ್ಳಿಗಳಿಗೆ ಹೊರಟುಹೋಗಿದ್ದಾರೆ. ನಾವೂ ಕೂಡಾ ಇಂದು ಹೊರಟಿದ್ದೇವೆ. ಅವನು ಈ ಹಳ್ಳಿಗೆ ಈ ದಿನ ಕೂಡಾ ಬಂದರೂ ಬಂದನೇ. ತಮಗೆ ಬದುಕಬೇಕೆಂಬ ಆಸೆ ಇದ್ದರೆ ಹೋಗಬೇಡಿ. ತಕ್ಷಣವೇ ಮನೆಗೆ ಹಿಂದಿರುಗಿ ಹೋಗಿ'' ಎಂದರು. ಇಷ್ಟು ಹೊತ್ತಿಗೆ ಅಂಗುಲಿಮಾಲನ

ತಾಯಿ ಹಳ್ಳಿಯನ್ನು ಸೇರಿದ್ದಳು. ಅಂಗುಲಿಮಾಲ ಅವಳನ್ನು ನೋಡಿ ಹೇಳಿಕೊಂಡನು- ಅಯ್ಯೋ ಪಾಪ, ಈ ಹೆಂಗಸು ಒಂಟಿಯಾಗಿ ಬರುತ್ತಿದ್ದಾಳೆ. ಆದರೆ ನಾನೇನು ಮಾಡಲಿ. ನನ್ನ ಮಾತನ್ನು ಉಳಿಸಿಕೊಳ್ಳಲೇ ಬೇಕು. ಆಕೆಯನ್ನು ಕೊಲ್ಲಲೇಬೇಕು. ಹಾಗೆಂದುಕೊಂಡು ಅವನು ತನ್ನ ಕತ್ತಿಯನ್ನೆತ್ತಿಕೊಂಡು ಅವಳ ಕಡೆಗೆ ಧಾವಿಸಿದನು. ಇದ್ದಕ್ಕಿದ್ದ ಹಾಗೆ ಬುದ್ಧನು ತಾಯಿ- ಮಗನ ಮಧ್ಯೆ ಬಂದು ನಿಂತನು.

ಅಂಗುಲಿಮಾಲ ಅಂದುಕೊಂಡನು-''ಈ ಸನ್ಯಾಸಿ ನನ್ನಮ್ಮನ ಮುಂದೆ ನಿಂತದ್ದು ಒಳ್ಳೆಯದೇ ಆಯಿತು. ಈಗ ನಾನೇಕೆ ನಮ್ಮ ತಾಯಿಯನ್ನು ಕೊಲ್ಲಲಿ ? ಈ ಸನ್ಯಾಸಿಯನ್ನೇ ಕೊಲ್ಲುತ್ತೇನೆ. ಅವನ ಬೆರಳನ್ನು ಕತ್ತರಿಸಿಕೊಳ್ಳುತ್ತೇನೆ. ಹೀಗೆ ಅವನು ತನ್ನ ಕತ್ತಿಯನ್ನೆತ್ತಿಕೊಂಡು ಬುದ್ಧನ ಬಳಿಗೆ ಬಂದನು. ಬುದ್ಧನು ನಿಧಾನವಾಗಿ ಅಂಗುಲಿಮಾಲನ ಕಡೆ ಬರುತ್ತಿದ್ದನು.'' '' ಈ ಯುವಕ ನಾನು ಓಡುವುದನ್ನು ನೋಡಲಿ'' ಎಂದುಕೊಂಡು ಬುದ್ಧನು ಬರುತ್ತಿದ್ದರೆ ಅಂಗುಲಿಮಾಲನು ಬುದ್ಧನನ್ನು ಹಿಡಿದುಕೊಳ್ಳಲು ಓಡಿ, ಓಡಿ ಓಡುತ್ತಿದ್ದನು. ಎಷ್ಟು ಓಡಿದರೂ ಅವನಿಗೆ ಬುದ್ಧನನ್ನು ತಲುಪಲಾಗಲೇ ಇಲ್ಲ. ಅವನು ಮೇಲುಸಿರು ಬಿಡಲಾರಂಭಿಸಿದನು. ಅವನ ಮೈಯೆಲ್ಲಾ ಒದ್ದೆ ಮುದ್ದೆಯಾಯಿತು ಬೆವರಿನಿಂದ. ಅವನ ಕಾಲಿನ ಕೀಲುಗಳೆಲ್ಲಾ ಒಂದೇ ಸಮನೆ ನೋಯತೊಡಗಿತು. ಇನ್ನು ಮುಂದೆ ನಡೆಯಲಾಗಲಿಲ್ಲ. ಈ ಮೊದಲು ನಾನೇ ವೇಗವಾಗಿ ಓಡುವ ಆನೆ, ಕುದುರೆಗಳು, ರಥಗಳು ಮತ್ತು ಜಿಂಕೆಗಳನ್ನು ಅವುಗಳಿಗಿಂತಲೂ ವೇಗವಾಗಿ ಹಿಡಿಯುತ್ತಿದ್ದೆ. ಆದರೆ ಇದೇನಾಶ್ಚರ್ಯ ! -''ನಾನು ಈ ಸನ್ಯಾಸಿಯ ಬಳಿ ಹೋಗಲಿಕ್ಕೆ ಆಗುತ್ತಿಲ್ಲ. ಹೀಗೆಂದುಕೊಂಡು ಅವನು ಜೋರಾಗಿ ಕೂಗಿ ಬುದ್ಧನನ್ನು ''ನಿಲ್ಲು, ನಿಲ್ಲು'' ಎಂದನು.

''ನಾನೂ ಸ್ಥಿರವಾಗಿ ನಿಂತಿದ್ದೇನೆ. ನೀನು ನಿಂತುಕೊಳ್ಳಬಲ್ಲೆಯಾ?'' ಬುದ್ಧನು ಕೇಳಿದನು.

ಬುದ್ಧನು ಹೇಳಿದುದು ಅಂಗುಲಿಮಾಲನಿಗೆ ಅರ್ಥವಾಗಲಿಲ್ಲ. ಅವನು ಯೋಚಿಸಿದ -''ಈ ಬೌದ್ಧ ಸನ್ಯಾಸಿಗಳು ಸುಳ್ಳು ಹೇಳುವುದಿಲ್ಲ. ಈ ಸನ್ಯಾಸಿಯು ನನಗಿಂತಲೂ ಜೋರಾಗಿ ಓಡುತ್ತಿದ್ದರೂ ತಾನೂ ನಿಂತಿದ್ದೇನೆ ಎನ್ನುತ್ತಾನೆ. ನಾನು ಯಾಕೋ ಬಹಳ ಬಲಹೀನನಾಗಿದ್ದೇನೆ. ಇವನು ಹೇಳುವುದರಲ್ಲಿ ಏನೋ ಅರ್ಥವಿರಬೇಕು ಇರಲಿ, ಇವನನ್ನೇ ಕೇಳುತ್ತೇನೆ'' ಎಂದುಕೊಂಡು ''ಅಯ್ಯಾ ನೀನು ನನಗಿಂತಲೂ ವೇಗವಾಗಿ ಓಡುತ್ತಿರುವೆ. ಆದರೂ ನಾನು ನಿಂತಿದ್ದೇನೆ ಎನ್ನುತ್ತೀಯೆ. ಏನಿದರ ಅರ್ಥ ?''

''ಅಂಗುಲಿಮಾಲ, ನಾನು ಯಾವಾಗಲೂ ಸ್ಥಿರವಾಗಿ ನಿಂತಿರುತ್ತೇನೆ.

ಏಕೆಂದರೆ ನನಗೆ ಎಲ್ಲಾ ಜೀವಿಗಳ ಮೇಲೆ ದಯವಿದೆ

ನೀನು ಜೀವಿಗಳಿಗೆ ಕರುಣೆ ತೋರಿಸಲಾರೆ

ಆದ್ದರಿಂದ ನಾನು ಸ್ಥಿರವಾಗಿ ನಿಲ್ಲುತ್ತೇನೆ. ನೀನು ನಿಲ್ಲಲಾರೆ''.

ಅಂಗುಲಿಮಾಲನಿಗೆ ಬುದ್ಧನ ಮಾತುಗಳಿಂದ ಬಹಳ ಸಂತೋಷವಾಯಿತು. ಅವನು ತನ್ನ ಕತ್ತಿಯನ್ನೆಸೆದು ಬುದ್ಧನ ಮುಂದೆ ಮೊಣಕಾಲೂರಿ ಕುಳಿತನು. ಬುದ್ಧ ಅವನಿಗೆ ಸನ್ಯಾಸ ದೀಕ್ಷೆಯನ್ನಿತ್ತನು. ಅಂಗುಲಿಮಾಲನ ತಾಯಿಗೆ ಒಂದೇ ನಿಮಿಷದಲ್ಲಿ ಬುದ್ಧನು ತನ್ನ ಮಗನನ್ನು ಒಳ್ಳೆಯವನನ್ನಾಗಿ ಮಾಡಿದ್ದಕ್ಕೆ ಬಹಳ ಆಶ್ಚರ್ಯವಾಯಿತು.

ಮಹಾರಾಜನು ಅಂಗುಲಿಮಾಲನನ್ನು ಹಿಡಿಯುವುದಕ್ಕೆ ಮೊದಲು ಬುದ್ಧನ ಆಶೀರ್ವಾದವನ್ನು ಪಡೆಯಲು ಐದು ನೂರು ಕುದುರೆಗಳು ಮತ್ತು ಐದು ನೂರು ಸಿಪಾಯಿಗಳೊಡನೆ ಮಂದಿರಕ್ಕೆ ಬಂದನು. ಬುದ್ಧನು ಆತನನ್ನು ಕೇಳಿದನು- ತಮಗೇನು ತೊಂದರೆಯಿದೆ - ಬಿಂಬಿಸಾರನು ನಿನ್ನೊಡನೆ ಯುದ್ಧಕ್ಕೆ ಬರುತ್ತಿರುವನೇ ? ಅಥವಾ ಲಿಚ್ಛವಿಯ ಯುವರಾಜನು ಬಂದನೇ ಅಥವಾ ಇನ್ಯಾವುದಾದರೂ ತೊಂದರೆ ಇದೆಯೆ ?''

''ಇಲ್ಲ ಮಹಾಸ್ವಾಮಿ, ಅಂಗುಲಿಮಾಲನೆಂಬ ಒಬ್ಬ ಭಯಂಕರ ಡಕಾಯಿತನು ನನ್ನ ರಾಜ್ಯದಲ್ಲಿ ಬಹಳ ತೊಂದರೆ ಕೊಡುತ್ತಿದ್ದಾನೆ. ಅವನನ್ನು ಹಿಡಿಯಲು ಹೋಗುತ್ತಿದ್ದೇನೆ.''

''ಮಹಾರಾಜಾ, ಆ ಅಂಗುಲಿಮಾಲನು ತಲೆಬೋಳಿಸಿಕೊಂಡು ಹಳದಿಯ ಬಟ್ಟೆಗಳನ್ನು ಧರಿಸಿ, ದರೋಡೆ ಮಾಡುವುದನ್ನು ತ್ಯಜಿಸಿ, ಜನಗಳನ್ನು ಕೊಲ್ಲುವುದನ್ನು ಬಿಟ್ಟು ನಿನ್ನೆದುರಿಗೆ ಬಂದರೆ ನೀನೇನು ಮಾಡುತ್ತೀ ?''

''ನಾನು ಅವನನ್ನು ಪೂಜಿಸುತ್ತೇನೆ ಸ್ವಾಮಿ.''

ಆಗ ಬುದ್ಧನು ಅಂಗುಲಿಮಾಲನನ್ನು ಕರೆದನು. ಅವನು ತನ್ನ ಕೊಠಡಿಯಿಂದ ಬರುತ್ತಲೇ ರಾಜನನ್ನುಳಿದು ಮಿಕ್ಕ ಎಲ್ಲಾ ಸಿಪಾಯಿಗಳೂ ಓಡತೊಡಿದರು. ಬುದ್ಧನು ಅವರೆಲ್ಲರನ್ನೂ ತಡೆದು ನಿಲ್ಲಿಸಿ ಎಲ್ಲರಿಗೂ ಧರ್ಮಬೋಧೆ ಮಾಡಿದನು.

## ೩೦. ಬುದ್ಧನ ಸೌಂದರ್ಯಕ್ಕೆ ಮಾರುಹೋದ ಸನ್ಯಾಸಿ ವಕ್ಕಲಿ

ಸಾವತ್ತಿ ನಗರದಲ್ಲಿ ಒಬ್ಬ ಯುವಕನಿದ್ದನು. ಅವನಿಗೆ ಬುದ್ಧನ ಸೌಂದರ್ಯವನ್ನು ಕಂಡು ಬಲು ಮೆಚ್ಚಿಕೆ. ಬುದ್ಧನನ್ನು ಎಲ್ಲಿ ಕಂಡರೂ ಅವನ ರೂಪ, ಅವನ ಬಣ್ಣ, ಅವನ ನಿಲುವು ಇತ್ಯಾದಿಗಳಿಗೆ ಅವನು ಮಾರುಹೋಗುತ್ತಿದ್ದನು. ಒಂದು ದಿನ ಅವನು ಹೀಗೆ ಯೋಚಿಸಿದನು- ನಾನು ನನ್ನ ಮನೆಯಲ್ಲೇ ಇದ್ದರೆ ಬುದ್ಧನನ್ನು ಯಾವಾಗಲೂ ನೋಡಲಾಗುವುದಿಲ್ಲ. ಆದ್ದರಿಂದ ಮಂದಿರಕ್ಕೆ ಹೋಗಿ ಬುದ್ಧನಿಂದ ಸನ್ಯಾಸ ದೀಕ್ಷೆ ಪಡೆಯುತ್ತೇನೆ. ಆಗ ನಾನು ಅವನ ಜೊತೆಯಲ್ಲೇ ಇದ್ದು ಅವನನ್ನು ನೋಡುತ್ತಿರಬಹುದು.

ಹೀಗೆ ಅವನು ಬುದ್ಧನ ಬಳಿ ಹೋಗಿ ತನಗೆ ದೀಕ್ಷೆ ಕೊಡಬೇಕೆಂದು ಬೇಡಿದನು. ಬುದ್ಧನು ಹಾಗೆಯೇ ಮಾಡಿದನು.

ಈಗ ಅವನಿಗೆ ಯಾವಾಗಲೂ ಬುದ್ಧನ ಸೌಂದರ್ಯವನ್ನು ನೋಡಿ ಮೆಚ್ಚುವ ಅವಕಾಶವೊದಗಿತು. ಹಗಲು-ರಾತ್ರಿ, ಬೆಳಗು-ಸಂಜೆ, ಬೆಳಿಗ್ಗೆ ಉಪಾಹಾರ ಮಾಡುವಾಗ, ಮಧ್ಯಾಹ್ನ ಊಟ ಮಾಡುವಾಗ, ಎಲ್ಲ ಕಡೆ ಎಲ್ಲ ಸಮಯದಲ್ಲಿ, ಬುದ್ಧನು ಎಲ್ಲಿ ಹೋದರೆ ಅಲ್ಲಿ ಅವನ ಜೊತೆಗೆ ಅವನ ನೆರಳಿನಂತೆ ಹೋಗಿ ಅವನನ್ನು ಮೆಚ್ಚಿಕೊಳ್ಳುತ್ತಿದ್ದನು. ಬುದ್ಧನು ಅವನ ಜ್ಞಾನವು ಪಕ್ವವಾಗುವುದನ್ನೇ ಕಾಯುತ್ತಿದ್ದನು. ಹೀಗಾಗಿ ಅವನನ್ನು ಏನೂ ಅನ್ನುತ್ತಿರಲಿಲ್ಲ. ಕೆಲವು ವರ್ಷಗಳ ನಂತರ ಅವನ ಜ್ಞಾನವು ಬೆಳೆಯಿತು. ಪಕ್ವವಾಯಿತು. ಆಗ ಬುದ್ಧನು ಹೇಳಿದನು-''ವಕ್ಕಲಿ, ನನ್ನ ಈ ಶರೀರದ ಸೌಂದರ್ಯ ಎಂದಿಗೂ ಹೀಗೇ ಇರುವುದಿಲ್ಲ. ಇದನ್ನು ನೋಡಿ, ನೋಡಿ ಮೆಚ್ಚಿದರೆ ನಿನಗೇನೂ ಲಾಭವಾಗುವುದು ? ಯಾರೇ ಆಗಲಿ ನನ್ನ ಉಪದೇಶವನ್ನು ಮೆಚ್ಚಿದರೆ ಅವರು ನನ್ನನ್ನು ಮೆಚ್ಚಿದಂತಾಗುತ್ತದೆ''.

ವಕ್ಕಲಿಯು ಬುದ್ಧನು ಹಾಗೆ ಹೇಳಿದರೂ ಹೋಗಲಿಲ್ಲ. ಓದುವುದು ಕಲಿಯುವುದು, ಚಿಂತನೆ ಮಾಡುವುದು, ಧರ್ಮಬೋಧೆ ಮಾಡುವುದು ಎಲ್ಲವನ್ನೂ ಬಿಟ್ಟು ಯಾವಾಗಲೂ ಬುದ್ಧನನ್ನು ಮೆಚ್ಚುಗೆಯಿಂದ ನೋಡುವುದನ್ನೇ ಮುಂದುವರೆಸಿದನು. ಬುದ್ಧನು ಯೋಚಿಸಿದನು-''ಈ ಸನ್ಯಾಸಿಗೆ ಒಂದು ಧಕ್ಕೆ ತಗಲುವವರೆಗೂ ಇವನು ತಿಳಿದುಕೊಳ್ಳುವುದಿಲ್ಲ'' ಒಂದು ಸಲ ಬುದ್ಧನಿಗೆ ಮೂರು ತಿಂಗಳು ರಾಜಗೃಹದಲ್ಲಿ ವಾಸಿಸಬೇಕೆಂಬ ಆಮಂತ್ರಣ ಬಂದಿತು. ಬುದ್ಧನು ರಾಜಗೃಹಕ್ಕೆ ಹೋಗುವ ದಿನ ವಕ್ಕಲಿಯೂ ಹೋಗಲು ಸಿದ್ಧನಾದನು. ಆಗ ಬುದ್ಧನು ''ನನ್ನ ಹಿಂದೆ ಬರಬೇಡ. ಹಿಂದಿರುಗಿ ಹೋಗು. ನಾನೊಬ್ಬನೇ ಹೋಗಬೇಕು'' ಎಂದನು.

ವಕ್ಕಲಿಗೆ ನಿರಾಶೆಯಾಗಿ ಆತನು ತನ್ನ ಕೊಠಡಿಗೆ ಹೋಗಿ ಯೋಚಿಸತೊಡಗಿದನು''ಅಬ್ಬಾ, ಮೂರು ತಿಂಗಳು! ಇಷ್ಟು ದಿನಗಳನ್ನು ಹೇಗೆ ಕಳೆಯಲಿ ? ಅವನನ್ನು ಮೂರು ತಿಂಗಳು ನೋಡಲಾರೆ, ಮಾತನಾಡಲಾರೆ, ಎಂತಹ ಕಷ್ಟದಿಂದ ದಿನಗಳನ್ನು ಕಳೆಯಬೇಕು. ಇನ್ನು ನಾನು ಬದುಕಿರಬೇಕಾದರೂ ಏಕೆ ? ನಾನು ಬೆಟ್ಟದ ಮೇಲಿನಿಂದ ಕೆಳಗೆ ಬಿದ್ದು ಪ್ರಾಣವನ್ನು ಕಳೆದುಕೊಳ್ಳುತ್ತೇನೆ,'' ಹೀಗೆಂದುಕೊಂಡು ಅವನು ''ಹದ್ದಿನ ಶಿಖರ'' (ಗಿಜ್ಝಕೂಟ) ಎಂಬ ಬೆಟ್ಟವನ್ನು ಏರಿದನು.

ರಾಜಗೃಹದಲ್ಲಿದ್ದ ಬುದ್ಧನ ಒಳಗಣ್ಣುಗಳಿಗೆ ವಕ್ಕಲಿಯು ''ಹದ್ದಿನ ಶಿಖರದ ಮೇಲಿಂದ ಬಿದ್ದು ಸಾಯುವುದು ಕಂಡಿತು. ಆಗ ಆತನು-ಈ ಸನ್ಯಾಸಿಯನ್ನು ನಾನು ಸಮಾಧಾನಪಡಿಸದಿದ್ದರೆ ಖಂಡಿತಾ ಇವನು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ಎಂದುಕೊಂಡು ತಕ್ಷಣ ತನ್ನ ಚಿನ್ಮಯ ರೂಪವನ್ನು ಆ ಸನ್ಯಾಸಿಯ ಎದುರಿಗೆ ತೋರಿದನು. ಆಗ ವಕ್ಕಲಿಯ ದುಃಖ ಮಾಯವಾಯಿತು. ಬುದ್ಧನು ಅವನ ಮನಸ್ಸಿನಲ್ಲಿ ಸುಖ, ಸಂತೋಷ ಮತ್ತು ಶಾಂತಿಗಳನ್ನು ತುಂಬಿ ಹೇಳಿದನು-''ಯಾವ ಸನ್ಯಾಸಿಗೆ ಬುದ್ಧನ ಧರ್ಮದಲ್ಲಿ ಪೂರ್ಣ ನಂಬಿಕೆಯಿದೆಯೋ ಅವನು ಯಾವಾಗಲೂ ಸಂತೋಷ ಸಮಾಧಾನಗಳಿಂದಿರುತ್ತಾನೆ.''

ವಕ್ಕಲಿಯು ಯೋಚಿಸಿದನು-ನಾನು ಗುರುವನ್ನು ಕಂಡೆ-ಆತನು ನನ್ನನ್ನು ಕರೆಯುತ್ತಿದ್ದಾನೆ. ಆದರೆ ಹೇಗೆ ಹೋಗಲಿ ? ಆಗ ಅವನಿಗೆ ಕೇಳಿ ಬಂದಿತು-''ಬಾ, ವಕ್ಕಲಿ. ಭಯಪಡಬೇಡ. ನೀನು ನನ್ನನ್ನು ನೋಡುತ್ತಿರುವಾಗ, ಕೆಸರಿನಲ್ಲಿ ಬಿದ್ದ ಆನೆಯನ್ನು ಒಬ್ಬ ಮನುಷ್ಯನು ಎತ್ತುವಂತೆ ನಿನ್ನನ್ನು ನಾನು ಎತ್ತುತ್ತೇನೆ. ಯಾರೋ ಒಬ್ಬನು ಮೋಡದಲ್ಲಿ ಸಿಲುಕಿದ ಸೂರ್ಯನನ್ನು ಬಿಡಿಸುವಂತೆ ದುಃಖ-ದುಮ್ಮಾನಗಳಿಂದ ನಿನ್ನನ್ನು ರಕ್ಷಿಸುತ್ತೇನೆ''. ಒಂದು ಕ್ಷಣದಲ್ಲಿ ವಕ್ಕಲಿಯು ಬುದ್ಧನ ಎದುರಿಗೆ ರಾಜಗೃಹದಲ್ಲಿದ್ದನು. ಮತ್ತು ಬುದ್ಧನ ಉಪದೇಶದಿಂದ ಸಂಪೂರ್ಣ ಜ್ಞಾನವನ್ನು ಪಡೆದನು.

## ೩೧. ಜಲಗಾರ ಸುನೀತ

ಸಾವತ್ತಿ ನಗರದಲ್ಲಿ ಸುನೀತನೆಂಬೊಬ್ಬ ಜಲಗಾರ-ಬೀದಿ ಗುಡಿಸುವವನಿದ್ದನು. ಅವನಿಗೆ ಬಹಳ ಕಡಿಮೆ ಹಣ ಸಿಗುತ್ತಿದ್ದುದರಿಂದ ಹಾಕಿಕೊಳ್ಳಲು ಒಳ್ಳೆಯ ಬಟ್ಟೆಗಳಾಗಲೀ, ತಿನ್ನಲು ಒಳ್ಳೆಯ ಭೋಜನವಾಗಲೀ ಅಥವಾ ಇರಲು ಮನೆಯಾಗಲೀ ಇರಲಿಲ್ಲ. ಅವನು ಬೀದಿಯಲ್ಲಿಯೇ ಮಲಗುತ್ತಿದ್ದ. ಇತರರು ಜೀವನದಲ್ಲಿ ಸಂತೋಷಪಡುತ್ತಿದ್ದರೆ ಪಾಪ ಈ ಬಡಪಾಯಿ ಅವರೊಡನೆ ಬೆರೆಯುತ್ತಿರಲಿಲ್ಲ. ಯಾರಾದರೂ ದೊಡ್ಡ ಮನುಷ್ಯರು ಬಂದರೆ ಇವನು ಅವರಿಂದ ಬಹಳ ದೂರ ಸರಿದು ನಿಲ್ಲಬೇಕಾಗುತ್ತಿತ್ತು. ಅವನ ನೆರಳೂ ಸಹಾ ಅವರ ಮೇಲೆ ಬೀಳಬಾರದಾಗಿತ್ತು. ಜನರು ಅವನನ್ನು ಕೀಳು ಜಾತಿಯವನೆಂದು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಅವನು ಬಹಳ ಬಡವನಾಗಿದ್ದುದರಿಂದ ಧಾರ್ಮಿಕ ವಿಚಾರಗಳನ್ನು ಅರಿತು ಅದರಂತೆ ನಡೆಯಲು ಅವನಿಗೆ ಅವಕಾಶವೇ ಸಿಗುತ್ತಿರಲಿಲ್ಲ.

ಒಂದು ದಿನ ಅವನು ತುಂಬಾ ಕೊಳಕು ಮತ್ತು ಧೂಳುಗಳಿಂದ ತುಂಬಿದ ಕೆಟ್ಟ ವಾಸನೆ ಬರುತ್ತಿರುವ ಒಂದು ಬೀದಿಯನ್ನು ಗುಡಿಸುತ್ತಿದ್ದನು. ಅವನು ಬೀದಿಯ ಕಸವನ್ನು ಗುಡಿಸಿ ಒಟ್ಟುಮಾಡಿ ಅವುಗಳನ್ನು ಬುಟ್ಟಿಗಳಲ್ಲಿ ತುಂಬಿಸಿ, ತಲೆಯ ಮೇಲೆ ಹೊತ್ತುಕೊಂಡು ಬಹಳ ದೂರ ಹೋಗಿ ಬಿಸಾಕಿ ಬರುತ್ತಿದ್ದನು. ಅವನ ಮೈಮೇಲೆ ಒಂದೇ ಚೂರು ಬಟ್ಟೆಯಿದ್ದುದರಿಂದ ಅವನ ಮೈ ತುಂಬಾ ಧೂಳು ಮತ್ತು ಬೆವರು ತುಂಬಿತ್ತು. ಆಗ ಅವನು ಬುದ್ಧನು ತನ್ನ ಸಾವಿರಾರು ಶಿಷ್ಯರೊಂದಿಗೆ ನಡೆದುಬರುತ್ತಿರುವುದನ್ನು ನೋಡಿದನು. ತಕ್ಷಣ ಎಲ್ಲಿಗೆ ಹೋಗಿ ಮರೆಯಾಗಬೇಕೆಂದು ತೋಚದೆ ತನ್ನ ಸಲಿಕೆಯನ್ನು ಅಲ್ಲೇ ಒಂದು ಮೋಟುಗೋಡೆಯ ಮೇಲಿಟ್ಟು ತನ್ನ ಶರೀರವನ್ನು ಆದಷ್ಟೂ ಸಂಕುಚಿತಗೊಳಿಸಿಕೊಂಡು ತನ್ನ ಕೈಗಳನ್ನು ಜೋಡಿಸಿ ಗೋಡೆಗೆ ಆತುಕೊಂಡು ನಿಂತನು. ಬುದ್ಧನು ಅವನ ಬಳಿ ಬಂದು ನಿಂತು ಬಹಳ ಮೃದುವಾದ ದೈವೀವಾಣಿಯಿಂದ ಕೇಳಿದನು-ಸ್ನೇಹಿತನೇ, ನೀನು ಈ ಕೆಲಸವನ್ನು ಬಿಟ್ಟು ನನ್ನ ಹಾಗೆ ಸನ್ಯಾಸಿಯಾಗಬಯಸುವೆಯಾ ?

ಇದುವರೆಗೆ ಇಷ್ಟು ಮೃದುವಾಗಿ ಯಾರೂ ಮಾತನಾಡಿರಲಿಲ್ಲ. ಅದನ್ನು ಕೇಳಿ ಅವನ ಹೃದಯ ತುಂಬಿ ಬಂದು ಕಣ್ಣುಗಳಲ್ಲಿ ಸಂತೋಷದ ಅಶ್ರು ಸುರಿಯತೊಡಗಿತು. ಅವನಿಗೆ ಇದುವರೆಗೆ ಬೇರೆಯವರ ಆಜ್ಞೆ ಕೇಳಿ ಗೊತ್ತೇ ಹೊರತೂ ಈ ರೀತಿಯಾಗಿ ಯಾರೂ ಅವನನ್ನು ಮಾತಾಡಿಸಿರಲಿಲ್ಲ.

ಆಗ ಅವನು ಹೇಳಿದನು-''ಮಹಾತ್ಮರೇ, ನಾನು ಯಾವಾಗಲೂ ಬೇರೆಯವರ ಆಜ್ಞೆಯನ್ನು ಕೇಳಿದ್ದೇನೆಯೇ ವಿನಃ ಹೀಗೆ ಇಷ್ಟು ದಯಾಳುಗಳಾದವರನ್ನು ನೋಡಿಯೇ ಇಲ್ಲ. ತಾವು ಈ ಕೊಳಕನಾದ, ದುಃಖಿಯಾದ ಜಲಗಾರನನ್ನು ಸನ್ಯಾಸಿಯಾಗಿ, ನಿಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳುತ್ತೇನೆಂದರೆ ಬೇಡವೆನ್ನಲಾದೀತೆ? ಅದಕ್ಕಾಗಿ ಈ ಕೊಳಕು ಕೆಲಸವನ್ನು ಬಿಡಲಾರೆನೆ''

ಬುದ್ಧನು ಅದೇ ಸ್ಥಳದಲ್ಲಿ ನಿಂತು ಜಲಗಾರನಿಗೆ ಸನ್ಯಾಸ ದೀಕ್ಷೆ ಕೊಟ್ಟು ತನ್ನೊಂದಿಗೆ ಕರೆದೊಯ್ದನು. ನಂತರ ಯಾರಿಗೂ ಅವನ ಜಾತಿ ಯಾವುದೆಂಬುದೇ ತಿಳಿಯಲಿಲ್ಲ. ಪ್ರತಿಯೊಬ್ಬರೂ ಅಂದರೆ ರಾಜರು, ಮಂತ್ರಿಗಳು, ಮುಖ್ಯ ಸೇನಾಧಿಪತಿಗಳು ಮುಂತಾದವರು ಅವನನ್ನು ಮರ್ಯಾದೆಯಿಂದ ಕಾಣತೊಡಗಿದರು.

## ೩೨. ಬುದ್ಧ ಮತ್ತು ರೋಗಿಷ್ಠ ಸನ್ಯಾಸಿ

ಒಮ್ಮೆ ಬುದ್ಧನು ಒಂದು ವಿಹಾರಕ್ಕೆ ಭೇಟಿ ಕೊಟ್ಟಾಗ ಅಲ್ಲಿನ ಒಂದು ಕೊಠಡಿಯಲ್ಲಿ ಒಬ್ಬ ಭಿಕ್ಷುವು ದೀರ್ಘ ಕಾಯಿಲೆಯಿಂದ ನರಳುತ್ತಾ ಬಿದ್ದಿರುವುದನ್ನು ಕಂಡನು. ವಿಹಾರದಲ್ಲಿ ಅನೇಕ ಸನ್ಯಾಸಿಗಳಿದ್ದರೂ ಯಾರೂ ಆ ಕಾಯಿಲೆಯವನ ಕಡೆಗೆ ಗಮನ ಕೊಡುತ್ತಿರಲಿಲ್ಲ. ಬುದ್ಧನಿಗೆ ಇದನ್ನು ನೋಡಿ ಕೆಡುಕೆನಿಸಿತು. ಆತನು ತಕ್ಷಣ ಆ ಸನ್ಯಾಸಿಗೆ ಉಪಚರಿಸತೊಡಗಿದನು. ಅವನು ತನ್ನ ಶಿಷ್ಯನಾದ ಆನಂದನನ್ನು ಕರೆದನು. ಇಬ್ಬರೂ ಸೇರಿ ಅವನಿಗೆ ಸ್ನಾನ ಮಾಡಿಸಿ ಅವನ ನೋವನ್ನು ಕಡಿಮೆ ಮಾಡಿದರು. ಕೊಳಕಾಗಿದ್ದ ಹಾಸಿಗೆಯಿಂದ ಅವನನ್ನು ಎತ್ತಿ ಒಂದು ಶುಭ್ರವಾದ ಮತ್ತು ಮೆತ್ತಗಿನ ಗಾದಿಯ ಮೇಲೆ ಅವನನ್ನು ಮಲಗಿಸಿದರು.

ಆಗ ಬುದ್ಧನು ಅಲ್ಲಿದ್ದ ಭಿಕ್ಷುಗಳನ್ನೆಲ್ಲಾ ಕರೆದು ಅವರುಗಳು ತಮ್ಮ ಸೋದರ ಭಿಕ್ಷುವನ್ನು ಈ ರೀತಿ ನಿರ್ಲಕ್ಷ್ಯ ಮಾಡಿದ್ದಕ್ಕೆ ಅಸಮಾಧಾನಪಟ್ಟನು. ನಂತರ ಇಲ್ಲಿಂದಾಚೆಗೆ ಅವರು ಹೀಗೆ ಮಾಡಬಾರದೆಂತಲೂ ಕಾಯಲೆಯಿರುವವರನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂಲೂ ಅಪ್ಪಣೆ ಮಾಡಿದನು. ನಂತರ ''ಯಾರೂ ರೋಗಿಷ್ಠರನ್ನೂ, ದುಃಖಿಗಳನ್ನೂ ಸಂತೈಸುವರೋ ಅವರು ನನ್ನ ಸೇವೆಯನ್ನು ಮಾಡಿದವರಾಗುತ್ತಾರೆ'' ಎಂದು ಉಪದೇಶಿಸಿದನು.

# ಹಿರಿಯ ಮಕ್ಕಳಿಗಾಗಿ

# ೩೩. ಬುದ್ಧನ ಜಯಗೀತೆ

ವೈಶಾಖ ಪೂರ್ಣಿಮೆಯ ದಿನ ಮಾರನ ಬಹು ಕೆಟ್ಟ ಆಕ್ರಮಣಗಳನ್ನೆಲ್ಲಾ ಬುದ್ಧನು ಯಶಸ್ವಿಯಾಗಿ ಎದುರಿಸಿದನು. ಆ ದುಷ್ಟನು ತನ್ನ ದುಷ್ಟ ಆಕ್ರಮಣಗಳಿಂದ ಬುದ್ಧನ ಮೇಲೆ ಏನೂ ಪರಿಣಾಮವಾಗದಿರುವುದನ್ನು ಕಂಡು ಪೆಚ್ಚು ಮುಖದಿಂದ ಹಿಂದಿರುಗಬೇಕಾಯಿತು. ಅವನ ಕೋಪದ ಬಿರುಗಾಳಿ ತಾನಾಗಿಯೇ ಆರಿಹೋಯಿತು. ಬುದ್ಧನ ಮನಸ್ಸಿಗೆ ಹಾಯಾದ ಶಾಂತಿ ದೊರಕಿತು. ಬಂದಿದ್ದ ಗಾಡಾಂಧಕಾರ ತೊಲಗಿ ಮನಸ್ಸಿನ ಮೇಲೆ ಪೂರ್ಣ ಚಂದ್ರನು ನಕ್ಷತ್ರಗಳೊಡನೆ ಉದಯಿಸಿದನು.

ಪ್ರಭುವು ಆಳವಾದ ಚಿಂತನೆಯಲ್ಲಿ ಮುಳುಗಿ ಹೋದನು. ಮಾನವರಿಗೆ ಮೀರಿದ ಒಂದು ಸತ್ಯವನ್ನು ಕಂಡನು. ಪ್ರಪಂಚವು ಈಗ ಕಾಣಿಸುತ್ತಿರುವಂತೆ ಅಲ್ಲ. ಅದು ನೈಜ ಸ್ಥಿತಿಯಲ್ಲಿ ಹೇಗಿರುತ್ತದೆಂಬುದನ್ನು ನೋಡಿದನು. ಗರುಡಪಕ್ಷಿಯು ಸುನಾಶವಾಗಿ ಸೂರ್ಯನ ಕಡೆ ಹಾರುವಂತೆ ಆತನ ಮನಸ್ಸು ಮೇಲೆ ಮೇಲೆ ಏರತೊಡಗಿತು.

ಆತನು ತನ್ನ ಹಿಂದಿನ ಜೀವನವನ್ನು, ಅನೇಕ ಹಿಂದಿನ ಜನ್ಮಗಳನ್ನೂ ಕಂಡನು. ತಾನು ಮಾಡಿದ್ದ ಒಳ್ಳೆಯ ಹಾಗೂ ಕೆಟ್ಟ ಕಾರ್ಯಗಳು, ಲಾಭ-ನಷ್ಟಗಳು ಎಲ್ಲವೂ ಗೋಚರವಾದುವು. ಅವನ ಮನಸ್ಸು ವೇಗದಿಂದ ಮೇಲ್ಮುಖವಾಗಿ ಹೋಗತೊಡಗಿತು. ಎಲ್ಲ ಮನುಷ್ಯರ ಜನನ, ಮರಣ ಚಕ್ರಗಳು ಕಂಡುಬಂದುವು. ಅಷ್ಟೇ ಅಲ್ಲ. ಜೀವಿಗಳ ಪುನಃ ಪುನಃದ ಜನನ ಮತ್ತು ಅವುಗಳ ಆಯಾ ಕರ್ಮಗಳಿಗನುಸಾರವಾಗಿ ಮರಣಗಳೂ ದೃಗ್ಗೋಚರವಾದುವು.

ಸತ್ಕರ್ಮಗಳನ್ನು ಮಾಡಿದವರಿಗೆ ಸ್ವರ್ಗದಲ್ಲಿ ಜನ್ಮ ಸಿಗುತ್ತಿತ್ತು. ಅವರ ಸುಖಸಂಪತ್ತುಗಳು ಭೂಮಿಯ ಮೇಲೆ ಜನಿಸಿದವರಿಗಿಂತ ಬಹಳ ಕಾಲವಿರುತ್ತಿತ್ತು. ಆದರೂ ಅವು ಶಾಶ್ವತವಲ್ಲ. ನರಕದಲ್ಲಿ ನರಳುವ ಜೀವಿಗಳು ಮತ್ತೆ ಹುಟ್ಟಿ ಸಾಯುತ್ತಿದ್ದರು. ಎಲ್ಲ ಜೀವಿಗಳು ಪ್ರಪಂಚದಲ್ಲಿ ಅಜ್ಞಾನ ಮತ್ತು ದುಃಖದಿಂದ ನರಳುತ್ತಿದ್ದವು.

ಅವನ ದೃಷ್ಟಿ ಸ್ಫಟಿಕಕ್ಕಿಂತಲೂ ನಿರ್ಮಲವಾಗಿತ್ತು. ಮನುಷ್ಯನು ತನ್ನದೆಂದು ಹೇಳಿಕೊಳ್ಳುವ ಆತ್ಮವು ಅವನ ಎದುರಿಗೇ ಚೂರು ಚೂರಾಗಿ ಉಡುಪಿನ ಹಿಂಜಿದ ದಾರದ ಎಳೆಗಳಂತೆ ಚದುರಿ ಬೀಳುತ್ತಿದ್ದುವು. ಅವನು ಹುಟ್ಟು ಸಾವುಗಳ ಸರಪಳಿಯ ಕಾರಣ - ಅಜ್ಞಾನವೆಂಬುದನ್ನರಿತನು. ಅಜ್ಞಾನಿಯಾದವನು ಬೆಲೆಯಿಲ್ಲದ, ಅಪ್ರಯೋಜಕವಾದ ವಸ್ತುಗಳಿಗೆ ಅಂಟಿಕೊಂಡು ತನ್ನಲ್ಲಿ ಹೆಚ್ಚು ಹೆಚ್ಚು ಭಯಂಕರವಾದ ಭ್ರಮೆಗಳನ್ನು ಹುಟ್ಟಿಸಿಕೊಂಡು ನರಳುತ್ತಾನೆ. ಆದರೆ ಆಶೆಗಳು ನಾಶವಾದಾಗ, ಅಜ್ಞಾನವು ತಿಮಿರದಿಂದ ದೂರವಾದಾಗ ಜ್ಞಾನ ಸೂರ್ಯನ ಪ್ರಭೆಯು ಬೆಳಗತೊಡಗುತ್ತದೆ. ಪ್ರಪಂಚದ ನಿಜಸ್ಥಿತಿಯು ಅರಿವಾದಾಗ ಪ್ರಭುವಿಗೆ ವಿವೇಕದ ಮೂಲರೂಪದ ಮತ್ತೆ ಹುಟ್ಟಬಾರದೆಂಬ ಸ್ಥಿತಿಯ ಅರಿವಾಯಿತು. ದುರಾಸೆಗಳ ಬಯಕೆ ಸಂಪೂರ್ಣವಾಗಿ ಅಳಿಸಿಹೋಯಿತು. ಕಟ್ಟಿಗೆಯು ಮುಗಿದುಹೋದ ಮೇಲೆ ಉರಿ ತಾನಾಗಿ ಆರಿಹೋಗುವಂತೆ ಮನಸ್ಸಿನ ಸ್ಥಿತಿ ತಿಳಿಯಾಯಿತು.

ವಿವೇಕದ ಮತ್ತು ಸತ್ಯದ ಸಂಪೂರ್ಣ ಪ್ರಕಾಶದಲ್ಲಿ ಮಿಂದು ಸಂಪೂರ್ಣನಾದ ಬುದ್ಧನು ಚಿಂತನೆ ಮಾಡುತ್ತಾ ಕುಳಿತುಕೊಂಡನು. ಆಳವಾಗಿ ಧರ್ಮದ ಬಗ್ಗೆ ಚಿಂತನೆ ಮಾಡತೊಡಗಿದನು. ಅವನು ಪೂರ್ಣ ಶಾಂತಿಯ ನಿರ್ವಾಣದಲ್ಲಿ ಮುಳುಗಿಹೋದನು. ಜ್ಞಾನ ಪ್ರಕಾಶವನ್ನು ಪಡೆದ ಸಂಜೆ ಬುದ್ಧನು ಈ ಜಯಗೀತವನ್ನು ಹಾಡತೊಡಗಿದನು.

''ಈ ಅನೇಕ ಹುಟ್ಟು ಸಾವುಗಳ ಪ್ರಪಂಚದಲ್ಲಿ ನಾನು
ಈ ಮನೆಯನ್ನು ಕಟ್ಟಿದ ಒಡೆಯನನ್ನು ಹುಡುಕತೊಡಗಿದೆ - ಆತನು ಸಿಗಲಿಲ್ಲ
ಈ ಹುಟ್ಟು ಸಾವುಗಳು ಬಹಳ ದುಃಖಕರ.
ಓ, ಈ ಮನೆಯನ್ನು ಕಟ್ಟಿದ ಒಡೆಯನೇ, ನಿನ್ನನ್ನು ನಾನು ನೋಡಿದ್ದೇನೆ.
ಮತ್ತೆ ಮನೆಯನ್ನು ಕಟ್ಟಲಾರೆ
ಮನಯೆ ತೊಲೆ, ಜಂತಿಗೆಗಳೆಲ್ಲಾ ಮುರಿದು ಚಲ್ಲಾಪಿಲ್ಲಿಯಾಗಿ ಬಿದ್ದಿವೆ.
ಮನಸ್ಸು ಸಮಸ್ಥಿತಿಯನ್ನು ಪಡೆದಿದೆ
ಎಲ್ಲ ಆಸೆಗಳೂ, ಕ್ಷಯವಾಗಿ ಕೊನೆಗೊಂಡಿವೆ.

# ೩೪. ಬುದ್ಧನ ಮೊಟ್ಟಮೊದಲ ಉಪದೇಶ

## ಧಮ್ಮ ಚಕ್ಕಪವತ್ತನ ಸುತ್ತ

ಬುದ್ಧನ ಮೊಟ್ಟಮೊದಲ ಉಪದೇಶವು ''ಧರ್ಮಚಕ್ರಪ್ರವರ್ತನ'' ಸೂತ್ರವೆನಿಸಿತು. ಅಂದರೆ ಬುದ್ಧಿಯನ್ನು ಸ್ಥಾಪನೆ ಮಾಡುವುದು ಅಥವಾ ಸತ್ಯದ ಚಕ್ರವನ್ನು ತಿರುಗಿಸುವುದು. ಇದು ಜುಲೈ ತಿಂಗಳ ಹುಣ್ಣಿಮೆಯಂದು ಬೋಧಿಸಲ್ಪಟ್ಟಿತು.

ಈ ಉಪದೇಶವು ''ಇಸಪಟನ'' (ಈಗ ಅದನ್ನು ಸಾರನಾಥವೆನ್ನುತ್ತಾರೆ) ದ, ಜಿಂಕೆಯ ಉದ್ಯಾನದಲ್ಲಿ ಬೋಧಿಸಲಾಯಿತು. ಸಾರನಾಥವು ಕಾಶಿಯ ಹತ್ತಿರವಿದೆ. ಈ ಉಪದೇಶವನ್ನು ಕೇಳಲು ಅನೇಕ ದೇವತೆಗಳೂ, ಬ್ರಹ್ಮರೂ ಬಂದಿದ್ದರು. ಬುದ್ಧನು ತನ್ನ ಉಪದೇಶದ ಆರಂಭದಲ್ಲಿ ಶಿಷ್ಯರಿಗೆ ಮೊದಲು ಎರಡು ಅತಿರೇಕಗಳನ್ನು ತ್ಯಜಿಸಲು ಹೇಳಿದನು. ಮೊದಲನೆಯದಾಗಿ ಇಂದ್ರಿಯ ನಿಗ್ರಹ ಅಂದರೆ ಇಂದ್ರಿಯ ಲೋಲುಪತೆಯನ್ನು ಬಿಡುವುದು. ಎರಡನೆಯದು ಅತಿಯಾದ ದೇಹದಂಡನೆ.

ಇಂದ್ರಿಯ ಕಾಮಭೋಗ ಸುಖಪಡುತ್ತೇವೆಂಬುದು ನಿತ್ಯ ಸಾಧ್ಯವಿಲ್ಲ. ಅದೇ ಪತನಕ್ಕೆ ಮೂಲ ಕಾರಣ. ಅದು ಪ್ರಾಪಂಚಿಕವಾದುದು, ಯೋಗ್ಯವಲ್ಲದ್ದು ಮತ್ತು ಅಧ್ಯಾತ್ಮಿಕ ಅನುಭೂತಿಗೆ ಪ್ರಯೋಜನವಿಲ್ಲದ್ದು. ಇನ್ನೊಂದು ಕಡೆ ಅತಿಯಾದ ದೇಹದಂಡನೆಯಿಂದ ಶರೀರಕ್ಕೆ ನೋವುಂಟಾಗುತ್ತದೆ. ಅದೂ ಕೂಡಾ ಅಧ್ಯಾತ್ಮಿಕ ಸಾಧನೆಗೆ ಸಹಾಯ ಮಾಡುವುದಿಲ್ಲ. ಆತನು ಅದರಿಂದ ಅವರಿಗೆ ಮಧ್ಯಮ ಹಾದಿಯನ್ನು ಹಿಡಿಯಲು ಹೇಳಿದನು. ಇದರಿಂದ ವಸ್ತುಗಳನ್ನು ಅವುಗಳ

ಯಥಾಸ್ಥಿತಿಯಲ್ಲಿ ನೋಡಬಹುದು. ಜ್ಞಾನವನ್ನು ಪಡೆಯಬಹುದು. ಹೆಚ್ಚು ಜ್ಞಾನ, ಶಾಂತಿ, ಮತ್ತು ನಿರ್ವಾಣಗಳನ್ನು ಪಡೆಯಬಹುದು.

ಬುದ್ಧನು ಅವರಿಗೆ ತನ್ನ ಮೊದಲ ಉಪದೇಶದಲ್ಲಿ ನಾಲ್ಕು ಶ್ರೇಷ್ಠ ಸತ್ಯಗಳನ್ನು ಬೋಧಿಸಿದನು. ಅವು ಯಾವುವೆಂದರೆ ದುಃಖ, ಅದರ ಕಾರಣ, ಅದರ ಕೊನೆ ಮತ್ತು ಅದರ ಕೊನೆಗಾಣುವ ದಾರಿ. ಈ ಪ್ರಪಂಚದಲ್ಲಿ ದುಃಖವೆಂಬುದು ತುಂಬಿಕೊಂಡಿದೆ. ಆಸೆಯೇ ದುಃಖದ ಮೂಲ ಕಾರಣ. ನಿರ್ವಾಣದಿಂದ ದುಃಖವು ಕೊನೆಗೊಳ್ಳುತ್ತದೆ. ಈ ದುಃಖವನ್ನು ಕೊನೆಗಾಣಿಸುವ ಹಾದಿಯೆಂದರೆ ಶ್ರೇಷ್ಠವಾದ ಅಷ್ಟಾಂಗಿಕ ಮಾರ್ಗ.

ತಾನು ಈ ನಾಲ್ಕು ಯೋಗ್ಯವಾದ ಸತ್ಯಗಳನ್ನು ಅರಿತ ಮೇಲೆಯೇ ಜ್ಞಾನ ಪ್ರಕಾಶವನ್ನು ಪಡೆದದ್ದು ಎಂದು ಬುದ್ಧನು ಹೇಳಿದನು. ಈ ಅಷ್ಟ ಪಥಗಳು ಎಂಟು ವಿಧವಾಗಿವೆ. ಸರಿಯಾದ ತಿಳುವಳಿಕೆ, ಸರಿಯಾದ ಆಲೋಚನೆ, ಸರಿಯಾದ ಮಾತು, ಉತ್ತಮವಾದ ಕಾರ್ಯ, ಉತ್ತಮವಾದ ಜೀವನ, ಉತ್ತಮವಾದ ಸಾಧನೆ, ಉತ್ತಮವಾದ ಮನಸ್ಸು ಮತ್ತು ಸರಿಯಾ ಧ್ಯಾನ.

೧. **ಸರಿಯಾದ ತಿಳುವಳಿಕೆ :-** ಅಂದರೆ ನಾಲ್ಕು ದಿವ್ಯವಾದ ಸತ್ಯಗಳನ್ನು ಅರಿಯುವುದು.

೨. **ಸರಿಯಾದ ಯೋಚನೆ** ಎಂದರೆ ಮೂರು ವಿಧವಾದ ಆಲೋಚನೆಗಳ ಬಗ್ಗೆ ಯೋಚಿಸುವುದು.

೧. ತ್ಯಾಗದ ಬಗ್ಗೆ ತಿಳಿದುಕೊಳ್ಳುವುದು ಅಥವಾ ಕಾಮನಾರಹಿತವಾದ ಆಲೋಚನೆ

೨. ದ್ವೇಷವನ್ನು ವಿರೋಧಿಸುವ, ಪರರ ಬಗೆಗಿನ ಒಳ್ಳೆಯ ಆಲೋಚನೆಗಳು

೩. ಕ್ರೂರತನವನ್ನು ವಿರೋಧಿಸುವ, ಹಿಂಸಾರಹಿತವಾದ ಆಲೋಚನೆಗಳು.

೩. **ಸರಿಯಾದ ಮಾತು** ಅಂದರೆ ಸುಳ್ಳನ್ನು ಹೇಳದಿರುವುದು, ಬೇರೆಯವರ ಬಗ್ಗೆ ಕೆಡಕನ್ನು ನುಡಿಯದಿರುವುದು, ಕಠಿಣವಾಗಿ ಮಾತನಾಡದಿರುವುದು ಅಥವಾ ಸುಳ್ಳು ಸಮಾಚಾರಗಳ ಹರಟೆ ಹೊಡೆಯದಿರುವುದು.

೪. **ಸರಿಯಾದ ಕಾರ್ಯವನ್ನು ಮಾಡುವುದು** - ಕೊಲ್ಲುವುದು, ಕಳ್ಳತನ ಮತ್ತು ವ್ಯಭಿಚಾರಗಳನ್ನು ಮಾಡದಿರವುದು.

೫. **ಸರಿಯಾದ ಜೀವನ :-** ಅಂದರೆ ಐದು ವಿಧವಾದ ವ್ಯಾಪಾರಗಳು. ಶ್ರೇಷ್ಠ ಜೀವನವನ್ನು ನಡೆಸಬೇಕಾದರೆ ಈ ಐದು ಬಗೆಯ ವ್ಯಾಪಾರಗಳನ್ನು ಮಾಡದಿರುವುದು. ಅವು ಯಾವುವೆಂದರೆ ಆಯುಧಗಳ ಮಾರಾಟ, ಜೀವಿಗಳ ಮಾರಾಟ, ಮಾಂಸ ಮಾರುವುದು ( ಕೊಲ್ಲಲಿಕ್ಕಾಗಿ ಪ್ರಾಣಿಗಳನ್ನು ಸಾಕುವುದು) ಮಾದಕ ಪೇಯಗಳು ಮತ್ತು ವಿಷವನ್ನು ಮಾರುವುದು.

೬. **ನಾಲ್ಕು ಬಗೆಯ ಪ್ರಯತ್ನಗಳು** - ಇವುಗಳು ನಾಲ್ಕು ಭಾಗಗಳಾಗಿವೆ.

೧. ಮನಸ್ಸಿನಲ್ಲಿ ಬಂದಿರುವ ದುಷ್ಟ ಆಲೋಚನೆಗಳನ್ನು ತಡೆಗಟ್ಟುವುದು.

೨. ಮನಸ್ಸಿನಲ್ಲಿ ಬರುವ ದುಷ್ಟ ಆಲೋಚನೆಗಳನ್ನು ದೂರ ಮಾಡುವುದು.

೩. ಮನಸ್ಸಿನಲ್ಲಿ ಮೂಡದಿರುವ ಒಳ್ಳೆಯ ಆಲೋಚನೆಗಳನ್ನು ಬೆಳೆಸಿಕೊಳ್ಳುವುದು.

೪. ಮನಸ್ಸಿನಲ್ಲಿ ಆಗಲೇ ಬಂದಿರುವ ಒಳ್ಳೆಯ ಆಲೋಚನೆಗಳನ್ನು ಮುಂದುವರಿಸುವುದು.

೭. **ಸರಿಯಾದ ಜಾಗರೂಕತೆಯ ಮನಸ್ಸು :-** ಇದೂ ಕೂಡಾ ನಾಲ್ಕು ಭಾಗಗಳು. ಮಾನಸಿಕ ದೇಹಾರೋಗ್ಯ, ಇಂದ್ರಿಯಗಳ ಸಂತೃಪ್ತಿ, ಮನಸ್ಸಿನಲ್ಲಿ ಮೂಡುವ ಭಾವನೆಗಳ ಬಗ್ಗೆ ಜಾಗರೂಕತೆ. ಧರ್ಮದ ಬಗ್ಗೆ ಲಕ್ಷ್ಯ ಕೊಡುವುದು.

೮. **ಸರಿಯಾದರೀತಿಯ ಏಕಾಗ್ರತೆ:** - ಮನಸ್ಸಿನ ಏಕಾಗ್ರತೆ ಮನಸ್ಸು ಈ ಕಡೆ ಆ ಕಡೆ ಚಲಿಸದೆ ಒಂದೇ ವಸ್ತುವಿನ ಮೇಲೆ ಏಕಾಗ್ರತೆಯಿಂದಿರುವುದು.

ಈ ಎಂಟು ಅಂಶಗಳನ್ನು ಮತ್ತೆ ಮೂರು ಗುಂಪುಗಳಾಗಿ ವಿಂಗಡಿಸಬಹುದು.

೧. ಶೀಲ - ಸರಿಯಾದ ಮಾತು
ಸರಿಯಾದ ಕೆಲಸ
ಸರಿಯಾದ ಜೀವನ

೨. ಸಮಾಧಿ - ಸರಿಯಾದ ರೀತಿಯ ಪ್ರಯತ್ನ
ಸರಿಯಾದ ಜಾಗರೂಕತೆ
ಸರಿಯಾದ ಏಕಾಗ್ರಕತೆ

೩. ಪನ್ನ (ಜ್ಞಾನ) ಸರಿಯಾದ ತಿಳುವಳಿಕೆ
ಸರಿಯಾದ ಚಿಂತನೆ

ಶೀಲ, ಸಮಾಧಿ ಮತ್ತು ಜ್ಞಾನ ಇವು ಮೂರು ಮನಸ್ಸನ್ನು ಪವಿತ್ರಗೊಳಿಸಿ, ನಿರ್ವಾಣದ ಕಡೆಗೊಯ್ಯುವ ಹಾದಿಗಳಾಗಿವೆ. ಈ ಹಂತಗಳನ್ನು ಒಂದು ಸುಂದರ ಧಮ್ಮ ಪದದಗಾಥೆಯಲ್ಲಿ ಹೀಗೆ ವರ್ಣಿಸಲಾಗಿದೆ.

ಕೆಟ್ಟದ್ದರಿಂದ ದೂರವಿರಲು
ಒಳ್ಳೆಯದನ್ನು ಮಾಡಲು
ಮನಸ್ಸನ್ನು ಶುದ್ಧಿಗೊಳಿಸಲು
ಎಲ್ಲ ಬುದ್ಧರ ಉಪದೇಶ ಇದೇ ಆಗಿದೆ.

## ೩೫. ಬಿಂಬಿಸಾರ ರಾಜ

ಬಿಂಬಿಸಾರನು ಈ ಮೊದಲೇ ಸನ್ಯಾಸಿ ಗೌತಮನಿಗೆ ಅರ್ಧರಾಜ್ಯವನ್ನು ಕೊಡುತ್ತೇನೆಂದು ಹೇಳಿದ್ದನು. ಆದರೆ ಆಗ ಗೌತಮನು ತಾನು ಜ್ಞಾನವನ್ನು ಹುಡುಕಿಕೊಂಡು ಹೊರಟಿರುವುದರಿಂದ ಬೇಡವೆಂದು ನಿರಾಕರಿಸಿದ್ದನು. ಆಗ ಬಿಂಬಿಸಾರನು ಗೌತಮನು ಬೋಧಿಜ್ಞಾನವನ್ನು ಪಡೆದ ನಂತರ ರಾಜಗೃಹಕ್ಕೆ ಬಂದು ಗೌತಮನು ತಾನು ಪಡೆದ ಜ್ಞಾನವನ್ನು ತನಗೂ ಬೋಧಿಸಬೇಕೆಂದು ಕೇಳಿಕೊಂಡಿದ್ದನು.

ಗೌತಮನಿಗೆ ಜ್ಞಾನೋದಯವಾಗಿ ಅವನು ಬುದ್ಧನಾದ ನಂತರ ತಾನು ಬಿಂಬಿಸಾರನಿಗೆ ಕೊಟ್ಟಿದ್ದ ವಚನವನ್ನು ಮರೆಯಲಿಲ್ಲ. ತನ್ನ ಅನೇಕ ಶಿಷ್ಯರೊಂದಿಗೆ ರಾಜಗೃಹಕ್ಕೆ ಮತ್ತೆ ಭೇಟಿ ಕೊಡಲು ನಿಶ್ಚಯಿಸಿದನು. ಅವನ ಧಾರ್ಮಿಕ ಗುರುವಾಗಿ ಜನರಿಗೆ ಧರ್ಮಬೋಧೆಯನ್ನು ಮಾಡುತ್ತಿರುವ ವಿಚಾರವು ನಗರದಲ್ಲೆಲ್ಲಾ ಹರಡಿ ಅದು ಬಿಂಬಿಸಾರನ ಕಿವಿಗೂ ಬಿದ್ದಿತು.

ಬುದ್ಧನು ರಾಜ್ಯದ ಹೆಬ್ಬಾಗಿಲಿಗೆ ಬಂದಿರುವ ಸಮಾಚಾರವನ್ನು ಕೇಳಿ ಬಿಂಬಿಸಾರನು ತನ್ನ ಅಪಾರ ಪ್ರಜೆಗಳೊಂದಿಗೆ ಬುದ್ಧನನ್ನು ಎದುರುಗೊಳ್ಳಲು ಹೆಬ್ಬಾಗಿಲ ಬಳಿಗೆ ಬಂದನು. ಅವನು ಬುದ್ಧನನ್ನು ಎದುರುಗೊಂಡು ಗೌರವಿಸಿದನು. ಕೆಲವು ಪ್ರಜೆಗಳಿಗೆ ತಾವು ಬುದ್ಧನನ್ನು ಗೌರವಿಸಬೇಕೋ ಅಥವಾ ಕಸ್ಸಪನನ್ನು ಗೌರವಿಸಬೇಕೋ ತಿಳಿಯಲಿಲ್ಲ. ಬುದ್ಧನು ಕಸ್ಸಪನ ಕೈಕೆಳಗೆ ಧಾರ್ಮಿಕ ಜೀವನವನ್ನು ನಡೆುತ್ತಿರುವನೋ ಅಥವಾ ಕಸ್ಸಪನೇ ಬುದ್ಧನಿಗೆ ಶಿಷ್ಯನೋ ತಿಳಿಯಲಿಲ್ಲ. ಏಕೆಂದರೆ ಇಬ್ಬರೂ ಧಾರ್ಮಿಕ ಗುರುಗಳೇ. ಬುದ್ಧನಿಗೆ ಜನರ ಮನಸ್ಸು ತಿಳಿಯಿತು. ಅವನು ಹಿರಿಯ ವಿದ್ವಾಂಸನಾದ ಕಸ್ಸಪನನ್ನು ಕೇಳಿದನು- ಕಸ್ಸಪಾ, ನೀನೇಕೆ ಯಜ್ಞವನ್ನು ಮಾಡುವುದನ್ನು ತ್ಯಜಿಸಿಬಿಟ್ಟೆ ?

ಆಗ ಕಸ್ಸಪನು ನುಡಿದನು-''ಇಂದ್ರಿಯಗಳ ಸುಖವನ್ನು ಬಯಸುವುದಕ್ಕಿಂತಲೂ, ಮನಸ್ಸಿನ ಶಾಂತಿಯಿಂದ ನಿರ್ವಾಣ ಪಡೆಯುವುದರಲ್ಲಿ ತನಗೆ ಸುಖ ಕಂಡುದರಿಂದ ಯಜ್ಞ- ಯಾಗಾದಿಗಳನ್ನು ಮಾಡುವುದನ್ನು ಬಿಟ್ಟುಬಿಟ್ಟೆ ಎಂದು ಬುದ್ಧನ ಪಾದಗಳಿಗೆ ಅಡ್ಡಬಿದ್ದು ನೀನೇ ನನ್ನ ಗುರು, ನನ್ನ ಪ್ರಭು, ನಾನು ನಿನ್ನ ಶಿಷ್ಯ ಎಂದನು.

ಪ್ರಜೆಗಳಿಗೆ ಇವರ ಸಂಭಾಷಣೆಯಿಂದ ಬಹಳ ಸಂತೋಷವಾಯಿತು. ಆಗ ಬುದ್ಧನು ಅವರಿಗೆಲ್ಲಾ ಧರ್ಮಬೋಧೆಯನ್ನು ಮಾಡಿದನು. ಬಿಂಬಿಸಾರನಿಗೆ ಆಧ್ಯಾತ್ಮದ ಮೊದಲ ಮೆಟ್ಟಿಲು ದೊರಕಿತು. ಬುದ್ಧನ ಬೋಧನೆಯನ್ನು ಅರ್ಥಮಾಡಿಕೊಂಡು ಬಿಂಬಿಸಾರನು ಬುದ್ಧನನ್ನು ಕುರಿತು ಹೇಳಿದನು.

''ಮೊದಲು ನಾನು ರಾಜಕುಮಾರನಾಗಿದ್ದಾಗ ನನಗೆ ಐದು ಆಸೆಗಳಿದ್ದುವು. ಈಗ ಅವೆಲ್ಲಾ ಕೈಗೂಡಿದುವು. ನನ್ನ ಮೊದಲನೆಯ ಬಯಕೆ ಯಾವುದೆಂದರೆ ನಾನು ರಾಜನಾಗಬೇಕು. ಎರಡನೆಯ ಬಯಕೆ ಸಂಪೂರ್ಣ ಜ್ಞಾನವನ್ನು ಪಡೆದ ಜ್ಞಾನಿಯೊಬ್ಬನು ನನ್ನ ದೇಶಕ್ಕೆ ಬರಬೇಕು. ಮೂರನೆಯದಾಗಿ ನಾನು ಅಂತಹ ಜ್ಞಾನಿಯ ಸಂಗವನ್ನು ಪಡೆಯಬೇಕು. ನಾಲ್ಕನೆಯದು - ಆ ಜ್ಞಾನಿಯು ನನಗೆ ಧರ್ಮ ಸೂತ್ರವನ್ನು ಬೋಧಿಸಬೇಕು. ಐದನೆಯದಾಗಿ ನಾನು ಆ ಧರ್ಮಸೂತ್ರವನ್ನು ಅರ್ಥಮಾಡಿಕೊಳ್ಳಬೇಕು. ಈಗ ಐದು ಪೂರ್ತಿಗೊಂಡವು''.

ಬುದ್ಧನಿಂದ ಪಡೆದ ಧರ್ಮಕ್ಕಾಗಿ ಬಿಂಬಿಸಾರನು ತನ್ನ ರಾಜ್ಯದಲ್ಲಿರುವ ಬೊಂಬುಗಳ ತೋಪನ್ನು ಕಾಣಿಕೆಯಾಗಿ ಕೊಟ್ಟನು. ಇದು ಬೊಂಬುಗಳ ತೋಪೆಂದೇ (ವೇಳುವನ) ಪ್ರಸಿದ್ಧವಾಯಿತು. ಬುದ್ಧನು ತನ್ನ ಶಿಷ್ಯರೊಂದಿಗೆ ಮೂರು ಮಳೆಗಾಲಗಳನ್ನು ಕಳೆದುದಲ್ಲದೆ, ಕೆಲವು ಕಾಲದ ನಂತರ ಮತ್ತೆ ಮೂರು ಮಳೆಗಾಲಗಳನ್ನು ಕಳೆದನು.

ಬುದ್ಧನಿಂದ ಧರ್ಮೋಪದೇಶ ಪಡೆದ ನಂತರ ರಾಜನು ಬಹಳ ಧಾರ್ಮಿಕನಾಗಿ ರಾಜ್ಯಭಾರ ಮಾಡಿದನು. ಆದರೆ ಹಿಂದೆ ಕೆಟ್ಟವನಾಗಿ ಮಾಡಿದ ಕರ್ಮಗಳ ಫಲವಾಗಿ ತನ್ನ ದುಷ್ಟ ಮಗನಿಂದ ಹತನಾಗಬೇಕಾಯಿತು.

## ೩೬. ವಿಶಾಖಾ

ವಿಶಾಖಾ ಒಬ್ಬ ಕೋಟ್ಯಾಧೀಶನ ಒಬ್ಬಳೇ ಮುದ್ದಿನ ಮಗಳು. ಅವಳು ಏಳು ವರ್ಷದವಳಾಗಿದ್ದಾಗ ಬುದ್ಧನು ಅವಳು ಹುಟ್ಟಿದ ಊರಿಗೆ ಭೇಟಿಕೊಟ್ಟಿದ್ದನು. ಅವಳ ತಾತನಿಗೆ ಬುದ್ಧ ಬಂದಿರುವ ವಿಷಯ ತಿಳಿದಾಗ ಆತನು ಮೊಮ್ಮಗಳನ್ನು ಕರೆದು ಸ್ವಾಗತಿಸಿ ಕರೆತರಲು ಹೇಳಿದನು. ಅವಳು ಅಷ್ಟು ಚಿಕ್ಕವಳಾಗಿದ್ದರೂ ಬಹಳ ಧಾರ್ಮಿಕಳೂ, ಬುದ್ಧಿವಂತಳೂ ಆಗಿದ್ದಳು. ಆದ್ದರಿಂದ ಅವಳು ಬುದ್ಧನ ಬಾಯಿಂದ ಧರ್ಮದ ವಿಚಾರವನ್ನು ಕೇಳಿ ಧರ್ಮದ ಐದು ಹಂತಗಳನ್ನು ಸಾಧಿಸಿದಳು.

ಅವಳು ಹದಿನೈದು ವರ್ಷದವಳಾಗಿದ್ದಾಗ, ಅವಳನ್ನು ನೋಡಿದ ಕೆಲವು ಬ್ರಾಹ್ಮಣರು ತಮ್ಮ ಯಜಮಾನನಿಗೆ ಅವಳು ತಕ್ಕ ವಧುವೆಂದು ತಿಳಿದರು. ಆತನ ಹೆಸರು ಪುಣ್ಯವರ್ಧನನೆಂದು. ಅವನು ಮಿಗರ ಎಂಬ ಒಬ್ಬ ಕೋಟ್ಯಾಧೀಶನ ಮಗ. ವಿಶಾಖಾ ಒಬ್ಬ ಹೆಣ್ಣಿಗೆ ಇರಬೇಕಾದ ಐದು ಬಗೆಯ ಸೌಂದರ್ಯಗಳನ್ನು ಹೊಂದಿದ್ದಳು - ಸುಂದರವಾದ ತಲೆಗೂದಲು, ಸುಂದರವಾದ ಅಂಗಸೌಷ್ಠವ, ಸುಂದರವಾದ ಮೆತ್ತನೆಯ ಬಂಗಾರಬಣ್ಣದ ಕೂದಲು, ಮತ್ತು ತುಂಬು ಯೌವ್ವನ. ಹೀಗಾಗಿ ಅವರು ಅವಳನ್ನು ಪುಣ್ಯವರ್ಧನನಿಗೆ ಕೊಟ್ಟು ವಿವಾಹ ಮಾಡಲು ಏರ್ಪಾಡುಗಳನ್ನು ಮಾಡಿದರು.

ಅವಳ ವಿವಾಹದ ದಿನ ಅವಳ ತಂದೆ ಅವಳಿಗೆ ಹತ್ತು ಬುದ್ಧಿ ಮಾತುಗಳನ್ನು ಹೇಳಿದನು.

೧. ಒಬ್ಬ ವಧುವಾದವಳು ಬೇರೆಯವರ ಎದುರಿಗೆ ತನ್ನ ಗಂಡನನ್ನಾಗಲೀ, ಅತ್ತೆಯ ಮನೆಯವರನ್ನಾಗಲೀ, ಜರಿಯಬಾರದು. ಅವರ ದುರ್ಬಲತೆಗಳನ್ನಾಗಲೀ, ಮನೆಯ ಜಗಳಗಳನ್ನಾಗಲೀ ಯಾರಿಗೂ ಹೇಳಬಾರದು.

೨. ಒಬ್ಬ ಗೃಹಿಣಿಯು ಬೇರೆಯವರ ವಿಚಾರವನ್ನಾಗಲೀ, ಅಕ್ಕಪಕ್ಕದ ಮನೆಯವರ ಕಥೆಗಳನ್ನಾಗಲೀ ಕೇಳಬಾರದು.

೩. ಸಾಲವಾಗಿ ತೆಗೆದುಕೊಂಡು ಹೋದ ಮನೆಯ ಪದಾರ್ಥಗಳನ್ನು ಹಿಂದಿರುಗಿಸಿ ಕೊಡಬಲ್ಲವರಿಗೆ ಮಾತ್ರ ಕೊಡಬೇಕು.

೪. ಹೀಗೆ ಹಿಂದಿರುಗಿಸಿ ಕೊಡಲಾರದವರಿಗೆ ಯಾವ ಪದಾರ್ಥವನ್ನು ಕೊಡಬಾರದು.

೫. ಬಡವರಾಗಿರುವ ಬಂಧುಗಳಾಗಲೀ, ಸ್ನೇಹಿತರಾಗಲೀ ಅವರಿಗೆ ತೆಗೆದುಕೊಂಡ ಸಾಮಾನುಗಳನ್ನು ಹಿಂದಿರುಗಿ ಕೊಡಲು ಶಕ್ತಿಯಿಲ್ಲದಿದ್ದರೆ ಅವರಿಗೆ ಕೊಡಬಹುದು.

೬. ಒಬ್ಬ ಗೃಹಿಣಿಯು ನಾಜೂಕಾಗಿ ಕುಳಿತುಕೊಳ್ಳಬೇಕು. ಅವಳ ತಾಯಿ-ತಂದೆಗಳಾಗಲೀ, ಅತ್ತೆ-ಮಾವಂದಿರಾಗಲೀ ಬಂದರೆ ತನ್ನ ಆಸನದಿಂದ ಎದ್ದು ನಿಲ್ಲಬೇಕು.

೭. ತಾನು ಊಟ ಮಾಡುವುದಕ್ಕೆ ಮುಂಚೆ ತನ್ನ ಗಂಡನ ಹಾಗೂ ಅತ್ತೆ-ಮಾವನ ಊಟವಾಗಿದೆಯೇ ಎಂದು ವಿಚಾರಿಸಿಕೊಳ್ಳಬೇಕು. ತನ್ನ ಮನೆಯ ಸೇವಕರಿಗೂ ಹೊಟ್ಟೆತುಂಬಾ ಊಟವಾಯಿತೇ ಎಂದು ವಿಚಾರಿಸಿ ತಿಳಿದುಕೊಳ್ಳಬೇಕು. ಮನೆಯ ಸೇವಕರೂ ಊಟ ಮಾಡಿದರೆ ಕೇಳಿಕೊಳ್ಳಬೇಕು.

೮. ಮಲಗಲು ಹೋಗಲಿಕ್ಕೆ ಮುಂಚೆ ಮನೆಯ ಬಾಗಿಲುಗಳೆಲ್ಲಾ ಭದ್ರವಾಗಿ ಹಾಕಿವೆಯೆ!, ಪೀಠೋಪಕರಣ ಸರಿಯಾದ ಸ್ಥಳಗಳಲ್ಲಿವೆಯೇ, ಸೇವಕರು ತಮ್ಮ ಕೆಲಸಗಳನ್ನೆಲ್ಲಾ ಮುಗಿಸಿರುವರೆ, ಅತ್ತೆ-ಮಾವಂದಿರು ಮಲಗಿಕೊಂಡರೇ ಎಲ್ಲವನ್ನೂ ನೋಡಬೇಕು. ಗೃಹಿಣಿಯಾದವಳು ಖಾಯಿಲೆಯಾಗಿದ್ದರೆ ಹೊರತೂ-ಉಳಿದ ಸಮಯದಲ್ಲಿ ಬೆಳಿಗ್ಗೆ ಹೊತ್ತಿಗೆ ಮುಂಚೆ ಏಳಬೇಕು. ಹಗಲಿನಲ್ಲಿ ಎಂದಿಗೂ ನಿದ್ರಿಸಬಾರದು.

೯. ಗಂಡನನ್ನೂ, ಅತ್ತೆ-ಮಾವಂದಿರನ್ನೂ, ಬೆಂಕಿಯನ್ನು ಜೋಪಾನವಾಗಿ ನೋಡಿಕೊಳ್ಳುವಂತೆ ನೋಡಿಕೊಳ್ಳಬೇಕು.

೧೦. ಗಂಡ ಮತ್ತು ಅತ್ತೆ ಮಾವಂದಿರಲ್ಲಿ ದೇವರಲ್ಲಿ ಭಕ್ತಿಯಿಡುವಂತೆ ಭಕ್ತಿಯಿಡಬೇಕು.

ವಿಶಾಖಾ ಸಾವತ್ತಿಯಲ್ಲಿನ ತನ್ನ ಗಂಡನ ಮನೆಗೆ ಬಂದಳು. ಬಂದಾಗಲಿಂದ ಅಲ್ಲಿ ಎಲ್ಲರಿಗೂ ಪ್ರಿಯಳೂ, ಉದಾರಿಯೂ ಆಗಿದ್ದಳು. ಜನಗಳೂ ಸಹಾ ಅವಳನ್ನು ಪ್ರೀತಿಸುತ್ತಿದ್ದರು.

ಒಂದು ದಿನ ಅವಳ ಮಾವ ಒಂದು ಬಟ್ಟಲಿನಲ್ಲಿ ಪಾಯಸವನ್ನಿಟ್ಟುಕೊಂಡು ತಿನ್ನುತ್ತಿದ್ದನು. ಆಗ ಒಬ್ಬ ಭಿಕ್ಷೆಗಾಗಿ ಅವರ ಮನೆಯೊಳಗೆ ಬಂದನು. ಭಿಕ್ಷುವು ಬಂದು ನಿಂತಿದ್ದರೂ ಸಹಾ ನೋಡಲೇ ಇಲ್ಲದವನಂತೆ ಮಾವನು ಪಾಯಸವನ್ನು ತಿನ್ನುತ್ತಲೇ ಇದ್ದನು.

ವಿಶಾಖಾ ಬಹಳ ನಮ್ರತೆಯಿಂದ ಸಾಧುವಿಗೆ ಹೇಳಿದಳು- ಸ್ವಾಮಿ, ತಾವು ಮುಂದೆ ಹೋಗಿ. ನನ್ನ ಮಾವನವರು ಹಳಸಿದ ಆಹಾರವನ್ನು ತಿನ್ನುತ್ತಿದ್ದಾರೆ.

ಬಹಳ ದಿನಗಳಿಂದ ಮಾವನು ಗಮನಿಸುತ್ತಿದ್ದನು. ವಿಶಾಖಾ ಬುದ್ಧನ ಭಕ್ತಳಾಗಿದ್ದಳು. ಬುದ್ಧನಿಗೆ ಸಹಕಾರ ನೀಡುತ್ತಿದ್ದಳು. ಇದೆಲ್ಲಾ ಆತನಿಗೆ ಇಷ್ಟವಿರಲಿಲ್ಲ. ಏಕೆಂದರೆ ಆತನು ಬುದ್ಧನ ಭಕ್ತನಾಗಿರಲಿಲ್ಲ. ಅವನು ತನ್ನ ಮಗನ ಹಾಗೂ ವಿಶಾಖಾಳ ಮದುವೆಯನ್ನು ಮುರಿಯಬೇಕೆಂದಿದ್ದನು. ಆದರೆ ಅವಳಲ್ಲಿ ಏನೂ ಕೆಟ್ಟ ಗುಣವಿರಲಿಲ್ಲ. ಈಗ ಅವನಿಗೆ ಒಂದು ಅವಕಾಶ ದೊರೆಯಿತು. ಅವಳು ತನ್ನ ಮಾತುಗಳಿಂದ ತನ್ನ ಮನೆತನಕ್ಕೆ ಅವಮಾನವೆಸಗಿದ್ದಾಳೆ ಎಂದುಕೊಂಡನು.

ಆತನು ಅವಳನ್ನು ಮನೆ ಬಿಟ್ಟು ಹೋಗುವಂತೆ ಆಜ್ಞಾಪಿಸಿದನು. ಆದರೆ ಅವಳು ತನ್ನ ತಂದೆಯು ಮಾವನಿಗೆ ಹೇಳಿದ್ದ ಮಾತುಗಳನ್ನು ಜ್ಞಾಪಿಸಿದಳು. ಅವಳ ತಂದೆ ಹೇಳಿದ್ದನ್ನು-''ನನ್ನ ಮಗಳೇನಾದರೂ ತಪ್ಪು ಮಾಡಿದ್ದರೆ ಅದನ್ನು ಪರಿಶೀಲಿಸಿ ನೋಡಿ''.

ಆ ಕೋಟ್ಯಾಧೀಶನು ಅದನ್ನು ಒಪ್ಪಿಕೊಂಡು ಎಂಟು ಜನ ಕುಲಸ್ಥರನ್ನು ಕರೆಸಿ ಅವಳು ಮಾಡಿದ ಅಪರಾಧವನ್ನು ಪರಿಶೀಲಿಸಬೇಕೆಂದನು. ಆದರಂತೆ ಅವರು ಬಂದಾಗ ಹೇಳಿದರು-''ಅವಳು ಈ ಅಪರಾಧವನ್ನು ಮಾಡಿದ್ದಾಳೆ. ಇದನ್ನು ತಾವು ಪರಿಶೀಲಿಸಿ ಅದು ತಪ್ಪಾಗಿದ್ದರೆ ಅವಳನ್ನು ಮನೆಯಿಂದ ಆಚೆಗೆ ಅಟ್ಟಿ''.

ವಿಶಾಖಾ ತಾನು ಮಾಡಿದ್ದನ್ನು ಅವರಿಗೆ ವಿವರಿಸಿದಳು. ''ನನ್ನ ಮಾವ ಭಿಕ್ಷುವು ಭಿಕ್ಷಕ್ಕೆ ಬಂದಾಗ ಅವನನ್ನು ಅಲಕ್ಷಿಸಿ ತಾನು ಪಾಯಸವನ್ನು ತಿನ್ನುತ್ತಲೇ ಇದ್ದನು. ತನ್ನ ಈಗಿನ ಘನತೆಯನ್ನು ಬೆಳೆಸಿಕೊಳ್ಳಲಿಲ್ಲ. ಹಿಂದಿನ ಜನ್ಮವನ್ನು ಫಲವನ್ನು ಅನುಭವಿಸುತ್ತಿದ್ದನು. ಇದು ಹಳಸಿದ ಆಹಾರವನ್ನು ತಿಂದಂತಾಗಲಿಲ್ಲವೆ?''

ಅವಳ ಮಾವ ಅವಳು ತಪ್ಪಿತಸ್ಥಳಲ್ಲವೆಂದು ಒಪ್ಪಿಕೊಳ್ಳಬೇಕಾಯಿತು.

ಇಂತಹ ಅನೇಕ ಸಂದರ್ಭಗಳು ಬಂದಾಗಲೆಲ್ಲಾ ವಿಶಾಖಾ ತನ್ನ ಮಾವನಿಗೆ ತಿಳಿಹೇಳಿ ಅವನನ್ನು ತೃಪ್ತಿಪಡಿಸುತ್ತಿದ್ದಳು. ನಂತರ ಅವಳ ಮಾವನು ತನ್ನ ತಪ್ಪನ್ನೂ, ಸೊಸೆಯ ವಿವೇಕವನ್ನು ಅರಿತು ಬುದ್ಧನನ್ನುತನ್ನ ಮನೆಗೆ ಉಪದೇಶ ಪಡೆಯಲಿಕ್ಕಾಗಿ ಆಮಂತ್ರಿಸಿದನು. ಉಪದೇಶವನ್ನು ಕೇಳಿ ಆತನ ಒಬ್ಬ ಭಕ್ತನಾದನು.

ಹಾಗೆ ಆಕೆಯು ತನ್ನ ಗಂಡನ ಮನೆಯವರನ್ನೆಲ್ಲಾ ತನ್ನ ವಿವೇಕ ಹಾಗೂ ಸಹನೆಗಳಿಂದ ಬೌದ್ಧರನ್ನಾಗಿ ಮಾಡಿ ಮನೆಗೆ ಸುಖ-ಸಂತೋಷವನ್ನು ತಂದಳು.

ವಿಶಾಖಾ ಬಹಳ ಉದಾರತೆಯಿಂದ ಭಿಕ್ಷುಗಳಿಗೆ ಸಹಾಯ ಮಾಡುತ್ತಿದ್ದಳು. ಭಿಕ್ಷುಗಳಿಗಾಗಿ ಬಹಳಹಣವನ್ನು ಖರ್ಚುಮಾಡಿ ''ಪುಬ್ಬಾರಾಮ''ವೆಂಬ ವಿಹಾರವನ್ನು ಕಟ್ಟಿಸಿದಳು. ಬುದ್ಧನು ಅಲ್ಲಿ ಆರು ಮಳೆಗಾಲಗಳನ್ನು ಕಳೆದುದು ಅವಳಿಗೆ ಅತಿ ಆನಂದದ ಸಂಗತಿಯಾಗಿತ್ತು.

ಉಪದೇಶದ ಒಂದು ಸಂದರ್ಭದಲ್ಲಿ ಬುದ್ಧನು ಹೆಂಗಸಿಗಿರಬೇಕಾದ ಎಂಟು ಗುಣಗಳನ್ನು ಅವಳಿಗೆ ತಿಳಿಹೇಳಿದನು. ಇದನ್ನು ಪಾಲಿಸಿದಾಗ ಅವಳಿಗೆ ಈಗಿನ ಪ್ರಪಂಚದಲ್ಲೂ, ಮುಂದಿನ ಜನ್ಮದಲ್ಲೂ ಸುಖಸಂತೋಷಗಳು ದೊರಕುತ್ತವೆ ಎಂದು ಬೋಧಿಸಿದನು.

ಇಲ್ಲಿ ಕೇಳು ವಿಶಾಖಾ, ''ಹೆಂಗಸಾದವಳು ತನ್ನ ಕೆಲಸವನ್ನು ಚೆನ್ನಾಗಿ ಮಾಡಬೇಕು. ಸೇವಕರನ್ನು ಸರಿಯಾಗಿ ನಡೆಸಿಕೊಳ್ಳಬೇಕು. ತನ್ನ ಗಂಡನಿಗೆ ಮರ್ಯಾದೆ ಕೊಡಬೇಕು. ಅವನ ಆರೋಗ್ಯದ ಕಡೆ ಲಕ್ಷ್ಯ ಕೊಡಬೇಕು. ಇಲ್ಲಿ ಕೇಳು ವಿಶಾಖಾ, ಹೆಂಗಸಾದವಳು ಬುದ್ಧ, ಧರ್ಮ, ಸಂಘ, ಶೀಲ, ದಾನ ಮತ್ತು ವಿವೇಕ (ಪನ್ನ) ಗಳಲ್ಲಿ ಶ್ರದ್ಧೆ ಇಡಬೇಕು''.

ವಿಶಾಖಾ ಹೆಂಗಸಾಗಿ ಬಹಳ ಮೇಧಾವಿಯಾಗಿದ್ದಳು. ಅವಳು ಬುದ್ಧ ಮತ್ತು ಅವನ ಅನುಯಾಯಿಗಳ ಅನೇಕ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಳು. ಭಿಕ್ಷುಣಿಯರಲ್ಲಿ ಬರುವ ಮನಸ್ತಾಪಗಳನ್ನು ಪರಿಹರಿಸುವ ಭಾರವನ್ನು ಬುದ್ಧನು ಅವಳಿಗೆ ವಹಿಸಿದ್ದನು. ಭಿಕ್ಷುಣಿಯರು ಕೆಲವು ನಿಯಮಗಳನ್ನು ಪಾಲಿಸಬೇಕಾಗಿತ್ತು. ಭಿಕ್ಷುಣಿಯರು ಏನಾದರೂ ತಪ್ಪು ಮಾಡಿದರೆ ಆ ನಿಯಮಗಳಿಂದ ವಿಶಾಖಾ ಅವರ ಮನಸ್ತಾಪಗಳನ್ನು ಪರಿಹರಿಸುತ್ತಿದ್ದಳು.

ಅವಳು ಪರಿಪಕ್ವವಾದ ಒಂದು ನೂರು ಇಪ್ಪತ್ತು ವರ್ಷಗಳನ್ನು ಕಳೆದು ತೀರಿಕೊಂಡಳು.

## ೩೭. ದೇವದತ್ತ

ದೇವದತ್ತನು ದೊರೆಯಾದ ಸುಪ್ಪಬುದ್ಧ ಮತ್ತು ರಾಣಿ ಪನೀತ ಇವರ ಮಗ. ಪನೀತಳು ಬುದ್ಧನ ಚಿಕ್ಕಮ್ಮ. ದೇವದತ್ತನ ತಂಗಿ ಯಶೋಧರೆ. ಹೀಗಾಗಿ ಅವನು ದೇವದತ್ತನ ದಾಯಾದಿಯೂ ಹೌದು ಮತ್ತು ಬಾವಮ್ಮೈದುನನೂ ಹೌದು. ಆನಂದ ಮತ್ತು ಇತರ ಶಾಕ್ಯ ರಾಜಕುಮಾರರ ಜೊತೆಯಲ್ಲಿ, ಬುದ್ಧನು ಭಿಕ್ಷುವಾದ ಮೊದಲಿನ ದಿನಗಳಲ್ಲಿ ದೇವದತ್ತನೂ ಬೌದ್ಧ ಸನ್ಯಾಸಿಯಾದನು. ಆದರೆ ಸನ್ಯಾಸತ್ವದ ಯಾವ ಹಂತಗಳನ್ನೂ ತಲುಪಲಾರದೆ ಅವನು ಪ್ರಾಪಂಚಿಕವಾದ ಪವಾಡಗಳ ಶಕ್ತಿಯನ್ನು ರೂಢಿಸಿಕೊಂಡನು.

ಮೊದಮೊದಲು ಅವನು ಒಳ್ಳೆಯ ಸನ್ಯಾಸಿಯಾಗಿದ್ದನು. ಅವನು ಅಭೌತ ಶಕ್ತಿಯನ್ನು ಪಡೆದಿದ್ದನು. ಆದರೆ ಬರುಬರುತ್ತಾ ಪ್ರಾಪಂಚಿಕವಾದ ಕೀರ್ತಿ ಕಾಮನೆಗಳಿಗೆ ವಶನಾದನು. ಬುದ್ಧನ ಬಗ್ಗೆ ಕೆಟ್ಟಭಾವನೆಗಳನ್ನೂ, ಹೊಟ್ಟೆಕಿಚ್ಚನ್ನೂ ಹೊಂದಿದನು. ಹಾಗಾಗಿ ಅವನು ಬುದ್ಧನ ಒಬ್ಬ ದೊಡ್ಡ ಶತ್ರುವಾದನು.

ಒಮ್ಮೆ ಒಂದು ದೊಡ್ಡ ಸಮ್ಮೇಳನ ನಡೆಯಿತು. ಅದರಲ್ಲಿ ರಾಜಮಹಾರಾಜರೂ, ರಾಜಕುಮಾರರೂ ಸೇರಿದ್ದರು. ದೇವದತ್ತನು ಬುದ್ಧನ ಬಳಿಗೆ ಬಂದು ತನ್ನನ್ನು ಆ ಸಮ್ಮೇಳನದ ನಾಯಕನನ್ನಾಗಿ ಮಾಡಬೇಕೆಂದು ಕೇಳಿಕೊಂಡನು. ಅವನಿಗೆ ಅದನ್ನು ಸಂಬಾಳಿಸುವ ಶಕ್ತಿ ಇಲ್ಲದ್ದರಿಂದ ಬುದ್ಧನು ಅವನ ಮಾತನ್ನು ತಿರಸ್ಕರಿಸಿದನು. ದೇವದತ್ತನಿಗೆ ಇದರಿಂದ ಕೋಪ ಬಂದು ಅವನು ಬುದ್ಧನ ಮೇಲೆ ಸೇಡು ತೀರಿಸಿಕೊಳ್ಳಲು ಪಣ ತೊಟ್ಟನು.

ದೇವದತ್ತನು ಒಬ್ಬ ದುಷ್ಟ ಸನ್ಯಾಸಿಯಾಗಿದ್ದರೂ ಕೂಡಾ ಅವನನ್ನು ಮೆಚ್ಚಿದ ನಂತರ ಶಿಷ್ಯರೂ ಇದ್ದರು. ಅವನಿಗೆ ದೊರೆಯಾದ ಅಜಾತಶತ್ರುವು ತುಂಬಾ ಬೆಂಬಲ ಕೊಡುತ್ತಿದ್ದನು. ಅವನ ಜೊತೆಯಲ್ಲಿ ಸೇರಿಕೊಂಡು ದೇವದತ್ತನು ರಾಜನಾದ ಬಿಂಬಿಸಾರನನ್ನೂ, ಬುದ್ಧನನ್ನೂ ಕೊಲ್ಲಲು ಕುತಂತ್ರ ನಡೆಸಿದನು. ಅಜಾತಶತ್ರುವೇನೋ ತಂದೆಯಾದ ಬಿಂಬಿಸಾರನನ್ನು ಕೊಂದುಹಾಕಿದನು. ಆದರೆ ದೇವದತ್ತನಿಗೆ ಬುದ್ಧನನ್ನು ಕೊಲ್ಲಲಾಗಲಿಲ್ಲ.

ಅವನು ಬುದ್ಧನನ್ನು ಕೊಲ್ಲಲು ಮಾಡಿದ ಮೊದಲ ಪ್ರಯತ್ನವೆಂದರೆ ಅವನು ಒಬ್ಬ ಬಾಡಿಗೆ ಮನುಷ್ಯನನ್ನು ಹಿಡಿದು ಅವನು ಬುದ್ಧನನ್ನು ಕೊಲ್ಲಲು ಪ್ರೇರೇಪಿಸಿದನು. ನಂತರ ಆ ಮನುಷ್ಯನನ್ನು ಇಬ್ಬರು ಕೊಲ್ಲಬೇಕು. ಆ ಇಬ್ಬರನ್ನು ನಾಲ್ಕು ಜನ, ಆ ನಾಲ್ವರನ್ನು ಎಂಟು ಜನ ಕೊಲ್ಲಬೇಕೆಂಬ ತಂತ್ರವನ್ನು ರೂಪಿಸಿದನು. ಆದರೆ ಬುದ್ಧನನ್ನು ಕೊಲ್ಲಬಂದ ಮೊದಲನೆಯ ಮನುಷ್ಯನೇ ಬುದ್ಧನನ್ನು ಕಂಡು ಭಯಭೀತನಾಗಿ ಬುದ್ಧನಿಗೆ ಶರಣಾದನು. ಹೀಗೆ ಎಲ್ಲರೂ ಬುದ್ಧನಿಗೆ ಶರಣು ಹೋದರು. ದೇವದತ್ತನ ಮೊದಲ ಪ್ರಯತ್ನ ಕುಸಿದುಬಿದ್ದಿತು.

ಇನ್ನೊಮ್ಮೆ ದೇವದತ್ತನು, ಬುದ್ಧನು ''ಹದ್ದಿನ ಬಂಡೆಯ'' ಮೇಲೆ ಅಡ್ಡಾಡುತ್ತಿರುವಾಗ ತಾನು ಅದರ ಶಿಖರವನ್ನೇರಿ ಅಲ್ಲಿಂದ ಒಂದು ಬಂಡೆಯನ್ನು ಬುದ್ಧನ ಕಡೆ ಉರುಳಿಸಿದನು. ಆ ಬಂಡೆಯು ಇನ್ನೊಂದು ಬಂಡೆಯ ಮೇಲೆ ಬಿದ್ದಿತು. ಆ ರಭಸಕ್ಕೆ ಆ ಬಂಡೆಯೊಡೆದು ಅದರ ಒಂದು ಚೂರು ಬುದ್ಧನ ಕಾಲುಗಳ ಮೇಲೆ ಬಿದ್ದು ಕಾಲಿಗೆ ಪೆಟ್ಟಾಗಿ ರಕ್ತ ಬಂದಿತು. ಬುದ್ಧನು ತಲೆಯನ್ನೆತ್ತಿ ನೋಡಿದನು-''ಅಯ್ಯೋ ಮೂರ್ಖ, ಬುದ್ಧನನ್ನು ಕೊಲ್ಲಲು ನೀನು ಎಷ್ಟೆಷ್ಟು ಪ್ರಯತ್ನಪಡುತ್ತಿರುವೆ''.

ದೇವದತ್ತನು ಮೂರನೆಯ ಸಲ ಪ್ರಯತ್ನಿಸಿದನು. ಮನುಷ್ಯರನ್ನು ಕೊಲ್ಲುವ ಒಂದು ಭಯಂಕರವಾದ ಆನೆಯನ್ನು ಹಿಡಿದು ಅದಕ್ಕೆ ಹೆಂಡವನ್ನು ಕುಡಿಸಿ ಬುದ್ಧನ ಮೇಲೆ ಬಿಟ್ಟನು. ಆ ಆನೆಯು ತನ್ನ ಕಿವಿಗಳನ್ನು ನಿಮಿರಿಸಿಕೊಂಡು ಬಾಲವನ್ನೆತ್ತಿ ಬುದ್ಧನ ಕಡೆ ಘೀಳಿಡುತ್ತಾ ಬಂದಿತು. ಬದ್ಧನು ಅದನ್ನು ಕಂಡು ತನ್ನ ಮೈತ್ರೀ ಶಕ್ತಿಯನ್ನು ಅದರ ಮೇಲೆ ಹರಿಸಿದನು. ಅದರ ಪ್ರಭಾವದಿಂದ ಸಲಗವು ಬುದ್ಧನ ಬಳಿ ಬಂದು ಸುಮ್ಮನೇ ನಿಂತುಬಿಟ್ಟಿತು. ತನ್ನ ದುಷ್ಟಬುದ್ಧಿಯನ್ನು ಮರೆತೇಬಿಟ್ಟಿತು. ಬುದ್ಧನು ಆ ನಳಗಿರಿಯೆಂಬ ಸಲಗನ ಸೊಂಡಿಲನ್ನು ಪ್ರೀತಿಯಿಂದ ತಟ್ಟಿ ಹಿತವಾಗಿ ಅದನ್ನು ಮಾತನಾಡಿಸಿದನು. ಆನೆಯು ಬಹಳ ಗೌರವದಿಂದ ಬುದ್ಧನ ಪಾದಧೂಳಿಯನ್ನು ತನ್ನ ಸೊಂಡಿಲಿನಿಂದ ಎತ್ತಿಕೊಂಡು ತನ್ನ ತಲೆಯ ಮೇಲೆ ಹಾಕಿಕೊಂಡಿತು. ನಂತರ ಹಿಂದು ಹಿಂದಕ್ಕೆ ಹೋಗಿ, ಸಾಕುವಾಗಿ ತನ್ನ ಲಾಯವನ್ನು ಸೇರಿಕೊಂಡಿತು. ಸಾಮಾನ್ಯವಾಗಿ ಮಾವಟಿಗನು ಆನೆಯನ್ನು ಪಳಗಿಸಬೇಕಾದರೆ ಅಂಕುಶದಿಂದ ತಿವಿಯುತ್ತಾರೆ. ಆದರೆ ಬುದ್ಧನ ಮೈತ್ರಿಭಾವವು ಆನೆಯನ್ನು ಪಳಗಿಸಿತು.

ದೇವದತ್ತನು ತಾನು ಸಂಘದ ನಾಯಕನಾಗಬೇಕೆಂದು ಇನ್ನೊಂದು ಪ್ರಯತ್ನವನ್ನು ಮಾಡಿದ. ದಾರಿತಪ್ಪಿದ ಸನ್ಯಾಸಿಗಳನ್ನು ಕೂಡಿಕೊಂಡು-ಅವರು ಐದುನೂರು ಜನರಿದ್ದರು - ಸಂಘವನ್ನು ಒಡೆಯಲು ಪ್ರಯತ್ನಿಸಿದನು. ಅವನು ಬುದ್ಧನ ಬಳಿ ಹೋಗಿ, ಇನ್ನೂ ಹೆಚ್ಚುವರಿಯಾಗಿ ಐದು ನಿಯಮಗಳನ್ನು ಸನ್ಯಾಸಿಗಳು ಕಡ್ಡಾಯವಗಿ ಪಾಲಿಸಬೇಕೆಂದು ಹೇಳುವಂತೆ ಕೇಳಿಕೊಂಡನು. ಅವು ಯಾವುವೆಂದರೆ-

೧) ಭಿಕ್ಷುಗಳು ಜೀವಮಾನ ಪೂರ್ತಿ ಕಾಡಿನಲ್ಲೇ ವಾಸಿಸಬೇಕು.

೨) ಭಿಕ್ಷಾಟನೆಯಿಂದಲೇ ಜೀವನ ನಡೆಸಬೇಕು.

೩) ಕಸದ ರಾಶಿಯಿಂದ ಅಥವಾ ಸ್ಮಶಾನದಿಂದ ಆರಿಸಿಕೊಂಡು ಬಂದ ಚಿಂದಿಬಟ್ಟೆಗಳಿಂದ ಉಡುಪುಗಳನ್ನು ತಯಾರಿಸಿ ಧರಿಸಬೇಕು.

೪) ಮರಗಳ ಕೆಳಗೆ ವಾಸಮಾಡಬೇಕು.

೫) ಬದುಕಿರುವವರೆಗೂ ಮೀನು-ಮಾಂಸಗಳನ್ನು ತಿನ್ನಬಾರದು.

ಬುದ್ಧನು ಈ ಮಾತುಗಳನ್ನು ತಿರಸ್ಕರಿಸುತ್ತಾನೆಂದು ತಿಳಿದಾಗ್ಯೂ ದೇವದತ್ತನು ತನ್ನ ಕೇಳಿಕೆಯನ್ನು ಬುದ್ಧನ ಮುಂದಿಟ್ಟನು. ಬುದ್ಧನು ಈ ಐದೂ ನಿಯಮಗಳನ್ನು ಒಪ್ಪಲಿಲ್ಲ. ಆಗ ಅವನೇ ಸ್ವಂತವಾಗಿ ತನಗೆ ಒತ್ತಾಸೆ ನೀಡುವ ತನ್ನ ಅನುಯಾಯಿಗಳಲ್ಲಿ ಈ ನಿಯಮಗಳನ್ನು ಜಾರಿಗೆ ತಂದನು. ಹೊಸದಾಗಿ ಸನ್ಯಾಸ ದೀಕ್ಷೆಯನ್ನು ಪಡೆದ ಭಿಕ್ಷುಗಳು ''ಧರ್ಮ''ವನ್ನು ಅರಿತಿರಲಿಲ್ಲವಾದ್ದರಿಂದ ಬುದ್ಧನನ್ನು ಬಿಟ್ಟು ದೇವದತ್ತನನ್ನು ತಮ್ಮ ಗುರುವೆಂದು ಸ್ವೀಕರಿಸಿದರು. ನಂತರ ಹಿರಿಯ ಸನ್ಯಾಸಿಗಳಾದ ಸಾರಿಪುತ್ರನೂ, ಮೊಗ್ಗಲಾನನೂ ಅವರಿಗೆ ಬುದ್ಧಧರ್ಮವನ್ನು ವಿವರಿಸಲು ಅವರೆಲ್ಲಾ ಪುನಃ ಬುದ್ಧಸಂಘಕ್ಕೆ ಮರಳಿದರು.

ನಂತರ ದೇವದತ್ತನಿಗೆ ಕೆಟ್ಟ ಕಾಲ ಬಂದಿತು. ಅವನು ಖಾಯಿಲೆ ಬಿದ್ದನು. ಅವನ ಪ್ರಯತ್ನಗಳೆಲ್ಲಾ ಕುಸಿದುಬಿದ್ದುವು. ಸಾಯುವುದಕ್ಕೆ ಮುಂಚೆ ಆತನು ತಾನು ಮಾಡಿದ ತಪ್ಪುಗಳಿಗಾಗಿ ಪರಿತಪಿಸಿದನು. ಸಾಯುವ ಮೊದಲು ಬುದ್ಧನನ್ನು ನೋಡಲು ಬಯಸಿದನು. ಅವನ ಪಾಪದ ಕೊಡ ತುಂಬಿ ನಿಂತದ್ದರಿಂದ ಅವನಿಗೆ ಬುದ್ಧನ ದರ್ಶನವಾಗಲಿಲ್ಲ. ಅವನು ಬುದ್ಧನನ್ನು ನೋಡಲು ಹೋಗುವ ದಾರಿಯಲ್ಲೇ ಜೇತವನದ ವಿಹಾರದ ಬಳಿಯೇ ಮರಣವನ್ನು ಹೊಂದಿದನು. ಆದರೆ ಸಾಯುವ ಮೊದಲು ಬುದ್ಧನಿಗೆ ಶರಣಾದನು.

ಅವನು ಮಾಡಿದ ಪಾಪಕೃತ್ಯಗಳಿಗಾಗಿ ಅವನು ಅನೇಕ ದುಃಖಗಳನ್ನು ಅನುಭವಿಸಿದರೂ ಕೂಡಾ ಮೊದಮೊದಲು ಪವಿತ್ರವಾದ ಜೀವನವನ್ನು ನಡೆಸಿದ್ದರಿಂದ ಅವನ ದೂರದ ಭವಿಷ್ಯತ್ತಿನಲ್ಲಿ ''ಅತ್ತಿಸ್ಸರ'' ಎಂಬ ಹಂತವನ್ನು ತಲುಪಿ ತನ್ನ ಸ್ವಂತ ಸಾಧನೆಯಿಂದ ಜ್ಞಾನ ಪ್ರಕಾಶವನ್ನು ಪಡೆಯುತ್ತಾನೆ ಎಂದು ಹೇಳಲಾಗಿದೆ.

# ೩೮. ಖೇಮಾ

ಬುದ್ಧನು ಸನ್ಯಾಸಿಗಳಿಗೆ ಮುಖಂಡರಾಗಿ ಇಬ್ಬರು ತನ್ನ ಮುಖ್ಯ ಶಿಷ್ಯರನ್ನು ನೇಮಿಸಿದನು. ಅವರು ಮಾನ್ಯರಾದ ಸಾರಿಪುತ್ರ ಮತ್ತು ಮೊಗ್ಗಲಾನ. ಹಾಗೆಯೇ ಸನ್ಯಾಸಿನಿಯರಿಗೂ ಇಬ್ಬರೂ ಮುಖಂಡರಿದ್ದರು. ಅವರು ಖೇಮಾ ಮತ್ತು ಉಪ್ಪಲವಣ್ಣಾ.

ಖೇಮಾ ಬಿಂಬಿಸಾರನ ಬಹಳ ಸುಂದರಿಯಾಗಿದ್ದ ಒಬ್ಬ ರಾಣಿ. ಖೇಮಾ ಸನ್ಯಾಸಿನಿಯಾಗಿದ್ದು ಒಂದು ಅಪರೂಪದ ಘಟನೆ. ಬುದ್ಧನು ತನ್ನ ಸಮ್ಮೋಹಕ ಶಕ್ತಿಯಿಂದ ಬೇರೆಯವರ ಹೃದಯವನ್ನು ಮಾರ್ಪಾಟು ಮಾಡಿದ್ದನು. ಬುದ್ಧನು ಬೇರೆಯವರ ಭಾವನೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಹೀಗೆ ಮಾಡುತ್ತಿರಲಿಲ್ಲ. ಆದರೆ ಅವರ ವಿವೇಕವನ್ನು ಎಚ್ಚರಿಸಲು, ವಿವೇಚನಾಶಕ್ತಿಯನ್ನು ಬೆಳೆಸಲು ಹೀಗೆ ಮಾಡುತ್ತಿದ್ದನು.

ಖೇಮಾ ತುಂಬಾ ಸುಂದರಿಯಾಗಿದ್ದಳು. ಪೂರ್ಣ ಚಂದ್ರನಂತಿದ್ದಳು. ಆ ಪೂರ್ಣಚಂದ್ರನು ಹುಣ್ಣಿಮೆಯ ರಾತ್ರಿಯಲ್ಲಿ ಅಲುಗಾಡದೆ ನಿಂತ ನೀರಿನಲ್ಲಿ ಪ್ರತಿಬಿಂಬಿತವಾಗಿರುವಂತೆ ಇತ್ತು ಅವಳ ಸೌಂದರ್ಯ. ಅವಳ ಕೆನ್ನೆಗಳು ಕಮಲದ ದಳಗಳಂತೆ ನುಣುಪಾಗಿದ್ದುವು. ಅವಳ ಕಣ್ಣುಗಳು ರತ್ನಗಳಂತೆ ಹೊಳೆಯುತ್ತಿದ್ದುವು. ಬುದ್ಧನು ದೈಹಿಕ ಸೌಂದರ್ಯಕ್ಕೆ ಹೆಚ್ಚು ಮಹತ್ವ ಕೊಡುವುದಿಲ್ಲವೆಂದು ತಿಳಿದಿದ್ದ ಅವಳು ಬುದ್ಧನನ್ನು ನೋಡಲು ಇಷ್ಟಪಡುತ್ತಿರಲಿಲ್ಲ.

ತಂಪಾದ ಗಾಳಿ ಬೀಸುತ್ತಿದ್ದ ಒಂದು ಸುಂದರವಾದ ಮುಂಜಾನೆ ಅವಳು ಬುದ್ಧನಿಗಾಗಿ ಬಿಂಬಿಸಾರನು ಕಟ್ಟಿಸಿದ್ದ ವಿಹಾರವನ್ನು ನೋಡಲು ನಿಶ್ಚಯಿಸಿದಳು. ಅದು ಬೊಂಬುಗಳ ತೋಪಿನಲ್ಲಿತ್ತು. ಅಳಿಲುಗಳು ಹಣ್ಣುಗಳ ಮರಗಳ ಮೇಲೆ ಆಟವಾಡುತ್ತಿದ್ದವು. ಆ ಮರಗಳ ಉದ್ದವಾದ ನೆರಳು ಹುಲ್ಲಿನ ಮೇಲೆ ಚೆಲ್ಲಿತ್ತು. ಕೊಳಗಳು ತಾವರೆಗಳಿಂದ ತುಂಬಿದ್ದುವು. ವಾತಾವರಣದಲ್ಲಿ ಜಾಜಿಯ ಸುಗಂಧ ಹರಡಿತ್ತು.

ಆಗ ಖೇಮಳಿಗೆ ಒಂದು ಗಂಭೀರವಾದ, ಸ್ಪಷ್ಟವಾದ ಧ್ವನಿಯು ವಿಹಾರದ, ಬೋಧನೆಯ ಸಭಾಂಗಣದಿಂದ ಕೇಳಿಬರುತ್ತಿತ್ತು. ಆಕೆ ಅದರ ಕಡೆ ಆಕರ್ಷಿತಳಾದಳು. ಅವಳು ಈ ಮೊದಲು ಕೇಳಿದ್ದ ಧ್ವನಿಗಿಂತಲೂ ಬೇರೆ ರೀತಿಯಾಗಿತ್ತು. ಅದು ಬೆಳಗಿನ ಝಾವದಲ್ಲಿ ಚಿಲಿಪಿಲಿಗುಟ್ಟುವ ಹಕ್ಕಿಗಳ ಧ್ವನಿಗಿಂತಲೂ ಇಂಪಾಗಿತ್ತು. ಆ ಧ್ವನಿ ಬಹಳ ಮಧುರವಾಗಿ, ಮೃದುವಾಗಿ, ಬಹಳ ಪ್ರೀತಿ ಮತ್ತು ದಯೆಗಳಿಂದ ಕೂಡಿತ್ತು. ಅಲ್ಲದೆ ಬಹಳ ವಿವೇಚನೆಯಿಂದ ಕೂಡಿದ್ದಿತು.

ದುಂಬಿಯು ಹೂವನ್ನು ಕಂಡು ಆಕರ್ಷಣೆಗೊಳ್ಳುವಂತೆ ಖೇಮಾ ಬುದ್ಧನು ಉಪದೇಶ ಮಾಡುತ್ತಿದ್ದ ಸಭಾಂಗಣಕ್ಕೆ ಬಂದಳು. ಅವಳಿಗೆ ಬುದ್ಧನು ತನ್ನನ್ನು ಗುರುತಿಸುವುದು ಬೇಡವಾದ್ದರಿಂದ ಸೆರಗನ್ನು ಮುಖದ ಮೇಲೆ ಎಳೆದುಕೊಂಡು ಒಂದು ಮೂಲೆಯಲ್ಲಿ ಕುಳಿತಳು. ಬುದ್ಧನಿಗೆ ಅವಳ ವಿಚಾರ ಗೊತ್ತೆ, ಅವಳು ಏನು ಮಾಡುತ್ತಿದ್ದಾಳೆ ಎಂಬುದೂ ಗೊತ್ತಿದೆ ಎಂಬ ವಿಚಾರವನ್ನು ಮಾತ್ರ ಆಕೆ ತಿಳಿಯಳು.

ತನ್ನ ಸಮ್ಮೋಹಕ ಶಕ್ತಿಯಿಂದ ಬುದ್ಧನು ಹದಿನಾರು ವರ್ಷದ ಒಬ್ಬ ಬಹಳ ಸುಂದರಳಾದ ಹುಡುಗಿಯನ್ನು ಸೃಷ್ಟಿಮಾಡಿದನು. ಆ ಹುಡುಗಿ ಬುದ್ಧನ ಪಕ್ಕದಲ್ಲಿ ನಿಂತು ಅವನಿಗೆ ಗಾಳಿ ಹಾಕುತ್ತಿದ್ದಳು. ಖೇಮಳಿಗೆ ಆ ಹುಡುಗಿಯನ್ನು ನೋಡಿ ಬಹಳ ಆಶ್ಚರ್ಯವಾಯಿತು. ನೆಟ್ಟ ಕಣ್ಣುಗಳಿಂದ ಅವಳ ಸೌಂದರ್ಯವನ್ನು ಮೆಚ್ಚುತ್ತಿದ್ದಳು.

''ಅಬ್ಬಾ ಆ ಹುಡುಗಿಯ ಮೂಗಿನ ಸುಂದರ ಮಾಟ, ಅವಳ ಪುಟ್ಟ ಬಾಯಿ, ಆ ಕೋಮಲವಾದ ಕೈಬಾಹುಗಳು, ಬೆರಳುಗಳು, ಎಷ್ಟು ಚೆನ್ನಾಗಿವೆ ಎಂದುಕೊಂಡಳು. ಆ ಹುಡುಗಿಯ ಮೈಬಣ್ಣದಿಂದ ಅವಳು ವಸಂತಋತುವಿನಲ್ಲಿ ಅರಳಿದ ಪುಷ್ಪದಂತಿದ್ದಾಳೆ. ಅವಳು ನಾನು ನೋಡಿರುವ ಎಲ್ಲ ಬಾಲೆಯರಿಗಿಂತಲೂ ಬಹಳ ಬಹಳ ಸುಂದರಿಯಾಗಿದ್ದಾಳೆ. - ಅಷ್ಟೇ ಏಕೆ, ನನಗಿಂತಲೂ ಸುಂದರಳಾಗಿದ್ದಾಳೆ'' ಎಂದುಕೊಂಡಳು.

ಮತ್ತೆ ಒಂದು ಕ್ಷಣದಲ್ಲಿ ಅವಳಿಗೆ ತನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಇದೇ ಹುಡುಗಿಯೇ ಹೀಗೆ ಮುದುಕಿಯಾದಳೇ ? ಈ ಸುಂದರ ಹುಡುಗಿಯ ಶರೀರ ಹೀಗೆ ಬಾಡಿಹೋಗುತ್ತಿದೆಯೇ ? ಬಹಳ ಬೇಗ ಆ ಹುಡುಗಿಯ ಮುಖದಲ್ಲಿ ನೆರಿಗೆಗಳು ಬಂದುವು. ಅವಳ ಕಮಲದಂತೆ ಕೋಮಲವಾದ ತುಟಿಗಳ ಮೇಲಿದ್ದ ಮುಗುಳ್ನಗೆ ಮಾಯವಾಗಿ ಅಲ್ಲಿ ಬೊಚ್ಚುಬಾಯಿ ಮಾಡಿತು. ಅವಳ ಕೂದಲುಗಳು ನರೆತುಹಾದುವು. ಅವಳ ಮೃದುವಾದ, ದೃಢವಾದ ಅಂಗಾಗಂಗಳು ಬಡಕಲಾದುವು. ಅವಳು ನೆಲದ ಮೇಲೆ ಬಿದ್ದಳು. ಒಬ್ಬ ತರುಣಿಯಾದ ಹುಡುಗಿ ಈಗ ಎಂಭತ್ತು ವರ್ಷ ವಯಸ್ಸಿನ ಮುದುಕಿಯಾಗಿ ಮಾರ್ಪಟ್ಟಿದ್ದಳು.

ಖೇಮಾ ಆ ಹೆಂಗಸು ಸತ್ತದ್ದನ್ನು ಕಂಡಳು- ಅವಳ ಮೂಳೆಗಳು ಕೊಳೆತು ಮಣ್ಣುಪಾಲಾದುವು. ಅವಳ ಸುಂದರಿಯಾದ ತಾನೂ ಕೂಡಾ ಒಂದು ದಿನ ಹೀಗೇ ಸಾಯುತ್ತೇನೆಂಬುದನ್ನು ಅರಿತುಕೊಂಡಳು. ಬಾಹ್ಯ ಸೌಂದರ್ಯವು ಶಾಶ್ವತವಲ್ಲವೆಂಬುದನ್ನು ತಿಳಿದುಕೊಂಡಳು.

ಅವಳು ಅರ್ಹಂತ ಪದವಿಯನ್ನು ಪಡೆದಳು. ಬಿಂಬಿಸಾರನಿಂದ ಸಮ್ಮತಿ ಪಡೆದು ಸನ್ಯಾಸದೀಕ್ಷೆ ಹೊಂದಿದಳು. ಉಳಿದ ಎಲ್ಲಾ ಸನ್ಯಾಸಿನಿಯರಿಗಿಂತಲೂ ಉನ್ನತ ಸ್ಥಾನವನ್ನು ಪಡೆದಳು.

# ೩೯. ಅನಾಥಪಿಂಡಿಕ

ಕೋಟ್ಯಾಧೀಶನಾದ ಅನಾಥಪಿಂಡಿಕನ ನಿಜವಾದ ಹೆಸರು ಸುದತ್ತ. ಅವನು ಬಹಳ ಉದಾರಿ. ಬಡವರಿಗೂ, ಅನಾಥರಿಗೂ ಅವನು ಅನ್ನದಾನ ಮಾಡುತ್ತಿದುದರಿಂದ ಅವನಿಗೆ ಅನಾಥಪಿಂಡಿಕನೆಂಬ ಹೆಸರು ಬಂದಿತು.

ಅವನು ರಾಜಕುಮಾರ ಜೇತನಿಗೆ ಬಹಳ ಹಣಕೊಟ್ಟು ಅವನಿಂದ ಒಂದು ಉದ್ಯಾನವನವನ್ನು ಕೊಂಡು ಅದರಲ್ಲಿ ಬಹಳ ಪ್ರಸಿದ್ಧವಾದ ಜೇತವನ ವಿಹಾರವನ್ನು ಕಟ್ಟಿದನು. ಇಲ್ಲಿ ಬುದ್ಧನು ಅನೇಕ ಮಳೆಗಾಲಗಳನ್ನು ಕಳೆದನು. ಆ ಉದ್ಯಾನದ ಬೆಲೆಯೆಷ್ಟೆಂದರೆ ಅದರ ನೆಲದ ಮೇಲೆ ನೆಲವನ್ನು ಮುಚ್ಚುವಷ್ಟು ಚಿನ್ನದ ನಾಣ್ಯಗಳನ್ನು ಹಾಸಲಾಗಿತ್ತು. ಬುದ್ಧನು ತನ್ನ ಜೀವಿತದ ಬಹುಕಾಲವನ್ನು ಇಲ್ಲಿ ಕಳೆದುದರಿಂದ ಬುದ್ಧನು ತನ್ನ ಅನೇಕ ಉಪದೇಶಗಳನ್ನು ಜನರಿಗೆ ಇಲ್ಲಿಯೇ ಕೊಟ್ಟನು. ಈ ಜೇತವನ ವಿಹಾರದಲ್ಲಿ ಬುದ್ಧನು ಇಪ್ಪತ್ತುನಾಲ್ಕು ಮಳೆಗಾಲಗಳನ್ನು ಕಳೆದನು.

ಬುದ್ಧನು ಅನಾಥಪಿಂಡಿಕನಿಗೆ ಹೇಳಿದ ಅನೇಕ ಬೋಧನೆಗಳು ಸಾಧಾರಣ ಗೃಹಸ್ಥರನ್ನು ಕುರಿತು ಹೇಳಿದುದಾಗಿತ್ತು. ಅವುಗಳಲ್ಲಿ ಎರಡು ಉದಾರ ನೀತಿಯ ಮತ್ತು ನಾಲ್ಕು ರೀತಿಯ ಆನಂದಗಳನ್ನು ಪಡೆಯುವುದಾಗಿತ್ತು. ಬುದ್ಧನು ಹೇಳಿದ ಉದಾರ ನೀತಿಯೆಂದರೆ ಬೌದ್ಧರು ತಮ್ಮ ಮೊದಲ ಜೀವನದ ಮೊದಲ ಹಂತದಲ್ಲಿ ಭಿಕ್ಷುಗಳಿಗೆ ದಾನ ಕೊಡುವುದನ್ನೂ, ಈರೀತಿಯ ವಿಹಾರಗಳನ್ನು ಕಟ್ಟುವುದನ್ನೂ ಅಭ್ಯಾಸ ಮಾಡಬೇಕು. ಉದಾರ ನೀತಿಗಿಂತಲೂ ಹೆಚ್ಚಿನದು ''ತ್ರಿರತ್ನ'' ಗಳಿಗೆ ಶರಣಾಗುವುದು ಹಾಗೂ ಐದು ನಿಯಮಗಳನ್ನು ಪಾಲಿಸುವುದು. ಈ ಐದು ಶೀಲಗಳು ನಮ್ಮ ಮಾತುಗಳಲ್ಲೂ, ಕಾರ್ಯಗಳಲ್ಲೂ ಶಿಸ್ತನ್ನು ತರುತ್ತವೆ. ಈ ಐದು ನಿಯಮಗಳಿಗಿಂತಲೂ ಉತ್ತಮವಾದುದು ಯಾವುದೆಂದರೆ ಮೈತ್ರಿ ಮತ್ತು ದಯೆ. ಇವುಗಳ ಮೇಲೆ ಚಿಂತನೆ ಮಾಡುವುದು (ಮೆತ್ತಭಾವನಾ.) ಕೋತಿಯಂತೆ ಹಾರಾಡುವ ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ಅಂತರ್‌ದೃಷ್ಟಿಯನ್ನು ಪಡೆದುಕೊಳ್ಳುವುದು.

ನಾಲ್ಕು ಬಗೆಯ ಆನಂದವನ್ನು ಚಿಂತಿಸುವುದರಿಂದ ಗೃಹಸ್ಥನು ಆನಂದವಾಗಿರುತ್ತಾನೆ. ಬುದ್ಧನು ಹೇಳಿದ ಈ ಪರಮ ಸುಖಗಳು ಯಾವುವೆಂದರೆ - ಮೂಲಕಷ್ಟದಿಂದ ಸಿಗುವ ಆನಂದ, ಹಣದಿಂದ ಸಿಗುವ ಆನಂದ, ಸಾಲಗಾರನಲ್ಲದರ ಆನಂದ ಮತ್ತು ಯಾರಿಂದಲೂ ತೆಗಳಿಸಿಕೊಳ್ಳದಿರುವುದರಿಂದ ಉಂಟಾಗುವ ಆನಂದ.

ಸ್ವಾಮಿತ್ವದಿಂದ ಸಿಗುವ ಆನಂದವೆಂದರೆ ಪ್ರಾಮಾಣಿಕವಾಗಿ ಹಾಗೂ ಕಷ್ಟಪಟ್ಟು ದುಡಿಯುವುದರಿಂದ ಧನವನ್ನು ಸಂಪಾದನೆ ಮಾಡಿ ಸುಖಿಸುವುದು. ಧನದಿಂದ ತೃಪ್ತಿಪಡುವುದೆಂದರೆ ತನ್ನ ಕಾರ್ಯಭಾರವನ್ನೆಲ್ಲಾ ಮುಗಿಸಿ ತನ್ನ ಧನದಿಂದ ಸುಖವಾಗಿರುವುದು. ಸಾಲಗಾರನಾಗಿಲ್ಲದಿರುವುದರ ಸುಖವೆಂದರೆ ಒಬ್ಬ ಗೃಹಸ್ಥನು, ಹೆಚ್ಚಾಗಿಯಾಗಲೀ, ಕಡಿಮೆಯಾಗಿ ಆಗಲೀ ತಾನು

ಸಾಲಗಾರನಲ್ಲವೆಂದು ತಿಳಿದಾಗ ಆತನಿಗೆ ಬಹಳ ತೃಪ್ತಿ ಸಿಗುವುದು. ಯಾರಿಂದಲೂ ತೆಗಳಿಸಿಕೊಳ್ಳದಿರುವುದರಿಂದ ಉಂಟಾಗುವ ಪರಮಸುಖವೆಂದರೆ ಮನುಷ್ಯನ ಶರೀರದಿಂದಾಗಲೀ, ಮಾತಿನಿಂದಾಗಲೀ, ಮನಸ್ಸಿನಿಂದಾಗಲೀ ಇತರರಿಗೆ ನೋವುಂಟು ಮಾಡಿರುವುದು. ಇಂತಹ ಮನುಷ್ಯನನ್ನು ಯಾರೂ ತೆಗಳುವುದಿಲ್ಲ.

ಅನಾಥಪಿಂಡಿಕನು ಮೊಟ್ಟಮೊದಲು ಬುದ್ಧನನ್ನು ಭೇಟಿಮಾಡಿದಾಗ ಬುದ್ಧನ ಬಗ್ಗೆ ಅವನಿಗೆ ಎಷ್ಟು ನಂಬಿಕೆ ಮೂಡಿಬಂದಿತೆಂದರೆ ಅವನ ಶರೀರದಿಂದ ಒಂದು ಬಗೆಯ ಪ್ರಕಾಶವಲಯ ಗೋಚರಿಸಿತು. ಮೊದಲ ಬಾರಿ ಬುದ್ಧನಿಂದ ಧರ್ಮೋಪದೇಶ ಕೇಳಿದ ನಂತರ ಅವನು ಸೋತಾಪನ್ನನಾದನು. ಅಂದರೆ ಧಮ್ಮಪಥದ ಮೊದಲ ಹಂತವನ್ನು ತಲುಪಿದನು.

## ೪೦. ಬುದ್ಧನೂ ಮತ್ತು ರೈತನಾದ ಕಸೀ ಭಾರದ್ವಾಜನು

ಒಮ್ಮೆ ಬುದ್ಧನು ಮಗಧದ ಏಕನಾಲ ಎಂಬ ಹಳ್ಳಿಯಲ್ಲಿದ್ದನು. ಆಗ ಮಳೆಗಾಲ. ಮಳೆ ಸುರಿದು ಭೂಮಿ ಹದವಾಗಿ ಬಿತ್ತನೆಗೆ ಅನುಕೂಲವಾಗಿತ್ತು. ಒಂದು ದಿನ ಮುಂಜಾನೆ, ಮರದ ಎಲೆಗಳು ಹನಿಯಿಂದ ಇನ್ನೂ ಒದ್ದೆಯಾಗಿದ್ದವು. ಬುದ್ಧನು ಒಂದು ಹೊಲದ ಕಡೆ ಹೋದನು. ಅಲ್ಲಿ ಕಸೀ ಭಾರದ್ವಾಜನೆಂಬ ಬ್ರಾಹ್ಮಣ ಕೃಷಿಕನು ಐದು ನೂರು ನೇಗಿಲುಗಳಿಂದ ಹೊಲವನ್ನು ಉಳಿಸುತ್ತಿದ್ದನು. ಬುದ್ಧನು ಅಲ್ಲಿಗೆ ತಲುಪಿದಾಗ ಬ್ರಾಹ್ಮಣನು ತನ್ನ ಕೆಲಸಗಾರರಿಗೆ ಆಹಾರವನ್ನು ಹಂಚುತ್ತಿದ್ದನು. ಬುದ್ಧನು ತನ್ನ ಸರದಿ ಭಿಕ್ಷೆಗಾಗಿ ಕಾಯುತ್ತಿದ್ದನು. ಆದರೆ ಬ್ರಾಹ್ಮಣನು ಅವನನ್ನು ನೋಡಿ ಪರಿಹಾಸ್ಯ ಮಾಡುತ್ತಾ ಹೇಳಿದನು.

''ನಾನು ಹೊಲವನ್ನು ಉತ್ತು ಬೀಜವನ್ನು ಬಿತ್ತಿ ಅನ್ನವನ್ನು ಉಣ್ಣುತ್ತೇನೆ. ಎಲೈ ಸನ್ಯಾಸಿಯೇ, ನೀನು ಸಹಾ ಉತ್ತು, ಬಿತ್ತಿ ಅನ್ನವನ್ನು ಉಣ್ಣಬೇಕು''.

''ಎಲೈ ಬ್ರಾಹ್ಮಣನೇ, ನಾನೂ ಕೂಡಾ ಉತ್ತು-ಬಿತ್ತಿಯೇ ಉಣ್ಣುವುದು'' ಬುದ್ಧನೆಂದನು.

ಬ್ರಾಹ್ಮಣನಿಗೆ ಸ್ವಲ್ಪ ಕಸಿವಿಸಿಯಾಯಿತು-''ನೀನು ಹೊಲವನ್ನು ಉಳುವುದಾಗಿಯೂ, ಬೀಜವನ್ನು ಬಿತ್ತುವುದಾಗಿಯೂ ಹೇಳುತ್ತಿರುವೆ. ನಾನು ನೀನು ಉಳುವುದನ್ನು ನೋಡಿಯೇ ಇಲ್ಲವಲ್ಲಾ?''

ಬುದ್ಧನು ಉತ್ತರಿಸಿದನು-ನಾನು ನಂಬಿಕೆಯೆಂಬ ಬೀಜಗಳನ್ನು ಬಿತ್ತುತ್ತೇನೆ. ನನ್ನ ಶಿಸ್ತೇ ಮಳೆ. ವಿವೇಕವೇ ನನ್ನ ನೇಗಿಲು. ನನ್ನ ವಿನಯಶೀಲತೆಯು ನೇಗಿಲಿನ ಶಿರ. ನನ್ನ ಮನಸ್ಸು ಹಗ್ಗ, ನನ್ನ ಲಕ್ಷ್ಯವೇ ನೇಗಿಲಿನ ಮೊಳೆಮತ್ತು ಊರುಗೋಲು.

ನನ್ನ ಕಾರ್ಯ, ಮಾತು ಮತ್ತು ಆಹಾರ ಒಂದು ಹದ್ದಿನಲ್ಲಿರುತ್ತವೆ. ನಾನು ನನ್ನ ಕಾರ್ಯವನ್ನು ಸತ್ಯದಿಂದ ಮಾಡುತ್ತೇನೆ. ನಾನು ದುಃಖಪಡುವುದಿಲ್ಲ. ಆದ್ದರಿಂದ ನನಗೆ ಆನಂದವಿರುತ್ತದೆ. ನಾನು

ಸತತ ಪ್ರಯತ್ನದಿಂದ ನಿರ್ವಾಣ ದೊರಕುವವರೆಗೂ ನನ್ನ ನೇಗಿಲನ್ನು ಹಿಡಿದಿರುತ್ತೇನೆ. ನಾನು ಹೀಗೆ ಉಳುತ್ತೇನೆ. ಅದು ನನಗೆ ಅಮರತ್ವವನ್ನು ಕೊಡುತ್ತದೆ. ಹೀಗೆ ಉಳುವುದರಿಂದ ಪ್ರತಿಯೊಬ್ಬನೂ ದುಃಖದಿಂದ ತಪ್ಪಿಸಿಕೊಳ್ಳುತ್ತಾನೆ.

ಹೀಗೆ ಬುದ್ಧನು ತಿಳಿಸಿಕೊಟ್ಟ ನಂತರ ಬ್ರಾಹ್ಮಣನಿಗೆ ತನ್ನ ತಪ್ಪು ತಿಳಿಯಿತು. ಅವನು ಹೇಳಿದನು-''ಮಹಾತ್ಮನಾದ ಬುದ್ಧನು ಈ ಪರಮಾನ್ನವನ್ನು ತಿನ್ನಲಿ. ಗೌತಮನು ಕೂಡಾ ಒಬ್ಬ ರೈತನೇ. ಏಕೆಂದರೆ ಅವನ ಬೆಳೆಯು ಮರಣರಹಿತ ಫಲವನ್ನು ಕೊಡುತ್ತದೆ'' ಹೀಗೆ ಹೇಳಿ ಬ್ರಾಹ್ಮಣನು ಬುದ್ಧನಿಗೆ ಒಂದು ತಪ್ಪಲೆಯ ತುಂಬಾ ಪರಮಾನ್ನವನ್ನು ಕೊಟ್ಟನು.

ಬುದ್ಧನು ಅದನ್ನು ಸ್ವೀಕರಿಸಲಿಲ್ಲ. ತನ್ನ ಧರ್ಮೋಪದೇಶಕ್ಕೆ ಬದಲಾಗಿ ಅದನ್ನು ತೆಗೆದುಕೊಳ್ಳುವುದಿಲ್ಲವೆಂದನು.

ಬ್ರಾಹ್ಮಣನು ಬುದ್ಧನ ಪಾದಗಳಿಗೆ ಅಡ್ಡಬಿದ್ದು ತನ್ನನ್ನು ಸನ್ಯಾಸಿಯನ್ನಾಗಿ ಮಾಡಿಕೊಳ್ಳಬೇಕೆಂದು ಕೇಳಿಕೊಂಡನು. ನಂತರ ಕಸೀಭಾರದ್ವಾಜನು ಶೀಘ್ರವಾಗಿ ಅರ್ಹಂತ ಪದವಿ ಪಡೆದನು.

## ೪೧. ಮಾಗಂದಿಯಾ

ಮಾಗಂದಿಯಾ ಒಬ್ಬ ಸುಂದರಳಾದ ಹುಡುಗಿ. ಅನೇಕ ಧನವಂತರು ಅವಳನ್ನು ಮದುವೆಯಾಗಲು ಬಯಸಿದರು. ಅವರಲ್ಲಿ ಯಾರೂ ಅವಳಿಗೆ ತಕ್ಕಾದವರಿಲ್ಲವೆಂದು ಅವಳ ತಾಯಿ-ತಂದೆಯರು ಅವರನ್ನೆಲ್ಲಾ ನಿರಾಕರಿಸಿದರು. ಅವಳ ತಂದೆ-ತಾಯಿಗಳಿಗೆ ಯಾರಾದರೂ ಒಪ್ಪಿಗೆಯಾದರೂ ಅವಳು ಅವನನ್ನೂ ಮದುವೆಯಾಗಬಯಸುತ್ತಿರಲಿಲ್ಲ. ಒಬ್ಬ ರಾಜನಿಗಿಂತಲೂ ಕಡಿಮೆ ದರ್ಜೆಯವನನ್ನು ಮದುವೆಯಾಗಲು ನಿರಾಕರಿಸುತ್ತಿದ್ದಳು. ಅವಳು ತನ್ನ ಸೌಂದರ್ಯದ ಬಲದಿಂದ ರಾಜನಂತಹವನನ್ನು ಮದುವೆಯಾಗಲು ನಿಶ್ಚಯಿಸಿದಳು.

ಒಂದು ದಿನ ಬುದ್ಧನು ಪ್ರಪಂಚವನ್ನು ನಿರೀಕ್ಷಿಸುತ್ತಿದ್ದಾಗ ಅವನಿಗೆ ಮಾಗಂದಿಯಾಳ ತಾಯಿ-ತಂದೆಯರು ಆಧ್ಯಾತ್ಮಿಕವಾಗಿ ರೂಪುಗೊಂಡಿರುವುದು ಕಂಡಿತು. ಒಂದು ಸಲ ಅವನ ಬಾಯಿಂದ ಬಂದರೆ ಸಾಕು. ಅವರ ವಿವೇಕ ಎಚ್ಚರಗೊಂಡು ಸತ್ಯದ ಕಡೆ ಹೊರಳುತ್ತಿತ್ತು. ಒಬ್ಬ ಬ್ರಾಹ್ಮಣನು ತನ್ನ ಹಳ್ಳಿಯ ಹೊರಗಡೆ ಯಜ್ಞ ಮಾಡುತ್ತಿರುವುದುನ್ನು ಬುದ್ಧನು ಕಂಡನು.

ಮಾಗಂದಿಯಳ ತಂದೆಯು ಬುದ್ಧನು ಬರುತ್ತಿರುವುದನ್ನು ಕಂಡು ಅವನ ಸೌಂದರ್ಯ, ಶಾಂತಿ ಮತ್ತು ದೊಡ್ಡ ಗುಣವನ್ನು ಕಂಡನು. ಇವನನ್ನು ಹೊರತಾಗಿ ತನ್ನ ಮಗಳಿಗೆ ಬೇರೆ ಯಾರೂ ಯೋಗ್ಯರಲ್ಲವೆಂಬುದಾಗಿ ಯೋಚಿಸಿದನು. ''ಎಲೈ ಸನ್ಯಾಸಿಯೇ ಹೋಗಬೇಡ. ನಿಲ್ಲು ನಾನು ನನ್ನ ಮಗಳನ್ನು, ನಿನ್ನನ್ನು ನೋಡಲು ಕರೆದುಕೊಂಡು ಬರುವವರೆಗೂ ನೀನಿಲ್ಲಿ ಕಾಯುತ್ತಿರು ಎಂದು ಹೇಳಿ ನೀನೇ ಅವಳಿಗೆ ಸರಿಯಾದ ಜೋಡಿ ಹಾಗೆ ಅವಳೂ ನಿನಗೆ ತಕ್ಕವಳು ಎಂದು ಹೇಳಿದನು.

ಬುದ್ಧನು ಮಾತನಾಡದೇ ಸುಮ್ಮನೇ ನಿಂತನು. ಬದಲಾಗಿ ತನ್ನ ಕಾಲಿನಿಂದ ಭೂಮಿಯನ್ನು ತುಳಿದು ತನ್ನ ಪಾದಗಳ ಗುರುತನ್ನು ಮೂಡಿಸಿ ಹೊರಟುಹೋದನು. ಮನೆಗೆ ಬಂದು ಬಹಳ ಆತುರವಾಗಿ ಬ್ರಾಹ್ಮಣನು ತನ್ನ ಹೆಂಡತಿಗೆ ಹೇಳಿದನು-''ಮಗಳಿಗೆ ಬೇಗ ಅಲಂಕಾರ ಮಾಡು. ನಾನು ಅವಳಿಗೆ ತಕ್ಕವನಾದ ವರನನ್ನು ನೋಡಿದ್ದೇನೆ''. ಅವರು ಮೂರು ಜನರು ಬುದ್ಧನಿದ್ದ ಸ್ಥಳಕ್ಕೆ ಬಂದಾಗ ಅಲ್ಲಿ ಬುದ್ಧನಿರಲಿಲ್ಲ. ಅಲ್ಲಿ ಬರಿಯ ಹೆಜ್ಜೆಯ ಗುರುತಿರುವುದನ್ನು ಅವರು ಕಂಡರು.

ಅವನ ಹೆಂಡತಿಯು ರೇಖೆಗಳನ್ನು ತಿಳಿದವಳಾಗಿದ್ದಳು. ಅವಳು ಹತ್ತಿರ ಬಂದು ಬುದ್ಧನ ಪಾದಗಳ ಚಿಹ್ನೆಯನ್ನು ಕಂಡು ಈತ ಸಂಸಾರಿಯಾಗುವುದಿಲ್ಲ- ಸನ್ಯಾಸಿಯಾಗಿದ್ದಾನೆ. ಆದ್ದರಿಂದ ನನ್ನ ಮಗಳನ್ನು ಕೊಡಲಾರೆ.

ನೀನೋ ನಿನ್ನ ರೇಖಾಶಾಸ್ತ್ರವೋ? ನಿನಗೆ ನೀರಿನ ಬಿಂದಿಗೆಯಲ್ಲಿ ಮೊಸಳೆ ಕಾಣುತ್ತದೆ. ಮನೆಯ ಮಧ್ಯೆ ಕಳ್ಳರನ್ನು ನೋಡುತ್ತೀಯೆ. ಅಲ್ಲಿ ನೋಡು ಅವನು ಆಲದ ಮರದ ಕೆಳಗೆ ಕುಳಿತಿದ್ದಾನೆ. ಇವನಿಗಿಂತಲೂ ಸುಂದರವಾಗಿರುವವರನ್ನು ನೀನು ಕಾಣಲಾರೆ. ಈ ಸಲ ಈ ವರನ ಬಗ್ಗೆ ನೀನೇನು ಕೊಂಕನ್ನು ನುಡಿಯಲಾರೆ.

''ಎಲೈ ಸನ್ಯಾಸಿಯೇ, ನಾನು ನನ್ನ ಮಗಳನ್ನು ನಿನಗೆ ವಿವಾಹ ಮಾಡಿಕೊಡುತ್ತೇನೆ'' ಎಂದ ಬ್ರಾಹ್ಮಣ. ಬುದ್ಧನು ಅದನ್ನು ನಿರಾಕರಿಸಿ ತಾನು ಪ್ರಾಪಂಚಿಕ ಸುಖ- ಭೋಗಗಳನ್ನು ಬಿಟ್ಟಿರುವುದಾಗಿ ಹೇಳಿ ಬಲು ಸುಂದರಿಯರಾದ ಮಾರನ ಮಕ್ಕಳೂ ಸಹಾ ಅವನನ್ನು ಮರುಳು ಮಾಡರು ಎಂದು ತಿಳಿಸಿದನು.

ಇದನ್ನು ಕೇಳಿ ಬ್ರಾಹ್ಮಣನೂ ಅವನ ಹೆಂಡತಿಯೂ ಈ ಪ್ರಾಪಂಚಿಕ ಸುಖವೆಂಬುದು ಬಹಳ ದುಃಖಕರವಾಗಿರುತ್ತದೆ. ಇದು ನೋಡಲು ಎಷ್ಟೇ ಸುಂದರವಾಗಿದ್ದರೂ ಇದಕ್ಕೆ ವಶವಾಗಬಾರದೆಂದು ನಿಶ್ಚಯಿಸಿ ಅನಾಗಾಮಿ ಪದವನ್ನು ಹೊಂದಿದರು. ಅನಾಗಾಮಿ ಎಂಬುದು ಧಮ್ಮಪಥದ ಮೂರನೆಯ ಹಂತ

ಮಾಗಂದಿಯಳು ಆಧ್ಯಾತ್ಮದಲ್ಲಿ ಇನ್ನೂ ಪ್ರಬುದ್ಧಳಾಗಿರದುದರಿಂದ ಅವಳಿಗೆ ಈ ವಿಷಯಗಳ ಅರ್ಥವೇ ಆಗಲಿಲ್ಲ. ಸಾಲದ್ದಕ್ಕೆ ಅವಳಿಗೆ ಅಹಂಕಾರ ಬೇರೆ ಇತ್ತು. ಬುದ್ಧನು ತನ್ನ ಸೌಂದರ್ಯವನ್ನು ಅಪಮಾನಗೊಳಿಸುತ್ತಾನೆಂದೆನಿಸಿತು. ತಮ್ಮ ಮೊದಲ ನೋಟದಲ್ಲೇ ಎಂತೆಂಥವರು ನನ್ನ ಸೌಂದರ್ಯಕ್ಕೆ ಮರುಳಾಗಿ ನನ್ನನ್ನು ಪ್ರೀತಿಸಲು ಬಂದರು. ಬುದ್ಧನು ನನ್ನನ್ನು ಮದುವೆಯಾಗದಿದ್ದರೂ ಚಿಂತೆಯಿಲ್ಲ. ನನ್ನ ಶರೀರವು ಬಹಳ ಕೊಳಕಾಗಿದೆ ಎಂದು ಹೇಳಿಬಿಡಲಿ. ತನ್ನ ಮುಷ್ಟಿಗಳನ್ನು ಬಲವಾಗಿ ಮುಚ್ಚಿಕೊಂಡು ಮೆಲ್ಲಗೆ ಹೇಳಿಕೊಂಡಳು-''ಸ್ವಲ್ಪ ತಾಳು ಸನ್ಯಾಸಿಯೇ, ನಾನು ಬಲಶಾಲಿಯಾದ ಗಂಡನನ್ನು ಮದುವೆಯಾದ ನಂತರ ನಿನಗೆ ಒಂದು ಪಾಠವನ್ನು ಕಲಿಸುತ್ತೇನೆ''.

ಆಮೇಲೆ ಅವಳು ''ಉದೇನಾ'' ರಾಜ್ಯದ ದೊರೆಯನ್ನು ವಿವಾಹವಾದಳು. ಬುದ್ಧನು ತಮ್ಮ ನಗರಕ್ಕೆ ಬಂದಿರುವ ಸಮಾಚಾರ ಕೇಳಿ ಅವಳು ಬುದ್ಧನ ಬಗೆಗಿನ ಹಗೆಯು ಭುಗಿಲೆಂದು ಎದ್ದಿತು. ಅವಳು ಜನಗಳಿಗೆ ಲಂಚವನ್ನು ಕೊಟ್ಟು ಬುದ್ಧನನ್ನು ನಗರದಿಂದ ಆಚೆಗೆ ಅಟ್ಟುವಂತೆ ಹೇಳಿದಳು.

ಬುದ್ಧನ ಜೊತೆಯಲ್ಲಿದ್ದ ಆನಂದನು ಜನಗಳಿಂದ ಆಗುವ ಅವಮಾನವನ್ನು ಸಹಿಸದಾದನು. ಆದರೆ ಬುದ್ಧನು ತಾಳ್ಮೆಯಿಂದಿರುವಂತೆ ಹೇಳಿದನು. ಸಹನೆಯನ್ನು ತಂದುಕೊಳ್ಳುವಂತೆ ಉಪದೇಶಿಸಿದನು. ''ಕಾಡಿನಲ್ಲಿರುವ ಆನೆಯು ತನ್ನ ಮೇಲೆ ಎಸೆಯಲಾದ ಆಯುಧಗಳ ನೋವನ್ನು ಹೇಗೆ ಸಹಿಸಿಕೊಳ್ಳುತ್ತದೆಯೋ ಅದೇ ರೀತಿ ನಾನು ಧಾರ್ಮಿಕರಲ್ಲದವರಿಂದ ಬಂದ ಬಯ್ಗುಳವನ್ನು ಸಹಿಸಿಕೊಳ್ಳುತ್ತೇನೆ. ಈ ಬಯ್ಯುವುದು ಇತ್ಯಾದಿ ಬಹಳ ಕಾಲವಿರಲಾರದು. ಏಕೆಂದರೆ ಬುದ್ಧನ ಶಕ್ತಿ ಅಷ್ಟು ಬಲವಾಗಿದೆ ಏಳು ದಿನಗಳಲ್ಲಿ ಎಲ್ಲ ಸರಿಹೋಗುತ್ತದೆ''. ಅವರು ಉದೇನಾದಲ್ಲೇ ಉಳಿದುಕೊಂಡರು. ಬಯ್ಗುಳೆಲ್ಲಾ ಕ್ರಮೇಣ ನಿಂತುಹೋಯಿತು.

## ೪೨. ರಾಕ್ಷಸನಾದ ಅಲವಾಕ

ಅಲಾವಿ ಎಂಬ ನಗರದಲ್ಲಿ ಅಲವಾಕನೆಂಬ ಕ್ರೂರಿಯೊಬ್ಬನು ವಾಸಿಸುತ್ತಿದ್ದನು. ಅವನು ಬಹಳ ಕ್ರೂರಿಯೂ, ಬಲಶಾಲಿಯೂ ಆಗಿದ್ದು ಮನುಷ್ಯರನ್ನು ತಿಂದುಹಾಕುತ್ತಿದ್ದನು.

ಒಂದು ದಿನ ಆ ದೇಶದ ಮಹಾರಾಜನು ಬೇಟೆಗೆ ಹೋಗಿರುವಾಗ ಅಲವಾಕನ ಕೈಗೆ ಸಿಕ್ಕಿಬಿದ್ದನು. ದೊರೆಯು ತನ್ನನ್ನು ಕೊಲ್ಲಬಾರದೆಂದು ಅಲವಾಕನನ್ನು ನಾನಾ ಬಗೆಯಿಂದ ಬೇಡಿಕೊಂಡನು. ಅದಕ್ಕೆ ಅಲವಾಕನು ತನಗೆ ಪ್ರತಿದಿನವೂ ತಿನ್ನಲಿಕ್ಕಾಗಿ ಒಬ್ಬ ಮನುಷ್ಯನನ್ನು ಕಳಿಸಿದರೆ ದೊರೆಯನ್ನು ಬಿಟ್ಟುಬಿಡುವುದಾಗಿ ಹೇಳಿದನು. ದೊರೆಯು ಒಪ್ಪಿಕೊಂಡು ಬಂದನು.

ಪ್ರತಿದಿನ ಒಬ್ಬ ಮನುಷ್ಯನ ಕೈಲಿ ಊಟವನ್ನು ಕಳಿಸಬೇಕೆಂತಲೂ ಅವನು ಊಟದ ತಟ್ಟೆಯನ್ನು ಒಂದು ಮರದ ಕೆಳಗೆ ಇಟ್ಟು ಬರಬೇಕೆಂತಲೂ ಗೊತ್ತು ಮಾಡಲ್ಪಟ್ಟಿತು. ಮೊದಲು ಸೆರಮನೆಯಲ್ಲಿದ್ದ ಬಂದಿಗಳು ಈ ಸಾಧಾರಣವಾದ ಕೆಲಸಕ್ಕೆ ತಾವೇ ಹೋಗುತ್ತೇವೆಂದು ಹೇಳಿ ಹೋಗತೊಡಗಿದರು. ಆದರೆ ದಿನಗಳು ಕಳೆದ ಮೇಲೆ ಒಬ್ಬೊಬ್ಬರಾಗಿ ಮಾಯವಾಗತೊಡಗಿದರು. ಯಾರೂ ಹಿಂದಿರುಗಿ ಬಂದು ಅಲ್ಲಿ ನಡೆದದ್ದನ್ನು ಹೇಳುವವರೇ ಇಲ್ಲವಾಯ್ತು. ಕೈದಿಗಳನ್ನು ಬಲವಂತವಾಗಿ ಕಳಿಸಲಾಗುತ್ತಿತ್ತು.

ಕೆಲ ದಿನಗಳ ಮೇಲೆ ಸೆರಮನೆಯೂ ಬರಿದಾಯ್ತು. ಯಾರೂ ಹೋಗುವವರೇ ಇರಲಿಲ್ಲ. ಆಗ ಮಂತ್ರಿಗಳು ಒಂದು ಉಪಾಯವನ್ನು ಹುಡುಕಿದರು. ಬೀದಿಗಳಲ್ಲಿ ಚಿನ್ನದ ನಾಣ್ಯಗಳನ್ನು ತುಂಬಿದ ಪೊಟ್ಟಣಗಳನ್ನು ಬಿಸಾಡಬೇಕೆಂತಲೂ ಯಾರಾದರೂ ಅದನ್ನೆತ್ತಿಕೊಂಡರೆ ಅವನು ಕಳ್ಳನೆಂದು ಹಿಡಿದು ಕಳಿಸಬೇಕೆಂತಲೂ ತೀರ್ಮಾನಿಸಲಾಯ್ತು. ಆದರೆ ಯಾರೂ ಅದನ್ನು ಎತ್ತಿಕೊಳ್ಳಲೇ ಇಲ್ಲ. ಆಗ ದೊರೆಯು ಮಕ್ಕಳನ್ನು ಹಿಡಿದು ಕಳಿಸಬೇಕೆಂದು ತೀರ್ಮಾನಿಸಿದನು. ಇದನ್ನು ಕೇಳಿದ ಜನಗಳು ಆ

ಊರನ್ನೇ ಬಿಟ್ಟು ಹೋಗತೊಡಗಿದರು. ಹೀಗಾಗಿ ಊರೇ ಬರಿದಾಯ್ತು. ಇನ್ನು ಕಳಿಸಲಿಕ್ಕೆ ಆ ದೊರೆಯ ಮಗನೊಬ್ಬನೇ. ದೊರೆಯು ದುಃಖದಿಂದ ಮಗನನ್ನೇ ಕಳಿಸಲು ತೀರ್ಮಾನಿಸಿದನು.

ಆ ದಿನ ಬುದ್ಧನು ಆ ನಗರದ ಬಳಿಯೇ ಇದ್ದನು. ಆತನು ತನ್ನ ಒಳಗಣ್ಣಿನಿಂದ ಪ್ರಪಂಚದಲ್ಲಿ ಏನು ನಡೆಯುತ್ತಿದೆಯೆಂದು ನೋಡಿದಾಗ ಈ ದೃಶ್ಯ ಕಂಡುಬಂದಿತು. ದೊರೆಯ ಹಾಗೂ ಅವನ ಮಗನ ಮೇಲಿನ ಅನುಕಂಪದಿಂದ ಬುದ್ಧನು ಆ ರಾಕ್ಷಸ ಗವಿಗೆ ತಾನೇ ನಡೆದು ಸಂಜೆಯ ಹೊತ್ತಿಗೆ ಆ ಗವಿಯ ಬಾಗಿಲಿಗೆ ಬಂದನು.

ರಾಕ್ಷಸನು ಆಗ ಬೆಟ್ಟದ ಕಡೆ ಹೋಗಿದ್ದನು. ಗುಹೆಯ ಕಾವಲುಗಾರನನ್ನು ಬುದ್ಧನು ಅದೊಂದು ರಾತ್ರಿ ಆ ಗವಿಯಲ್ಲಿ ಉಳಿದುಕೊಳ್ಳಲು ತನಗೆ ಅವಕಾಶ ಮಾಡಿಕೊಡಬೇಕೆಂದು ಕಾವಲುಗಾರನನ್ನು ಕೇಳಿದನು. ಕಾವಲುಗಾರನು ತನ್ನ ಯಜಮಾನನನ್ನು ಕೇಳಿಕೊಂಡು ಬರಲು ಬೆಟ್ಟದ ಕಡೆ ಹೋದಾಗ ಬುದ್ಧನು ಗವಿಯನ್ನು ಪ್ರವೇಶಿಸಿ, ರಾಕ್ಷಸನು ಕುಳಿತುಕೊಳ್ಳುತ್ತಿದ್ದ ಆಸನದ ಮೇಲೆ ಕುಳಿತುಕೊಂಡನು. ಆ ರಾಕ್ಷಸನ ಹೆಂಡತಿಯರಿಗೆ ಧರ್ಮೋಪದೇಶವನ್ನು ಮಾಡತೊಡಗಿದನು.

ರಾಕ್ಷಸನು ತನ್ನ ಸೇವಕನಿಂದ ಈ ವಿಚಾರವನ್ನು ಕೇಳಿ ಬಹಳ ರೋಷದಿಂದ ಗವಿಯ ಬಳಿಗೆ ಬಂದನು. ತನಗಿದ್ದ ಅಲೌಕಿಕ ಶಕ್ತಿಯಿಂದ ಬಿರುಗಾಳಿ, ಮಳೆ, ಮಿಂಚು, ಗುಡುಗುಗಳನ್ನು ಸೃಷ್ಟಿ ಮಾಡಿದನು. ಇಡೀ ಕಾಡು ಮಿಂಚು-ಗುಡುಗುಗಳ ಆರ್ಭಟದಿಂದ ತಲ್ಲಣಿಸಿತು. ಆದರೆ ಇದರಿಂದ ಬುದ್ಧನಿಗೆ ಏನೂ ಭಯವಾಗಲಿಲ್ಲ.

ನಂತರ ಅಲವಾಕನು ಬಾಣ-ಭಲ್ಲೆ ಮೊದಲಾದ ಆಯುಧಗಳನ್ನು ಬುದ್ಧನ ಮೇಲೆ ಎಸೆಯತೊಡಗಿದನು. ಅವುಗಳು ಬುದ್ಧನನ್ನು ಕೊಲ್ಲದೆ ಅವನ ಕಾಲುಗಳ ಬಳಿ ಬಂದು ಬೀಳತೊಡಗಿದುವು.

ಬುದ್ಧನನ್ನು ಭಯಪಡಿಸಲಾಗದೆ ಅಲವಾಕನು ಬುದ್ಧನನ್ನು ಕೇಳಿದನು. ನೀನೊಬ್ಬ ಸನ್ಯಾಸಿ. ಮನೆಯಲ್ಲಿ ಯಜಮಾನನಿಲ್ಲದಿರುವಾಗ ಬಂದು ಅವನ ಹೆಂಡತಿಯೊಡನಿರುವುದು ಸರಿಯೆ ?

ಹೀಗೆ ಹೇಳಲು ಬುದ್ಧನು ಗುಹೆಯಿಂದ ಹೊರಗೆ ಹೊರಡಲು ಸಿದ್ಧನಾದನು. ಅಲವಾಕನು -ನಾನೆಂತಹ ಮೂರ್ಖ. ಕೈಗೆ ಸಿಕ್ಕಿರುವ ಈ ಮನುಷ್ಯನೊಡನೆ ಬರಿಯ ಹೆದರಿಸುವುದರಲ್ಲೇ ಕಾಲ ಕಳೆಯುತ್ತಿದ್ದೇನೆ ಎಂದುಕೊಂಡು ಬುದ್ಧನನ್ನು ಒಳಗೆ ಕರೆದನು. ಬುದ್ಧನು ಒಳಗೆ ಬರಲು ಮತ್ತೆ ಹೊರಗೆ ಹೋಗುವಂತೆ ಹೇಳಿದನು. ಹೀಗೆ ಮೂರು ಬಾರಿ ಮಾಡಿದನು. ಮೂರು ಬಾರಿಯೂ ಬುದ್ಧನು ಅವನು ಹೇಳಿದಂತೆ ನಡೆದನು. ನಾಲ್ಕನೇ ಬಾರಿ ಮಾತ್ರ ಗವಿಯಲ್ಲೇ ಉಳಿದು ನೀನು ಅಪ್ಪಣೆ ಮಾಡಿದಂತೆ ನಾನು ನಡೆಯುವುದಿಲ್ಲ. ನೀನು ಏನೂ ಬೇಕಾದರೂ ಮಾಡಿಕೋ ಎಂದನು.

ಬುದ್ಧನನ್ನು ಬಲವಂತ ಮಾಡಲು ಸಾಧ್ಯವಾಗದೆ ರಾಕ್ಷಸನು ತನ್ನ ಕುಯುಕ್ತಿಯನ್ನು ಬಿಟ್ಟು ಹೇಳಿದನು- ''ನಾನು ನಿನ್ನನ್ನು ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ. ನೀನು ಅವುಗಳಿಗೆ ಉತ್ತರ ಹೇಳದಿದ್ದರೆ ನಿನ್ನನ್ನು ಕೊಂದು ನದಿಯ ಆಚೆ ದಡಕ್ಕೆ ಎಸೆಯುತ್ತೇನೆ'' ಎಂದನು.

ಬುದ್ಧನು ಶಾಂತಿಯುತನಾಗಿ ಹೇಳಿದನು-''ನನ್ನನ್ನು ಕೊಲ್ಲಲು ಮನುಷ್ಯರಿಗಾಗಲೀ, ದೇವತೆಗಳಿಗಾಗಲೀ, ಸನ್ಯಾಸಿಗಳಿಗಾಗಲೀ, ಬ್ರಹ್ಮನಿಗಾಗಲೀ ಅಥವಾ ಬ್ರಾಹ್ಮಣನಿಗಾಗಲೀ ಸಾಧ್ಯವಿಲ್ಲ. ಆದರೆ ನೀನು ಪ್ರಶ್ನೆಗಳನ್ನು ಕೇಳುವುನೆಂದೆಯಲ್ಲವೆ ? ಬೇಕಾದರೆ ಕೇಳು'' ಎಂದನು.

ಅಲವಾಕನು ಕೆಲವು ಪ್ರಶ್ನೆಗಳನ್ನು ಕೇಳತೊಡಗಿದನು. ಅವು ಅವನಿಗೆ ತಲೆಮಾರುಗಳಿಂದ ತಿಳಿದಿದ್ದಿತು. ಅವುಗಳನ್ನು ಬಂಗಾರದ ಹಾಳೆಗಳ ಮೇಲೆ ಬರೆದಿದ್ದರು. ರಾಕ್ಷಸನಿಗೆ ಅವುಗಳಿಗೆ ಉತ್ತರವು ಮರೆತುಹೋಗಿತ್ತು. ಪ್ರಶ್ನೆಗಳನ್ನು ಮಾತ್ರ ಭದ್ರವಾಗಿಟ್ಟುಕೊಂಡಿದ್ದನು.

ಮನುಷ್ಯನ ಬಹಳ ದೊಡ್ಡ ಆಸ್ತಿ ಯಾವುದು ?

ಯಾವುದನ್ನು ಪಡೆಯುವುದರಿಂದ ಪರಮಸುಖವು ಲಭಿಸುವುದು ?

ಅತಿ ಸಿಹಿಯಾದ ರುಚಿ ಯಾವುದು ?

ಜೀವನದ ಶ್ರೇಷ್ಠವಾದ ಹಾದಿ ಯಾವುದು ?

ಬುದ್ಧನು ಉತ್ತರಿಸಿದನು.

೧) ಮನುಷ್ಯನ ದೊಡ್ಡ ಆಸ್ತಿಯೆಂದರೆ ಅವನಲ್ಲಿರುವ ನಂಬಿಕೆ

೨) ಧರ್ಮದ ಸೂತ್ರಗಳನ್ನು ಚೆನ್ನಾಗಿ ಮನನ ಮಾಡಿಕೊಂಡಾಗ ಪರಮ ಸುಖವು ಲಭಿಸುವುದು

೩) ಅತಿ ಸಿಹಿಯಾದ ರುಚಿಯೆಂದರೆ ಸತ್ಯ

೪) ಪ್ರಾಮಾಣಿಕನಾಗಿ ಬದುಕುವುದೇ ಒಳ್ಳೆಯ ಜೀವನ.

ಅಲವಾಕನು ಹೀಗೆ ಅನೇಕ ಪ್ರಶ್ನೆಗಳನ್ನು ಕೇಳಿದನು. ಬುದ್ಧನು ಎಲ್ಲಕ್ಕೂ ಸಮರ್ಪಕವಾದ ಉತ್ತರವನ್ನೊದಗಿಸಿದನು. ಕೊನೆಯ ಪ್ರಶ್ನೆಯೊಂದನ್ನು ಕೇಳಿದನು.

''ಈ ಪ್ರಪಂಚವನ್ನು ದಾಟಿ ಮುಂದಿನ ಪ್ರಪಂಚಕ್ಕೆ ಹೋದಾಗ ಅಲ್ಲಿ ಹೇಗೆ ದುಃಖವನ್ನು ಅನುಭವಿಸುವನು ?''

ಬುದ್ಧನು ಹೇಳಿದನು-

ಯಾರು ಈ ನಾಲ್ಕು ಗುಣಗಳನ್ನು ಅಂದರೆ-ಸತ್ಯ, ಸದ್ಗುಣಗಳು, ಧೈರ್ಯ ಮತ್ತು ಉದಾರತೆಗಳನ್ನು ಉಳ್ಳವರಾಗಿರಿತ್ತಾರೋ ಅವರು ಮರಣನದ ನಂತರ ಯಾವುದೇ ದುಃಖವನ್ನು ಅನುಭವಿಸುವುದಿಲ್ಲ.

ಬುದ್ಧನ ಮಾತುಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡ ಅಲವಾಕನು ನುಡಿದನು-''ನನಗೀಗ ನನ್ನ ಭವಿಷ್ಯದ ಜೀವನದ ರಹಸ್ಯ ತಿಳಿಯಿತು. ಇದು ನನಗೆ ಕ್ಷೇಮ ಮತ್ತು ಒಳ್ಳೆಯದನ್ನು ಮಾಡುವುದಕ್ಕಾಗಿಯೇ ಬುದ್ಧನು ಅಲಾವಿಗೆ ಬಂದದ್ದು''. ಅಲವಾಕನು ಬುದ್ಧನ ಕಾಲುಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಕೇಳಿಕೊಂಡನು.

ಮಾರನೆಯ ಬೆಳಿಗ್ಗೆ ಅಲವಾಕನಿಗಾಗಿ ರಾಜಕುಮಾರನನ್ನು ಕರೆದುಕೊಂಡು ಬಂದ ಅಧಿಕಾರಿಗಳಿಗೆ ಆಶ್ಚರ್ಯ ಕಾದಿತ್ತು. ಅವರು ಅಲ್ಲಿ ಬುದ್ಧನು ಧರ್ಮರಹಸ್ಯಗಳನ್ನು ಅಲವಾಕನಿಗೆ ಬೋಧಿಸುತ್ತಿದ್ದುದನ್ನೂ, ಅವನು ಅವುಗಳನ್ನು ಶ್ರದ್ಧೆಯಿಂದ ಕೇಳುತ್ತಿದ್ದುದನ್ನೂಕಂಡು ಬೆರಗಾದರು. ನಂತರ ಯುವಕನನ್ನು ಅಲವಾಕನಿಗೆ ಒಪ್ಪಿಸಿದರು. ಅವನಿಗೆ ಆ ಹುಡುಗನನ್ನು ಒಪ್ಪಿಸಿಕೊಳ್ಳಲು ನಾಚಿಕೆಯಾಯಿತು. ಅವನು ಆ ಹುಡುಗನ ತಲೆಯನ್ನು ಸವರಿ, ಚುಂಬಿಸಿ ಅವನನ್ನು ಆ ಅಧಿಕಾರಿಗಳಿಗೆ ಹಿಂದಿರುಗಿ ಒಪ್ಪಿಸಿದನು. ನಂತರ ಬುದ್ಧನು ಆ ಹುಡುಗನನ್ನೂ, ಅಲವಾಕನನ್ನೂ ಆಶೀರ್ವದಿಸಿದನು.

ನಿಜವಾಗಿಯೂ ಅಲವಾಕನಂತಹ ನರಹಂತಕನನ್ನು ಉತ್ತಮಜೀವನಕ್ಕೆ ತನ್ನ ಬುದ್ಧಿ ಮತ್ತು ಅನುಕಂಪಗಳಿಂದ ಬದಲಾಯಿಸಿದ ಘಟನೆಯನ್ನು ಕಂಡಾಗ ಬುದ್ಧನು ನಿಜವಾಗಿಯೂ ರಾಕ್ಷಸರನ್ನೂ ಒಳ್ಳೆಯವರನ್ನಾಗಿ ಮಾಡಿ ತನ್ನ ಶಿಷ್ಯರನ್ನಾಗಿ ಸ್ವೀಕರಿಸುತ್ತಿದ್ದುದು ತಿಳಿದುಬರುತ್ತದೆ.

## ೪೩. ಸುಜಾತಾ ಮತ್ತು ಏಳು ಬಗೆಯ ಗೃಹಿಣಿಯರ ಬಗ್ಗೆ ವ್ಯಾಖ್ಯಾನ

ಸುಜಾತಾ ಒಬ್ಬ ಶ್ರೀಮಂತ ಮನೆತನದ ಹುಡುಗಿ. ಇವಳು ಅನಾಥಪಿಂಡಿಕನ ಮಗನನ್ನು ಮದುವೆಯಾಗಿದ್ದಳು. ಅವಳು ಬಹಳ ಅಹಂಕಾರಿಯಾಗಿದ್ದಳು. ಯಾರಿಗೂ ಮರ್ಯಾದೆ ಕೊಡುತ್ತಿರಲಿಲ್ಲ. ತನ್ನ ಗಂಡನ ಮಾತನ್ನಾಗಲೀ, ಅತ್ತೆಮಾವಂದಿರ ಮಾತನ್ನಾಗಲೀ ಕೇಳುತ್ತಿರಲಿಲ್ಲ. ಹೀಗಾಗಿ ಆ ಸಂಸಾರದಲ್ಲಿ ಪ್ರತಿ ದಿನ ಒಂದಲ್ಲ ಒಂದು ರಗಳೆ ಇದ್ದೇ ಇರುತ್ತಿತ್ತು.

ಒಂದು ದಿನ ಬುದ್ಧನು ಅನಾಥಪಿಂಡಿಕನ ಮನೆಗೆ ಬಂದಾಗ ಮನೆಯಲ್ಲಿ ದೊಡ್ಡ ಜಗಳವನ್ನು ಕಂಡು ಅದೇನೆಂದು ವಿಚಾರಿಸಿದನು.

ಅನಾಥಪಿಂಡಿಕನು ಹೇಳಿದನು-''ಸ್ವಾಮಿ, ಹೀಗೆ ಕೂಗಿಕೊಳ್ಳುತ್ತಿರುವವಳು ನನ್ನ ಸೊಸೆಯಾದ ಸುಜಾತ. ಅವಳು ಅತ್ತೆ, ಮಾವ, ಗಂಡ ಹೀಗೆ ಯಾರ ಮಾತನ್ನೂ ಕೇಳುವುದಿಲ್ಲ. ಹಿರಿಯರಿಗೆ ಮರ್ಯಾದೆಯನ್ನು ಕೊಡುವುದಿಲ್ಲ''.

ಬುದ್ಧನು ಸುಜಾತಳನ್ನು ತನ್ನ ಬಳಿಗೆ ಕರೆದು ಮೃದುವಾಗಿ ಹೇಳಿದನು-''ಸುಜಾತಾ, ಹೆಂಗಸರಲ್ಲಿ ಏಳು ಬಗೆಯವರಿರುತ್ತಾರಂತೆ. ನೀನು ಯಾವ ಬಗೆಗೆ ಸೇರಿದವಳಮ್ಮಾ ?''

ಸುಜಾತಾ ಹೇಳಿದಳು-''ಮಹಾತ್ಮರೇ, ಆ ಏಳು ಬಗೆಯವರು ಯಾರು ?''

''ಸುಜಾತಾ, ಬಹಳ ಕೆಟ್ಟ ಮತ್ತು ಯೋಗ್ಯರಲ್ಲದ ಹೆಂಡತಿಯರಿರುತ್ತಾರೆ. ಕಷ್ಟಕೊಡುವವರು, ಕೆಟ್ಟಬುದ್ಧಿಯವರು, ಕೋಪಿಷ್ಟಳು, ದಯಾಹೀನಳು ಮತ್ತು ಗಂಡನಿಗೆ ಅವಿಧೇಯಳಾಗಿರುವವಳು ಇರುತ್ತಾರೆ''.

''ಒಂದು ಜಾತಿಯವಳಿರುತ್ತಾಳೆ. ಅವಳು ಚೋರಳಂತೆ ತನ್ನ ಗಂಡನು ಸಂಪಾದಿಸಿದ ಹಣವನ್ನೆಲ್ಲಾ ನಾಶ ಮಾಡುತ್ತಾಳೆ.''

''ಇನ್ನೊಬ್ಬಳಿರುತ್ತಾಳೆ. ತಾನೇ ಯಜಮಾನಿಯಂತೆ ಅವಳು ಸೋಮಾರಿ. ತನ್ನ ಬಗ್ಗೆಯೇ ಅವಳಿಗೆ ಯೋಚನೆ. ಅವಳು ಕ್ರೂರಿ, ಅವಳಿಗೆ ಯಾರಲ್ಲೂ ಅನುಕಂಪವಿಲ್ಲ, ಯಾವಾಗಲೂ ತನ್ನ ಗಂಡನನ್ನು ಬಯ್ಯುತ್ತಿರುತ್ತಾಳೆ ಅಥವಾ ಚಾಡಿ ಹೇಳುತ್ತಿರುತ್ತಾಳೆ''.

''ಸುಜಾತಾ, ಉತ್ತಮರೂ, ಗುಣವಂತರೂ ಆದ ಹೆಂಡತಿಯರೂ ಇರುತ್ತಾರೆ. ತಾಯಿಯಂತಹ ವಾತ್ಸಲ್ಯಮಯಿಯೂ ಇರುತ್ತಾಳೆ. ಅವಳು ಬಹಳ ದಯೆಯುಳ್ಳವಳು, ಅವಳಿಗೆ ಅನುಕಂಪವುಂಟು, ಗಂಡನನ್ನು ಮಗನಂತೆ ವಾತ್ಸಲ್ಯದಿಂದ ಕಾಣುತ್ತಾಳೆ ಮತ್ತು ಅವನ ಹಣವನ್ನು ಜೋಪಾನ ಮಾಡುತ್ತಾಳೆ.''

''ತಂಗಿಯಂತಹ ಹೆಂಡತಿಯೂ ಇರುತ್ತಾಳೆ. ತಂಗಿಯು ಅಣ್ಣನಿಗೆ ಗೌರವ ಕೊಡುವಂತೆಅವಳು ಗಂಡನನ್ನು ಮರ್ಯಾದೆಯಿಂದ ಕಾಣುತ್ತಾಳೆ. ಅವಳು ಗಂಡನ ಇಚ್ಛೆಗಳನ್ನು ವಿಧೇಯಳಾಗಿ ಪೂರೈಸುತ್ತಾಳೆ''.

ಸ್ನೇಹಿತಳಂತಹ ಹೆಂಡತಿಯೂ ಇರುತ್ತಾಳೆ. ಬಹಳ ಕಾಲದ ಮೇಲೆ ಭೇಟಿ ಮಾಡಿದ ತನ್ನ ಸ್ನೇಹಿತನನ್ನು ಕಂಡು ಸಂತೋಷಪಡುವಂತೆ ಇಂತಹ ಹೆಂಡತಿಯು ತನ್ನ ಗಂಡನನ್ನು ನೋಡಿ, ನೋಡಿ ಸಂತೋಷಪಡುತ್ತಾಳೆ. ಅವಳು ಬಹಳ ಯೋಗ್ಯಳೂ, ಗುಣವಂತಳೂ ಗಂಡನಿಗೆ ಅನುಕೂಲಳೂ ಆಗಿರುತ್ತಾಳೆ.

ಗಂಡನಿಗೆ ದಾಸಿಯಂತಿರುವ ಹೆಂಡತಿಯೂ ಇರುತ್ತಾಳೆ. ಅವಳ ತಪ್ಪುಗಳನ್ನು ತೋರಿಸಿಕೊಟ್ಟಾಗ ಅರ್ಥಮಾಡಿಕೊಂಡು ಸರಿಪಡಿಸಿಕೊಳ್ಳುತ್ತಾಳೆ. ಅವಳು ಯಾವಾಗಲೂ ಶಾಂತಸ್ವಭಾವದವಳಾಗಿರುತ್ತಾಳೆ. ಗಂಡನು ಬೈದರೂ ಕೂಡಾ ಅವಳು ಕೋಪಗೊಳ್ಳುವುದಿಲ್ಲ. ಗಂಡನ ಆಜ್ಞೆಗೆ ವಿಧೇಯಳಾಗಿರುತ್ತಾಳೆ''. ಹೀಗೆ ಹೇಳಿ ಬುದ್ಧನು ಕೇಳಿದನು- ಇವರಲ್ಲಿ ನೀನು ಎಂತಹ ಸ್ವಭಾವದವಳಾಗಿದ್ದೀ ? ಅಥವಾ ಎಂತಹ ಸ್ವಭಾವದವಳಾಗಲು ಬಯಸುವಿ ?

ಬುದ್ಧನ ಮಾತುಗಳನ್ನು ಕೇಳಿ ಸುಜಾತಳಿಗೆ ತನ್ನ ನಡತೆಯ ಬಗ್ಗೆ ನಾಚಿಕೆಯಾಯಿತು. ಅವಳೆಂದಳು-''ಇಂದಿನಿಂದ ನಾನು ತಾವು ಹೇಳಿದ ಕೊನೆಯ ಉದಾಹರಣೆಯಂತೆ ಒಳ್ಳೆಯವಳಾಗಿ ಗಂಡನನ್ನು ಅರ್ಥಮಾಡಿಕೊಳ್ಳುವವಳಾಗಿ ಇರುತ್ತೇನೆ''. ಅದರಂತೆ ಅವಳು ತನ್ನ ನಡತೆಯನ್ನು ಬದಲಾಯಿಸಿಕೊಂಡು ಗಂಡನಿಗೆ ಸಹಾಯ ಮಾಡುತ್ತಾ ಇದ್ದಳು. ಗಂಡ- ಹೆಂಡಿರಿಬ್ಬರೂ ಜ್ಞಾನವನ್ನು ಪಡೆಯಲಿಕ್ಕಾಗಿ ಒಟ್ಟಿಗೇ ಪ್ರಯತ್ನಪಡುತ್ತಿದ್ದರು.

# ೪೪. ಆನಂದ

ಬುದ್ಧನಿಗೆ ಮೊದಲ ಇಪ್ಪತ್ತು ವರ್ಷ ಸ್ವಂತ ಅನುಚರರು ಯಾರೂ ಇರಲಿಲ್ಲ. ಎಷ್ಟೋ ಜನ ಸನ್ಯಾಸಿಗಳು ಅವನ ಕೆಲಸಗಳನ್ನು ಮಾಡುತ್ತಿದ್ದರು. ಅವನು ಭಿಕ್ಷಾಟನೆಗೆ ಹೋಗುವಾಗ ಅವನ ಹಿಂದೆ ಹೋಗುವುದು, ಅವನ ಹೆಚ್ಚುವರಿ ಬಟ್ಟೆಬರೆಗಳನ್ನು ಒಯ್ಯುವುದು ಮತ್ತು ಅವನ ಭಿಕ್ಷಾಪಾತ್ರೆಯನ್ನು ಎತ್ತಿಕೊಂಡಿರುವುದು ಇತ್ಯಾದಿ. ಇವರುಗಳು ಯಾರೆಂದರೆ ನಾಗಸಮಾಲಾ, ನಗೀತ, ಉಪವನ, ಸುನಖತ್ತ, ಚುಂದ, ಸಗತ ರಾಧಾ ಮತ್ತು ಮೇಘೀಯ.

ಇವರುಗಳು ಬುದ್ಧನು ಹೇಳಿದಂತೆ ಯಾವಾಗಲೂ ಮಾಡುತ್ತಿರಲಿಲ್ಲ. ಒಂದು ದಿನ ಬುದ್ಧನ ಜೊತೆಗೆ ನಾಗಸಾಲಾ ಎಂಬ ಶಿಷ್ಯನು ಹೋಗಿದ್ದನು. ಅವನು ಒಂದು ಚೌಕಕ್ಕೆ ಬಂದಾಗ ಬುದ್ಧನು ಬೇರೆ ದಾರಿಯಲ್ಲಿ ಹೋಗೋಣವೆಂದರೆ ಕೇಳದೆ ತನಗೆ ಬೇಕೆನಿಸಿದ ರಸ್ತೆಯಲ್ಲೇ ಹೋದನು. ಅಲ್ಲಿ ಹೆದ್ದಾರಿಯ ಕೆಲವು ದರೋಡೆಕೋರರು ಅವನ ವಸ್ತುಗಳನ್ನು ಅಪಹರಿಸಿ ಅವನನ್ನು ಚೆನ್ನಾಗಿ ಥಳಿಸಿದರು. ಅವನು ಬುದ್ಧನ ಬಳಿಗೆ ಬಂದು ಅವಿಧೇಯತೆಯಿಂದುಂಟಾದ ಪರಿಣಾಮದ ಬಗೆಗೆ ಹೇಳಿ ಗೋಳಾಡಿಕೊಂಡನು. ಬುದ್ಧನು ಅವನನ್ನು ಸಾಮಾಧಾನಪಡಿಸಿದನು.

ಇನ್ನೊಂದು ದಿನ ಬುದ್ಧನು ಜಂತು ಎಂಬ ಹಳ್ಳಿಗೆ ಹೋಗುತ್ತಿರುವಾಗ ಮೇಘಿಯನು ಅವನ ಜೊತೆಗೆ ಹೋಗುತ್ತಿದ್ದನು. ದಾರಿಯಲ್ಲಿ ಒಂದು ಮಾವಿನ ತೋಪು ಸಿಕ್ಕಿತು. ಮೇಘಿಯನು ಅಲ್ಲಿ ಕುಳಿತು ತಪಸ್ಸನ್ನಾಚರಿಸುವೆನೆಂದನು. ಬುದ್ಧನು ಮೂರು ಬಾರಿ ಬೇಡವೆಂದು ಅವನಿಗೆ ಬುದ್ಧಿವಾದವನ್ನು ಹೇಳಿದರೂ ಕೇಳದೆ ಮೇಘಿಯನು ಅಲ್ಲೇ ನಿಂತನು. ಕೆಲವು ದಿನಗಳಾದ ಮೇಲೆ ಅವನು ಬುದ್ಧನ ಬಳಿಗೆ ಹಿಂದಿರುಗಿ ಅವನು ಆ ಮಾವಿನ ತೋಪಿನಲ್ಲಿರುವಾಗ ಅವನ ಮನಸ್ಸಿನಲ್ಲಿ ಮೂರು ಕೆಟ್ಟ ವಿಚಾರಗಳು ಬಂದು ಅವನ ತಪಸ್ಸನ್ನು ಕೆಡಿಸಿಹಾಕುತ್ತಿದ್ದುವೆಂದು ಹೇಳಿಕೊಂಡು ತಾನು ಬುದ್ಧನ ಮಾತನ್ನು ಕೇಳದೆ ಹೋದನೆಂದು ಒಪ್ಪಿಕೊಂಡು ಕ್ಷಮಾಪಣೆ ಕೇಳಿದನು. ಆ ಮೂರು ಕೆಟ್ಟ ವಿಚಾರಗಳೆಂದರೆ- ಇಂದ್ರಿಯಗಳ ಬಯಕೆ, ಕೆಟ್ಟ ಬುದ್ಧಿ ಮತ್ತು ಕ್ರೂರವಾದ ಆಲೋಚನೆಗಳು.

ಬುದ್ಧನು ಜೇತವನ ವಿಹಾರಕ್ಕೆ ಬಂದಾಗ ಹೇಳಿದನು-''ಭಿಕ್ಷುಗಳೇ ನಾನೀಗ ಮುದುಕನಾಗುತ್ತಿದ್ದೇನೆ. ನನ್ನ ಜೊತೆಯಲ್ಲಿ ಬರುವ ಭಿಕ್ಷುಗಳಿಗೆ ನಾನು ಈ ದಾರಿಯಲ್ಲಿ ಹೋಗೋಣ ಎಂದರೆ ಅವರು ಬೇರೆ ದಾರಿಯಲ್ಲಿ ಹೋಗುತ್ತಾರೆ. ಕೆಲವರು ನನ್ನ ಭಿಕ್ಷಾಪಾತ್ರೆಯನ್ನೂ, ಬಟ್ಟೆಗಳನ್ನೂ ನೆಲದ ಮೇಲೆ ಬಿಸಾಕಿ ಹೋಗುತ್ತಾರೆ. ನನಗೂ ಐವತ್ತೈದು ವರ್ಷಗಳಾದುವು. ನನ್ನ ಜೊತೆಯಲ್ಲಿ ಯಾವಾಗಲೂ ಇದ್ದು ನನ್ನ ಬೇಕುಬೇಡಗಳನ್ನು ಗಮನಿಸುವಂತಹ ಒಬ್ಬ ಭಿಕ್ಷುವನ್ನು ಹುಡುಕಿ ಕೊಡಿ''.

ಶಿಷ್ಯರಾದ ಸಾರಿಪುತ್ರನೂ, ಮೊಗ್ಗಲಾಯನನೂ ತಾವು ಆ ಕೆಲಸ ಮಾಡುತ್ತೇವೆಂದು ಹೇಳಿದರು- ಆದರೆ ಬುದ್ಧನು ಅದನ್ನು ಒಪ್ಪಲಿಲ್ಲ. ಏಕೆಂದರೆ ಅವರಿಂದ ಪ್ರಪಂಚಕ್ಕೆ ಬಹು ಮೂಲ್ಯವಾದ ಕೆಲಸಗಳಾಗಬೇಕಿದ್ದಿತು. ಇನ್ನು ಕೆಲವು ಭಿಕ್ಷುಗಳು ತಾವು ಇರುತ್ತೇವೆಂದರೂ ಬುದ್ಧನು

ಬೇಡವೆಂದನು. ಅತ್ತ ಭಿಕ್ಷು ಆನಂದನು ಸುಮ್ಮನೇ ಕುಳಿತಿದ್ದನು. ಅವನಿಗೆ ಬುದ್ಧನು ತನ್ನನ್ನು ಕರೆಯಲಿ ಎಂಬ ನಿರೀಕ್ಷೆಯಿತ್ತು. ಇತರ ಭಿಕ್ಷುಗಳು ಆನಂದನಿಗೆ, ನೀನು ಬುದ್ಧನ ಜೊತೆಗಿರು ಎಂದು ಬುದ್ಧಿವಾದವನ್ನು ಹೇಳುತ್ತಿದ್ದರು.

ಬುದ್ಧನು ಹೇಳಿದನು-''ಆನಂದನಿಗೆ ನನ್ನ ಜೊತೆಗಿರಲು ಯಾರೂ ಪ್ರೇರೇಪಿಸಬೇಕಾಗಿಲ್ಲ. ಅವನೇ ತನ್ನ ಸ್ವಂತ ಇಚ್ಛೆಯಿಂದ ಬಂದು ನನ್ನ ಸೇವೆ ಮಾಡುತ್ತಾನೆ''.

ಆನಂದನು ಬುದ್ಧನ ಸೇವೆ ಮಾಡಲು ಒಪ್ಪಿಕೊಂಡನು, ಆದರೆ ಆತನು ಎಂಟು ಷರತ್ತುಗಳನ್ನು ಹಾಕಿದನು-

೧. ಬುದ್ಧನು ಪಡೆದಂಥ ಬಟ್ಟೆಗಳನ್ನು ತನಗೆ ಕೊಡಬಾರದು.

೨. ಬುದ್ಧನು ಭಿಕ್ಷದಿಂದ ಸ್ವೀಕರಿಸಿದ ಆಹಾರವನ್ನು ತನಗೆ ಕೊಡಬಾರದು.

೩. ಬುದ್ಧನ ಗಂಧದ ಕುಟಿಯಲ್ಲಿ ತಾನು ಮಲಗುವುದಿಲ್ಲ.

೪. ಬುದ್ಧನು ಯಾರದಾದರೂ ಭಿಕ್ಷಕ್ಕೆ ಹೋಗುವಾಗ ತನ್ನನ್ನು ಜೊತೆಗೆ ಕರೆಯಬಾರದು.

೫. ತನಗೆ ಯಾರಾದರೂ ಆಮಂತ್ರಣ ನೀಡಿದರೆ ಬುದ್ಧನು ಅದನ್ನು ಒಪ್ಪಿಕೊಂಡು ತನ್ನನ್ನು ಹೋಗಕೊಡಬೇಕು.

೬. ಬಹಳ ದೂರದಿಂದ ಬುದ್ಧನ ದರ್ಶನಕ್ಕಾಗಿ ಬರುವವರನ್ನು ಪರಿಚಯ ಮಾಡಿಸಿಕೊಡಲು ಬುದ್ಧನು ತನಗೆ ಒಪ್ಪಿಗೆ ಕೊಡಬೇಕು.

೭. ತನಗೆ ಯಾವಾಗಲಾದರೂ, ಏನಾದರೂ ಸಂಶಯ ಬಂದಲ್ಲಿ ಅದಕ್ಕೆ ಪರಿಹಾರವನ್ನು ಕೊಡಲು ಒಪ್ಪಿಗೆ ಕೊಡಬೇಕು.

೮. ತಾನು ಇಲ್ಲದ ವೇಳೆಯಲ್ಲಿ ಮಾಡಿದ ಧರ್ಮೋಪದೇಶವನ್ನು ತಾನು ಬಂದ ಮೇಲೆ ಮತ್ತೆ ಬುದ್ಧನು ತನಗೆ ಹೇಳಬೇಕು.

ಬುದ್ಧನು ಈ ಎಂಟು ಷರತ್ತುಗಳನ್ನು ಒಪ್ಪಿಕೊಂಡ ನಂತರ ಆನಂದನು ಆತನ ಸೇವಕನಾಗಿ ಇಪ್ಪತ್ತೈದು ವರ್ಷಗಳ ಕಾಲ ಬುದ್ಧನ ಸೇವೆಯನ್ನು ಮಾಡಿದನು.

ಆನಂದನು ಶುದ್ಧೋದನ ದೊರೆಯ ತಮ್ಮನ ಮಗನಾಗಿದ್ದನು. ಅಂದರೆ ಬುದ್ಧನ ಚಿಕ್ಕಪ್ಪನ ಮಗ. ಹೀಗಾಗಿ ಅವನ ದಾಯಾದಿ - ಅವನು ಬುದ್ಧನ ಸಂಘವನ್ನು ನಡೆಸಿಕೊಂಡು ಬರುತ್ತಿದ್ದ ಎರಡನೇ ವರ್ಷದಲ್ಲಿ ಸನ್ಯಾಸಿಯಾಗಿದ್ದನು. ಬಹಳ ಬೇಗ ಅವನು ಸನ್ಯಾಸದ ಮೊದಲ ಹಂತವಾದ ಸೋತಾಪತಿಯನ್ನು ಪಡೆದಿದ್ದನು. ಪುನ್ನಮಂತಾನಿಪುತ್ರನ ಧರ್ಮಬೋಧೆಗಳನ್ನು ಕೇಳಿ ಅವನ ಜ್ಞಾನವು ಬೆಳೆದಿತ್ತು.

ಬುದ್ಧನ ಸೇವಕನಾದ ದಿನದಿಂದ ಅವನು ಬುದ್ಧನನ್ನು ಬಹಳ ಭಕ್ತಿ ಭಾವದಿಂದ ಬುದ್ಧನ ಜೀವಿತದ ಕೊನೆಯ ಕ್ಷಣದವರೆಗೆ ತುಂಬಾ ಚೆನ್ನಾಗಿ, ಎಚ್ಚರಿಕೆಯಿಂದ ನೋಡಿಕೊಂಡನು. ಅವನು ಹಗಲೂ ರಾತ್ರಿ ಬುದ್ಧನ ಸೇವೆ ಮಾಡುತ್ತಿದ್ದನು. ರಾತ್ರಿಯ ವೇಳೆ ಬುದ್ಧನು ನಿದ್ರೆ ಮಾಡುತ್ತಿರುವಾಗ ಆನಂದನು ಆ ಮನೆಯ ಸುತ್ತಲೂ ಸುತ್ತಿ ಬುದ್ಧನ ನಿದ್ರೆಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳುತ್ತಿದ್ದನು.

ಭಿಕ್ಷುಗಳಿಗೆ ಗೌರವದ ಅಂತಸ್ತುಗಳ ಪ್ರಶಸ್ತಿಗಳನ್ನು ಕೊಡುವ ಸಂದರ್ಭದಲ್ಲಿ ಬುದ್ಧನು ಆನಂದನು ಶಿಕ್ಷಣ, ಧೃಡ ಮನಸ್ಸು ಒಳ್ಳೆಯ ನಡತೆಗಳನ್ನು ಹೊಂದಿದ್ದ ಉಳಿದ ಶಿಷ್ಯರಿಗಿಂತಲೂ, ಈ ಎಲ್ಲ ವಿಷಯಗಳಲ್ಲೂ ಬಹಳ ಉನ್ನತವಾಗಿದ್ದುದರಿಂದ ಬುದ್ಧನು ಅವನಿಗೆ ಮೊದಲ ಶ್ರೇಣಿಯ ಸ್ಥಾನವನ್ನು ಕೊಟ್ಟನು. ಭಿಕ್ಷುಣಿಯರ ಸಂಘವನ್ನು ಸ್ಥಾಪಿಸುವಲ್ಲಿ ಆನಂದನು ಬಹಳ ಜವಾಬ್ದಾರಿಯಿಂದ ಕೆಲಸ ಮಾಡಿದ್ದನು. ಹಾಗೆಯೇ 'ಆನಂದ ಬೋಧಿವೃಕ್ಷ'ವನ್ನು ನೆಡುವುದರಲ್ಲೂ ಶ್ರೇಯಸ್ಸನ್ನು ಪಡೆದಿದ್ದನು. ಆ ಬೋಧಿವೃಕ್ಷವನ್ನು ಈಗಲೂ ಜೇತವನದ ವಿಹಾರದ ಬಳಿ ಕಾಣಬಹುದು.

ಆನಂದನಿಗೆ ಬುದ್ಧನ ಸಂದೇಶವನ್ನು ಕೇಳುವಂತಹ ಒಂದು ಅಪರೂಪದ ಅವಕಾಶ ಸಿಕ್ಕಿದರೂ ಕೂಡಾ ಅವನಿಗೆ ಅರ್ಹಂತ ಪದವಿ ದೊರಕಿರಲಿಲ್ಲ. ಬುದ್ಧನು ಕಾಲವಾದ ನಂತರ ಆನಂದನಿಗೆ ಅರಹಂತ ಪದವಿ ದೊರಕಿತು.

ಆನಂದನು ತನ್ನ ಒಂದು ನೂರ ಇಪ್ಪತ್ತೈದು ವರ್ಷಗಳು ಜೀವಿಸಿ ನಂತರ ಕಾಲವಾದನು.

## ೪೫. ಮಹಾರಾಜ ಅಜಾತಶತ್ರು

ಬಿಂಬಿಸಾರನಿಗೆ ಒಬ್ಬ ಮಗನಿದ್ದ. ಅವನ ಹೆಸರು ಅಜಾತಶತ್ರು. ಅಜಾತಶತ್ರುವು ದೇವದತ್ತನ ಸ್ನೇಹಿತನಾಗಿದ್ದ. ಆಗಾಗ ಪರಸ್ಪರ ಭೇಟಿಯಾಗುತ್ತಿದ್ದರು. ದೇವದತ್ತನು ಬಿಂಬಸಾರನನ್ನು ಕೊಲ್ಲುವಂತೆ ಅಜಾತಶತ್ರುವನ್ನು ಪ್ರೇರೇಪಿಸಿದ.

ಒಂದು ಕತ್ತಲೆಯ ರಾತ್ರಿ ಎಲ್ಲ ಕಡೆ ಮೌನ, ನಿಶ್ಯಬ್ದ. ಇಂತಹ ಸಮಯದಲ್ಲಿ ಅಜಾತಶತ್ರುವು ತನ್ನ ತೊಡೆಗೆ ಒಂದು ಕತ್ತಿಯನ್ನು ಕಟ್ಟಿಕೊಂಡು ಬಿಂಬಿಸಾರನನ್ನು ಕೊಲ್ಲಲು ಅವನ ಕೊಠಡಿಗೆ ಹೋದನು. ಆದರೆ ಕಾವಲಿನವರ ಕೈಗೆ ಸಿಕ್ಕಿಬಿದ್ದನು. ಬಿಂಬಿಸಾರನಿಗೆ ವಿಷಯ ತಿಳಿಯಿತು. ಆಗ ಅವನು-ನಾನು ಬಹಳ ಕಾಲ ರಾಜ್ಯವಾಳಿದ್ದೇನೆ, ದಣಿದಿದ್ದೇನೆ. ಈಗ ನಾನು ಅಜಾತಶತ್ರುವಿಗೆ ರಾಜ್ಯವನ್ನೊಪ್ಪಿಸಿ ವಿಶ್ರಾಂತಿ ಪಡೆಯುವುದು ಸೂಕ್ತವಾಗಿದೆ. ಅವನು ಶಾಂತಿಯಿಂದ ರಾಜ್ಯವಾಳಿಕೊಳ್ಳಲಿ-ಎಂದು ಯೋಚಿಸಿಕೊಂಡನು. ಮಗನನ್ನು ಇಂತಹ ಹೀನಕೃತ್ಯವೆಸಗಿದ್ದಕ್ಕಾಗಿ ದಂಡಿಸದೆ ಅವನನ್ನು ದೊರೆಯನ್ನಾಗಿ ಮಾಡಿದನು.

ರಾಜನಾದೊಡನೆಯೇ ತನ್ನ ದುರ್ನಡತೆಯಿಂದ ಎಲ್ಲರನ್ನೂ, ತನ್ನ ತಂದೆಯನ್ನೂ ಸಹಾ ಆಶ್ಚರ್ಯಪಡಿಸಿದನು. ಬಾಲವನ್ನು ಹಿಡಿದುಕೊಂಡವರ ಮೇಲೆ ವಿಷಸರ್ಪವು ಹರಿಹಾಯುವಂತೆ ಅವನು ತಂದೆಯ ಮೇಲೆಯೇ ತಿರುಗಿಬಿದ್ದು ತಂದೆಯನ್ನು ಕತ್ತಲೆಯ ಕೋಣೆಯಲ್ಲಿ ಕೂಡಿಹಾಕಿದನು.

''ಅವನನ್ನು ನೋಡಲು ನಮ್ಮ ತಾಯಿಯ ಹೊರತಾಗಿ ಯಾರನ್ನೂ ಬಿಡಬೇಡಿ. ಅವನಿಗೆ ಆಹಾರವನ್ನು ಕೊಡಕೂಡದು. ಆತನು ಹಸಿವಿನಿಂದ ಸಾಯಲಿ'' ಎಂದು ಅಪ್ಪಣೆ ಮಾಡಿದನು.

ಆದರೆ ಬಿಂಬಿಸಾರನು ಸಾಯಲಿಲ್ಲ. ಪತಿವ್ರತೆಯಾದ ಅವನ ಹೆಂಡತಿಯು ಆಹಾರವನ್ನು ತನ್ನ ಉಡುಪಿನಲ್ಲಿ ಬಚ್ಚಿಟ್ಟುಕೊಂಡು ಬಂದು ಗಂಡನಿಗೆ ಕೊಡುತ್ತಿದ್ದಳು. ಅಜಾತಶತ್ರುವು ಇದನ್ನು ತಿಳಿದು ಆಹಾರವನ್ನು ತರುವುದನ್ನು ನಿಲ್ಲಿಸಿದನು. ತನ್ನ ತುರುಬಿನಲ್ಲಿ ಮರೆಸಿಟ್ಟುಕೊಂಡು ತರುತ್ತಿದ್ದಳು. ಅಜಾತಶತ್ರು ಇದನ್ನು ಕಂಡು ತರಕೂಡದೆಂದು ನಿಲ್ಲಿಸಿದನು. ಮತ್ತೆ ಆಕೆಯು ಸ್ನಾನ ಮಾಡಿ ತನ್ನ ಮೈಗೆಲ್ಲಾ, ಬೆಣ್ಣೆ, ಜೇನುತುಪ್ಪ, ತುಪ್ಪ ಹಾಗೂ ಸಕ್ಕರೆಗಳನ್ನು ಹಚ್ಚಿಕೊಂಡು ಬರುತ್ತಿದ್ದಳು. ಬಿಂಬಿಸಾರನು ಅವಳ ಮೈಯನ್ನು ನೆಕ್ಕಿ ನೆಕ್ಕಿ ತನ್ನ ಹಸಿವನ್ನು ತೀರಿಸಿಕೊಳ್ಳುತ್ತಿದ್ದನು. ಸಾಯಲಿಲ್ಲ. ಅಜಾತಶತ್ರುವಿಗೆ ಈ ವಿಷಯವೂ ತಿಳಿದು ತಾಯಿಯನ್ನು ಹೋಗದಂತೆ ತಡೆಗಟ್ಟಿದನು. ಈಗ ಆಹಾರವಿಲ್ಲದೆ ತಂದೆ ಬದುಕಲಾರ. ನಿಜವಾಗಿಯೂ ಸತ್ತುಹೋಗುತ್ತಾನೆ.

ಬಿಂಬಿಸಾರನು ಸಾಯಲಿಲ್ಲ. ಆಗ ಅಜಾತಶತ್ರುವು ತಾಳ್ಮೆಗೆಟ್ಟು ಒಬ್ಬ ಕ್ಷೌರಿಕನನ್ನು ಕರೆಸಿಕೊಂಡು ಹೇಳಿದನು-''ನೀನು ಬಿಂಬಿಸಾರನ ಸೆರಮನೆಗೆ ಹೋಗಿ ನಿನ್ನ ಕತ್ತಿಯಿಂದ ಅವನ ಅಂಗಾಲಿನ ಚರ್ಮವನ್ನು ಆ ಹಸಿಯಾದ ಮಾಂಸದ ಮೇಲೆ ಉಪ್ಪು ಮತ್ತು ಎಣ್ಣೆಗಳನ್ನು ಹಚ್ಚಿ ಬಾ. ನಂತರ ಬಿಂಬಿಸಾರನು ಉರಿಯುತ್ತಿರುವ ಕೆಂಡಗಳ ಮೇಲೆ, ಅವನು ಸಾಯುವವರೆಗೂ ನಾನು ಅವನನ್ನು ನಡೆದಾಡುವಂತೆ ಹೇಳುತ್ತೇನೆ'' ಎಂದನು.

ಕ್ಷೌರಿಕನು ಬರುತ್ತಿರುವುದನ್ನು ಕಂಡು ಬಿಂಬಿಸಾರನಿಗೆ ಸಂತೋಷವಾಯಿತು. ''ಕೊನೆಗೂ ನನ್ನ ಮಗನು ತನ್ನ ತಪ್ಪನ್ನು ತಿಳಿದುಕೊಂಡು ಈ ಹಜಾಮನನ್ನು ಕಳಿಸಿದ್ದಾನೆ. ನಾನು ಸೆರೆಯಿಂದ ಅರಮನೆಗೆ ಹೋಗುವುದಕ್ಕೆ ಮುಂಚೆ ಇವನು ನನ್ನ ಗಡ್ಡ-ಮೀಸೆಗಳನ್ನು, ತಲೆಗೂದಲನ್ನೂ ಕತ್ತರಿಸಿ, ಚೆನ್ನಾಗಿ ಕಾಣುವಂತೆ ಮಾಡುತ್ತಾನೆ'' ಎಂದುಕೊಂಡನು. ಆದರೆ ಆ ನಾಯಿಂದನು ಇಬ್ಬರು ಸಿಪಾಯಿಗಳನ್ನು ಕರೆದುಕೊಂಡು ಬಂದು ಅಜಾತಶತ್ರುವಿನ ಅಪ್ಪಣೆಯಂತೆ ಮಾಡಿದನು. ಬಿಂಬಿಸಾರನು ನೋವನ್ನು ತಡೆದುಕೊಳ್ಳಲಾರದೆ ಸತ್ತುಹೋದನು.

ಅದೇ ದಿನ ಅಜಾತಶತ್ರುವಿನ ಹೆಂಡತಿಯು ಒಂದು ಗಂಡುಮಗುವನ್ನು ಪ್ರಸವಿಸಿದಳು. ಅಜಾತಶತ್ರುವಿಗೆ ತುಂಬಾ ಸಂತೋಷವಾಯಿತು. ಅವನು ಏನನ್ನೋ ಯೋಚಿಸಿಕೊಂಡು ತನ್ನ ತಾಯಿಯ ಬಳಿ ಹೋಗಿ ಕೇಳಿದನು. ''ಅಮ್ಮಾ, ನನ್ನ ತಂದೆಯು ನನ್ನನ್ನು, ಈಗ ನಾನು ನನ್ನ ಮಗುವನ್ನು ಪ್ರೀತಿಸುತ್ತಿರುವಂತೆ ಪ್ರೀತಿಸುತ್ತಿದ್ದನೆ?''

ತಾಯಿಯು ದುಃಖಪೂರಿತವಾದ ತನ್ನ ಕಣ್ಣುಗಳನ್ನು ಅವನತ್ತ ತಿರುಗಿಸಿ ಹೇಳಿದಳು-ಇದೇನು ಹೀಗೆ ಕೇಳುತ್ತಿ ಅಜಾತಶತ್ರು. ನಿನ್ನ ತಂದೆಯು ನಿನ್ನ ಪ್ರೀತಿಸುತ್ತಿದ್ದನೇ ಎಂದು.

ಕೇಳು, ನೀನು ನನ್ನ ಹೊಟ್ಟೆಯಲ್ಲಿರುವಾಗ ನನಗೆ ರಕ್ತವನ್ನು ಕುಡಿಯುವ ಬಯಕೆಯಾಯ್ತು. ಆಗ ನಾನು ಅದನ್ನು ನಿನ್ನ ತಂದೆಗೆ ತಿಳಿಸಿದೆ. ಆತನು ಒಡನೆಯೇ ಕತ್ತಿಯಿಂದ ತನ್ನ ಮುಂಗೈಯನ್ನು ಕತ್ತರಿಸಿಕೊಂಡನು. ಧಾರಾಕಾರವಾಗಿ ಬರುತ್ತಿದ್ದ ರಕ್ತವನ್ನು ಕುಡಿದೆನು. ಇದೇನು ಇಂತಹ ಬಯಕೆಯಾಯಿತು ಎಂದು ಜ್ಯೋತಿಷ್ಯರನ್ನು ಕೇಳಲು ಅವರು ''ನಿಮ್ಮ ಮಗನು ನಿಮಗೆ ಶತ್ರುವಾಗುತ್ತಾನೆ'' ಎಂದು ತಿಳಿಸಿದರು. ಆಗ ನಾನು ಗರ್ಭಪಾತ ಮಾಡಿಕೊಳ್ಳಲು ಯೋಚಿಸಿದೆನು. ನಿನ್ನ ತಂದೆ ಅದನ್ನು ತಡೆದನು.

ನೀನು ಹುಟ್ಟಿದ ಮೇಲೂ ನಾನು ನಿನ್ನನ್ನು ಕೊಂದುಹಾಕಲು ಯತ್ನಿಸಿದೆನು. ದೊರೆಗೆ ನೀನು ದೊಡ್ಡವನಾದ ಮೇಲೆ ಅವನನ್ನು ಕೊಂದುಹಾಕುವಿ ಎಂದು ತಿಳಿದಿದ್ದರೂ ಸಹಾ ನನ್ನನ್ನು ತಡೆದನು. ಇದು ನಿನ್ನ ಮೇಲಿದ್ದ ಪ್ರೀತಿಯಲ್ಲವೆ ? ನಿನ್ನ ಹೆಬ್ಬೆರಳಿನ ಮೇಲಿರುವ ಕಲೆಯನ್ನು ನೋಡಿಕೋ - ಅದೇನು ಗೊತ್ತೆ. ಒಂದು ಸಲ ಆ ಬೆರಳಿನ ಮೇಲೆ ಒಂದು ಹುಣ್ಣು ಉಂಟಾಯಿತು. ಅದರ ನೋವನ್ನು ತಡೆಯಲಾರದೆ ನೀನು ತುಂಬಾ ಅಳುತ್ತಿದ್ದೆ. ಯಾರೂ ಸಮಾಧಾನಪಡಿಸಿದರೂ ನೀನು ಸುಮ್ಮನಾಗಲಿಲ್ಲ. ಆಗ ನಿನ್ನ ತಂದೆ ದರ್ಬಾರಿನಲ್ಲಿದ್ದರು. ಇದನ್ನು ತಿಳಿದೊಡನೆಯೇ ತಮ್ಮ ಸಭೆಯನ್ನು ಬಿಟ್ಟು ಓಡೋಡಿ ಬಂದರು. ನಿನ್ನನ್ನು ಹಗುರವಾಗಿ ಎತ್ತಿಕೊಂಡು, ತೊಡೆಯಮೇಲೆ ಮಲಗಿಸಿಕೊಂಡು ಆ ಕುರುವನ್ನು ತಮ್ಮ ಬಾಯಿಂದ ಹೀರತೊಡಗಿದರು. ಹುಣ್ಣು ಒಡೆದು ಕೀವು ರಕ್ತವೆಲ್ಲಾ ಅವರ ಬಾಯಿಗೆ ಬಂದಿತು. ಅದನ್ನೆಲ್ಲಾ ನುಂಗಿದರು. ನಿನಗೆ ನೋವು ಮಾಯವಾಯಿತು. ಇದು ನಿನ್ನನ್ನು ಅವರೆಷ್ಟು ಪ್ರೀತಿಸುತ್ತಿದ್ದರು ಎಂಬುದನ್ನು ತಿಳಿಸುವುದಿಲ್ಲವೇ ? ನಿಮ್ಮ ತಂದೆಯು ನಿನ್ನನ್ನು ಪ್ರೀತಿಸಿದಂತೆ ನಿನ್ನ ಮಗನನ್ನು ಪ್ರೀತಿಸಬಲ್ಲೆಯಾ ? ಆದರೂ ಕೂಡಾ ನೀನು ನಿನ್ನ ತಂದೆಯನ್ನು ಸಾಯಬೇಕೆನ್ನುತ್ತೀಯಲ್ಲವೇ ?''

ಇದನ್ನೆಲ್ಲಾ ಕೇಳಿ ಅಜಾತಶತ್ರುವಿಗೆ ದುಃಖವು ಒತ್ತರಿಸಿ ಬಂದಿತು. ಅವನು ತನ್ನ ಸೇವಕರನ್ನು ಕರೆದು ಹೇಳಿದನು-''ಹೋಗಿ, ಓಡಿಹೋಗಿ ನನ್ನ ತಂದೆಯು ಸಾಯುವುದರೊಳಗಾಗಿ ಹೋಗಿ ಆತನನ್ನು ಬಿಡುಗಡೆಮಾಡಿ'' ಯಾರೂ ನಿಂತ ಕಡೆಯಿಂದ ಅಲುಗಾಡಲಿಲ್ಲ. ಅಜಾತಶತ್ರುವು ಜೋರಾಗಿ ಕಿರುಚಿ ಹೇಳಿದನು.-''ಹೋಗಿ, ನನ್ನ ತಂದೆಯನ್ನು ಸಾಯುವುದಕ್ಕೆ ಮುಂಚೆ ಬಿಡಿಸಿಕೊಂಡು ಬನ್ನಿ'' ಇದು ನನ್ನ ಅಪ್ಪಣೆ.

ಆಗ ಅವನ ಸಲಹೆಗಾರನು ಮುಂದೆ ಬಂದು-''ಮಹಾಸ್ವಾಮಿ, ನಿಮ್ಮ ತಂದೆಯವರು ಇಂದು ಬೆಳಿಗ್ಗೆ ಮೃತಪಟ್ಟರು''. ಇದನ್ನು ಕೇಳಿ ಅಜಾತಶತ್ರುವು ಮೊಳಕಾಲೂರಿ ಕುಳಿತು ಅಳತೊಡಗಿದನು. ''ತಂದೆಯೇ ನನ್ನನ್ನು ಕ್ಷಮಿಸು, ದಯವಿಟ್ಟು ಕ್ಷಮಿಸು'' ಎಂದು ದುಃಖದಿಂದ ಹೊರಳಾಡತೊಡಗಿದನು.

ಅಜಾತಶತ್ರುವಿಗೆ ತಾನು ತಂದೆಯಾದ ನಂತರ, ತಂದೆಯ ಪ್ರೀತಿ ಹೇಗಿರುತ್ತದೆಂದು ತಿಳಿಯಿತು. ಬಿಂಬಸಾರನು ಕಟುಮ್ಮ ಹರಾಜಿಕಾ ಸ್ವರ್ಗದಲ್ಲಿ ಒಬ್ಬ ದೇವತೆಯಾಗಿ ಮತ್ತೆ ಹುಟ್ಟಿಬಂದನು.

# ೪೩. ಪಸೇನದಿ ಕೋಸಲ ದೊರೆ

ಪಸೇನದಿ ಕೋಸಲನು ಕೋಸಲ ದೇಶದ ದೊರೆ. ಕೋಸಲವು ಮಗಧದ ಉತ್ತರದಲ್ಲಿತ್ತು. ಅದರ ದೊರೆ ಬಿಂಬಿಸಾರನಾಗಿದ್ದನು. ಕೋಸಲ ದೇಶದ ರಾಜಧಾನಿ ಸಾವತ್ತಿ. ಪಸೇನದಿಯ ತಂಗಿಯೊಬ್ಬಳು ಬಿಂಬಿಸಾರನ ಪಟ್ಟದ ರಾಣಿಯಾಗಿದ್ದಳು. ಹೀಗಾಗಿ ಪಾಸೆನಾಡಿಯು ಬಿಂಬಸಾರನ ಭಾವಮೈದುನನಾಗಿದ್ದನು.

ಕೋಸಲದ ದೊರೆಯಾದ ಪಸೇನದಿಯು ಬುದ್ಧನ ಅನುಯಾಯಿಯಾಗಿ ಮೊದಲೇ ಸೇರಿಕೊಂಡಿದ್ದನು. ಅಷ್ಟೇ ಅಲ್ಲ ಮೊದಲಿನಿಂದಲೂ ಬುದ್ಧನಿಗೆ ಒತ್ತಾಸೆಕೊಡುತ್ತಿದ್ದನು. ಅವನ ಪಟ್ಟದ ರಾಣಿಯಾಗಿದ್ದ ಮಲ್ಲಿಕಾ ಬಹಳ ಬುದ್ಧಿವಂತಳೂ, ಧಾರ್ಮಿಕಳೂ ಆಗಿದ್ದಳು. ಅವಳು ಧರ್ಮವನ್ನು ಚೆನ್ನಾಗಿ ಅರಿತಿದ್ದಳು. ಗಂಡನ್ನಿಗೆ ಅನೇಕ ಸಮಯಗಳಲ್ಲಿ ಧಾರ್ಮಿಕ ಮಾರ್ಗದರ್ಶಿಯಾಗಿದ್ದಳು.

ಮೊದಲನೆಯ ಸಲ ರಾಜನು ದೊರೆಯೆನ್ನು ಭೇಟಿಯಾದಾಗ ಕೇಳಿದ್ದನು-''ಗೌತಮನು ಹೇಗೆ ಜ್ಞಾನವನ್ನು ಪಡೆದನು ? ಅವನು ವಯಸ್ಸಿನಲ್ಲೂ ಚಿಕ್ಕವನು, ಎಳೆಯ ಸನ್ಯಾಸಿಯಾಗಿದ್ದಾನಲ್ಲಾ ?''

ಬುದ್ಧನು ಉತ್ತರಿಸಿದನು-ಮಹಾರಾಜಾ, ಪ್ರಪಂಚದಲ್ಲಿ ನಾಲ್ಕು ವಿಷಯಗಳಿವೆ. ಅವು ಚಿಕ್ಕವು, ಎಳೆಯವು ಎಂದು ಅವುಗಳನ್ನು ಕಡೆಗಾಣಿಸಬಾರದು. ಅವು ಯಾವುವೆಂದರೆ ಒಬ್ಬ ಶ್ರೇಷ್ಠ ಬಿಲ್ಲುಗಾರ, ಬೆಂಕಿ, ಹಾವು ಮತ್ತು ಭಿಕ್ಷು ಅಂದರೆ ಸನ್ಯಾಸಿ-ಕೋಪಗೊಂಡ ಒಬ್ಬ ಎಳೆಯ ಬಿಲ್ಲುಗಾರನು ದುಷ್ಟನಾಗಿ ಜನಗಳಿಗೆ ಹಿಂಸೆಕೊಡುತ್ತಾನೆ. ವಿಷಪೂರಿತವಾದ ಹಾವು ಎಳೆಯದಾದರೂ ಯಾರನ್ನಾದರೂ ಕಚ್ಚಿ ಸಾಯಿಸಬಲ್ಲದು. ಚಿಕ್ಕ ಬೆಂಕಿಯ ಕೆಂಡ ದೊಡ್ಡ ಜ್ವಾಲೆಯಾಗಿ ಕಟ್ಟಡಗಳನ್ನೂ, ಅರಣ್ಯಗಳನ್ನೂ ಸುಟ್ಟುಹಾಕುತ್ತದೆ. ಎಳೆಯ ಭಿಕ್ಷುವು ಕಾಲಾನುಕಾಲದಲ್ಲಿ ದೊಡ್ಡ ಸನ್ಯಾಸಿಯಾಗಬಹುದು.

ಇದನ್ನು ಕೇಳಿ ದೊರೆ ಪಸೇನದಿಯು ಬುದ್ಧನು ನಿಜವಾಗಿಯೂ ಒಬ್ಬ ವಿವೇಕ ಶೀಲ ಉಪಾಧ್ಯಾಯನೆಂದು ಅರಿತುಕೊಂಡು ಅವನ ಶಿಷ್ಯನಾದನು.

ದೊರೆ ಪಸೇನದಿಯು ಬುದ್ಧನ ಬಳಿ ಸಲಹೆಯನ್ನು ಕೇಳಲು ಹೋಗಲು ಬಯಸಿದನು. ತನ್ನ ಕಛೇರಿಯ ಕೆಲಸಕಾರ್ಯಗಳಿದ್ದರೂ, ಸ್ವಲ್ಪ ಸಮಯವನ್ನು ಸಾಧಿಸಿ ಬುದ್ಧನೊಡನೆ ಮಾತುಕತೆ ನಡೆಸುತ್ತಿದ್ದನು. ಒಂದು ದಿನ ಬುದ್ಧನೊಡನೆ ಹೀಗೆಯೇ ಸಲ್ಲಾಪವಾಡುತ್ತಿರುವಾಗ ಅವನ ಹೆಂಡತಿಯಾದ ಮಲ್ಲಿಕಾ ಒಂದು ಹೆಣ್ಣು ಶಿಶುವನ್ನು ಪ್ರಸವಿಸಿದ ವಾರ್ತೆ ತಿಳಿಯಿತು. ರಾಜನಿಗೆ ಹೆಣ್ಣು ಹುಟ್ಟಿದ್ದರಿಂದ ಸಂತೋಷವಾಗಲಿಲ್ಲ. ಅವನಿಗೆ ಗಂಡುಮಗು ಬೇಕಾಗಿತ್ತು.

ಬುದ್ಧನು ಇತರ ಧಾರ್ಮಿಕ ಗುರುಗಳಂತಿರಲಿಲ್ಲ. ಅವನು ಹೆಂಗಸರ ಬಗ್ಗೆ ಗೌರವದಿಂದಿದ್ದನು. ಆದ್ದರಿಂದ ಅವನು ಹೇಳಿದನು-ದೊರೆಯೆ, ಕೆಲವು ಹೆಂಗಸರು ಗಂಡಸರಿಗಿಂತಲೂ ಉತ್ತಮರಾಗಿರುತ್ತಾರೆ. ಕೆಲವು ಹೆಂಗಸರು ಬುದ್ಧಿವಂತರೂ, ಒಳ್ಳೆಯವರೂ ಆಗಿರುತ್ತಾರೆ. ಅವರು ತಮ್ಮ ಅತ್ತೆಯನ್ನು ದೇವತೆಯಂತೆ ಗೌರವಿಸುತ್ತಾರೆ. ಅವರು ಕಾಯಾ, ವಾಚಾ, ಮನಸಾ ಪರಿಶುದ್ಧರಾಗಿರುತ್ತಾರೆ. ಒಂದು ದಿನ ಅವರು ದೇಶವನ್ನು ಆಳುವಂತಹ ಶೂರನಾದ ಮಗನನ್ನು ಹಡೆಯುತ್ತಾರೆ.

ಒಂದು ಸಲ ಬುದ್ಧನು -''ನಮಗೆ ಅತಿಯಾದ ಪ್ರೀತಿಪಾತ್ರರೂ ನಮಗೆ ದುಃಖವನ್ನೂ, ಶೋಕವನ್ನೂ, ನಿರಾಸೆಯನ್ನೂ ಉಂಟುಮಾಡುತ್ತಾರೆ'' ಎಂದು ಹೇಳಿದನೆಂದು ದೊರೆಗೆ ಗೊತ್ತಾಯಿತು. ಅವನು ಮಲ್ಲಿಕಾ ರಾಣಿಯನ್ನು ''ನೀನು ಬುದ್ಧನ ಈ ಮಾತನ್ನು ಒಪ್ಪುವಿಯಾ'' ಎಂದು ಕೇಳಿದನು. ಅದಕ್ಕೆ ರಾಣಿಯು ''ಬುದ್ಧನು ಹೇಳಿದ್ದರೆ ಅದು ನಿಜವಾಗಿರುತ್ತದೆ'' ಎಂದಳು. ಆದರೆ ದೊರೆಗೆ ತೃಪ್ತಿಯಾಗಲಿಲ್ಲ. ''ನಾವು ಪ್ರೀತಿಸುವವರು ನಮಗೇಕೆ ದುಃಖ ಕೊಡುತ್ತಾರೆ ?'' ಎಂದು ಆಶ್ಚರ್ಯಪಟ್ಟನು.

ಒಮ್ಮೆ ರಾಣಿ ಮಲ್ಲಿಕಳು ಒಬ್ಬ ಬ್ರಾಹ್ಮಣನನ್ನು ಕರೆಸಿ ''ಈ ವಿಚಾರವನ್ನು ಸರಿಯಾಗಿ ವಿವರಿಸಬೇಕೆಂದು ಬುದ್ಧನನ್ನು ಕೇಳಿಕೊಂಡು ಬಾ! '' ಎಂದು ಕಳಿಸಿದಳು. ಆತನು ಬುದ್ಧನಿಂದ ಅನೇಕ ಕತೆಗಳನ್ನು ಕೇಳಿಕೊಂಡು ಬಂದು ಅದನ್ನೆಲ್ಲಾ ರಾಣಿಗೆ ಹೇಳಿದನು. ಆಗ ರಾಣಿಯು ರಾಜನನ್ನು ಕೇಳಿದಳು-''ಸ್ವಾಮಿ, ನಿನ್ನ ಮಗಳಾದ ವಜೀರಾ ನಿನಗೆ ಪ್ರಿಯಳಾಗಿದ್ದಾಳೆ ಅಲ್ಲವೆ ? ಈ ವಿಚಾರವಾಗಿ ನಿನ್ನ ಅಭಿಪ್ರಾಯವೇನು ?''

''ಹೌದು ಮಲ್ಲಿಕಾ, ಅವಳು ನನಗೆ ಬಹಳ ಪ್ರಿಯಳಾಗಿದ್ದಾಳೆ''.

''ರಾಜಕುಮಾರಿಗೆ ಏನಾದರೂ ಕೆಟ್ಟದಾದರೆ ಅದರಿಂದ ನಿನಗೆ ದುಃಖ, ಶೋಕ, ನೋವುಗಳುಂಟಾಗುವುವೆ ?''

''ಹೌದು ಮಲ್ಲಿಕಾ'' ರಾಜನೆಂದನು.

''ಹೌದು ಸ್ವಾಮಿ, ನೀವು ಹೇಳಿದ್ದಿರಲ್ಲಾ, ಬುದ್ಧನು ನಮಗೆ ಪ್ರಿಯರಾದವರು ನಮಗೆ ದುಃಖ ಕೊಡುತ್ತಾರೆ, ಅದು ಹೇಗೆ ? ಎಂದಿದ್ದರಲ್ಲಾ ಅದಕ್ಕೆ ನಿಮ್ಮ ಮಗಳ ಈ ಉದಾಹರಣೆ'' ಎಂದಳು.

ಆಗ ರಾಜನು - ಬಹಳ ಆಶ್ಚರ್ಯಕರವಾಗಿದೆ. ಬುದ್ಧನು ಎಷ್ಟು ದೂರ ಆಲೋಚಿಸಿ ಹೇಳುತ್ತಾನೆ ? ಎಂದನು.

ಕೋಸಲದ ದೊರೆಯು ಒಂದು ಸಲ ತನ್ನ ಸೋದರಳಿಯನಿಂದ ಸೋತು ತನ್ನ ರಾಜಧಾನಿಯಾದ ಸಾವತ್ತಿಗೆ ಹಿಂದಿರುಗಬೇಕಾಯ್ತು. ಆಗ ಬುದ್ಧನು ತನ್ನ ಶಿಷ್ಯರಿಗೆ -''ಸೋತವನಾಗಲೀ ಗೆದ್ದವನಾಗಲೀ ಯಾರಿಗೂ ಶಾಂತಿ ಸಿಗುವುದಿಲ್ಲ'' ಎಂದು ವಿವರಿಸಿದನು.

ಜಯವು ದ್ವೇಷವನ್ನು ತರುತ್ತದೆ.
ಸೋತವನು ದುಃಖದಿಂದ ಜೀವಿಸುತ್ತಾನೆ.
ಯಾರು ಸೋಲು, ಗೆಲುವೆಂಬುದನ್ನು ತ್ಯಜಿಸುತ್ತಾನೋ
ಅವನು ಸಂತೋಷದಿಂದಲೂ ಶಾಂತಿಯಿಂದಲೂ ಇರುತ್ತಾನೆ.

ನಂತರ ನಡೆದ ಯುದ್ಧದಲ್ಲಿ ಮತ್ತೆ ಇಬ್ಬರೂ ರಾಜರೂ ಯುದ್ಧ ಮಾಡಿದರು. ಅದರಲ್ಲಿ ಕೋಸಲದ ದೊರೆ ಜಯಶಾಲಿಯಾದುದೇ ಅಲ್ಲದೆ ಅಜಾತಶತ್ರುವನ್ನು ಜೀವಂತವಾಗಿ ಸೆರೆಹಿಡಿದು ಅವನ ಆನೆಗಳನ್ನೂ, ರಥಗಳನ್ನೂ, ಕುದುರೆಗಳನ್ನೂ ಮತ್ತು ಸಿಪಾಯಿಗಳನ್ನೂ ವಶಪಡಿಸಿಕೊಂಡನು. ಕೋಸಲದ ದೊರೆಯು ತನ್ನ ಸೋದರಳಿಯನನ್ನು ಬೇಕಾದರೆ ಬಿಡುತ್ತೇನೆ. ಆದರೆ ಆನೆ, ಕುದುರೆ, ರಥ ಮೊದಲಾದುವುಗಳನ್ನು ಬಿಡುವುದಿಲ್ಲ ಎಂದು ಯೋಚಿಸಿಕೊಂಡನು. ಅವನ ತನ್ನ ಗೆಲುವಿನ ಗುರುತಾಗಿ ಇವುಗಳನ್ನೆಲ್ಲಾ ಇಟ್ಟುಕೊಳ್ಳಬೇಕೆಂದು ಬಯಸಿದನು.

ಇದನ್ನು ಕೇಳಿ ಬುದ್ಧನು ತನ್ನ ಶಿಷ್ಯರಿಗೆ ಹೇಳಿದನು- ಕೋಸಲದ ದೊರೆಯು ಇವುಗಳನ್ನು ತನ್ನ ಬಳಿ ಇಟ್ಟುಕೊಳ್ಳದಿದ್ದರೆ ಒಳಿತಾಗುತ್ತಿತ್ತು ಎಂದನು. ಈ ಅಭಿಪ್ರಾಯವು ಇಂದಿನ ಯುದ್ಧಗಳಿಂದ ತತ್ತರಿಸುತ್ತಿರುವ ದೇಶಗಳಿಗೂ ಅನ್ವಯಿಸುತ್ತದೆ.

''ಒಬ್ಬ ಮನುಷ್ಯನು ತನಗೆ ಬೇಕಾದಂತೆ ಲೂಟಿ ಮಾಡಬಲ್ಲನು. ಬೇರೆಯವರು ಹಿಂದಿರುಗಿ ಅವನನ್ನು ಲೂಟಿ ಮಾಡಿದಾಗ ಮತ್ತೆ ಅವನು ಇವನನ್ನು ಲೂಟಿ ಮಾಡುವನು. ಹೀಗೆ ಈ ದರೋಡೆಯ ಚಕ್ರವು ತಿರುಗುತ್ತಾ ದರೋಡೆಕೋರನಿಗೂ, ದರೋಡೆಯಾದವನಿಗೂ ದುಃಖವನ್ನು ಉಂಟುಮಾಡುತ್ತಲೇ ಇರುತ್ತವೆ''.

ಒಂದು ದಿನ ಸಂಜೆ ಕೋಸಲದ ದೊರೆಯು ಬುದ್ಧನೊಂದಿಗೆ ಮಾತನಾಡುತ್ತಿದ್ದನು. ಆಗ ರಸ್ತೆಯಲ್ಲಿ ಸನ್ಯಾಸಿಗಳ ಒಂದು ಗುಂಪು ಹೋಗುತ್ತಿತ್ತು. ಅವರ ಕೂದಲುಗಳು ಜಟೆಗಟ್ಟಿದ್ದುವು. ಮೈತುಂಬಾ ಕೂದಲುಗಳಿದ್ದುವು. ಅವರಿಗೆ ಉದ್ದನೆಯ ಉಗುರುಗಳಿದ್ದುವು. ಅವರು ತಲೆಯನ್ನು ಬಗ್ಗಿಸಿ ನಡೆದುಕೊಂಡು ಹೋಗುತ್ತಿದ್ದರು. ರಾಜನು ಅವರನ್ನು ನೋಡಿದೊಡನೆ ಎದ್ದು ನಿಂತು ತನ್ನ ಹೆಸರನ್ನು ಮೂರು ಬಾರಿ ಉಚ್ಚರಿಸಿ ಅವರ ಮುಂದೆ ಮೊಣಕಾಲೂರಿ ನಮಸ್ಕರಿಸಿದನು.

ನಂತರ ರಾಜನು ಬುದ್ಧನ ಬಳಿ ಬಂದು ಹೇಳಿದನು-''ಸ್ವಾಮಿ, ಆ ಸನ್ಯಾಸಿಗಳನ್ನು ನೋಡಿದಿರಾ ? ಅವರು ಎಷ್ಟು ಶಾಂತರಾಗಿ ತಲೆ ಬಗ್ಗಿಸಿಕೊಂಡು ಹೋಗುತ್ತಿದ್ದಾರೆ''. ಬುದ್ಧನು ತನ್ನ ದೈವೀ ನೇತ್ರಗಳಿಂದ ಅವರನ್ನು ನೋಡಿ ಹೇಳಿದನು- ಅವರು ನಿಜವಾದ ಸನ್ಯಾಸಿಗಳಲ್ಲ. ನಿನ್ನ ರಾಜ್ಯದ ಸಮಾಚಾರವನ್ನು ತಿಳಿದುಕೊಂಡು ಹೋಗಲು ಮಾರುವೇಷದಿಂದ ಬಂದಿರುವ ಬೇಹುಗಾರರು. ಮೇಲುನೋಟದಿಂದಲೇ ಮನುಷ್ಯರ ನಿಜವಾದ ಸ್ವಭಾವವೇನೆಂಬುದನ್ನು ತಿಳಿಯಲು ನಿನ್ನಂತಹ ಶ್ರೀಮಂತ ಜೀವನವನ್ನು ನಡೆಸಿದವನಿಂದ ಸಾಧ್ಯವಿಲ್ಲ. ನಾವು ಸ್ವಲ್ಪ ಕಾಲ ಅವರ ಜೊತೆಯಲ್ಲಿದ್ದು ಅವರನ್ನು ಅರಿತುಕೊಳ್ಳಬೇಕು. ಹಾಗೆ ಅರಿತುಕೊಳ್ಳಬೇಕಾದರೆ ನಮಗೆ ಸೂಕ್ಷ್ಮ ಬುದ್ಧಿ ಇರಬೇಕು.

''ಅವರು ಒಳ್ಳೆಯವರಾಗಿರುವರೋ ಇಲ್ಲವೋ ಎಂಬುದನ್ನು ತಿಳಿಯಬೇಕಾದರೆ ನಾವು ಅವರ ಜೊತೆಯಲ್ಲಿ ಮಾತನಾಡಬೇಕು. ಕಷ್ಟಬಂದಾಗ ಅವರು ಅದನ್ನು ಧೈರ್ಯದಿಂದ ಎದುರಿಸುವರೇ ಎಂಬುದನ್ನು ಪರಿಶೀಲಿಸಬೇಕು. ಅವರು ಬುದ್ಧಿವಂತರೇ ಅಲ್ಲವೇ ಎಂಬುದನ್ನು ಅವರೊಡನೆ ಚರ್ಚಿಸಿ ತಿಳಿಯಬೇಕು. ದುಷ್ಟರು ಕೆಲವುವೇಳೆ ಒಳ್ಳೆಯವರಂತೆ ನಟಿಸುತ್ತಾರೆ. ಅವರ ನಿಜವಾದ ಸ್ವಭಾವವನ್ನರಿಯುವುದು ನಿನಗೆ ಕಷ್ಟವಾಗುತ್ತದೆ''.

ಪಸೇನದಿ ಕೋಸಲದ ದೊರೆಯು ತನ್ನ ದಾಯಾದಿಯಾದ ಅಜಾತಶತ್ರುವಿನೊಡನೆ ಯುದ್ಧ ಮಾಡಿದಾಗ ಒಂದು ಸಲ ಸೋತನು. ಮತ್ತೊಂದು ಸಲ ಗೆದ್ದನು.

ಪಸೇನದಿ ಕೋಸಲನು ತನ್ನ ಎಂಭತ್ತನೆಯ ವಯಸ್ಸಿನಲ್ಲಿ ತೀರಿಕೊಂಡನು. ಅವನ ಮಗನಾದ ವಿದುದಾಭನು ತಂದೆಯ ಮೇಲೆ ದಂಗೆ ಎದ್ದಿದ್ದನು.

## ೪೭. ಬುದ್ಧನಿಗೆ ಅಪಖ್ಯಾತಿ ತರಲು ಯತ್ನಿಸಿದ ಸುಂದರಿ

ಬುದ್ಧ ಸಂಘವನ್ನು ನಡೆಸುತ್ತಿದ್ದ ಇಪ್ಪತ್ತನೆಯ ವರ್ಷದಲ್ಲಿ ಎರಡು ಮುಖ್ಯ ಘಟನೆಗಳು ನಡೆದುವು. ಒಂದು - ಡಕಾಯಿತನಾಗಿದ್ದ ಅಂಗುಲಿಮಾಲಾನನ್ನು ಒಳ್ಳೆಯವನನ್ನಾಗಿ ಪರಿವರ್ತಿಸಿದ್ದು, ಇನ್ನೊಂದು ಬುದ್ಧನನ್ನು ಕಂಡು ಹೊಟ್ಟೆಕಿಚ್ಚುಪಡುತ್ತಿದ್ದ ಕೆಲವು ಸನ್ಯಾಸಿಗಳು ಬುದ್ಧನಿಗೆ ಅಪಖ್ಯಾತಿ ತರಲು ಪ್ರಯತ್ನಿಸಿದ್ದು. ಇದು ನಡೆದುದು ಶ್ರಾವಸ್ತಿಯಲ್ಲಿ.

ಬುದ್ಧನೂ ಮತ್ತು ಅವನ ಶಿಷ್ಯರೂ ಶ್ರಾವಸ್ತಿಯಲ್ಲಿ ಬಹಳ ಖ್ಯಾತಿ ಪಡೆದ ಧರ್ಮಗುರುಗಳಾಗಿದ್ದರು. ಅವರ ಧರ್ಮಬೋಧೆಗಳನ್ನು ಕೇಳಿ, ಅವರಿಗೆ ಭಿಕ್ಷೆನೀಡಲು ಅಪಾರ ಸಂಖ್ಯೆಯಲ್ಲಿ ಜನಗಳು ಬರುತ್ತಿದ್ದರು.

ಶ್ರಾವಸ್ತಿಯಲ್ಲಿ ಎಲ್ಲ ಜನರೂ ಬುದ್ಧನ ಅನುಯಾಯಿಗಳಾಗಿರಲಿಲ್ಲ. ಕೆಲವು ಜನ ಸನ್ಯಾಸಿಗಳು ತಮ್ಮ ಬೋಧನೆಯೇ ಶ್ರೇಷ್ಠವಾದುದೆಂದು ತಿಳಿದಿದ್ದರು. ಹೆಚ್ಚು ಹೆಚ್ಚು ಜನರು ಬುದ್ಧನ ಮತ್ತು ಅವನ ಶಿಷ್ಯರ ಧಾರ್ಮಿಕ ಉಪನ್ಯಾಸಗಳಿಗೆ ಹೋಗುತ್ತಿದ್ದರು. ಅವರಿಗೆ ಬಟ್ಟೆ- ಬರೆಗಳನ್ನೂ, ಔಷಧಿಗಳನ್ನೂ ಕಾಣಿಕೆಯಾಗಿ ಕೊಡುತ್ತಿದ್ದರು. ಇದನ್ನೆಲ್ಲಾ ನೋಡಿ ಆ ಸನ್ಯಾಸಿಗಳಿಗೆ ಅಸೂಯೆಯುಂಟಾಗುತ್ತಿತ್ತು- ಅವರು ಏನಾದರೂ ಉಪಾಯವನ್ನು ಮಾಡಬೇಕೆಂದು ಯೋಚಿಸುತ್ತಿದ್ದರು.

ಶ್ರಾವಸ್ತಿಯಲ್ಲಿ ಒಬ್ಬ ಪರಿವ್ರಾಜಕ ಸನ್ಯಾಸಿನಿ ಇದ್ದಳು. ಅವಳು ಇನ್ನೂ ತರುಣಿ. ಅವಳ ಶೀಲವು ಕೆಟ್ಟುದಾಗಿತ್ತು-ಇವಳನ್ನು ಉಪಯೋಗಿಸಿಕೊಂಡು ಬುದ್ಧ ಮತ್ತು ಅವನ ಶಿಷ್ಯರಿಗೆ ಅಪಕೀರ್ತಿ ತರಬೇಕೆಂದು ಅವರು ಯೋಚಿಸಿದರು.

ಒಂದು ದಿನ ಅವರು ಅವಳನ್ನು ಕಂಡು ಹೇಳಿದರು- ತಂಗೀ, ಈ ಬುದ್ಧನನ್ನು ಹೇಗಾದರೂ ಮಾಡಿ ಅವನಿಗೆ ಅಪಕೀರ್ತಿ ತರಲು ನೀನು ನಮಗೆ ಸಹಾಯಮಾಡಬೇಕು. ಅವನು ನಮ್ಮ ಶಿಷ್ಯರನ್ನೆಲ್ಲಾ ತನ್ನ ಕಡೆ ಎಳೆದುಕೊಳ್ಳುತ್ತಿದ್ದಾನೆ.

''ನಾನೇನು ಮಾಡಬೇಕು ?'' ಸುಂದರಿ ಕೇಳಿದಳು.

''ನೀನು ಆಗಾಗ ಜೇತವನಕ್ಕೆ ಹೋಗಿ ಬಂದು ಮಾಡುತ್ತಾ ಬುದ್ಧನ ಚಟುವಟಿಕೆಗಳ ಬಗ್ಗೆ ನಮಗೆ ತಿಳಿಸುತ್ತಿದ್ದರೆ ನಾವು ಮುಂದೆ ಏನು ಮಾಡಬೇಕೆಂಬುದನ್ನು ನೋಡಿಕೊಳ್ಳುತ್ತೇವೆ''.

ಅವರ ಮಾತಿನಂತೆ ಸುಂದರಿಯು ಪ್ರತಿದಿನವೂ ಜೇತವನಕ್ಕೆ ಹೋಗಿಬರುತ್ತಿದ್ದಳು. ಇದರಿಂದ ತನಗೇನು ಕೆಡಕು ಸಂಭವಿಸಬಹುದೆಂಬುದನ್ನು ಅವಳು ಯೋಚಿಸಲಿಲ್ಲ. ಇದನ್ನು ಬಹಳ ಜನರು ಗಮನಿಸುತ್ತಿದ್ದರು. ಈ ಸಂದರ್ಭವನ್ನುಪಯೋಗಿಸಿಕೊಂಡು ಆ ದುಷ್ಟ ಸನ್ಯಾಸಿಗಳು ಅವಳನ್ನು ಕೊಂದು ಒಂದು ಗುಣಿಯನ್ನು ಹತ್ತಿರದಲ್ಲೇ ತೋಡಿ ಅದರಲ್ಲಿ ಅವಳನ್ನು ಹೂತುಬಿಟ್ಟರು. ನಂತರ ದೊರೆಯ ಬಳಿಗೆ ಹೋಗಿ ಸುಂದರಿಯು ಪ್ರತಿನಿತ್ಯ ಜೇತವನಕ್ಕೆ ಧರ್ಮೋಪದೇಶವನ್ನು ಕೇಳುವುದಕ್ಕೆ ಹೋಗಿಬರುತ್ತಿದ್ದುದಾಗಿಯೂ, ಈ ನಡುವೆ ಅವಳು ಕಾಣೆಯಾಗಿದ್ದಾಳೆಂದೂ ತಿಳಿಸಿದರು.

''ಅವಳೆಲ್ಲಿರಬಹುದೆಂದು ಊಹಿಸುತ್ತೀರಿ ?'' ದೊರೆಯು ಕೇಳಿದನು.

''ಅವಳು ಜೇತವನದಲ್ಲಿಯೇ ಇರಬಹುದು ಮಹಾಸ್ವಾಮಿ, ಆದರೆ ಧರ್ಮೋಪದೇಶವು ಮುಗಿದ ನಂತರ ಅವಳು ಬಹಳ ಹೊತ್ತು ಅಲ್ಲಿರುತ್ತಿರಲಿಲ್ಲ''.

''ಸರಿ, ಹಾಗಾದರೆ ನೀವು ಹೋಗಿ ಅವಳನ್ನು ಹುಡುಕಿ''.

ಆ ಸನ್ಯಾಸಿಗಳು ಅವಳನ್ನು ಅಲ್ಲಿ-ಇಲ್ಲಿ ಹುಡುಕುವಂತೆ ನಟಿಸಿ ಕೊನೆಗೆ ತಾವು ಹೂತಿಟ್ಟಿದ್ದ ಸ್ಥಳಕ್ಕೆ ಹಳ್ಳದಿಂದ ಅವಳ ಶವವನ್ನು ತೆಗೆದು ಚಟ್ಟದ ಮೇಲಿಟ್ಟುಕೊಂಡು ಅದನ್ನು ಶ್ರಾವಸ್ತಿಗೆ ತೆಗೆದುಕೊಂಡು ಹೊರಟರು- ಹಾಗೆ ಹೋಗುವಾಗ ದಾರಿಯುದ್ದಕ್ಕೂ - ನೋಡಿ ಸ್ವಾಮಿ, ಈ ಸನ್ಯಾಸಿಗಳು ಮಾಡಿರುವ ಕೆಲಸವನ್ನು ನೋಡಿ. ತಾವು ಬಹಳ ನೀತಿವಂತರೆಂದು ಹೇಳಿಕೊಳ್ಳುತ್ತಾರೆ. ನಾಚಿಕೆಯಿಲ್ಲದವರು ಅವರು, ಕೆಟ್ಟವರು, ಸುಳ್ಳುಗಾರರು, ಇಲ್ಲಿ ನೋಡಿ ಏನು ಮಾಡಿದ್ದಾರೆ ಯ ಈ ಸುಂದರಿಯ ಮಾನಭಂಗ ಮಾಡಿ ಅದನ್ನು ಮುಚ್ಚಿಡಲು ಅವಳನ್ನು ಕೊಂದಿದ್ದಾರೆ.

ಬುದ್ಧನ ಶಿಷ್ಯರಿಗೆ ಇದನ್ನು ಕೇಳಿ ಬಹಳ ಭಯವಾಯಿತು. ಅವರಿಗೆ ಏನೂ ಮಾಡಬೇಕೆಂದು ತೋಚಲಿಲ್ಲ. ಆದರೆ ಬುದ್ಧನು ಶಾಂತನಾಗಿ ಅವರನ್ನು ಭಯಪಡದಿರುವಂತೆ ಹೇಳಿದನು- ಅವರು ಯಾವ ತಪ್ಪನ್ನೂ ಮಾಡದಿರುವುದರಿಂದ ಆ ದುಷ್ಟರ ಕೂಗಿಗೆ ಭಯಪಡಬೇಕಾದ್ದಿಲ್ಲ.

ನಂತರ ಬುದ್ಧಿ ಮಾತನ್ನು ಹೇಳಿದನು. ಅವರು ಎಷ್ಟೇ ಕೂಗಿಕೊಳ್ಳಲಿ, ಬಯ್ಯಲಿ, ನೀವು ಸುಮ್ಮನಿದ್ದುಬಿಡಿ, ಸುಳ್ಳು ಹೇಳುವವರಾಗಲೀ, ಅಥವಾ ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದಿಲ್ಲವೋ, ಸುಳ್ಳು ಹೇಳುತ್ತಾರೋ ಅಂಥವರು ತಮ್ಮ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಅನುಭವಿಸುತ್ತಾರೆ. ನೀವು ಅವರು ಬಯ್ಯುವ ಯಾವುದನ್ನೂ ಕಿವಿಗೆ ಹಾಕಿಕೊಳ್ಳದೇ ಸುಮ್ಮನೇ ಇದ್ದುಬಿಟ್ಟರೆ ಅವರು ಬೈದು, ಬೈದು ಬಳಲಿ ಸುಸ್ತಾಗಿಬಿಡುತ್ತಾರೆ. ಇನ್ನು ಏಳು ದಿನಗಳೊಳಗಾಗಿ ಈ ಗಲಾಟೆಯೆಲ್ಲಾ ನಿಂತುಹೋಗುತ್ತದೆ.

ಜನಗಳು ತಮ್ಮತಮ್ಮಲ್ಲೇ ಮಾತಾಡಿಕೊಳ್ಳುತ್ತಿದ್ದರು. ಇದೇನು ಬುದ್ಧನೂ, ಅವನ ಶಿಷ್ಯರೂ, ಈ ದುಷ್ಟ ಸನ್ಯಾಸಿಗಳ ಬಯ್ಗುಳನ್ನು ಕೇಳಿಸಿಕೊಂಡು ಸುಮ್ಮನೇ ಇದ್ದಾರಲ್ಲ ? ಬುದ್ಧನೂ ಮತ್ತು ಅವನ ಶಿಷ್ಯರೂ ಬಹಳ ಗುಣವಂತರು. ಅವರು ಇಂತಹ ಕೆಲಸವನ್ನು ಮಾಡುವುದಿಲ್ಲ ಎಂಬುದು ಅವರಿಗೆ ನೆನಪಾಯಿತು. ಯಾರೋ ಇವಳನ್ನು ಕೊಲೆ ಮಾಡಿದ್ದಾರೆ. ಇಂತಹ ಧರ್ಮ ಬುದ್ಧಿಯುಳ್ಳ ಈ ಬೌದ್ಧ ಸನ್ಯಾಸಿಗಳು ಈ ಕೆಲಸವನ್ನು ಮಾಡರು. ಕೊನೆಯಲ್ಲಿ ಬೈದು ಬೈದು ಸುಸ್ತಾಗಿ ಅವರುಗಳು ಸುಮ್ಮನಾದರು. ಆಗ ಬುದ್ಧನು ಈ ಅವಕಾಶವನ್ನುಪಯೋಗಿಸಿಕೊಂಡು ತನ್ನ ಶಿಷ್ಯರಿಗೆ ಬಯ್ಗುಳನ್ನು ಸಹಿಸಿಕೊಂಡಿರುವುದು ಹೇಗೆ ಎಂಬುದನ್ನು ಹೇಳಿಕೊಟ್ಟನು. ಯಾರಾದರೂ ಭಿಕ್ಷುಗಳನ್ನು ಬಯ್ದರೆ ಅವರು ಅದಕ್ಕೆ ಕಿವಿಗೊಡದೆ ಸುಮ್ಮನಿದ್ದುಬಿಡಬೇಕು.

ನಂತರ ದೊರೆಗೆ ತಪ್ಪಿತಸ್ಥರು ಯಾರೆಂದು ತಿಳಿಯಿತು. ಆ ದುಷ್ಟರೆಲ್ಲಾ ತಮ್ಮ ತಪ್ಪನ್ನು ಒಪ್ಪಿಕೊಂಡರು. ಅವರಿಗೆ ಶಿಕ್ಷೆಯಾಯಿತು. ಈ ಘಟನೆಯ ನಂತರ ಬುದ್ಧನೂ ಮತ್ತು ಅವನ ಅನುಯಾಯಿಗಳೂ ಶ್ರಾವಸ್ತಿಯಲ್ಲಿ ಜನಗಳಿಂದ ಇನ್ನೂ ಹೆಚ್ಚಿನ ಮನ್ನಣೆ ಪಡೆದರು.

## ೪೮. ಎಲ್ಲಾ ದಿಕ್ಕುಗಳನ್ನು ಪೂಜಿಸುತ್ತಿದ್ದ ಸಿಗಾಲ

ಒಂದು ದಿನ ಬೆಳಿಗ್ಗೆ ಬುದ್ಧನು ಬಿದಿರಿನ ತೋಪಿನಿಂದ ರಾಜಗೃಹದ ಕಡೆ ಹೊರಟಿದ್ದನು. ಭಿಕ್ಷವನ್ನು ಸ್ವೀಕರಿಸುತ್ತಾ ಮುಂದೆ ಹೋಗುತ್ತಿರಲು ಸಿಗಾಲನೆಂಬ ತರುಣನನ್ನು ಕಂಡನು. ಅವನು ಅದಾಗ ತಾನೇ ಸ್ನಾನ ಮಾಡಿದ್ದುದರಿಂದ ಅವನ ಒದ್ದೆ ಬಟ್ಟೆಗಳಿಂದ ನೀರು ತೊಟ್ಟಿಕ್ಕುತ್ತಿತ್ತು. ಆ ತರುಣನು ಪೂರ್ವ-ಪಶ್ಚಿಮ-ದಕ್ಷಿಣ-ಉತ್ತರ-ಮೇಲಿನ ಆಕಾಶ, ಕೆಳಗಿನ ಭೂಮಿ ಎಲ್ಲದಕ್ಕೂ ನಮಸ್ಕರಿಸುತ್ತಿದ್ದನು. ಬುದ್ಧನು ಅವನ ಬಳಿ ನಿಂತು ಅವನೇನು ಮಾಡುತ್ತಿರವನೆಂಬುದನ್ನು ಕೇಳಿದನು. ಅದಕ್ಕೆ ಅವನು-''ನಮ್ಮ ತಂದೆಯು ಸಾಯುವಾಗ ನಾನು ಹೀಗೆ ದಿಕ್ಕುಗಳಿಗೆಲ್ಲಾ ನಮಸ್ಕರಿಸಬೇಕೆಂದು ಹೇಳಿದ್ದಾನೆ. ನಾನು ಅವನ ಕೊನೆಯ ಬಯಕೆಯನ್ನು ಪೂರೈಸುತ್ತಿದ್ದೇನೆ'' ಎಂದನು.

''ನಿಮ್ಮ ತಂದೆಯ ಕೊನೆಯ ಬಯಕೆಯನ್ನು ನೀನು ತೀರಿಸುತ್ತಿರುವುದು ಸರಿಯೇ - ಆದರೆ ನಿಮ್ಮ ತಂದೆಯು ಹೇಳಿದ ಮಾತುಗಳಿಗೆ ನೀನು ಅಕ್ಷರಶಃ ಅರ್ಥ ಮಾಡಿರುವುದು ಸರಿಯಲ್ಲ. ನಿನ್ನ ತಂದೆ ಹೇಳಿರುವುದು ನೀನು ಹೀಗೆ ದಿಕ್ಕುಗಳಿಗೆ ಬಗ್ಗಿ ನಮಸ್ಕರಿಸಬೇಕೆಂದಲ್ಲ. ಅದರ ಅರ್ಥ ಹೀಗಿದೆ ನೋಡು''.

೧. ಪೂರ್ವ ದಿಕ್ಕಿಗೆ ನಮಸ್ಕರಿಸುವುದೆಂದರೆ - ನಿನ್ನ ತಂದೆಯಾಯಿಗಳನ್ನು ಗೌರವಿಸುವುದು.

೨. ದಕ್ಷಿಣ ದಿಕ್ಕಿಗೆ ನಮಸ್ಕರಿಸುವುದೆಂದರೆ - ನಿನ್ನ ಉಪಾಧ್ಯಾಯರಿಗೆ ಗೌರವಿಸಿ ಅವರಿಗೆ ವಿಧೇಯನಾಗಿರುವುದು.

೩. ಪಶ್ಚಿಮ ದಿಕ್ಕಿಗೆ ನಮಸ್ಕರಿಸುವುದೆಂದರೆ - ನಿನ್ನ ಹೆಂಡತಿಗೆ ಪ್ರಾಮಾಣಿಕವಾಗಿರುವುದು.

೪. ಉತ್ತರ ದಿಕ್ಕಿಗೆ ತಲೆಬಾಗುವುದೆಂದರೆ - ನಿನ್ನ ಬಂಧು ಮಿತ್ರರಲ್ಲಿ ಪ್ರಸನ್ನನಾಗಿ, ಉದಾರವಾಗಿರುವುದು.

೫. ಇನ್ನು ಆಕಾಶಕ್ಕೆ ನಮಸ್ಕರಿಸುವುದೆಂದರೆ - ಧಾರ್ಮಿಕರಾದ ಸಾಧು ಸನ್ಯಾಸಿಗಳ ಬೇಡಿಕೆಗಳನ್ನು ಈಡೇರಿಸುವುದು.

೬. ಭೂಮಿಗೆ ನಮಸ್ಕಾರವೆಂದರೆ - ನಿನ್ನ ಆಳುಕಾಳುಗಳಿಗೆ ಅವರ ಯೋಗ್ಯತೆಯಂತೆ ಕೆಲಸಕೊಟ್ಟು ಸರಿಯಾಗಿ ಸಂಬಳ ಮತ್ತು ಔಷಧಿಗಳನ್ನು ಕೊಡುವುದು. ಹೀಗೆ ಮಾಡಿದರೆ ಕೆಡಕುಗಳಿಂದ ತಪ್ಪಿಸಿಕೊಳ್ಳಬಹುದು.

''ಇದಲ್ಲದೆ ಇನ್ನುಹದಿನಾಲ್ಕು ವಿಧವಾದ ಕೆಡಕುಗಳಿವೆ. ಅವು ನಮ್ಮ ನಡತೆಗೆ ಸಂಬಂಧಪಟ್ಟ ನಾಲ್ಕು ಕೆಡಕುಗಳು. ಕೊಲ್ಲುವುದು, ಕಳ್ಳತನ, ವ್ಯಭಿಚಾರ ಮತ್ತು ಸುಳ್ಳು ಹೇಳುವುದು.

ಇನ್ನು ನಾಲ್ಕು ಕೆಡಕುಗಳೆಂದರೆ- ಹೊಟ್ಟೆಕಿಚ್ಚು, ದ್ವೇಷ, ಮೂರ್ಖತನ ಮತ್ತು ಭಯ. ಇವುಗಳಿಂದ ತಪ್ಪಿಸಿಕೊಳ್ಳಬೇಕು.

ಕೊನೆಯದಾಗಿ ಒಬ್ಬನ ಧನವನ್ನು ಹಾಳು ಮಾಡುವ ಆರು ದಾರಿಗಳು - ಮತ್ತು ಬರುವ ಹೆಂಡ ಇತ್ಯಾದಿಗಳನ್ನು ಸೇವಿಸುವುದು, ರಾತ್ರಿಹೊತ್ತಿನಲ್ಲಿ ಬೀದಿ ಬೀದಿ ಅಲೆಯುವುದು, ಮೋಜುಗಳಲ್ಲೂ, ಕುಣಿತಗಳಲ್ಲೂ ಕಾಲಕಳೆಯುವುದು, ಜೂಜಾಟ, ಕೆಟ್ಟ ಸ್ನೇಹಿತರ ಸಹವಾಸ ಅಲ್ಲದೆ ಆಲಸ್ಯ ಇವುಗಳಿಂದಲೂ ದೂರವಿರಬೇಕು.

ತರುಣ ಸಿಗಾಲನು ಬುದ್ಧನ ಬುದ್ಧಿವಾದವನ್ನು ಗೌರವದಿಂದ ಕೇಳಿದನು. ಅವನ ತಂದೆಯು ಅವನಿಗೆ ಬುದ್ಧನು ಬಹಳ ಒಳ್ಳೆಯ ಗುರುವೆಂದು ಹೇಳಿದ್ದುದು ನೆನಪಿಗೆ ಬಂದಿತು. ತಂದೆಯು ಸಿಗಾಲನನ್ನು ಬುದ್ಧನ ಬಳಿಗೆ ಹೋಗಬೇಕೆಂದು ಬಹಳ ಬಾರಿ ಹೇಳಿದ್ದರೂ ಸಿಗಾಲನು ಯಾವುದಾದರೊಂದು ನೆಪ ಹೇಳಿ ತಪ್ಪಿಸಿಕೊಳ್ಳುತ್ತಿದ್ದನು. ''ನನಗೆ ಸಮಯವಿಲ್ಲ, ಅಲ್ಲಿಗೆ ಹೋಗುವುದು ಕಷ್ಟ, ನನಗೆ ಆಯಾಸವಾಗಿದೆ ಅಥವಾ ಸನ್ಯಾಸಿಗಳಿಗೆ ಕೊಡಲು ನನ್ನ ಬಳಿ ಹಣವಿಲ್ಲ'' ಹೀಗೆಲ್ಲಾ ಹೇಳುತ್ತಾ ಬಂದಿದ್ದನು.

ಅವನು ಇದನ್ನೆಲ್ಲಾ ಬುದ್ಧನ ಮುಂದೆ ಒಪ್ಪಿಕೊಂಡು ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸುವಂತೆ ಕೇಳಿಕೊಂಡನು. ಅಂದಿನಿಂದ ಅವನು ತಂದೆಯ ಕೊನೆಯ ಬಯಕೆಯನ್ನು, ಬುದ್ಧನು ತೋರಿಸಿಕೊಟ್ಟಂತೆ ಒಳ್ಳೆಯ ಹಾದಿಯಿಂದ ತೀರಿಸುವೆನೆಂದು ಮಾತುಕೊಟ್ಟನು.

# ೪೯. ಅಂಬಪಾಲಿ

ಎಲ್ಲ ಜಾತಿಯ ಉಚ್ಚ ಹಾಗೂ ನೀಚ ಜಾತಿಯ ಗಂಡಸರು ಮತ್ತು ಹೆಂಗಸರು ಬುದ್ಧನ ಧರ್ಮೋಪದೇಶವನ್ನು ಕೇಳಬಯಸಿದರು. ಬುದ್ಧನು ಅವರೆಲ್ಲರಿಗೂ ಉಪದೇಶವನ್ನಿತ್ತನು. ರಕ್ತ ಮತ್ತು ಕಣ್ಣೀರಿಗೆ ಯಾವುದೇ ಜಾತಿಯ ಕಟ್ಟುಕಟ್ಟಲೆಗಳಿಲ್ಲವೆಂಬುದನ್ನು ಬುದ್ಧನು ಅರಿತಿದ್ದನು. ಬುದ್ಧನೂ ಮತ್ತು ಅವನ ಶಿಷ್ಯರೂ ವೈಶಾಲಿಯಲ್ಲಿ ತಂಗಿದ್ದರು. ಆಗ ಅಂಬಾಪಾಲಿಯೆಂಬುವಳು ತನ್ನ ಮಾವಿನ ತೋಪನ್ನು ಅವರ ವಾಸಕ್ಕಾಗಿ ಬಿಟ್ಟುಕೊಟ್ಟಳು. ಆ ಮರಗಳ ನೆರಳಿನಲ್ಲಿ ಅವರು ವಿಶ್ರಮಿಸಿಕೊಳ್ಳಲೆಂದು ಬಯಸಿದಳು.

ಅಂಬಪಾಲಿಯು ಬಹಳ ಸುಂದರಿಯಾಗಿದ್ದಳು. ಅವಳ ಸೌಂದರ್ಯವು ಸಮುದ್ರದಿಂದ ಉದಯವಾಗುವ ಚಿನ್ನದ ಬಣ್ಣದ ಸೂರ್ಯನಂತಿತ್ತು. ಆದರೆ ಅವಳೊಬ್ಬ ವೇಶ್ಯೆ. ಅವಳು ಬುದ್ಧನನ್ನು ನೋಡಲು ಇಷ್ಟಪಡಲಿಲ್ಲ. ಅವಳ ಸೇವಕಿಯೊಬ್ಬಳು ಅವಳಿಗೆ ಹೇಳಿದಳು-''ಅಮ್ಮಾ, ನಿನ್ನೆಯ ದಿನ ನಗರದ ಸಭ್ಯಜನಗಳು ನಿನ್ನ ಮಾವಿನ ತೋಪಿಗೆ ಹೋಗುತ್ತಿದ್ದರು. ನಾನು ಅವರನ್ನು ಕಾರಣ ವಿಚಾರಿಸಲು ಅವರು ಅಲ್ಲಿ ಒಬ್ಬ ಸನ್ಯಾಸಿಯಿರುವುದಾಗಿ ತಿಳಿಸಿದರು. ಅವನಂತಹ ಸನ್ಯಾಸಿಯನ್ನೇ ಅವರು ನೋಡಿಲ್ಲವಂತೆ. ಅವನು ಒಬ್ಬ ರಾಜಕುಮಾರನಂತೆ. ಸತ್ಯವನ್ನರಸಲು ಅವನು ತನ್ನ ಯುವರಾಜ ಪದವಿಯನ್ನು ತೊರೆದು ಬಂದಿರುವನಂತೆ''.

ಯಾವಾಗಲೂ ಹೊಸಹೊಸ ದೃಶ್ಯಗಳನ್ನು ನೋಡಲು ಸಿದ್ಧಳಾಗಿರುತ್ತಿದ್ದ ಅಂಬಪಾಲಿಯು ತನ್ನ ರಥವನ್ನೇರಿ ಮಾವಿನ ತೋಪಿನ ಕಡೆ ಹೊರಟಳು. ಜನಗಳು ಕುತೂಹಲದಿಂದ ನೋಡುತ್ತಿದ್ದರು. ತೋಟದ ಹೆಬ್ಬಾಗಿಲಿನಲ್ಲಿ ರಥವನ್ನು ನಿಲ್ಲಿಸಿ ಅದರಿಂದಿಳಿದು ಮಾವಿನ ಮರಗಳಹಾದಿಯಲ್ಲಿ ನಡೆದು ಹೊರಟಳು. ಪರಿಸರವು ಬಹಳ ಪ್ರಶಾಂತವಾಗಿತ್ತು. ಮರದ ಒಂದು ಎಲೆಯೂ ಅಲುಗಾಡುತ್ತಿರಲಿಲ್ಲ. ಮರಗಳ ದಟ್ಟವಾದ ನೆರಳಿನಲ್ಲಿ ಬುದ್ಧನು ತನ್ನ ಕೈಗಳನ್ನು ಮುಗಿದು ಪದ್ಮಾಸನದಲ್ಲಿ ಕುಳಿತಿದ್ದನು. ಅವನ ತಲೆಯ ಹಿಂದೆ ಮಧ್ಯರಾತ್ರಿಯ ಚಂದ್ರನ ಬೆಳದಿಂಗಳಿನಂತಹ ಪ್ರಭೆಯೊಂದು ಸುತ್ತುವರೆದಿತ್ತು.

ಅಂಬಪಾಲಿ ವಿಸ್ಮಿತಳಾಗಿ ನಿಂತುಬಿಟ್ಟಳು. ತನ್ನ ಸೌಂದರ್ಯ, ತಾನು, ತನ್ನದೆಂಬುದೆಲ್ಲವನ್ನೂ ಮರೆತಳು. ಎದುರಿಗಿರುವ ಬುದ್ಧನಲ್ಲಿ ಅವಳ ಮನಸ್ಸು ಕೀಲಿಸಿತು. ಅವಳ ಹೃದಯ ಕರಗಿ ನೀರಾಗಿ ಕಣ್ಣುಗಳಿಂದ ಅಶ್ರು ಪ್ರವಾಹ ಹೊರಟಿತು. ನಿಧಾನವಾಗಿ ಅವಳು ಬುದ್ಧನ ಬಳಿ ಬಂದು ಬುದ್ಧನ ಪಾದಗಳಲ್ಲಿ ಮುಖವಡಿಯಾಗಿ ಬಿದ್ದು ವಂದಿಸಿದಳು.

ಬುದ್ಧನು ಅವಳನ್ನು ಎದ್ದುಕುಳಿತುಕೊಳ್ಳುವಂತೆ ಹೇಳಿ ಅವಳಿಗೆ ಧರ್ಮಬೋಧೆಯನ್ನು ಮಾಡಿದನು. ಒಣಗಿ ಹೋದ ಭೂಮಿಯು ಮಳೆಯ ನೀರನ್ನು ಆತುರದಿಂದ ಹೀರುವಂತೆ ಅವಳು ತನ್ನ ಕಿವಿಗಳಿಂದ ಆ ಉಪದೇಶವನ್ನು ಕೇಳತೊಡಗಿದಳು. ನಂತರ ಅವಳು ಬುದ್ಧನನ್ನೂ, ಅವನ ಶಿಷ್ಯರನ್ನೂ ಮಾರನೆಯ ಭೋಜನಕ್ಕೆ ತಮ್ಮ ಮನೆಗೆ ಬರುವಂತೆ ಆಹ್ವಾನಿಸಿದಳು. ಬುದ್ಧನು ಅವಳ ಆಮಂತ್ರಣವನ್ನು ಸ್ವೀಕರಿಸಿದನು.

ವೈಶಾಲಿಯ ರಾಜಕುಮಾರರೂ ಬುದ್ಧನ ದರ್ಶನಕ್ಕಾಗಿ ಬಂದರು. ದಾರಿಯಲ್ಲಿ ಅವರನ್ನು ಕಂಡ ಅಂಬಪಾಲಿಯು ತಾನು ಮಾರನೆಯ ದಿನ ಬುದ್ಧನನ್ನು ಅವನ ಶಿಷ್ಯರೊಡಗೂಡಿ ತನ್ನ ಮನೆಗೆ ಮಾರನೆಯ ದಿನದ ಭೋಜನಕ್ಕೆ ಕರೆದಿರುವುದಾಗಿಯೂ, ಬುದ್ಧನು ಒಪ್ಪಿಕೊಂಡಿರುವನೆಂದೂ ತಿಳಿಸಿದಳು.

ಅವರುಗಳು-''ನಾವು ನಿನಗೆ ಬೇಕಾದಷ್ಟು ಬಂಗಾರವನ್ನು ಕೊಡುತ್ತೇವೆ. ಬದಲಾಗಿ ನೀನು ಬುದ್ಧನನ್ನು ನಮಗೆ ಬಿಟ್ಟುಕೊಡು'' ಎಂದರು.

ಅಂಬಪಾಲಿಯು-''ಅಯ್ಯಾ, ನೀವುಗಳು ವೈಶಾಲಿಯನ್ನೇ ನನಗೆ ಕೊಟ್ಟರೂ ಸಹಾ ಬುದ್ಧನನ್ನು ಬಿಟ್ಟುಕೊಡಲಾರೆ. ಆತ ನಾಳೆಯ ದಿನ ನಮ್ಮಲ್ಲೇ ಭೋಜನಕ್ಕೆ ಬರುವನು'' ಎಂದಳು.

ಅವರೆಲ್ಲರೂ ಕೋಪಗೊಂಡು ಬುದ್ಧನ ಬಳಿಗೆ ಹೋಗಿ ಮರುದಿನ ತಮ್ಮಲ್ಲಿಗೆ ಭೋಜನಕ್ಕೆ ಬರಬೇಕೆಂದು ಕರೆದರು. ಆದರೆ ಅದಾಗಲೇ ಅಂಬಪಾಲಿಯ ಮನೆಗೆ ಹೋಗಲು ಒಪ್ಪಿಕೊಂಡಿರುವುದಾಗಿ ತಿಳಿಸಿದನು.

ಮಾರನೆಯ ದಿನ ಅಂಬಾಪಾಲಿಯು ಭಕ್ಷ್ಯ - ಭೋಜ್ಯಗಳಿಂದ, ಸ್ವತಃ ತಾನೇ ನಿಂತು, ಬುದ್ಧನನ್ನು ಅವನ ಶಿಷ್ಯರನ್ನು ಸಂತುಷ್ಟಿಗೊಳಿಸಿದಳು. ನಂತರ ಬಹಳ ದೈನ್ಯದಿಂದ ಕೈಗಳನ್ನು ಮುಗಿದು ನಿಂತು-''ಪ್ರಭೂ, ನಾನು ನನ್ನ ಮಾವಿನ ತೋಪನ್ನು ತಮ್ಮ ಸಂಘಕ್ಕಾಗಿ ಅರ್ಪಿಸುತ್ತಿದ್ದೇನೆ ದಯಮಾಡಿ ಸ್ವೀಕರಿಸಬೇಕು'' ಎಂದು ಕೇಳಿಕೊಂಡಳು.

ಬುದ್ಧನು ಅವಳ ಶುದ್ಧ ಹೃದಯವನ್ನು ಕಂಡು ಅವಳ ಕಾಣಿಕೆಯನ್ನು ಸ್ವೀಕರಿಸಿದನು. ಧರ್ಮಬೋಧೆಯಿಂದ ಅವಳಿಗೆ ಆನಂದವನ್ನುಂಟುಮಾಡಿದನು. ಇಲ್ಲಿಗೆ ಅವಳ ಸದ್ಗುಣಗಳು ಆ ಧರ್ಮಬೋಧೆಯಿಂದ ಎಚ್ಚೆತ್ತುಕೊಂಡವು. ಅತ್ಯಲ್ಪ ಕಾಲದಲ್ಲಿಯೇ ಅವಳು ಸನ್ಯಾಸಿನಿಯರ ಗುಂಪಿಗೆ ಸೇರಿದಳು. ತನ್ನ ಹೃದಯದ ಪರಿಪಕ್ವತೆಯಿಂದ ಅರ್ಹಂತ ಪದವಿಯನ್ನು ಪಡೆದಳು. ಕಮಲ ಪುಷ್ಪವು ಒಣಗಿದ ನೆಲದಲ್ಲಿ ಅರಳುವಿದಿಲ್ಲ. ಅದು ಕೆಸರಿನಲ್ಲೇ ಹುಟ್ಟುತ್ತದೆ. ಅಂತೆಯೇ ಅಂಬಾಪಾಲಿಯು ತನ್ನ ದುರ್ಗುಣಗಳನ್ನು ತೊರೆದು ಅಧ್ಯಾತ್ಮ ಜೀವನದ ಶಿಖರವನ್ನೇರಿದಳು.

ಈ ಘಟನೆಯ ನಂತರ ಬುದ್ಧನು ತನ್ನ ಶಿಷ್ಯರೊಡಗೂಡಿ ಹತ್ತಿರದ ''ಬೆಲುವಾ'' ಎಂಬ ಹಳ್ಳಿಗೆ ಹೊರಟನು. ಮಳೆಗಾಲವು ಆರಂಭವಾಗಲಿತ್ತು. ಆದ್ದರಿಂದ ಬುದ್ಧನು ಆ ಹಳ್ಳಿಯಲ್ಲಿ ನೆಲೆಸಿ ತನ್ನ ಕೊನೆಯ ಮಳೆಗಾಲವನ್ನು ಅಲ್ಲಿಯೇ ಕಳೆಯಲು ನಿರ್ಧರಿಸಿದನು.

# ೫೦. ಜೀವಕ

ಬುದ್ಧನ ಕಾಲದಲ್ಲಿ ಜೀವಕನೆಂಬ ಒಬ್ಬ ಪ್ರಸಿದ್ಧನಾದ ವೈದ್ಯನಿದ್ದನು. ಅವನ ತಾಯಿ ಒಬ್ಬ ವೇಶ್ಯೆ. ಜೀವಕನು ಹುಟ್ಟಿದೊಡನೆ ಅವಳು ಆ ಮಗುವನ್ನು ಒಂದು ಮರದ ಪೆಟ್ಟಿಗೆಯಲ್ಲಿಟ್ಟು ಕಸದ ರಾಶಿಯಲ್ಲಿ ಬಿಸಾಡಿಬಿಟ್ಟಳು.

ಒಂದು ಬೆಳಿಗ್ಗೆ ಬಿಂಬಿಸಾರನ ಒಬ್ಬ ಮಗನಾದ ಅಭಯನೆಂಬುವನು ಅದೇ ಮಾರ್ಗವಾಗಿ ಅರಮನೆಗೆ ಹೋಗುತ್ತಿರುವಾಗ ಕಸದಲ್ಲಿ ಬಿದ್ದಿದ್ದ ಈ ಮಗುವನ್ನು ಕಂಡನು. ಮಗು ಬದುಕಿದ್ದಿತು. ಅಭಯನಿಗೆ ತುಂಬಾ ಮರುಕವಾಗಿ ಆ ಮಗುವನ್ನು ಎತ್ತಿಕೊಂಡು ಬಂದು ತನ್ನ ದತ್ತು ಪುತ್ರನನ್ನಾಗಿ ಮಾಡಿಕೊಂಡು ಅದನ್ನು ಸಾಕತೊಡಗಿದನು.

ಜೀವಕನು ದೊಡ್ಡವನಾದ ಮೇಲೆ ಒಬ್ಬ ಪ್ರಸಿದ್ಧನಾದ ಗುರುವಿನ ಬಳಿ ಏಳು ವರ್ಷಗಳ ಕಾಲ ವೈದ್ಯ ಶಾಸ್ತ್ರವನ್ನು ಅಭ್ಯಾಸಮಾಡತೊಡಗಿದನು. ಬಹಳ ಬುದ್ಧಿವಂತನಾಗಿದ್ದುದರಿಂದ ಒಬ್ಬ ಸಮರ್ಥನಾದ ವೈದ್ಯನೂ, ಶಸ್ತ್ರ ಚಿಕಿತ್ಸಕನೂ ಆಗಿ ಹೆಸರು ಪಡೆದನು. ಅವನು ಮಹಾರಾಜರುಗಳಿಗೂ, ಯುವರಾಜರುಗಳಿಗೂ ಚಿಕಿತ್ಸೆ ನೀಡುತ್ತಿದ್ದನು. ದೊರೆಯಾದ ಬಿಂಬಸಾರನಿಗೂ ಅವನೇ ವೈದ್ಯನಾಗಿದ್ದನು. ಆದರೆ ಅವನಿಗೆ ಸಂತೋಷವಾಗುತ್ತಿದುದು ಬುದ್ಧನಿಗೆ ಚಿಕಿತ್ಸೆ ಮಾಡುವಾಗ ಮಾತ್ರ. ಬುದ್ಧನನ್ನು ದಿನದಲ್ಲಿ ಮೂರು ಬಾರಿ ಭೇಟಿ ಮಾಡಿ ಅವನಿಗೆ ಶುಶ್ರೂಷೆ ನಡೆಸುವುದರಲ್ಲಿ ಜೀವಕನಿಗೆ ಬಹಳ ಆನಂದವುಂಟಾಗುತ್ತಿತ್ತು. ಒಮ್ಮೆ ದೇವದತ್ತನು ಬುದ್ಧನ ಕಾಲುಗಳ ಮೇಲೆ ಕಲ್ಲಿನಿಂದ ಹೊಡೆದು ಗಾಯ ಮಾಡಿದಾಗ ಜೀವಕನು ಚಿಕಿತ್ಸೆ ನೀಡಿ ಗುಣಪಡಿಸಿದ್ದನು.

ತನ್ನ ಮನೆಯು ಬುದ್ಧನ ವಿಹಾರದ ಬಳಿಯೇ ಇದ್ದರೆ ಬುದ್ಧನಿಗೆ ಚಿಕಿತ್ಸೆ ನೀಡಲು ಇನ್ನೂ ಅನುಕೂಲವಾಗುವುದೆಂದು ತಿಳಿದು ತನ್ನ ಮಾವಿನ ತೋಟದಲ್ಲಿ ಒಂದು ವಿಹಾರವನ್ನು ಕಟ್ಟಿಸಿ ಅಲ್ಲಿರುವಂತೆ ಬುದ್ಧನನ್ನು ಪ್ರಾರ್ಥಿಸಿಕೊಂಡನು. ಒಮ್ಮೆ ಬುದ್ಧನನ್ನೂ, ಅವನ ಶಿಷ್ಯರನ್ನೂ ವಿಹಾರಕ್ಕೆ ಆಮಂತ್ರಿಸಿ ಭೋಜನಮಾಡಿಸಿ, ಆ ವಿಹಾರವನ್ನು ಬುದ್ಧನಿಗೆ ದಾನ ಮಾಡಿದನು. ಹೀಗೆ ಬುದ್ಧನಿಗೆ ಅದನ್ನೊಪ್ಪಿಸಿದ ನಂತರ ಅವನು ಸನ್ಯಾಸದ ಮೊದಲ ಹಂತವಾದ ''ಸ್ರೋತಾಪನ್ನ''ವನ್ನು ಪಡೆದನು.

ಸ್ವಲ್ಪ ಕಾಲದ ಬಳಿಕ ದೊರೆಯಾದ ಅಜಾತಶತ್ರುವು ಜೀವಕನನ್ನು ಅವನ ಧರ್ಮಬೋಧೆಯನ್ನು ಕೇಳಲು ಯಾರಲ್ಲಿಗೆ ಹೋಗುತ್ತಾನೆ ಎಂದು ಕೇಳಿದಾಗ ಜೀವಕನು ಅವನನ್ನು ಬುದ್ಧನ ಬಳಿಗೆ ಕರೆದುಕೊಂಡು ಬಂದನು. ಅಜಾತಶತ್ರುವು ದೇವದತ್ತನ ದುರ್ಬೋಧನೆಯಿಂದ ತನ್ನ ತಂದೆಯಾದ ಬಿಂಬಸಾರನನ್ನು ಕೊಲೆ ಮಾಡಿದ್ದನು. ಆದರೆ ಈಗ ಅಜಾತಶತ್ರುವು ಬುದ್ಧನ ಅನುಯಾಯಿಗಾಗಿ ಜನರ ಗಮನ ಸೆಳೆದನು. ಬೌದ್ಧರ ಮೊದಲ ಧಾರ್ಮಿಕ ಸಮ್ಮೇಳನದಲ್ಲಿ ಮುಖ್ಯ ಪಾತ್ರವನ್ನು ವಹಿಸಿದನು.

# ೫೧. ಕೋಸಂಬಿಯಲ್ಲಿ ಜಗಳ

ಬುದ್ಧನು ಸಂಘವನ್ನು ಸ್ಥಾಪಿಸಿದ ಒಂಭತ್ತನೆಯ ವರ್ಷದಲ್ಲಿ ಕೋಸಂಬಿಯಲ್ಲಿರುತ್ತಿದ್ದನು. ಹೀಗಿರಲು ಭಿಕ್ಷುಗಳಲ್ಲಿ ಎರಡು ತಂಡಗಳಾಗಿ ಒಂದು ತಂಡವು ತಾವು ಸಂಘದ ಶಿಸ್ತನ್ನೂ, ನಿಯಮಗಳನ್ನೂ ಪಾಲಿಸುವುದರಲ್ಲಿ ಶ್ರೇಷ್ಠವೆಂತಲೂ, ಇನ್ನೊಂದು ತಂಡವು ತಾವು ಧರ್ಮದಲ್ಲಿ ಪರಿಣತರೆಂತಲೂ ವಾದಿಸುತ್ತಾ ಜಗಳವಾಡುತ್ತಿದ್ದರು.

ಬುದ್ಧನು ಎಷ್ಟೋ ವಿಧದಲ್ಲಿ ಬುದ್ಧಿವಾದವನ್ನು ಹೇಳಿದರೂ ಕೇಳದೆ ಹೀಗೆಯೇ ಜಗಳ ಕಾಯುತ್ತಿದ್ದರು. ಕೊನೆಯಲ್ಲಿ ಬುದ್ಧನು ಇವರಿಗೆ ಪಾಠ ಕಲಿಸಬೇಕೆಂದು ಅವರನ್ನೆಲ್ಲಾ ಬಿಟ್ಟು ತಾನೊಬ್ಬನೇ ತನ್ನ ಭಿಕ್ಷಾಪಾತ್ರೆಯನ್ನೂ, ಬಟ್ಟೆಗಳನ್ನೂ, ತೆಗೆದುಕೊಂಡು ಪಾರಿಲೆಯ್ಯಕ ಕಾಡಿಗೆ ಹೊರಟುಹೋದನು.

ಆತನು ಆ ಕಾಡಿನಲ್ಲಿರಲು ಒಂದಾನೊಂದು ಆನೆಯು ಆತನಿಗೆ ಸೇವೆ ಮಾಡತೊಡಗಿತು. ಆ ಕಾಡಿನಲ್ಲಿ ಬಂಡೆಗಳಲ್ಲಿ ಒಂದು ಗುಹೆಯಯಿತ್ತು. ಆನೆಯು ಮೊದಲು ಆ ಗುಹೆಯ ಸುತ್ತ ಮುತ್ತಲ ಸ್ಥಳವನ್ನೆಲ್ಲಾ ಗುಡಿಸಿ ಬುದ್ಧನಿಗೆ ಗುಹೆಯಲ್ಲಿರಲು ಅಣಿ ಮಾಡಿಕೊಟ್ಟಿತು. ಪ್ರತಿದಿನವೂ ಅದು ಕಾಡಿನಲ್ಲಿ ಹೋಗಿ ಹಣ್ಣುಗಳನ್ನು ತಂದು ಬುದ್ಧನಿಗೆ ಅರ್ಪಿಸುತ್ತಿತ್ತು. ಒಂದು ದಿನ ಇದನ್ನು ಕಂಡ ಕೋತಿಯೊಂದು ತಾನೂ ಸಹ ಬುದ್ಧನಿಗಾಗಿ ಒಂದು ಜೇನಿನ ಗೂಡನ್ನೇ ಕಿತ್ತು ತಂದಿತು.

ಹೀಗಿರಲು ಕೋಸಂಬಿಯ ಜನರಿಗೆ ಬುದ್ಧನು ತನ್ನ ಶಿಷ್ಯರನ್ನೆಲ್ಲಾ ಬಿಟ್ಟು ಕಾಡಿಗೆ ಹೋದ ಸಮಾಚಾರ ತಿಳಿಯಿತು. ಅದಕ್ಕೆ ಕಾರಣ ಭಿಕ್ಷುಗಳ ಜಗಳವೆಂಬುದೂ ತಿಳಿಯಿತು. ಆದ್ದರಿಂದ ಅವರುಗಳು ಭಿಕ್ಷುಗಳಿಗೆ ಭಿಕ್ಷೆ ಕೊಡುವುದನ್ನೇ ನಿಲ್ಲಿಸಿಬಿಟ್ಟರು. ಈ ವಿಚಾರವು ಶ್ರಾವಸ್ತಿಯಲ್ಲಿರುವ ಆನಂದನಿಗೆ ತಿಳಿಯಿತು. ಆತನು ಮಳೆಗಾಲದ ಕೊನೆಯ ದಿನಗಳಲ್ಲಿ ಬುದ್ಧನ ಬಳಿಗೆ ಬಂದು ಜನಗಳು ಬುದ್ಧನಿಂದ ಧರ್ಮ ಬೋಧೆಯನ್ನು ಕೇಳಲು ಆತುರರಾಗಿದ್ದಾರೆಂದೂ ಅದರಲ್ಲೂ ಶ್ರಾವಸ್ತಿಯ ಜನಗಳಂತೂ ಬಹಳ ಉತ್ಸುಕರಾಗಿದ್ದಾರೆಂದೂ ತಿಳಿಸಿ ಬುದ್ಧನನ್ನು ಶ್ರಾವಸ್ತಿಗೆ ಕರೆದೋಯ್ದನು. ಇದಾದ ಕೆಲವು ದಿನಗಳ ನಂತರ ಕೋಸಂಬಿಯಲ್ಲಿದ್ದ ಎರಡೂ ತಂಡದ ಭಿಕ್ಷುಗಳು ಬಂದು ಬುದ್ಧನಲ್ಲಿ ಕ್ಷಮೆ ಬೇಡಿದರು. ಈ ಜಗಳದ ವಿಷಯದಲ್ಲಿ ಬುದ್ಧನು ಅವರಿಗೆಲ್ಲಾ ಉಪದೇಶಿಸಿದನು. ಜನಗಳು ವಿವೇಕಿಯಾದವನ ಸಂಗದಲ್ಲಿರಬೇಕೇ ವಿನಹಾ ಅವಿವೇಕಿಯ ಸಂಗದಲ್ಲಿರಬಾರದು. ನಮಗೆ ವಿವೇಕಿಗಳಾದವರ ಸಂಗ ದೊರಕದಿದ್ದಲ್ಲಿ ಒಂಟಿ ಕಾಡಾನೆಯಂತೆ ಒಬ್ಬಂಟಿಗರಾಗಿರುವುದೇ ಸೂಕ್ತವಾದುದು. ಮೂರ್ಖರ ಸಂಗ ಮಾಡಲೇಬಾರದು.

# ೫೨. ಉಪಾಲಿ

ನಿಗಂಠನಾಥಪುತ್ರನೆಂಬ ಒಬ್ಬ ಧಾರ್ಮಿಕ ಗುರುವಿದ್ದನು. ಅವನ ಧರ್ಮಬೋಧೆ, ಬುದ್ಧನ ಧರ್ಮಬೋಧೆಗಿಂತಲೂ ಭಿನ್ನವಾಗಿತ್ತು. ಉಪಾಲಿ ಎಂಬೊಬ್ಬ ಕೋಟ್ಯಾಧೀಶನು ಈ ನಿಗಂಠನಾಥಪುತ್ರನ ಶಿಷ್ಯನಾಗಿದ್ದನು. ಈತನು ವಾದ ಮಾಡುವುದರಲ್ಲಿ ಬಹಳ ಪ್ರವೀಣನಾಗಿದ್ದನು. ಒಂದು ಸಲ ಇವನ ಗುರುವು ಇವನನ್ನು ಕರೆದು ಬುದ್ಧನ ಬಳಿಗೆ ಹೋಗಿ ಕರ್ಮದ ಕಾರ್ಯ ಕಾರಣಗಳ ವಿಚಾರವಾಗಿ ಕೆಲವೊಂದು ವಿಷಯಗಳ ಮೇಲೆ ವಾದ ಮಾಡಿ ಬರಬೇಕೆಂದು ಹೇಳಿದನು. ಸುದೀರ್ಘವಾದ ಚರ್ಚೆಯ ನಂತರ ಬುದ್ಧನು ಉಪಾಲಿಗೆ ಅವನ ಗುರುವಿನ ವಿಚಾರಗಳು ಈ ವಿಷಯದಲ್ಲಿ ಹೇಗೆ ತಪ್ಪಾಗಿವೆ ಎಂಬುದನ್ನು ಖಚಿತಪಡಿಸಿದನು.

ಉಪಾಲಿಗೆ ಬುದ್ಧನ ಉಪದೇಶದಿಂದ ಬಹಳ ಪ್ರಭಾವವಾಗಿ ಆತನು ತಕ್ಷಣವೇ ತನ್ನನ್ನು ಬುದ್ಧಧರ್ಮಕ್ಕೆ ಸೇರಿಸಿಕೊಂಡು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಬುದ್ಧನನ್ನು ಕೇಳಿಕೊಂಡನು. ಆಗ ಬುದ್ಧನು-''ಉಪಾಲಿ, ನೀನೊಬ್ಬ ಪ್ರಸಿದ್ಧ ಪುರುಷ. ನೀನು ನನ್ನ ಮಾತುಗಳಿಂದ ಪ್ರಭಾವಿತನಾಗಿರುವೆ, ಪ್ರಸನ್ನನಾಗಿರುವೆ. ಆದರೆ ಈ ತಕ್ಷಣದ ಭಾವಪರವಶತೆಯಿಂದ ನೀನು ನಿನ್ನ ಧರ್ಮವನ್ನು ಬಿಡಬಾರದು. ನನ್ನ ಶಿಷ್ಯನಾಗಬೇಕಾದರೆ ಮೊದಲು ನಾನು ಮಾಡಿದ ಉಪದೇಶದ ಬಗ್ಗೆ ಚೆನ್ನಾಗಿ ಪರಿಶೀಲಿಸಿ ನೋಡಿ ನಂತರ ನನ್ನ ಶಿಷ್ಯನಾಗಲು ಮನಸ್ಸುಮಾಡು'' ಎಂದನು.

ಬುದ್ಧನ ಈ ಉದಾರವಾದ ಸ್ವಭಾವವನ್ನು ಕಂಡು ಉಪಾಲಿಗೆ ಮತ್ತೂ ಸಂತೋಷವಾಯಿತು. ಅವನೆಂದನು-''ಪ್ರಭುವೇ, ನಾನು ಇದರ ಬಗ್ಗೆ ಹೆಚ್ಚಿನ ಚಿಂತನೆ ಮಾಡಬೇಕೆಂದು ಹೇಳಿದಿರಲ್ಲಾ ಅದನ್ನು ಕಂಡು ನನಗೆ ಆಶ್ಚರ್ಯವಾಗುತ್ತಿದೆ - ಬೇರೆ ಗುರುಗಳಾಗಿದ್ದಿದ್ದರೆ ನನ್ನನ್ನು ತಕ್ಷಣವೇ ಶಿಷ್ಯನನ್ನಾಗಿ ಮಾಡಿಕೊಳ್ಳುತ್ತಿದ್ದರು. ಬೀದಿ ಬೀದಿಗಳಲ್ಲಿ ನನ್ನ ಮೆರವಣಿಗೆ ಮಾಡಿ, 'ನೋಡಿ, ಈ ಕೋಟ್ಯಾಧೀಶ್ವರನು ತನ್ನ ಮೊದಲಿನ ಧರ್ಮವನ್ನು ತ್ಯಜಿಸಿ ನಮ್ಮ ಧರ್ಮಕ್ಕೆ ಸೇರಿಕೊಂಡಿದ್ದಾನೆಂದು' ಘೋಷಣೆ ಮಾಡುತ್ತಿದ್ದರು. ಹೌದು, ಇದು ನಿಜ ಸ್ವಾಮಿ, ನನ್ನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿರಿ''.

ಬುದ್ಧನು ಉಪಾಲಿಯನ್ನು ತನ್ನ ಗೃಹಸ್ಥ ಶಿಷ್ಯನನ್ನಾಗಿ ಸ್ವೀಕರಿಸಲು ಒಪ್ಪಿದನು. ನಂತರ ಅವನಿಗೆ ಉಪದೇಶಿಸಿದನು-''ನೀನು ಈಗ ನನ್ನ ಶಿಷ್ಯನಾಗಿದ್ದೀಯೇ. ನೀನು ಸಹನೆಯನ್ನೂ, ದಯೆಯನ್ನೂ ಅಭ್ಯಾಸ ಮಾಡು. ನಿನ್ನ ಹಿಂದಿನ ಧರ್ಮದ ಧಾರ್ಮಿಕ ಗುರುಗಳಿಗೆ ಕೊಡುತ್ತಿದ್ದ ದಾನಗಳನ್ನು ನಿಲ್ಲಿಸಬೇಡ. ಅವರು ನಿನ್ನ ಬೆಂಬಲವನ್ನು ಅವಲಂಬಿಸಿದ್ದಾರೆ. ನೀನು ಮೊದಲು ಕೊಡುತ್ತಿದ್ದ ಯಾವುದೇ ಸಹಾಯವನ್ನಾಗಲೀ, ಬೆಂಬಲವನ್ನಾಗಲೀ ನಿಲ್ಲಿಸಬಿಡಕೂಡದು''.

ಬುದ್ಧನು ಬೋಧಿಸಿದ ಸಹನಾಗುಣ, ತನ್ನ ಉಪದೇಶದಿಂದ ಪ್ರಭಾವಿತರಾಗಿ ಹಿಂದೆಮುಂದೆ ಆತನ ಧರ್ಮವನ್ನು ಒಪ್ಪಿಕೊಳ್ಳದಿರುವುದು ಇಂತಹ ಉದಾರ ವಿಚಾರಗಳಿಂದ ಬೌದ್ಧ ಧರ್ಮವು ಹೇಗೆ ಹರಡಿತೆಂಬುದು ಸಿದ್ಧವಾಗಿದೆ.

ತಮ್ಮ ಧರ್ಮವನ್ನು ಒಪ್ಪಿಕೊಳ್ಳುವಂತೆ ಜನಗಳನ್ನು ಹಿಂಸಿಸಿದ್ದಾಗಲೀ ಅಥವಾ ಶಿಕ್ಷಿಸುತ್ತೇವೆ ಎಂದು ಹೇಳುವುದಾಗಲೀ ಬೌದ್ಧ ಧರ್ಮದಲ್ಲಿ ಎಲ್ಲಿಯೂ ಕಂಡುಬಂದಿಲ್ಲ. ಬುದ್ಧಧರ್ಮವು ಶಾಂತಿಯುತವಾಗಿ ಹರಡಿಕೊಂಡ ಕಾರಣವೆಂದರೆ ಅದರಲ್ಲಿರುವ ಸೊಗಸು ಮತ್ತು ಸ್ನೇಹಭಾವ.

## ೫೩. ಸೋನ

ಸೋನ ಒಬ್ಬ ಧನವಂತ ವ್ಯಾಪಾರಿಯ ಮಗ. ಸೋನನಿಗೆ ತಂತಿ ವಾದ್ಯಗಳನ್ನು ಕೇಳುವುದು ಹಾಗೂ ತಾನೇ ಬಾರಿಸುವುದು ಎಂದರೆ ಬಲು ಪ್ರೀತಿ. ಅವನನ್ನು ಚಿಕ್ಕ ವಯಸ್ಸಿನಿಂದಲೂ ಬಹಳ ವೈಭವದಿಂದ ಬೆಳೆಸಿದ್ದುದರಿಂದ ಅವನ ಚರ್ಮ ಬಹಳ ಮೃದುವಾಗಿತ್ತು. ಅಷ್ಟೇ ಅಲ್ಲ ಅವನ ಅಂಗಾಲಿನಲ್ಲಿ ಕೂದಲುಗಳು ಹುಟ್ಟಿದ್ದುವು. ರಾಜನಾದ ಬಿಂಬಸಾರನು ಈ ಆಶ್ಚರ್ಯಕರವಾದ ವಾರ್ತೆಯನ್ನು ಕೇಳಿ ಸೋನನನ್ನು ನೋಡಬೇಕೆಂದು ತನ್ನಲ್ಲಿಗೆ ಕರೆಸಿಕೊಂಡನು.

ಸೋನ ಹದ್ದಿನ ಶಿಖರದ ಬಂಡೆಯ ಬಳಿ ವಾಸಿಸುತ್ತಿದ್ದನು. ಆ ಶಿಖರವು ರಾಜಗೃಹದ ಸಮೀಪದಲ್ಲಿತ್ತು. ಅಲ್ಲದೆ ಬುದ್ಧನು ಕೆಲವು ಮಳೆಗಾಲಗಳಲ್ಲಿ ಅಲ್ಲಿ ವಾಸಮಾಡಿದ್ದನು. ಪ್ರಾಪಂಚಿಕವಾದ ಆಸೆ- ಆಕಾಂಕ್ಷೆಗಳಿಂದ ದೂರ ಉಳಿದರೆ ನಿಜವಾದ ಸುಖವೇನೆಂದು ತಿಳಿದುಬರುತ್ತದೆ ಎಂದು ಬುದ್ಧನು ಉಪದೇಶಿಸುತ್ತಿದ್ದನು. ಅದನ್ನು ಕೇಳಲಿಕ್ಕಾಗಿಯೇ ಸೋನ ಆ ಹದ್ದಿನ ಶಿಖರಕ್ಕೆ ಬಂದನು. ತಾನೂ ಇಂತಹ ಆನಂದವನ್ನು ಅನುಭವಿಸಬೇಕೆಂದುಕೊಂಡು ತನಗೆ ಸನ್ಯಾಸ ದೀಕ್ಷೆಕೊಡುವಂತೆ ಬುದ್ಧನನ್ನು ಕೇಳಿಕೊಂಡನು.

ಸನ್ಯಾಸವನ್ನು ಪಡೆದ ನಂತರ ಅವನು ಬಹಳ ಜಾಗರೂಕನಾಗಿರಬೇಕೆಂದು ಬುದ್ಧನು ಬೋಧಿಸುತ್ತಿದ್ದನು. ನಡೆಯುವಾಗಲೂ ಸಹಾ ಬಹಳ ಎಚ್ಚರಿಕೆಯಿಂದ ಇರಬೇಕು. ಸೋನ ಬಹಳ ಉತ್ಸಾಹಶಾಲಿಯಾಗಿದ್ದನು. ಪ್ರತಿನಿತ್ಯವೂ ಅವನು ಬುದ್ಧಮಂದಿರಕ್ಕೆ ನಡೆದುಕೊಂಡೇ ಹೋಗಿ- ಬಂದು ಮಾಡುತ್ತಿದ್ದನು. ಹೀಗೆ ನಡೆದೂ ನಡೆದು ಕೊನೆಗೆ ಅವನ ಕಾಲುಗಳಲ್ಲಿ ಬೊಬ್ಬೆಗಳಾಗಿ ರಕ್ತ ಸುರಿಯಲಾರಂಭಿಸಿತು.

ಇಷ್ಟು ಕಷ್ಟಪಟ್ಟು ಸಾಧನೆ ಮಾಡಿದರೂ ಕೂಡಾ ಅವನಿಗೆ ಸುಖ ದೊರಕಲಿಲ್ಲ. ದೊರಕಿದ್ದು ನೋವು ಮತ್ತು ಯಾತನೆ ಮಾತ್ರ. ಅವನಿಗೆ ಬಹಳ ನಿರಾಸೆಯಾಯಿತು. ಪ್ರಾಪಂಚಿಕ ಸುಖಾಭಿಲಾಷೆಗಾಗಿ ಅವನ ಮನಸ್ಸು ಹಾತೊರೆಯತೊಡಗಿತು. ಅವನು ಯೋಚಿಸಿದನು-ಇಷ್ಟು ಕಷ್ಟಪಟ್ಟು ಸಾಧನೆ ಮಾಡಿದರೂ ಕೂಡಾ ಯಾವ ಸುಖವೂ ದೊರಕಲಿಲ್ಲ. ಏನೂ ಪ್ರಯೋಜನವೂ ಉಂಟಾಗಲಿಲ್ಲ. ಈ ಸನ್ಯಾಸವನ್ನು ತ್ಯಜಿಸಿ ಆ ಹಿಂದಿನ ಗೃಹಸ್ಥಾಶ್ರಮಕ್ಕೆ ಹಿಂದಿರುಗುವುದೇ ಲೇಸೆಂದು ತೋರುತ್ತದೆ. ಏಕೆಂದರೆ ಆ ಸುಖವನ್ನು ಪಡೆಯಬೇಕೆಂದು ನಾನು ಬಹುವಾಗಿ ಆಸೆಪಟ್ಟೆ. ಫಲ ದೊರಕಲಿಲ್ಲ. ನಾನು ಗೃಹಸ್ಥನಾಗಿದ್ದಾಗ ಬಹಳವಾಗಿ ದಾನಧರ್ಮಗಳನ್ನು ಮಾಡುತ್ತಿದ್ದೆ. ಅದರಿಂದ ನನಗೆ ಬಹಳ ಸಂತೋಷವಾಗುತ್ತಿತ್ತು. ಆದ್ದರಿಂದ ನಾನು ಹಿಂದಿರುಗುವುದೇ ಒಳ್ಳೆಯದೆಂದು ಭಾವಿಸಿದನು.

ಒಂದು ದಿನ ಬುದ್ಧನಿಗೆ ಈ ವಿಚಾರ ತಿಳಿದು ಅವನು ಸೋನನ ಬಳಿ ಬಂದು ಕೇಳಿದನು-''ಸೋನ, ನಾನು ಕೇಳುವ ಈ ವಿಷಯ ಸತ್ಯವೆ, ನೀನು ಮಾಡಿದ ಸಾಧನೆಗಳಿಂದ ನಿನಗೆ ಸುಖ ದೊರಕಲಿಲ್ಲವೆಂದು ತಿಳಿದು ಹೋಗಲಿಷ್ಟಪಟ್ಟಿರುವೆಯಂತೆ ನಿಜವೆ ? ನಾನೊಂದು ವೇಳೆ ನಿನಗೆ - ಸುಖವೇಕೆ ದೊರಕಲಿಲ್ಲವೆಂಬುದನ್ನು ತಿಳಿಸಿ ಹೇಳಿದರೆ ನೀನು ಇಲ್ಲೇ ಇದ್ದುಬಿಡವೆಯಾ ? ಇನ್ನೊಮ್ಮೆ ಪ್ರಯತ್ನಪಡುವೆಯಾ ?''

''ಆಗಲಿ ಪ್ರಭು'' ಸೋನ ಹೇಳಿದನು-ಸೋನಾ ನೀನೊಬ್ಬ ಸಂಗೀತಗಾರ. ನೀನು ತಂತೀ ವಾದ್ಯಗಳನ್ನು ನುಡಿಸಿ ಆನಂದಪಡುವೆ. ಸೋನ ನಿನ್ನ ತಂತೀ ವಾದ್ಯಕ್ಕೆ ಬಹಳ ಬಿಗಿಯಾಗಿ ತಂತಿಗಳನ್ನು ಕಟ್ಟಿದರಾಗಲೀ ಅಥವಾ ತಂತಿಗಳನ್ನು ಸಡಿಲವಾಗಿ ಕಟ್ಟಿದರಾಗಲೀ ಅದರಲ್ಲಿ ಸರಿಯಾಗಿ ಸ್ವರಗಳನ್ನು ಹೊರಡಿಸುವೆಯಾ ?

''ನಾನು ಬಹಳ ಚೆನ್ನಾಗಿ ಸಂಗೀತವನ್ನು ನುಡಿಸಬಲ್ಲೆ ಪ್ರಭೂ''.

''ತಂತಿಗಳನ್ನು ಬಹಳ ಬಿಗಿಯಾಗಿ ಕಟ್ಟಿದರೆ ಏನಾಗುತ್ತದೆ ಹೇಳು ?''

''ಆಗ ನನಗೆ ಸಂಗೀತವನ್ನು ನುಡಿಸಲಿಕ್ಕೆ ಆಗುವುದಿಲ್ಲ''.

''ಹಾಗೆಯೇ ತಂತಿಗಳನ್ನು ಸಡಿಲವಾಗಿ ಕಟ್ಟಿದರೆ ನುಡಿಸಬಲ್ಲೆಯಾ ?''

''ನನಗೆ ಆಗ ಬಾರಿಸಲಿಕ್ಕೆ ಆಗುವುದಿಲ್ಲ ಸ್ವಾಮಿ''.

ಸೋನ, ಈಗ ನೀನು ಅರ್ಥಮಾಡಿಕೊಳ್ಳಬಲ್ಲೆ. ಪ್ರಾಪಂಚಿಕ ಸುಖಭೋಗಗಳನ್ನು ತೊರೆದ ಮಾತ್ರಕ್ಕೆ ಆನಂದವು ಸಿಗುವುದಿಲ್ಲ. ನೀನು ತೀವ್ರವಾಗಿ ಬಹಳ ಕಷ್ಟಪಟ್ಟು ಧ್ಯಾನ ಮಾಡುತ್ತಿರುವುದರಿಂದ ನಿನಗೆ ಆನಂದವುಂಟಾಗಲಿಲ್ಲ ಧ್ಯಾನವನ್ನು ನಿಧಾನವಾಗಿ ಆರಾಮವಾಗಿ ಮಾಡು. ಧ್ಯಾನದಲ್ಲಿ ಶಿಥಿಲತೆ ಇಲ್ಲದಂತೆ ನೋಡಿಕೋ. ಮತ್ತೆ ಪ್ರಯತ್ನ ಮಾಡು. ನಿನಗೆ ಒಳ್ಳೆಯ ಫಲ ದೊರಕುತ್ತದೆ.

ಸೋನನು ಬುದ್ಧನ ಉಪದೇಶವನ್ನು ಅರ್ಥಮಾಡಿಕೊಂಡು ವಿಹಾರದಲ್ಲಿದ್ದುಕೊಂಡು ತನ್ನ ಸಾಧನೆಯನ್ನು ಮುಂದುವರಿಸಿದನು. ಬಹಳ ಬೇಗ ಅರಿಯರ ಪದವಿಗೇರಿದನು.

# ೨೪. ಮಹಾಪ್ರಜಾಪತಿ ಗೌತಮಿ

ಬುದ್ಧನು ಸಂಘವನ್ನು ಸ್ಥಾಪಿಸಿದ ಐದನೇ ವರ್ಷದಲ್ಲಿ ಆತನು ವೈಶಾಲಿಯಲ್ಲಿದ್ದನು. ಆಗ ಅವನ ತಂದೆಯಾದ ಶುದ್ಧೋದನನು ಕಾಯಿಲೆಯಾಗಿರುವ ಸಮಾಚಾರ ತಿಳಿಯಿತು. ಆಗ ಆತನು ಕಪಿಲವಸ್ತುವಿಗೆ ಹೋಗಿ ತಂದೆಗೆ ಧರ್ಮವನ್ನು ತಿಳಿಸಲು ನಿಶ್ಚಯಿಸಿ ಅಲ್ಲಿಗೆ ಹೋದನು. ಧರ್ಮವನ್ನು ಕೇಳಿದ ತಕ್ಷಣವೇ ಶುದ್ಧೋದನನಿಗೆ ಅರ್ಹಂತ ಪದವಿ ಪ್ರಾಪ್ತವಾಗಿ ಏಳು ದಿನಗಳ ನಂತರ ಆತನು ಶಾಂತಿಯುತನಾಗಿ ನಿರ್ವಾಣವನ್ನು ಪಡೆದನು. ಈ ಸಮಯದಲ್ಲಿ ಬುದ್ಧನ ಚಿಕ್ಕಮ್ಮನೂ, ಮಲತಾಯಿಯೂ ಆದ ಮಹಾಪ್ರಜಾಪತಿ ಗೌತಮಿಯು ಬುದ್ಧನನ್ನು ಭಿಕ್ಷುಣಿಯರ ಒಂದು ಸಂಘವನ್ನು ಸ್ಥಾಪಿಸುವಂತೆ ಕೇಳಿಕೊಂಡಳು. ಬುದ್ಧನು ಒಪ್ಪಿಕೊಂಡನು.

ಆಕೆಯು ಮೂರು ಬಾರಿ ಬುದ್ಧನ ಬಳಿ ಹೋಗಿ ತನೆಗ ಸನ್ಯಾಸ ದೀಕ್ಷೆಯನ್ನು ಕೊಡಬೇಕೆಂದು ಕೇಳಿಕೊಂಡಳು. ಬುದ್ಧನು ಮೂರು ಬಾರಿಯೂ ನಿರಾಕರಿಸಿದನು. ಇದಕ್ಕೆ ಏನೂ ಕಾರಣವನ್ನೂ ತಿಳಿಸಲಿಲ್ಲ. ನಂತರ ಬುದ್ಧನು ಬಹುಕಾಲ - ತನಗೆ ಬೇಕೆನಿಸುವವರೆಗೂ ಕಪಿಲವಸ್ತುವಿನಲ್ಲಿದ್ದು ನಂತರ ವೈಶಾಲಿಗೆ ಹಿಂದಿರುಗಿ ಹೋದನು.

ಪ್ರಜಾಪತಿ ಗೌತಮಿಯು ಬಹಳ ಧೃಡವಾದ ಮನಸ್ಸಿನವಳು. ಅಷ್ಟು ಸುಲಭವಾಗಿ ನಿರಾಶೆಗೊಳ್ಳುವವಳಲ್ಲ. ಆಕೆಯು ತನ್ನ ಕೂದಲುಗಳನ್ನು ಕತ್ತರಿಸಿಕೊಂಡು, ಹಳದಿ ವಸ್ತ್ರಗಳನ್ನು ಧರಿಸಿ ಅನೇಕ ಜನ ಶಾಕ್ಯ ಸ್ತ್ರೀಯರನ್ನು ಜೊತೆಗೆ ಕರೆದುಕೊಂಡು ಕಪಿಲವಸ್ತುವಿನಿಂದ ಒಂದು ನೂರ ಐವತ್ತು ಮೈಲಿ ದೂರದ ವೈಶಾಲಿಗೆ ಕಾಲುನಡಿಗೆಯಲ್ಲೇ ಹೊರಟಳು. ಅವಳು ವೈಶಾಲಿಯನ್ನು ತಲುಪಿದಾಗ ಅವಳ ಕಾಲುಗಳು ಬಾತುಕೊಂಡಿದ್ದುವು. ಮೈಯೆಲ್ಲಾ ಧೂಳಿನಿಂದ ಮುಚ್ಚಿಹೋಗಿತ್ತು. ಬುದ್ಧನು ವಾಸಿಸುತ್ತಿದ್ದ ಹಜಾರದ ಹೊರಗೆ ನಿಂತಳು. ಅವಳ ಕಣ್ಣುಗಳ ತುಂಬಾ ನೀರು ತುಂಬಿಕೊಂಡಿತ್ತು. ಬುದ್ಧನು ತನೆಗ ಸನ್ಯಾಸ ದೀಕ್ಷೆ ನೀಡುವನೆಂಬ ಭರವಸೆಯಿತ್ತು.

ಆನಂದನಿಗೆ ಅವಳ ಈ ಸ್ಥಿತಿಯನ್ನು ಕಂಡು ಆಶ್ಚರ್ಯವಾಯಿತು.-''ಗೌತಮಿ, ಈ ರೀತಿಯಾಗಿ ಇಲ್ಲೇಕೆ ನಿಂತಿರುವಿ ?'' ಕೇಳಿದ ಆನಂದ. ಪೂಜ್ಯನಾದ ಆನಂದನೇ, ಪ್ರಭುವಾದ ಬುದ್ಧನು ಹೆಂಗಸರಿಗೆ ಸನ್ಯಾಸ ಪಡೆಯಲು ಅಪ್ಪಣೆ ಕೊಡುವುದಿಲ್ಲ ಅದಕ್ಕಾಗಿ ನಿಂತಿದ್ದೇನೆ'' ಎಂದಳು ಗೌತಮಿ.

''ಸ್ವಲ್ಪ ಇಲ್ಲಿಯೇ ಕಾದಿರು, ಗೌತಮಿ. ನಾನು ಹೇಗಿ ಬುದ್ಧನನ್ನು ಈ ವಿಷಯವಾಗಿ ಕೇಳಿಕೊಂಡು ಬರುತ್ತೇನೆ'' ಎಂದು ಹೇಳಿ ಬುದ್ಧನ ಬಳಿಗೆ ಹೋಗಿ ಗೌತಮಿಯನ್ನು ಸಂಘಕ್ಕೆ ಸೇರಿಸಿಕೊಳ್ಳುವಂತೆ ಪ್ರಾರ್ಥಿಸಿದನು. ಆದರೆ ಬುದ್ಧನು ನಿರಾಕರಿಸಿದನು. ಆನಂದನು ಮೂರು ಬಾರಿ ಕೇಳಿದರೂ ಬುದ್ಧನು ನಿರಾಕರಿಸುತ್ತಲೇ ಬಂದನು.

ಆಗ ಆನಂದನು ಇನ್ನೊಂದು ರೀತಿಯಿಂದ ಕೇಳಿಕೊಂಡನು. ಮರ್ಯಾದೆಯಿಂದ ಬುದ್ಧನನ್ನು ಪ್ರಶ್ನಿಸಿದನು-''ಪ್ರಭುವೇ, ಹೆಂಗಸರು ಭಿಕ್ಷುಣಿಯರಾದರೆ ಅವರು ಅರಿಯತ್ವದ ವಿವಿಧ ಹಂತಗಳನ್ನು ತಿಳಿದುಕೊಳ್ಳಬಲ್ಲರೇ?''

''ಹೌದು ಆನಂದ. ತಿಳಿದುಕೊಳ್ಳಬಲ್ಲರು'' ಬುದ್ಧನೆಂದ.

ಬುದ್ಧನ ಉತ್ತರದಿಂದ ಉತ್ಸಾಹಿತನಾಗಿ ಆನಂದನು ''ಹಾಗಾದರೆ ಹೆಂಗಸರಿಗೆ ಸನ್ಯಾಸ ದೀಕ್ಷೆಯನ್ನು ಕೊಟ್ಟರೆ ಒಳ್ಳೆಯದಲ್ಲವೆ?''

''ಆನಂದ, ಮಹಾಪ್ರಜಾಪತಿ ಗೌತಮಿಯು ಎಂಟು ವಿಚಾರಗಳನ್ನು ಒಪ್ಪಿಕೊಳ್ಳುವಳಾದರೆ ಆಕೆ ಭಿಕ್ಷುಣಿ ದೀಕ್ಷೆ ಪಡೆದಿದ್ದಾಳೆಂದೇ ತಿಳಿಯಬಹುದು''.

ಆನಂದನು ಪ್ರಜಾಪತಿ ಗೌತಮಿಗೆ ಆ ಎಂಟು ನಿಯಮಗಳನ್ನು ತಿಳಿಸಲು ಆಕೆ ಹರ್ಷದಿಂದ ಅವುಗಳನ್ನು ಒಪ್ಪಿಕೊಂಡು ಅದರಂತೆ ನಡೆದುಕೊಳ್ಳುವುದಾಗಿ ಹೇಳಿದಳು. ನಂತರ ಸಹಜವಾಗಿಯೇ ಭಿಕ್ಷುಣಿಯಾದಳು-ಸ್ವಲ್ಪ ಕಾಲದ ನಂತರ ಅರ್ಹಂತ ಪದವಿಯನ್ನೂ ಪಡೆದಳು. ಅವಳ ಜೊತೆಯಲ್ಲೇ ದೀಕ್ಷೆ ಪಡೆದ ಇತರ ಶಾಕ್ಯ ಮಹಿಳೆಯರು ಸಹಾ ಅರ್ಹಂತರಾದರು.

## ೫೫. ಬುದ್ಧನು ಜಾತಿವಾದವನ್ನು ಖಂಡಿಸುತ್ತಿದ್ದನು

ಬುದ್ಧನ ಕಾಲದಲ್ಲಿ ಭಾರತದೇಶದಲ್ಲಿ ಜಾತಿವಾದವು ಬಹಳ ಪ್ರಬಲವಾಗಿತ್ತು. ಅವನು ಎಂಥ ಜಾತಿಯವನೆಂಬುವುದರಿಂದ ಸಮಾಜದಲ್ಲಿ ಅವನ ಅಂತಸ್ತನ್ನು ಅವನು ಹುಟ್ಟಿದಾಗಿನಿಂದಲೇ ನಿರ್ಧರಿಸಲ್ಪಡುತ್ತಿತ್ತು. ಸಮಾಜದಲ್ಲಿ ನಾಲ್ಕು ವರ್ಗದ ಜಾತಿಗಳಿದ್ದುವು.

೧. ಬ್ರಾಹ್ಮಣರು ಅಥವಾ ಪುರೋಹಿತ ವರ್ಗದವರು ತಮ್ಮ ಜಾತಿಯೇ ಶ್ರೇಷ್ಠವಾದುದೆಂದೂ, ಪವಿತ್ರವಾದುದೆಂದೂ ಹೇಳಿಕೊಳ್ಳುತ್ತಿದ್ದರು.

೨. ಕ್ಷತ್ರಿಯರು

೩. ವೈಶ್ಯರು ಅಥವಾ ವ್ಯಾಪಾರಸ್ಥರು

೪. ಅಸ್ಪೃಶ್ಯರು ನೀಚ ಜಾತಿಯವರೆಂದು ಪರಿಗಣಿಸಲಾಗುತ್ತಿತ್ತು. ಅವರು ಮೇಲಿನ ಮೂರು ಜಾತಿಯವರ ಎಲ್ಲ ಕೆಲಸಗಳನ್ನು ಮಾಡುತ್ತಿದ್ದರು. ಅವರನ್ನು ಬಹಳ ಕೀಳಾಗಿ ಕಾಣಲಾಗುತ್ತಿತ್ತು.

ಬುದ್ಧನು ಇಂತಹ ಜಾತಿಪದ್ಧತಿಯನ್ನು ಹೇಯವೆಂದನು-ಅದು ಅನ್ಯಾಯವಾದುದೆಂದನು. ಪ್ರತಿಯೊಂದು ಜಾತಿಯಲ್ಲಿಯೂ ಅತಿ ಕೆಟ್ಟವರೂ ಕ್ರೂರಿಗಳೂ ಇರುವಂತೆಯೇ ಸಭ್ಯರೂ ಇರುತ್ತಾರೆ ಮತ್ತು ದಯಾಳುಗಳು ಇರುತ್ತಾರೆಂಬುದನ್ನು ತೋರಿಸಿಕೊಟ್ಟನು. ಪ್ರತಿಯೊಬ್ಬ ಮನುಷ್ಯನು ಅವನು ಯಾವ ಜಾತಿಯವನೇ ಆಗಿರಲಿ ಅವನು ಮಾಡಿದ ಕರ್ಮಕ್ಕೆ ಸರಿಯಾಗಿ ಶಿಕ್ಷೆಗೊಳಗಾಗಲೇಬೇಕು. ಒಬ್ಬ ಮನುಷ್ಯನು ಉಚ್ಚ ಜಾತಿಯವನೇ ಆಗಿರಲಿ, ಅಥವಾ ನೀಚ ಜಾತಿಯವನೇ ಆಗಿರಲಿ ಅವನು

ಎಂತಹ ಕೆಲಸ ಮಾಡುತ್ತಾನೋ ಅದಕ್ಕೆ ಸರಿಯಾದ ಫಲವನ್ನು ಅನುಭವಿಸಲೇಬೇಕು. ಅಂದರೆ ಮನುಷ್ಯನು ಮಾಡುವ ಒಳ್ಳೆಯ ಅಥವಾ ಕೆಟ್ಟ ಕೆಲಸವನ್ನು ಪರಿಗಣಿಸಿ ಅವನ ಜಾತಿಯನ್ನು ನಿರ್ಧರಿಸಬೇಕೇ ಹೊರತೂ, ಅವನ ಹುಟ್ಟಿನಿಂದಲ್ಲ ಇದು ಬುದ್ಧನ ವಾದ. ಶೀಲ ಮತ್ತು ಸಮಾನಭಾವಗಳಿಗೆ ಬೆಲೆ ಕೊಡಬೇಕೇ ಹೊರತೂ ಅವನು ಯಾವ ಜಾತಿಯವರ ಮನೆಯಲ್ಲಿ ಹುಟ್ಟಿದನೆಂಬುದಕ್ಕೆ ಬೆಲೆ ಕೊಡಬೇಕಾಗಿಲ್ಲ ಎಂದು ಹೇಳಿದನು ಬುದ್ಧ. ಮನುಷ್ಯನ ಇತಿಹಾಸದಲ್ಲಿ ಧೃಡನಿರ್ಧಾರವನ್ನು ತೆಗೆದುಕೊಂಡು ಜಾತಿಪದ್ಧತಿಯನ್ನು ತೊಡೆದುಹಾಕುವುದಕ್ಕೆ ಪ್ರಯತ್ನಿಸಿದ ಮೊಟ್ಟಮೊದಲಿಗ ಬುದ್ಧ ಎಂದು ಹೆಸರು ಪಡೆದನು.

ಬುದ್ಧನು ಹೀಗೆ ತೀರ್ಮಾನಿಸಿದನು-

ಹುಟ್ಟಿನಿಂದ ಯಾರೂ ಅಸ್ಪೃಶ್ಯರಾಗುವುದಿಲ್ಲ.

ಹುಟ್ಟಿನಿಂದ ಅವನು ಬ್ರಾಹ್ಮಣನಾಗಲಾರ

ಅವನು ಮಾಡುವ ಕೆಲಸಗಳಿಂದ ಒಬ್ಬನು ಕೀಳು ಜಾತಿಯವನಾಗುತ್ತಾನೆ ಮತ್ತು ಒಳ್ಳೆಯ ಕೆಲಸಗಳನ್ನು ಮಾಡುವುದರಿಂದ ಅವನು ಬ್ರಾಹ್ಮಣನೆನಿಸುತ್ತಾನೆ.

# ೫೬. ಧರ್ಮ ಕನ್ನಡಿ

ರಾಜಗೃಹದಿಂದ ಬುದ್ಧನು ತನ್ನ ಶಿಷ್ಯನಾದ ಆನಂದನೊಂದಿಗೂ, ಇತರ ಅಪಾರ ಶಿಷ್ಯರೊಂದಿಗೂ ಉತ್ತರದ ಕಡೆ ಯಾತ್ರೆ ಹೊರಟನು. ಅಲ್ಲಲ್ಲಿ ಸಿಗುವ ನಗರಗಳಲ್ಲೂ, ಪಟ್ಟಣಗಳಲ್ಲೂ ಸ್ವಲ್ಪ ನಿಂತು ಎಲ್ಲರಿಗೂ ಧರ್ಮಬೋಧೆಯನ್ನು ಮಾಡುತ್ತಿದ್ದನು.

ಅವರು ನದೀಕ ಎಂಬ ಪುಟ್ಟ ಹಳ್ಳಿಯ ಇಟ್ಟಿಗೆಯ ಹಜಾರ ಎಂದು ಕರೆಯಲ್ಪಡುತ್ತಿದ್ದ ಒಂದು ಸ್ಥಳದಲ್ಲಿ ತಂಗಿದರು. ಈ ಹಳ್ಳಿಯಲ್ಲಿ ಕೆಲವು ಭಿಕ್ಷುಗಳೂ ಮತ್ತು ಗೃಹಸ್ಥರೂ ಕಾಲವಾದರು. ಹೀಗೆ ಸತ್ತವರ ಮುಂದಿನ ಗತಿ ಏನಾಗುತ್ತದೆ ಎಂಬುದನ್ನು ಆನಂದನು ತಿಳಿಯಬಯಸಿದನು.

ಬುದ್ಧನು ಹೇಳಿದನು- ''ಈಗ ಸತ್ತವರೆಲ್ಲರೂ ಅವನು ಬೋಧಿಸಿದ ಧರ್ಮವನ್ನು ಅಭ್ಯಾಸ ಮಾಡುತ್ತಿದ್ದುದರಿಂದ ಅವರ ಸನ್ಯಾಸದ ಮೊದಲ ಹಂತವನ್ನು ತಲುಪಿದ್ದಾರೆ. ಅಷ್ಟೇ ಅಲ್ಲ ಪ್ರತಿಯೊಬ್ಬ ಮನುಷ್ಯನೂ ಒಂದಲ್ಲ ಒಂದು ದಿನ ಸಾಯಲೇ ಬೇಕು. ನೀನು ಒಬ್ಬನು ಸತ್ತಾಗಲೂ ಈ ರೀತಿಯ ಪ್ರಶ್ನೆಗಳನ್ನೂ ಕೇಳುತ್ತಿದ್ದರೆ ನನ್ನ ಮನಸ್ಸಿಗೆ ದುಃಖವಾಗುತ್ತದೆ. ಆದ್ದರಿಂದ ನಾನು ನಿನಗೆ ಉಪದೇಶಕೊಡುತ್ತೇನೆ. ಅದರ ಹೆಸರು ''ಸತ್ಯದರ್ಪಣ ಅಥವಾ ಧರ್ಮದರ್ಪಣವೆಂದು''. ಇದರಿಂದ ಯೋಗ್ಯನಾದ ಶಿಷ್ಯನು ತಾನೇ ಭವಿಷ್ಯದ ಬಗ್ಗೆ ತಿಳಿದುಕೊಳ್ಳಬಹುದು. ಏನೆಂದರೆ- ನನಗೆ ಇನ್ನು ಮುಂದೆ ನರಕವಿಲ್ಲ. ನಾನು ಮುಂದೆ ಪ್ರಾಣಿಯಾಗಿ ಹುಟ್ಟುವುದೂ ಇಲ್ಲ. ದೆವ್ವಗಳ ಪ್ರಪಂಚವಿಲ್ಲ. ನನಗೆ ಉಚ್ಚ-ನೀಚಗಳೆಂಬ ಭೇದಭಾವವಿರುವುದಿಲ್ಲ. ನಾನೊಬ್ಬ ''ಸೋತಾಪನ್ನ''ನಾಗಿದ್ದೇನೆ. ಕೆಳಗಿನ ನರಕಗಳಲ್ಲಿ ನಾನು ಬೀಳಲಾರೆ. ನನಗೆ ಕೊಟ್ಟ ಕೊನೆಗೆ ಜ್ಞಾನೋದಯವಾಗಿಯೇ ಆಗುತ್ತದೆ''.

''ಆನಂದಾ, ಸತ್ಯದ ದರ್ಪಣ ಅಥವಾ ಕನ್ನಡಿ ಎಂದರೇನು ? ಇಲ್ಲೊಬ್ಬ ಸಭ್ಯನಾದ ಶಿಷ್ಯನಿದ್ದಾನೆ. ಅವನಿಗೆ ಬುದ್ಧನಲ್ಲಿ, ಸಂಘದಲ್ಲಿ ಹಾಗೂ ಧರ್ಮದಲ್ಲಿ ಅಪಾರ ನಂಬಿಕೆ ಇದೆ. ತನ್ನ ಈ ನಂಬಿಕೆಯಿಂದ ಅವನು ಬಹಳಷ್ಟು ಸಮಯವನ್ನು ''ತ್ರಿರತ್ನ''ಗಳ ಬಗ್ಗೆ ತಿಳಿದುಕೊಳ್ಳಲು ವಿನಿಯೋಗಿಸುತ್ತಾನೆ. ಈ ಚಿಂತನೆಗಳು ಅವನು ತಕ್ಕ ಸಾಧನೆಯನ್ನು ಮಾಡಲು ಸಹಾಯಮಾಡುತ್ತವೆ. ಮತ್ತು ಅವನು ತನ್ನ ಗುಣಗಳನ್ನು ಬೆಳೆಸಿಕೊಂಡು ಅವನ ಮನಸ್ಸಿಗೆ ಏಕಾಗ್ರತೆಯನ್ನು ತಂದುಕೊಡುತ್ತದೆ. ಇದರ ಫಲಸ್ವರೂಪವಾಗಿ ಅವನು ಸೋತಾಪನ್ನ ಪದವಿಯನ್ನು ಪಡೆಯುತ್ತಾನೆ''.

ಈ ಸತ್ಯದ ದರ್ಪಣವನ್ನು ಹೊಂದಿರುವ ಶಿಷ್ಯನು ತನ್ನ ಭವಿಷ್ಯವನ್ನು ತಾನೇ ತಿಳಿದುಕೊಳ್ಳುತ್ತಾನೆ- ಅವನು ನರಕಕ್ಕಾಗಲಿ, ಪ್ರಾಣಿಗಳ ಪ್ರಪಂಚಕ್ಕಾಗಲೀ, ದೆವ್ವಗಳ ನೆಲೆಗಾಗಲೀ ಹೋಗುವುದಿಲ್ಲ.

ನದೀಕದಲ್ಲಿ ಈ ಧರ್ಮೋಪದೇಶವನ್ನು ಕೊಟ್ಟ ನಂತರ ಬುದ್ಧನೂ ಮತ್ತು ಅವನ ಅನುಯಾಯಿಗಳು ವೈಶಾಲಿಯ ಕಡೆ ಪಯಣ ಬೆಳೆಸಿದರು.

# ೫೭. ಪವಾಡಗಳ ಬಗ್ಗೆ ಬುದ್ಧನ ಉಪದೇಶ

ಒಮ್ಮೆ ಬುದ್ಧನು ಪಾವರಿಕಾ ತೋಪಿನಲ್ಲಿ ವಾಸಿಸುತ್ತಿದ್ದಾಗ ಕೇವಡ್ಡನೆಂಬುವನು ಬುದ್ಧನ ಬಳಿಗೆ ಹೋಗಿ ಅವನಿಗೆ ನಮಸ್ಕರಿಸಿ ಹೇಳಿದನು-''ಪ್ರಭುವೇ, ನಲಂದಾ ಒಂದು ಸಂಪದ್ಭರಿತವಾದ ಮುಂದುವರಿದ ನಗರ. ಇಲ್ಲಿನ ಜನಗಳು ಬಹಳ ಮುಂದುವರಿದಿದ್ದಾರೆ. ತಮ್ಮಲ್ಲಿ ಬಹಳ ನಂಬಿಕೆವುಳ್ಳವರಾಗಿದ್ದಾರೆ. ತಾವು ಚಮತ್ಕಾರಗಳನ್ನು ಮಾಡಿ ತೋರಿಸಬಲ್ಲ ಒಬ್ಬ ಭಿಕ್ಷುವನ್ನು ಇಲ್ಲಿ ನೇಮಿಸಿದರೆ ಜನರಿಗೆ ತಮ್ಮ ಜ್ಞಾನದಲ್ಲಿ ಇನ್ನೂ ನಂಬಿಕೆಯುಂಟಾಗುವುದು.

ಬುದ್ಧನು ಉತ್ತರಿಸಿದನು-''ಕೇವಡ್ಡನೇ, ನಾನು ನನ್ನ ಭಿಕ್ಷುಗಳಿಗೆ ಈ ಅಲೌಕಿಕ ವಿದ್ಯೆಯನ್ನು ಬೋಧಿಸುವುದಿಲ್ಲ''.

ಕೇವಡ್ಡನು ಎರಡನೇ ಬಾರಿಯೂ ಇದೇ ವಿಚಾರವನ್ನು ಕೇಳಿದನು. ಮೂರನೇ ಬಾರಿ ಕೇಳಿದಾಗ ಬುದ್ಧನು ಹೇಳಿದನು-

ಮೂರು ವಿಧದ ಪವಾಡಗಳಿವೆ. ಮೊದಲನೆಯದಾವುದೆಂದರೆ ಈ ಅಲೌಕಿಕ ವಿದ್ಯೆಯನ್ನುಪಯೋಗಿಸಿ ಅನೇಕನಾಗುವುದು, ಗೋಡೆಗಳಲ್ಲಿ ತೂರಿಹೋಗುವುದು, ಆಕಾಶದಲ್ಲಿ ಹಾರುವುದು, ನೀರಿನ ಮೇಲೆ ನಡೆಯುವುದು ಇತ್ಯಾದಿ. ಇಂಥವುಗಳನ್ನು ಸಾಧಾರಣ ಮನುಷ್ಯರು ಮಾಡಲಾರರು.

ಎರಡನೆಯ ಅಲೌಕಿಕ ಶಕ್ತಿಯೆಂದರೆ ಇತರರ ಮನಸ್ಸನ್ನು ಓದುವುದು.

ಮೂರನೆಯ ಶಕ್ತಿ ಯಾವುದೆಂದರೆ ಜನಗಳನ್ನು ಅವರವರ ಮಾನಸಿಕ ಶಕ್ತಿಗೆ ಅನುಗುಣವಾಗಿ, ಅವರ ಒಳ್ಳೆಯದಕ್ಕಾಗಿ ತಿದ್ದುವುದು, ದಾರಿ ತೋರುವುದು, ಇದಕ್ಕಾಗಿ ಅವರ ಯೋಗ್ಯತೆಗೆ ತಕ್ಕಂತಹ ಉಪಾಯಗಳನ್ನು ಹುಡುಕುವುದು. ಮೊದಲಿನ ಎರಡು ಶಕ್ತಿಗಳನ್ನು ತನ್ನ ಸ್ವಂತಕ್ಕಾಗಿ ಉಪಯೋಗಿಸಿಕೊಂಡು ಜನಗಳ ಮೇಲೆ ಪ್ರಭಾವ ಬೀರುವುದಕ್ಕಾಗಿ ಪ್ರಯೋಗಿಸಿದರೆ ಅಂಥವನು ಒಬ್ಬ ಯಕ್ಷಿಣಿ ಮಾಡುವವನಿಗಿಂತ ಭಿನ್ನನಾಗಲಾರ. ಒಬ್ಬ ಭಿಕ್ಷುವು ಇಂತಹ ಪ್ರಾಪಂಚಿಕವಾದ ವಿದ್ಯೆಯನ್ನು ಕಲಿತು ಉಪಯೋಗಿಸಿದರೆ, ಅವನೊಬ್ಬ ನಾಚಿಕಗೇಡಿಯೂ, ದೀನನೂ, ಬೇರೆಯವರಿಂದ ತಿರಸ್ಕರಿಸಲ್ಪಡುವವನೂ ಆಗುತ್ತಾನೆ. ಇಂತಹ ಕಾರ್ಯಗಳಿಂದ ಜನರನ್ನು ಪ್ರಭಾವಿತರನ್ನಾಗಿ ಮಾಡಿ ಅವರನ್ನು ತನ್ನ ಶಿಷ್ಯರನ್ನಾಗಿ ಮಾಡಿಕೊಳ್ಳಬಹುದು. ಆದರೆ ಅದರಿಂದ ದುಃಖ ನೋವು ಮುಂತಾದುವುಗಳನ್ನು ನಿವಾರಿಸಲು ಸಹಾಯವಾಗುವುದಿಲ್ಲ.

ಮೂರನೇ ರೀತಿಯ ಪರಾಶಕ್ತಿ ಇದೆ. ಅದನ್ನು ಪವಾಡವೆಂದೂ ಅನ್ನಬಹುದು. ಇದರಿಂದ ಜನಗಳ ನೋವುಗಳನ್ನ ನಿವಾರಿಸಬಹುದು. ಇದು ಅಭ್ಯಾಸ ಮಾಡಲು ಯೋಗ್ಯವಾದುದ್ದಾಗಿದೆ.

ಎಂತಹ ಪವಾಡಗಳನ್ನು ಮಾಡಬಹುದೆಂದರೆ - ಒಬ್ಬ ಮನುಷ್ಯನು ಬಹಳ ಆಸೆಬುರುಕನಾಗಿರುತ್ತಾನೆ, ಲೋಭಿಯಾಗಿರುತ್ತಾನೆ, ಇಂತಹ ವಸ್ತುಗಳಿಗಾಗಿ ಹಂಬಲಿಸುತ್ತಾನೆ.

ಅಂಥವನಿಗೆ ಇವುಗಳಿಂದ ದೂರವಾಗಿರುವಂತೆ ಬೋಧಿಸುವುದು. ಒಬ್ಬ ಮನುಷ್ಯನು ದ್ವೇಷ ಮತ್ತು ಕೋಪಗಳಿಗೆ ದಾಸನಾಗಿರುತ್ತಾನೆ. ಅಂಥವನಿಗೆ ನಿಮ್ಮ ಪವಾಡ ಶಕ್ತಿಯನ್ನುಪಯೋಗಿಸಿ ಅವನ ದ್ವೇಷ ಮತ್ತು ಕೋಪವನ್ನು ನಿಯಂತ್ರಣಕ್ಕೆ ತರುವಂತೆ ಮಾಡಬಹುದು. ಒಬ್ಬನು ತುಂಬಾ ಅಜ್ಞಾನಿಯಾಗಿರುತ್ತಾನೆ. ಅವನಿಗೆ ಪ್ರಕೃತಿಯ ನಿಜರೂಪದ ಅರಿವಿರುವುದಿಲ್ಲ. ಅಂದರೆ ಪ್ರಾಪಂಚಿಕ ವಸ್ತುಗಳು ಅಶಾಶ್ವತವಾದವುಗಳು, ಅವುಗಳಿಂದ ದುಃಖ ಮತ್ತು ಅಹಂಕಾರಗಳು ಉತ್ಪತ್ತಿಯಾಗುತ್ತವೆ ಎಂಬುದು ಗೊತ್ತಿಲ್ಲ. ಅಂಥವನ ಅಜ್ಞಾನವನ್ನು ದೂರ ಮಾಡಲು ಈ ಪವಾಡವನ್ನು ಉಪಯೋಗಿಸಬಹುದು.

ಕೇವಡ್ಢನಿಗೆ ಹೇಳಿದ ಈ ಬುದ್ಧವಾದವು ವಿನಯದ ನಿಯಮಗಳಲ್ಲೂ ವಿಸ್ತಾರವಾಗಿ ಹೇಳಲಾಗಿದೆ. ಯಾವುದೇ ಭಿಕ್ಷುವು ಜನರನ್ನು ತನ್ನ ಗುಂಪಿಗೆ ಸೇರುವಂತೆ ಮತಾಂತರಗೊಳಿಸಲು, ತನ್ನ ಶಿಷ್ಯರನ್ನಾಗಿ ಮಾಡಿಕೊಳ್ಳಲು ಇಂತಹ ಪವಾಡಗಳನ್ನು ಮಾಡಬಾರದೆಂದು ಹೇಳಲಾಗಿದೆ. ಏಕೆಂದರೆ ಇದರಿಂದ ಜನರಿಗೆ ಜ್ಞಾನ ದೊರೆಯಲು ಏನೂ ಸಹಾಯವಾಗುವುದಿಲ್ಲ. ಪಿಂಡೋಲನ ವಿಚಾರದಲ್ಲಿ ಇದು ಸ್ಪಷ್ಟವಾಗಿದೆ.

ಅರ್ಹಂತ ಪಿಂಡೋಲನೆಂಬುವನು ಪವಾಡ ಶಕ್ತಿಗೆ ಬಹಳ ಹೆಸರಾಗಿದ್ದವನಾಗಿದ್ದನು. ಒಂದು ಸಲ ಒಬ್ಬ ಧನವಂತನು ಈ ಭಿಕ್ಷುವಿನ ಪವಾಡ ಶಕ್ತಿಯನ್ನು ಪರೀಕ್ಷಿಸಲು ಒಂದು ಸುಂದರವಾದ ಭಿಕ್ಷಾಪಾತ್ರೆಯನ್ನು ಬಹಳ ಎತ್ತರದ ಮೇಲಿಟ್ಟು ಅದನ್ನು ಯಾವ ಭಿಕ್ಷುವಾದರೂ ತನ್ನ ಪವಾಡದಿಂದ ಕೆಳಗೆ ತರಿಸಬೇಕೆಂತಲೂ, ಹಾಗೆ ತರಿಸಿದರೆ ಆ ಭಿಕ್ಷಾಪಾತ್ರೆ ಅವನದೇ ಆಗುತ್ತದೆಂತಲೂ ಒಂದು ಸವಾಲನ್ನು ಹಾಕಿದನು.

ಪಿಂಡೋಲ ಭಾರದ್ವಾಜನು ಅಷ್ಟು ಎತ್ತರಕ್ಕೆ ಹಾರಿ ಭಿಕ್ಷಾಪಾತ್ರೆಯನ್ನು ಸುನಾಯಾಸವಾಗಿ ತೆಗೆದುಕೊಂಡು ಬಂದನು. ಆ ಧನವಂತನು ಇಂತಹ ಭಿಕ್ಷುಗಳು ಇರುತ್ತಾರೆಂಬುದರಲ್ಲಿ ನಂಬಿಕೆಯಿಲ್ಲದವನಾಗಿದ್ದನು. ಅವನಿಗೆ ಇಂಥವರೂ ಇದ್ದಾರೆ ಎಂದು ತೋರಿಸುವುದೂ ಒಂದು ಉದ್ದೇಶವಾಗಿತ್ತು. ಪಿಂಡೋಲ ಭಾರದ್ವಾಜನುತನ್ನ ಶಕ್ತಿಯಿಂದ ಆ ಭಿಕ್ಷಾಪಾತ್ರೆಯನ್ನು ತಂದನು. ಅವನು ಅದನ್ನು ತಂದನಂತರ ಅಲ್ಲಿ ನೆರೆದಿದ್ದ ಸಾಧುಗಳ ಎದುರಿಗೆ ಬುದ್ಧನು ಆ ಭಿಕ್ಷಾಪಾತ್ರೆಯನ್ನು ಒಡೆದು ಚೂರು ಚೂರು ಮಾಡಿ-''ನಿನ್ನ ಈ ಪವಾಡ ಶಕ್ತಿಯನ್ನು ಪ್ರದರ್ಶಿಸಿರುವುದನ್ನು ಕಂಡು ನನಗೆ ಅಸಂತೋಷವಾಗಿದೆ. ನೀನು ಇನ್ನು ಮುಂದೆ ಯಾವತ್ತೂ, ಅಜ್ಞಾನಿಗಳಾದ ಸಾಧಾರಣ ಜನರನ್ನು ಮರಳುಗೊಳಿಸುವುದಕ್ಕಾಗಿ ನಿನ್ನ ಪರಾವಿದ್ಯೆಯನ್ನು ಪ್ರದರ್ಶಿಸಬಾರದು'' ಎಂದು ಹೇಳಿದನು.

# ೩೮. ಬುದ್ಧನ ಕಾಯಿಲೆ ಮತ್ತು ಘೋಷಣೆ

ಮಳೆಗಾಲದಲ್ಲಿ ಬುದ್ಧನು ಬೆಳುವಾನಗರದಲ್ಲಿ ಬಹಳ ಕಾಲ ವಾಸಿಸುತ್ತಿದ್ದನು. ಆಗಲೇ ಅವನು ಖಾಯಿಲೆ ಬಿದ್ದನು. ಬಹಳ ಭಯಂಕರ ಮೈ ಕೈ ನೋವುಗಳಿಂದ ಆತ ತತ್ತರಿಸಿ ಹೋದನು. ಆದರೆ ಧೃಡ ಮನಸ್ಸಿನ ನಿರ್ಧಾರದಿಂದ ಆತ ನೋವನ್ನು ತಾಳಿಕೊಂಡನು. ಯಾರಿಗೂ ಈ ವಿಚಾರವನ್ನು ತಿಳಿಸಲಿಲ್ಲ. ಆಗ ಅವನ ಮನಸ್ಸಿಗೆ ಒಂದು ಯೋಚನೆ ಬಂದಿತು - ''ನಾನು ನನ್ನ ಶಿಷ್ಯರಿಗೆ ಏನೂ ತಿಳಿಸದೆ ಸಾಯುವುದು ಸರಿಯಲ್ಲ. ನನ್ನ ಸಂಘಕ್ಕೂ ನನ್ನ ವಿದಾಯವನ್ನು ಹೇಳಬೇಕು. ನಾನು ನನ್ನ ಮನಸ್ಸನ್ನು ಬಹಳ ಗಟ್ಟಿಮಾಡಿಕೊಂಡು ಕಾಯಿಲೆಯನ್ನು ಅದುಮಿಹಾಕಬೇಕು.'' ಹೀಗೆಂದುಕೊಂಡು ಆತನು ಕಾಯಿಲೆಯನ್ನು ಅದುಮಿಹಾಕಿದನು. ಅದು ದೂರವಾಗುತ್ತಾ ಬಂದಿತು.

ಹೀಗೆ ಕಾಯಿಲೆಯಿಂದ ಮುಕ್ತಗೊಂಡು ಆತನು ವಿಹಾರದಿಂದ ಹೊರಬಿದ್ದು, ವಿಹಾರದ ಹಿಂದೆ ಅವನಿಗಾಗಿ ಹಾಸಿದ್ದ ಹಾಸಿನ ಮೇಲೆ ಕುಳಿತುಕೊಂಡನು. ಪೂಜ್ಯನಾದ ಆನಂದನು ಬುದ್ಧನು ಕುಳಿತಿದ್ದ ಬಳಿಗೆ ಹೋಗಿ ಬಹಳ ಮರ್ಯಾದೆಯಿಂದ ಅವನ ಬಗಲಿಗೆ ಕುಳಿತು ಹೇಳಿದನು-''ತಾವು ಕಾಯಿಲೆಯಿಂದ ಎಷ್ಟು ನರಳುತ್ತಿದ್ದೀರೆಂಬುದನ್ನು ನಾನು ಬಲ್ಲೆ. ಆ ಯಾತನೆಯನ್ನು ನೋಡಿ ನನ್ನ ಶರೀರವು ಬಳ್ಳಿಯಂತೆ ಬಾಡಿಹೋಯಿತು. ಆದರೂ ಕೂಡಾ ನನ್ನ ಮನಸ್ಸಿಗೆ ತಾವು ನಮಗೆ ಹೇಳದೆ ನಮ್ಮನ್ನು ಅಗಲಿ ಹೋಗಲಾರಿರೆಂಬ ವಿಚಾರ ಬರುತ್ತಿತ್ತು''.

''ಏನೆಂದೆ ಆನಂದ ? ಸಂಘವು ನನ್ನಿಂದ ಅದನ್ನು ನಿರೀಕ್ಷಿಸುತ್ತಿದೆಯೆ ? ಒಬ್ಬ ಸಮ್ಯಕ್ ಸಂಬುದ್ಧನು ತಾನೇ ಈ ಸಂಘವನ್ನು ಮುನ್ನಡೆಸುತ್ತಿರುವನೆಂದಾಗಲೀ, ಅದು ಅವನನ್ನೇ ಅವಲಂಬಿಸಿದೆಯೆಂದಾಗಲೀ ತಿಳಿಯುವುದಿಲ್ಲ. ನಾನೂ ಅಷ್ಟೇ ಆನಂದ. ತುಂಬಾ ಮುದುಕನಾಗಿ ಬಾಳಿದ್ದೇನೆ ನೋಡು-ನನ್ನ ಪ್ರಯಾಣ ಮುಗಿಯುತ್ತಾ ಬಂದಿದೆ. ಆದ್ದರಿಂದ ಆನಂದ, ನೀವು ಪ್ರತಿಯೊಬ್ಬರೂ ನೀವೇ ನಿಮ್ಮ ದ್ವೀಪರಾಗ ಬೇಕು. ಯಾರಲ್ಲೂ ಆಶ್ರಯ ಪಡೆಯಬಾರದು. ಆ ದ್ವೀಪವು ನ್ಯಾಯ ಸಮ್ಮತವಾಗಿರಬೇಕು. ಧಮ್ಮದಲ್ಲಿ ಆಶ್ರಯ ಪಡೆಯಬೇಕು. ನಾನು ಪರಿನಿರ್ವಾಣ ಹೊಂದಿದ ಮೇಲೆ ಯಾರು ತಾವೇ ಒಂದು ದ್ವೀಪವಾಗಿ ಪರಿಣಮಿಸಿ ಅದರಲ್ಲಿ ಆಶ್ರಯ ಪಡೆಯುತ್ತಾರೋ ಅವರೇ ನನ್ನ ಭಿಕ್ಷುಗಳಲ್ಲೆಲ್ಲಾ ಶ್ರೇಷ್ಠರಾಗುತ್ತಾರೆ''.

ಬಹಳ ವಯಸ್ಸಾಗಿ ಜೀರ್ಣಶೀರ್ಣನಾಗಿದ್ದರೂ ಕೂಡಾ ಬುದ್ಧನು ಸಮಯ ಸಿಕ್ಕಾಗಲೆಲ್ಲಾ ತನ್ನ ಶಿಷ್ಯರಿಗೆ ಧರ್ಮವನ್ನು ಬೋಧಿಸುತ್ತಲೇ ಇದ್ದನು. ಬೆಳುವಾದಲ್ಲಿ ಯಾರೂ ಆತನನ್ನು ಊಟಕ್ಕೆ ಕರೆಯದಿದ್ದಾಗ ತನ್ನ ಭಿಕ್ಷಾಪಾತ್ರೆಯನ್ನೆತ್ತಿಕೊಂಡು ಒಂದು ಸುತ್ತು ಹೊರಡುತ್ತಿದ್ದನು.

ಒಂದು ಬೆಳಿಗ್ಗೆ ಬುದ್ಧನು ಬಟ್ಟೆಗಳನ್ನು ಧರಿಸಿ ಭಿಕ್ಷಾಪಾತ್ರೆಯನ್ನೆತ್ತಿಕೊಂಡು ವೈಶಾಲಿಯ ಬೀದಿಗಳಲ್ಲಿ ಹೊರಟನು. ಅಲ್ಲಿಂದ ಹಿಂದಿರುಗಿ ಬಂದು ಆನಂದನಿಗೆ ಹೇಳಿದನು. ''ಒಂದು ಚಾಪೆಯನ್ನೆತ್ತಿಕೊಂಡು ನಡೆ. ನಾವು ಈ ದಿನವನ್ನು ಚಪಲ ಮಂದಿರದಲ್ಲಿ ಕಳೆಯೋಣ''.

ಅವರಿಬ್ಬರೂ ಅಲ್ಲಿಗೆ ಹೋಗಿ ಒಂದು ಚಾಪೆಯ ಮೇಲೆ ಕುಳಿತುಕೊಂಡರು. ಬುದ್ಧನು ವೈಶಾಲಿಯಲ್ಲಿರುವ ಸುತ್ತು ಮುತ್ತಲಿನಲ್ಲಿರುವ ವಿಹಾರಗಳಲ್ಲಿ ಪ್ರಸನ್ನವಾದ ಪರಿಸರವಿರುವುದೆಂದು ಹೇಳಿದನು. ನಂತರ ಪೂಜ್ಯ ಆನಂದನಿಗೆ ಹೇಳಿದನು-

''ಯಾರಾದರೊಬ್ಬನು ಅಭ್ಯಾಸ ಮಾಡಿ ನಾಲ್ಕು ಬಗೆಯ ಸಿದ್ಧಿಗಳನ್ನು ಸಂಪಾದಿಸಿಕೊಂಡಿದ್ದರೆ, ಅವನು ತಾನು ಬಹುಕಾಲ ಬದುಕಬೇಕು ಎಂದು ಇಚ್ಛಿಸಿದರೆ ಹಾಗೆ ಬದುಕಬಲ್ಲನು. ನಾನು ನಾಲ್ಕು ವಿಧವಾದ ಸಿದ್ಧಿಗಳನ್ನು ಸಾಧಿಸಿದ್ದೇನೆ. ನಾನು ಬಯಸಿದಲ್ಲಿ ಬಹಳ ಕಾಲಬಹುಕಾಲ ಬದುಕಬಲ್ಲೆ''.

ಬುದ್ಧನು ಇಷ್ಟು ಸರಳವಾಗಿ ತಿಳಿಸುತ್ತಿದ್ದರೂ ಕೂಡಾ ಪೂಜ್ಯನಾದ ಆನಂದನಿಗೆ ಬುದ್ಧನನ್ನು ಇನ್ನು ಕೆಲವುಕಾಲ ಜನರಿಗೆ ಒಳ್ಳೆಯದು ಮಾಡಲಿಕ್ಕೋಸ್ಕರವಾಗಿ ಬದುಕಿರಿ ಎಂದು ಹೇಳಲಿಕ್ಕೆ ತೋಚಲೇ ಇಲ್ಲ. ಆಗ ಆನಂದನಿಗೆ ಬುದ್ಧನು ಹೇಳಿದ ವಿಷಯ ಅರ್ಥವಾಗಲೇ ಇಲ್ಲ. ಅವನ ಮನಸ್ಸು ಬಹಳ ಅಲ್ಲೋಲಕಲ್ಲೋಲವಾಗಿತ್ತು.

''ಆನಂದ ಸ್ವಲ್ಪ ಹೊತ್ತು ನನ್ನೊಬ್ಬನನ್ನೇ ಬಿಟ್ಟು ಹೊರಗೆ ಹೋಗು'' ಬುದ್ಧನು ಹೇಳಿದನು. ಅಂತೆಯೇ ಅಲ್ಲಿಂದ ಹೊರಟು ಹತ್ತಿರವಿದ್ದ ಒಂದು ಮರದ ಬುಡದಲ್ಲಿ ಹೋಗಿ ಕುಳಿತನು.

ಬುದ್ಧನು ಭೂಮಿಯ ಮೇಲೆ ಬಂದದ್ದು ಸತ್ಯ ಶೋಧಕರಿಗೆ ವಸ್ತುಗಳ ನಿಜಸ್ವರೂಪವನ್ನು ತಿಳಿಸಿಕೊಟ್ಟು ಜೀವನದಲ್ಲಿ ಬರುವ ತೊಂದರೆಗಳಿಂದ ಮುಕ್ತಿ ಹೇಗೆ ಪಡೆಯಬೇಕೆಂಬುದನ್ನು ತಿಳಿಸಿಕೊಡಲಿಕ್ಕಾಗಿ, ಅವನು ಬಹಳಕಾಲ ಧರ್ಮ ಪ್ರಚಾರ ಮಾಡಿ ತನ್ನ ಕಾರ್ಯವನ್ನು ಪೂರ್ಣಗೊಳಿಸಿದ್ದನು. ತಾನು ಹೇಳಬೇಕಾದುದೆಲ್ಲವನ್ನೂ ಹೇಳಿ ಮುಗಿಸಿದನು. ತನ್ನ ಶಿಷ್ಯರಿಗೂ, ಅನುಯಾಯಿಗಳಿಗೂ ಮುಂದೆ ಹೇಗೆ ನಡೆದುಕೊಳ್ಳಬೇಕೆಂದು ಹೇಳಿದನು. ಶಿಷ್ಯರು ತನ್ನ ಉಪದೇಶವನ್ನು ಕೇಳಿದಂತೆ ಶಿಷ್ಯರು ಇತರರಿಗೆ ತಾವೂ ಬೋಧಿಸಬೇಕೆಂದನು. ಆದ್ದರಿಂದಲೇ ಆತನು ಇನ್ನು ಬದುಕಿರಲು ಬಯಸಿಲಿಲ್ಲ. ತಾನು ಇನ್ನು ಮೂರು ತಿಂಗಳೊಳಗಾಗಿ ತಾನು ಈ ಪ್ರಪಂಚವನ್ನು ಬಿಟ್ಟು ಹೋಗುವೆನೆಂದು ಆನಂದನಿಗೆ ತಿಳಿಸಿಬಿಟ್ಟನು.

ಈಗ ಆನಂದನಿಗೆ ಬುದ್ಧನು ಮೊದಲು ಹೇಳಿದ ವಿಷಯ ನೆನಪಾಯ್ತು. ಆದ್ದರಿಂದ ಅವನು ಬುದ್ಧನ ಬಳಿ ಹೋಗಿ ''ಎಲ್ಲರಿಗೂ ಸುಖ-ಸಂತೋಷಗಳನ್ನು ತಂದುಕೊಡಲಿಕ್ಕಾಗಿ ಬಹಳ ವರ್ಷ ಬದುಕಿರಿ'' ಎಂದು ಕೇಳಿಕೊಂಡನು.

''ಸಾಕು ಬಿಡು ಆನಂದ. ನೀನು ನನ್ನನ್ನು ಕೇಳಿಕೊಳ್ಳಬೇಡ. ಇಂತಹ ಬೇಡಿಕೆಗಳನ್ನು ಪೂರೈಸುವ ಕಾಲ ಈಗ ಮುಗಿದುಹೋಗಿದೆ. ಈಗ ನಾವು ದೊಡ್ಡ ಕಾಡಿನಲ್ಲಿರುವ ಸಭಾಂಗಣಕ್ಕೆ ಹೋಗೋಣ ನಡಿ'' ಬುದ್ಧನೆಂದ.

ದೊಡ್ಡ ಸಭಾಂಗಣಕ್ಕೆ ಬಂದಾಗ ಬುದ್ಧನು ಹೇಳಿದನು-''ಆನಂದ, ಹೋಗಿ ವೈಶಾಲಿಯಲ್ಲಿರುವ ಭಿಕ್ಷುಗಳನ್ನೆಲ್ಲಾ ಕರೆದುಕೊಂಡು ಬಾ ಹೋಗು. ಪ್ರಾರ್ಥನಾ ಸಭಾಂಗಣದಲ್ಲಿ ಸೇರುವಂತೆ ಹೇಳು''.

ಅವರೆಲ್ಲರೂ ಬಂದು ಸೇರಿದಾಗ ಹೇಳಿದನು-''ನಾನು ನಿಮಗೆ ಕೊಟ್ಟರುವ ಸತ್ಯವನ್ನು ಚೆನ್ನಾಗಿ ವಿಮರ್ಶಿಸಿ ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಿರಿ. ಆ ಪವಿತ್ರ ಜೀವನವು ಬಹುಕಾಲ ಬದುಕಿ ಅನೇಕರಿಗೆ ಒಳಿತನ್ನುಂಟು ಮಾಡಲಿ''.

ಹುಟ್ಟಿರುವವರೆಲ್ಲಾ ಮುದುಕರಾಗಬೇಕು. ಸಾಯಲೇಬೇಕು. ನಿಮ್ಮ ಮುಕ್ತಿಗಾಗಿ ಪರಿಶ್ರಮಪಡಿ -ಇಂದಿನಿಂದ ಮೂರು ತಿಂಗಳ ನಂತರ ನಿಮ್ಮ ಈ ಗುರುವಾದ ನಾನು ಹೊರಟುಹೋಗುತ್ತೇನೆ. ನನ್ನ ಬದುಕು ಹಣ್ಣಾಗಿದೆ. ನನಗೆ ಕೊನೆಯಾಗುವ ಕಾಲ ಬಂದಿದೆ. ನಾನು ಈಗ ನಿಮ್ಮನ್ನು ಬಿಟ್ಟುಹೋಗುತ್ತಿದ್ದೇನೆ. ನೀವು ಪರಿಶ್ರಮಪಡುವವರಾಗಿರಿ. ಕನಿಕರವುಳ್ಳವರಾಗಿರಿ. ನಿಮ್ಮ ಹೃದಯದ ಮೇಲೆ ಒಂದು ಕಣ್ಣಿಟ್ಟಿರಿ. ಯಾರು ಸಾಹಸದಿಂದಲೂ, ಶಿಸ್ತು-ನಿಯಮಗಳನ್ನು ಪಾಲಿಸುವರೋ ಅವರಿಗೆ ಪುನಃ ಪುನಃ ಜನ್ಮವಿರುವುದಿಲ್ಲ. ದುಃಖಯಾತನೆಗಳಿರುವುದಿಲ್ಲ''.

ಬುದ್ಧನ ಶಿಷ್ಯರೆಲ್ಲರೂ ತಮ್ಮ ಗುರುವು ಇಷ್ಟು ಬೇಗ ತಮ್ಮನ್ನು ಬಿಟ್ಟುಹೋಗುತ್ತಾರೆಂದು ಕೇಳಿ ಬಹಳ ದುಃಖಪಟ್ಟರು. ಎಲ್ಲರೂ ಕೊನೆಯ ಬಾರಿ ಬುದ್ಧನಿಗೆ ಗೌರವ ಸೂಚಿಸಲು ಬಂದರು. ಆದರೆ ಒಬ್ಬ ಭಿಕ್ಷುವು ಮಾತ್ರ ಬರಲಿಲ್ಲ. ಅವನ ಹೆಸರು ಧಮ್ಮಾರಾಮ. ಅವನು ಯಾಕೆ ಬರಲಿಲ್ಲವೆಂಬುದು ಯಾರಿಗೂ ತಿಳಿಯಲಿಲ್ಲ. ಅವನಿಗೆ ಬುದ್ಧನಲ್ಲಿ ಶ್ರದ್ಧೆ- ಭಕ್ತಿಗಳಿಲ್ಲವೆಂದು ಅಂದುಕೊಂಡರು.

ಈ ವಿಚಾರವನ್ನು ಬುದ್ಧನಿಗೆ ತಿಳಿಸಲಾಯ್ತು. ಬುದ್ಧನು ಧಮ್ಮರಾಮನನ್ನು ಕರೆಯಿಸಿ ಅವನು ಯಾಕೆ ಬರಲಿಲ್ಲವೆಂಬುದನ್ನು ಇತರ ಭಿಕ್ಷುಗಳಿಗೆ ತಿಳಿಸಬೇಕಾಗಿತ್ತು. ನಂತರ ಅವನು ಹೇಳಿದನು. ಬುದ್ಧನು ಇನ್ನು ಮೂರು ತಿಂಗಳಲ್ಲಿ ಕಾಲವಾಗಲಿರುವುದರಿಂದ ತನ್ನ ಗುರುವಿಗೆ ಗೌರವ ತೋರಿಸಬೇಕಾದುದು ತನ್ನಕರ್ತವ್ಯ. ಅದೇನೆಂದರೆ ಗುರುವು ಸಾಯುವುದಕ್ಕೆ ಮುಂಚೆ ತಾನು ಅರ್ಹಂತ ಪದವಿಯನ್ನು ಪಡೆಯುವುದು ಇದಕ್ಕಾಗಿ ಅವನು ಬರಲಿಲ್ಲ.

''ಅದ್ಭುತ, ಅದ್ಭುತ''. ನನ್ನನ್ನು ಪ್ರೀತಿಸುವರೆಲ್ಲರೂ ಧಮ್ಮಾರಾಮನನ್ನು ನೋಡಿ ಕಲಿಯಿರಿ. ಯಾರೂ ನನ್ನ ಧರ್ಮಬೋಧೆಯನ್ನು ನಿಜ ಜೀವನದಲ್ಲಿ ಅಭ್ಯಾಸಮಾಡುತ್ತಾರೋ ಅವರೇ ನನಗೆ ಅತ್ಯಂತ ಪ್ರಿಯರಾದವರು ಎಂದು ಹೇಳಿ ಬುದ್ಧನು ಧಮ್ಮಾರಾಮನ ಗುಣಗಾನ ಮಾಡಿದನು.

ಬುದ್ಧನು ತನ್ನ ಕೊನೆಯ ಪಯಣವನ್ನು ಮರುದಿನ ಬೆಳಿಗ್ಗೆ ಮುಂದುವರಿಸಬೇಕೆಂದು ನಿಶ್ಚಯಿಸಿದನು. ಅವನ ಮುಂದಿನ ಮಜಲು ಪುಟ್ಟ ಹಳ್ಳಿಯಾದ ''ಪಾವಾ'' ಆಗಿತ್ತು.

# ೫೯. ಬುದ್ಧನ ಕೊನೆಯ ದಿನಗಳು

ಬುದ್ಧನ ಐವತ್ತೈದನೆಯ ವರ್ಷದನಂತರ ಅನೇಕ ಘಟನೆಗಳು ನಡೆದುಹೋದವು. ಇವುಗಳನ್ನೆಲ್ಲಾ ದಾಖಲಿಸಲಾಗಿದೆ. ಆದರೆ ಅವನ ಎಂಭತ್ತನೆಯ ವರ್ಷದಲ್ಲಿ ನಡೆದ ಘಟನೆಗಳನ್ನು ಅದೇ ವರ್ಷದಲ್ಲಿ ದಾಖಲಿಸಲಾಗಿದೆ. ಏಕೆಂದರೆ ಅವು ಮಹಾಪರಿನಿರ್ವಾಣ ಸೂತ್ರದಲ್ಲಿ ಹೇಳಲ್ಪಟ್ಟಿವೆ.

ಬುದ್ಧನು ಎಂಭತ್ತನೆಯ ವರ್ಷಕ್ಕೆ ಕಾಲಿಡುತ್ತಲೇ ಇನ್ನು ಈ ಪ್ರಪಂಚದಲ್ಲಿ ತನ್ನ ಕಾಲವು ಕೊನೆಯಾಗುತ್ತಿದೆಯೆಂಬುದನ್ನು ಅರಿತನು. ಅವನು ಇತರ ಮನುಷ್ಯರಂತೆಯೇ ಖಾಯಿಲೆ ಬಿದ್ದನು. ವೃದ್ಧಾಪ್ಯದ ನೋವುಗಳನ್ನು ಅನುಭವಿಸಿದನು. ಆದರೆ ಅವನು ಇತರರಿಗಿಂತ ಭಿನ್ನನಾಗಿದ್ದನು. ತನ್ನ ಮನಸ್ಸಿಗೆ ಚೆನ್ನಾದ ತರಬೇತಿಯನ್ನು ಕೊಟ್ಟವನಾದ್ದರಿಂದ ಅವನ ಮನಸ್ಸು ಬಹಳ ಶಕ್ತಿಯುತವಾಗಿ ರೂಪುಗೊಂಡಿತ್ತು. ಎಂತಲೇ ಅವನಿಗೆ ಶಾರೀರಿಕವಾದ ಭಾದೆಗಳನ್ನೆಲ್ಲಾ ತಡೆಯುವ ಶಕ್ತಿ ಇತ್ತು. ಅವನ ಮನಸ್ಸು ಯಾವಾಗಲೂ ವಜ್ರದಂತೆ ಹೊಳೆಯುತ್ತಿತ್ತು. ಶರೀರ ಮಾತ್ರ ಸೊರಗುತ್ತಿತ್ತು.

ತನ್ನ ಜೀವನದ ಕೊನೆಯ ವರ್ಷವನ್ನು - ಕೊನೆಯ ದಿನಗಳನ್ನು ಉತ್ತರ ಭಾರತದ ಒಂದು ಸಣ್ಣ ಹಳ್ಳಿಯಾದ ಕುಶಿನಾರದ ಸರಳ ಹಾಗೂ ಶಾಂತ ಪರಿಸರದಲ್ಲಿ ಕಳೆಯಲಿಚ್ಛಿಸಿದನು. ಅವನು ಬಹುದೊಡ್ಡ ಅಭಿವೃದ್ಧಿಗೊಂಡ ರಾಜಗೃಹ, ಶ್ರಾವಸ್ತಿ ಅಂತಹ ಪಟ್ಟಣಗಳನ್ನೂ, ಅವುಗಳ ಜನನಿಬಿಡತೆಯನ್ನೂ, ಧನಾಢ್ಯ ವರ್ತಕರನ್ನೂ, ರಾಜರುಗಳನ್ನು ಬಿಟ್ಟು ದೂರ ಹೋಗುವುದನ್ನು ಬಯಸಿದನು.

ಅವನು ಮೊದಲು ಹೊರಟಿದ್ದು ರಾಜಗೃಹದಿಂದ. ಅದು ಮಗಧ ದೇಶದ ರಾಜಧಾನಿಯಾಗಿತ್ತು. ಅವನು ತನ್ನೊಡನೆ ಪೂಜ್ಯನಾದ ಆನಂದನನ್ನೂ ಮತ್ತು ಅನೇಕ ಶಿಷ್ಯರನ್ನೂ ಕರೆದುಕೊಂಡು ಕಾಲ್ನಡಿಗೆಯಿಂದಲೇ ಹೊರಟನು. ಅವರು ಅನೇಕ ನಗರಗಳನ್ನೂ, ಹಳ್ಳಿಗಳನ್ನೂ ಹಾದುಹೋದರು. ಇಷ್ಟುಹೊತ್ತಿಗೆ ಮಾನ್ಯನಾದ ರಾಹುಲನೂ, ಯಶೋಧರೆಯೂ ತೀರಿಕೊಂಡಿದ್ದರು. ಅಷ್ಟೇ ಅಲ್ಲದೆ ಬುದ್ಧನ ಮುಖ್ಯ ಶಿಷ್ಯರಾದ ಮಾನ್ಯ ಮೊಗ್ಗಲಾನನೂ, ಮಾನ್ಯ ಸಾರಿಪುತ್ರನೂ ತೀರಿಕೊಂಡಿದ್ದರು.

ಹೀಗೆ ಪ್ರಯಾಣ ಬೆಳೆಸುತ್ತಿರುವಾಗ ತನ್ನ ಸಂಘದ ಭಿಕ್ಷುಗಳ ಯೋಗಕ್ಷೇಮದ ಯೋಚನೆ ಬಂದಿತು. ತನ್ನ ಅನೇಕ ಭಾಷಣಗಳಲ್ಲಿ ಬುದ್ಧನು ತನ್ನ ಅಂತ್ಯದ ನಂತರ ಭಿಕ್ಷುಗಳು ಸಂಘವನ್ನು ಹೇಗೆ ಮುನ್ನಡೆಸಿಕೊಂಡು ಹೋಗಬೇಕೆಂಬುವುದನ್ನು ತಿಳಿಸಿದ್ದನು. ಆತನು ಭಿಕ್ಷುಗಳು ತಾನು ಅವರಿಗೆ ಬೋಧಿಸಿದ್ದ ಸತ್ಯಗಳನ್ನೆಲ್ಲಾ ಹೇಗೆ ಆಚರಣೆಗೆ ತರಬೇಕೆಂಬುದನ್ನು ಮತ್ತೊಮ್ಮೆ ಜ್ಞಾಪಿಸಿದನು.

ಒಂದು ಉಪದೇಶದಲ್ಲಿ ಜ್ಞಾನೋದಯವನ್ನು ಪಡೆಯಲು ಬೇಕಾದ ಮುವ್ವತ್ತೇಳು ಅಂಶಗಳು ಹೇಳಲ್ಪಟ್ಟಿದ್ದುವು. ಇನ್ನೊಂದರಲ್ಲಿ ಆ ಉಪದೇಶವು ಬುದ್ಧನದೇ ಹೌದೋ ಅಲ್ಲವೋ ಎಂಬುದನ್ನು ಸಂಘದ ಶಿಸ್ತಿನ ನಿಯಮಗಳಾದ ವಿನಯದೊಂದಿಗೆ ಹೋಲಿಸಿ ಮನದಟ್ಟು ಮಾಡಿಕೊಳ್ಳಬೇಕೆಂದೂ, ಸೂತ್ರಗಳ ಅಂದರೆ ಬುದ್ಧನ ಉಪದೇಶಗಳ ಜೊತೆಯಲ್ಲಿಯೂ ಹೋಲಿಸಿ ನೋಡಬೇಕೆಂದು ತಿಳಿಸಿದ್ದಿತು.

ಒಂದು ಉಪದೇಶವನ್ನಂತೂ ಬುದ್ಧನು ಪ್ರಯಾಣ ಮಾಡುತ್ತಿರುವಾಗ ಅಲ್ಲಲ್ಲಿ ನಿಂತು, ಹೇಳುತ್ತಿದ್ದನು. ಅದೇನೆಂದರೆ ದಿವ್ಯವಾದ ಅಷ್ಟಾಂಗ ಪಥದ ಮೂರು ಮುಖ್ಯ ವಿಭಾಗಗಳು : ಅವು - ಶೀಲ, ಸಮಾಧಿ ಮತ್ತು ಪ್ರಜ್ಞೆ. ಇವು ಮೂರೂ ಶಿಷ್ಯರುಗಳು ಯಾತನೆಗಳನ್ನು ಅನುಭವಿಸದಂತೆ ಸಹಾಯ ಮಾಡುತ್ತವೆ.

# ೬೦. ಬುದ್ಧನ ಕೊನೆಯ ಭೋಜನ

ಬುದ್ಧ ಮತ್ತು ಶಿಷ್ಯರು ಪಾವಾ ಹಳ್ಳಿಯನ್ನು ತಲುಪಿದಾಗ ಆ ಹಳ್ಳಿಯ ಅಕ್ಕಸಾಲೆಯ ಮಗನು ಭೋಜನಕ್ಕೆ ಕರೆದನು. ಅವನ ಹೆಸರು ಚುಂದ. ಅವನು ಮಾಡಿಸಿದ್ದ ಅಡುಗೆ ''ಸೂಕರ ಮಾರ್ದವ'' ಅಥವಾ ಹಂದಿಯ ಭೋಜನ. ಕೆಲವು ವಿದ್ವಾಂಸರು ಅದು ಹಂದಿಯ ಭೋಜನವಲ್ಲ. ಅಣಬೆಯನ್ನು ಉಪಯೋಗಿಸಿ ಮಾಡಿದ ಮೃಷ್ಟಾನ್ನವೆಂದರೆ ಮತ್ತೆ ಕೆಲವರು ಅದು ಕೊಬ್ಬಿದ ಹಂದಿಯ ಮಾಂಸವೇ ಎನ್ನುತ್ತಾರೆ.

ಬುದ್ಧನು ಚುಂದನಿಗೆ ಆ ಸೂಕರ ಮಾರ್ದವವನ್ನು ತನ್ನೊಬ್ಬನಿಗೇ ಬಡಿಸಬೇಕೆಂತಲೂ, ಅದನ್ನುಳಿದ ಮಾಡಿದ ಅಡುಗೆಯನ್ನು ತನ್ನ ಶಿಷ್ಯರುಗಳಿಗೆ ಬಡಿಸಬೇಕೆಂತಲೂ ಹೇಳಿದನು. ನಂತರ ಬುದ್ಧನು ಕುಂದನಿಗೆ ಮತ್ತೆ ಹೇಳಿದನು-ಚುಂದಾ, ನನಗೆ ಬಡಿಸಿದ ನಂತರ ಸೂಕರ ಮಾರ್ದವವೇನಾದರೂ ಉಳಿದರೆ ಅದನ್ನು ತೆಗೆದುಕೊಂಡು ಹೋಗಿ ಮಣ್ಣಿನಲ್ಲಿ ಗುಣಿಯನ್ನು ತೆಗೆದು ಅದರಲ್ಲಿ ಹೂಳಿಬಿಡು. ಏಕೆಂದರೆ ನನ್ನ ಹೊರತೂ ಮತ್ಯಾರಿಗೂ ಈ ಪ್ರಪಂಚದಲ್ಲಿ ಅರಗಿಸಿಕೊಳ್ಳಲು ಸಾಧ್ಯವಿಲ್ಲ.

''ಹಾಗೇ ಆಗಲಿ'' ಎಂದು ಚುಂದನು ಉಳಿದ ಮಾಂಸವನ್ನು ಭೂಮಿಯಲ್ಲಿ ಹೂಳಿ ಬಂದು ಬುದ್ಧನಿಗೆ ನಮಸ್ಕರಿಸಿ ಅವನ ಬಳಿ ಕುಳಿತನು. ಬುದ್ಧನು ಅವನಿಗೆ ಧರ್ಮವನ್ನು ಉಪದೇಶಿಸಿದನು. ಬುದ್ಧನು ಪಯಣದಿಂದ ಬಳಲಿದ್ದ ತನಗೆ ಚುಂದನು ತಯಾರಿಸಿಕೊಟ್ಟ ಭೋಜನದಿಂದ ಶಕ್ತಿ ಬಂದಿತೆಂದೂ, ಮನಸ್ಸು ಉಲ್ಲಾಸಗೊಂಡಿತೆಂದೂ ಹೇಳಿ ಅವನನ್ನು ಹೊಗಳಿದನು. ಆದರೆ ಬಹಳ ಬೇಗ ಅವನಿಗೆ ಮೊದಲಿದ್ದ ರಕ್ತ ಭೇದಿ ಆರಂಭವಾಗಿ ವಿಪರೀತ ಯಾತನೆಯುಂಟಾಯಿತು. ಧೃಡಮನಸ್ಸಿನಿಂದ ಆ ನೋವನ್ನು ತಡೆದುಕೊಂಡನು. ಬಹಳನಾಗಿ ದುರ್ಬಲನಾಗಿದ್ದಾಗ್ಯೂ ಬುದ್ಧನು ಕುಶಿನಾರಕ್ಕೆ ಪ್ರಯಾಣವನ್ನು ಮುಂದುವರಿಸಲು ನಿಶ್ಚಯಿಸಿದನು. ಕುಶಿನಾರಾ ಅಲ್ಲಿಂದ ಆರು ಮೈಲಿಗಳಿಗಿಂತ ಸ್ವಲ್ಪ ಹೆಚ್ಚಿನ ದೂರದಲ್ಲಿತ್ತು. ಕಷ್ಟಪಟ್ಟು ಕುಶಿನಾರದಿಂದ ಹೊರಗಡೆ ಇದ್ದ ಸಾಲವೃಕ್ಷಗಳ ತೋಪನ್ನು ಸೇರಿದನು.

ಬುದ್ಧನು ಕಾಕುಸ್ಥ ನದಿಯಲ್ಲಿ ತನ್ನ ಕೊನೆಯ ಸ್ನಾನವನ್ನು ಮಾಡಿದನು. ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡ ನಂತರ ಹೇಳಿದನು- ''ಚುಂದನು ನನಗೆ ಕೊಟ್ಟ ಆಹಾರದಿಂದ ನನ್ನ ಕಾಯಿಲೆ ಹೆಚ್ಚಿತೆಂದು ಕೆಲವರು ಚುಂದನನ್ನು ದೂಷಿಸಿ ಅವನು ದುಃಖಿಸುವಂತೆ ಮಾಡಬಹುದು. ಆದರೆ ಆನಂದ, ಹಾಗೇನಾದರೂ ಆಗುವುದಾದರೆ ನೀನು ಅವರಿಗೆ ಹೀಗೆ ಹೇಳಬೇಕು. ಏನೆಂದರೆ ಬುದ್ಧನಿಗೆ ಆ ಆಹಾರದಿಂದ ಲಾಭವೇ ಆಯಿತೆಂದು ನಾನು ಬುದ್ಧನ ಬಾಯಿಂದಲೇ ಕೇಳಿದ್ದೇನೆ. ಬುದ್ಧನಿಗೆ ಕೊಟ್ಟ ಎರಡು ಆಹಾರಗಳಿಂದ ಕೊಟ್ಟವರಿಗೆ ಲಾಭವಾಯಿತೆಂಬುದನ್ನು ನೀನು ಹೇಳು. ಒಂದು ಬುದ್ಧನಿಗೆ ಜ್ಞಾನೋದಯವಾಗಲಿಕ್ಕೆ ಮೊದಲು ಕೊಟ್ಟ ಆಹಾರ. ಎರಡನೆಯದು ಬುದ್ಧನು ನಿರ್ವಾಣ ಹೊಂದುವ ಮೊದಲು ಕೊಟ್ಟದ್ದು. ಇದೇ ಬುದ್ಧನ ಕೊನೆಯ ಜನ್ಮವೆಂಬುದನ್ನು ತಿಳಿ''.

ನಂತರ ಹೇಳಿದನು- ಆನಂದ ನನಗೆ ಮಲಗಲಿಕ್ಕೆ ಅಣಿ ಮಾಡಿಕೊಡು ಎರಡು ಸಾಲವೃಕ್ಷಗಳ ಮಧ್ಯೆ ಮತ್ತು ತಲೆಯು ಉತ್ತರದ ಕಡೆಯಿರುವಂತೆ ಹಾಸು. ನನಗೆ ತುಂಬಾ ಆಯಾಸವಾಗಿದೆ. ನಾನು ಮಲಗಬೇಕು.

ಈ ಸಮಯದಲ್ಲಿ ದೇವತೆಗಳ ಪ್ರಭಾವದಿಂದ ಆಗ ಸಾಲವೃಕ್ಷದಲ್ಲಿ ಹೂಗಳು ಬಿಡುವ ಕಾಲವಲ್ಲದಿದ್ದರೂ ಸಹಾ, ತುಂಬಾ ಹೂಗಳು ಅರಳಿದ್ದುವು. ಅವು ಬುದ್ಧನನ್ನು ಗೌರವಿಸುತ್ತಿವೆಯೋ ಎಂಬಂತೆ ತಾವು ನೆಲದ ಮೇಲೂ ಬುದ್ಧನ ಮೇಲೂ ಮಳೆಗರೆಯುವಂತೆ ಉದುರತೊಡಗಿದುವು. ಆಗ ಬುದ್ಧನು ಹೇಳಿದನು- ಆನಂದಾ, ನೋಡು ಈ ಎರಡು ದೊಡ್ಡ ಮರಗಳು ನನ್ನ ಮೇಲೆ ಹೇಗೆ ಹೂವನ್ನು ಉದುರಿಸುತ್ತಿವೆ. ಅವು ನನ್ನನ್ನು ಗೌರವಿಸುತ್ತಿರುವಂತಿದೆ. ಆದರೆ ನನಗೆ ಗೌರವವುಂಟಾಗುವುದು ಹೇಗೆಂದರೆ ನನ್ನ ಭಿಕ್ಷುವಾಗಲೀ, ಭಿಕ್ಷುಣಿಯಾಗಲೀ ಅಥವಾ ಗೃಹಸ್ಥ ಹೆಂಗಸಾಗಲೀ, ಗಂಡಸಾಗಲೀ ಈ ಶಿಷ್ಯರು ನನ್ನ ಉಪದೇಶದಂತೆ ನಡೆದರೆ ಅದೇ ನನಗೆ ದೊರಕುವ ದೊಡ್ಡ ಗೌರವ.

ಈ ದೇಶದಲ್ಲಿ ನನ್ನಲ್ಲಿ ನಂಬಿಕೆಯಿಟ್ಟ ಶಿಷ್ಯರು ನೋಡಬೇಕಾದ ನಾಲ್ಕು ಸ್ಥಳಗಳಿವೆ. ಇವುಗಳಿಂದ ಸ್ಫೂರ್ತಿ ದೊರಕುತ್ತದೆ. ಮತ್ತು ಈ ಪ್ರದೇಶಗಳು ಬುದ್ಧನ ಸಂಬಂಧದಿಂದಾಗಿ ಪವಿತ್ರವಾಗಿವೆ. ಅವು ಯಾವುವೆಂದರೆ -

೧. ಬುದ್ಧನ ಜನ್ಮ ಸ್ಥಳ (ಲುಂಬಿನಿ)

೨. ಬುದ್ಧನಿಗೆ ಜ್ಞಾನೋದಯವಾದ ಸ್ಥಳ (ಬುದ್ಧಗಯಾ)

೩. ಬುದ್ಧನು ಮೊದಲ ಬಾರಿಗೆ ಉಪದೇಶವನ್ನು ನೀಡಿ ಯಾವುದಕ್ಕೂ ಸಾಟಿಯಿಲ್ಲದ ಸತ್ಯ ಚಕ್ರವನ್ನು ಚಾಲನೆ ಮಾಡಿದ ಸ್ಥಳ (ಸಾರನಾಥ)

೪. ಬುದ್ಧನು ಮಹಾಪರಿನಿರ್ವಾಣವನ್ನು ಹೊಂದಿದ ಸ್ಥಳ (ಕುಸಿನಾರ)

ಸ್ವಲ್ಪ ಹೊತ್ತಿನ ನಂತರ ಆನಂದನು ಎಲ್ಲಿಯೂ ಕಾಣಿಸಲಿಲ್ಲ. ಅವನ ಗುಡಿಸಿಲಿನೊಳಗೆ ಹೋಗಿ ಬಾಗಿಲಿಗೆ ಒರಗಿ ನಿಂತು ಅಳುತ್ತಿದ್ದನು. ''ಅಯ್ಯೋ, ನಾನಿನ್ನೂ ಕಲಿಯುವುದರಲ್ಲೇ ಇದ್ದೇನೆ. ನಾನು ಪರಿಪೂರ್ಣನಾಗಲು ಇನ್ನೂ ಕೆಲಸ ಮಾಡಬೇಕಾಗಿದೆ. ದಯಾಳುವಾದ ನನ್ನ ಸ್ವಾಮಿ ಇನ್ನೇನು ಹೊರಟುಹೋಗುವುದರಲ್ಲಿದ್ದಾನೆ'' ಎಂದು ಹೇಳಿಕೊಳ್ಳುತ್ತಿದ್ದನು.

ಬುದ್ಧನು ಆನಂದನನ್ನು ಕರೆಯಿಸಿ ಹೇಳಿದನು. ''ಇನ್ನು ಸಾಕುಮಾಡು ಆನಂದ. ದುಃಖಪಡಬೇಡ. ಅಳಬೇಡ, ನಾನು ಆಗಲೇ ಬಾರಿಬಾರಿಗೂ ಹೇಳಿಲ್ಲವೆ ? ನಾವು ನಮಗೆ ಬೇಕಾದವರಿಗೆಲ್ಲಾ ವಿದಾಯ ಹೇಳಿ ಮರಣ ಹೊಂದಲೇಬೇಕಾಗುತ್ತದೆ. ಹುಟ್ಟಿದ ಪ್ರತಿಯೊಬ್ಬನೂ ಸಾಯಲೇಬೇಕಲ್ಲವೆ. ಸಾಯುವುದೇ ಬೇಡವೆನ್ನಲು ಸಾಧ್ಯವೆ?

''ಆನಂದ, ನೀನು ನನ್ನನ್ನು ಪ್ರೀತಿಪೂರ್ವಕವಾಗಿ ನೋಡಿಕೊಂಡು ನನ್ನ ಸೇವೆ ಮಾಡಿದ್ದೀಯೆ. ನೀನು ಕಾಯಾ, ವಾಚಾ, ಮನಸಾ ದಯಾಳುವಾಗಿ, ಸಹಾಯಕನಾಗಿ, ಸಂತೋಷಚಿತ್ತನಾಗಿ, ಪ್ರಾಮಾಣಿಕವಾಗಿ ನನ್ನನ್ನು ಸೇವಿಸಿರುವೆ. ನೀನು ಒಳ್ಳೆಯ ಪದವಿಯನ್ನು ಗಳಿಸಿರುವೆ ಇವುಗಳನ್ನು ಹೀಗೆಯೇ ಉಳಿಸಿಕೊಂಡರೆ ಪ್ರಪಂಚದ ನೋವು ಮತ್ತು ದುಃಖಗಳ ಬಂಧನವು ನಿನಗಿರದು. ನೀನು ಅತಿಶೀಘ್ರದಲ್ಲಿಯೇ ಅರ್ಹಂತನಾಗುವೆ''.

''ಈಗ ನೀನು ಹೋಗಬಹುದು ಆನಂದ. ನೀನು ಕುಶಿನಾರಕ್ಕೆ ಹೋಗಿ, ಇಂದಿನ ರಾತ್ರಿ ಕೊನೆಯ ಝಾವದಲ್ಲಿ ಬುದ್ಧನು ಪರಿನಿರ್ವಾಣವನ್ನು ಹೊಂದಲಿದ್ದಾನೆ. ಆದ್ದರಿಂದ ಅವನು ಹಾಗೆ ಹೋಗುವುದಕ್ಕೆ ಮೊದಲು ಎಲ್ಲರೂ ಬಂದು ಅವನ ದರ್ಶನ ಮಾಡಿ ಎಂದು ಹೇಳಿ ಬಾ''.

ಆಗ ಆನಂದನು ತನ್ನ ಜೊತೆಯಲ್ಲಿ ಇನ್ನೊಬ್ಬ ಭಿಕ್ಷುವನ್ನು ಕರೆದುಕೊಂಡು ಬುದ್ಧನು ಹೇಳಿದಂತೆ ಜನಗಳಿಗೆ ತಿಳಿಸಿಬರಲು ಹೊರಟನು. ಇದನ್ನು ಕೇಳಿ ಜನಗಳೆಲ್ಲರೂ ದುಃಖಿತರಾದರು. ಕುಶಿನಾರದ ಎಲ್ಲ ಜನಗಳೂ, ಹೆಂಗಸರು, ಗಂಡಸರು, ಮಕ್ಕಳಾದಿಯಾಗಿ ಬುದ್ಧನ ದರ್ಶನ ಪಡೆಯಲು, ಅವನಿಗೆ ವಿದಾಯ ಹೇಳಲು ಸಾಲವೃಕ್ಷಗಳ ಬಳಿಗೆ ಬಂದರು. ಪ್ರತಿಯೊಂದು ಕುಟುಂಬದವರೂ ಅವನಿಗೆ ತಲೆಬಾಗಿ ವಿದಾಯ ಹೇಳಿದರು.

# ೭೧. ಸುಭದ್ದ

ಸುಬದ್ಧನೆಂಬ ಪರಿವ್ರಾಜಕನೊಬ್ಬನು ಆ ಸಮಯದಲ್ಲಿ ಕುಶಿನಾರದ ಸಮೀಪದಲ್ಲಿ ವಾಸಿಸುತ್ತಿದ್ದನು. ಅವನು ಬುದ್ಧನ ಪರಿನಿರ್ವಾಣದ ಸುದ್ದಿಯನ್ನು ಕೇಳಿ, ತಾನು ಯಾವುದೋ ಒಂದು ವಿಷಯವಾಗಿ ಬುದ್ಧನು ಪರಿನಿರ್ವಾಣ ಹೊಂದುವುದಕ್ಕಿಂತ ಮುಂಚೆ ಕೇಳಿ ತಿಳಿದುಕೊಳ್ಳಬೇಕೆಂದು ನಿರ್ಣಯಿಸಿದನು. ಬುದ್ಧನು ಅವನ ಪ್ರಶ್ನೆಗೆ ಉತ್ತರಿಸಿ, ಅವನ ಸಂದೇಹಗಳನ್ನೆಲ್ಲಾ ನಿವಾರಣೆ ಮಾಡುವನೆಂಬ ನಂಬಿಕೆ ಅವನಿಗಿತ್ತು.

ಅವನು ಸಾಲವನಕ್ಕೆ ಬಂದು ಆನಂದನನ್ನು ಕುರಿತು, ತಾನು ಬುದ್ಧನನ್ನು ಕಾಣಬಹುದೇ ? ಎಂದು ಕೇಳಿದನು. ಆನಂದನು 'ಬೇಡ ಬುದ್ಧನು ಬಹಳ ಬಳಲಿದ್ದಾನೆ' ಎಂದನು.

ಸುಭದ್ದನು ಎರಡು ಮೂರು ಸಲ ಆನಂದನನ್ನು ಹೀಗೆ ಕೇಳಲು ಆನಂದನು ಒಪ್ಪಲಿಲ್ಲ.

ಬುದ್ಧನಿಗೆ ಇವರ ಮಾತು ಅಲ್ಪಸ್ವಲ್ಪ ಕಿವಿಯ ಮೇಲೆ ಬಿದ್ದಿತು. ಅವನು ಆನಂದನನ್ನು ಕರೆದು ಹೇಳಿದನು-''ಆನಂದ, ಬಾ ಇಲ್ಲಿ ಆ ಸುಭದ್ದನು ನನ್ನ ದರ್ಶನಕ್ಕೆ ಬರುವುದನ್ನು ತಡೆಯಬೇಡ. ಅವನು ಬಂದು ನೋಡಲಿ. ನನಗೆ ಅದರಿಂದ ಯಾವ ತೊಂದರೆಯೂ ಆಗುವುದಿಲ್ಲ. ಅವನು ನನ್ನಿಂದ ಜ್ಞಾನವನ್ನು ಅಪೇಕ್ಷಿಸಿ ಬಂದಿದ್ದಾನೆ. ನನಗೆ ತೊಂದರೆ ಕೊಡಲು ಬಂದಿಲ್ಲ. ನಾನು ಅವನ ಪ್ರಶ್ನೆಗಳಿಗೆ ಕೊಡುವ ಉತ್ತರಗಳನ್ನು ಅವನು ಶೀಘ್ರವಾಗಿ ತಿಳಿದುಕೊಳ್ಳುತ್ತಾನೆ.''

ಸುಭದ್ದನಿಗೆ ಅಪ್ಪಣೆ ಸಿಕ್ಕಿತು. ಅವನು ಬುದ್ಧನ ಬಳಿ ಹೋಗಿ ಅವನಿಗೆ ನಮಸ್ಕರಿಸಿ ಕೇಳಿದನು-''ಭಗವಾನರೇ, ಬೇಕಾದಷ್ಟು ಜನ ಬೇರೆ ಬೇರೆ ಧರ್ಮದ ಗುರುಗಳಿದ್ದಾರೆ. ಅವರೆಲ್ಲಾ ಹೇಳುವುದಕ್ಕಿಂತ ಭಿನ್ನವಾಗಿ ನೀವು ಹೇಳುತ್ತೀರಿ. ಅವರೆಲ್ಲರೂ ಹೇಳುವಂತೆ ಅವರೆಲ್ಲರೂ ಸತ್ಯವನ್ನು ಕಂಡುಕೊಂಡಿರುವರೆ ?''

''ಸಾಕು ಸುಭದ್ದ, ಅವರ ಉಪದೇಶಗಳ ಬಗ್ಗೆ ತಲೆ ಕೆಡಿಸಿಕೊಳ್ಳಬೇಡ. ನಾನು ಹೇಳುವುದನ್ನು ಮನಸ್ಸಿಟ್ಟು ಕೇಳು. ನಾನು ನಿನಗೆ ಸತ್ಯವೇನೆಂಬುದನ್ನು ತಿಳಿಸಿಕೊಡುತ್ತೇನೆ'' ಬುದ್ಧನೆಂದನು.

''ಯಾವ ಉಪದೇಶದ ಸೂತ್ರಗಳಲ್ಲಿ ಅಷ್ಟಾಂಗ ಪಥವಿಲ್ಲವೋ ಅದು ಸೋತಾಪನ್ನ, ಸಕದಾಗಾಮಿ, ಅನಾಗಾಮಿ ಅಥವಾ ಅರ್ಹಂತ ಪದವಿಗಳೂ ಇಲ್ಲ. ಆದರೆ ಯಾರ ಉಪದೇಶದಲ್ಲಿ ಅಷ್ಟಾಂಗ ಪಥವಿದೆಯೋ ಅದರಲ್ಲಿ ಸೋತಾಪನ್ನ, ಸಕದಾಗಾಮಿ, ಅನಾಗಾಮಿ ಅಥವಾ ಅರ್ಹಂತ ಪದವಿಗಳೂ ಇವೆ. ನನ್ನ ಉಪದೇಶಗಳಲ್ಲಿ ಈ ಅಷ್ಟಾಂಗ ಮಾರ್ಗವಿರುವುದರಿಂದ ಇದರಲ್ಲಿ ಮಾತ್ರ ಸೋತಾಪನ್ನ, ಸಕದಾಗಾಮಿ, ಅನಾಗಾಮಿ ಹಾಗೂ ಅರ್ಹಂತತತ್ವಗಳು ಇರುತ್ತವೆ. ಇತರ ಧರ್ಮಬೋಧಕರಲ್ಲಿ ಇದು ದೊರಕುವುದಿಲ್ಲ. ನನ್ನ ಶಿಷ್ಯರು ನಾನು ಹೇಳಿದ ಸರಿಯಾದ ಮಾರ್ಗವನ್ನವಲಂಬಿಸಿ ನಾನು ಹೇಳಿದ ನಿಯಮಗಳನ್ನು ನಿಷ್ಠೆಯಿಂದ ಪಾಲಿಸುವರಾದರೆ ಮಾತ್ರ ಪ್ರಪಂಚದಲ್ಲಿ ಅರ್ಹಂತರು ಇರುತ್ತಾರೆ. ಇಲ್ಲದಿದ್ದಲ್ಲಿ ಪ್ರಪಂಚದಲ್ಲಿ ಅರ್ಹಂತರಾದವರು ಇರುವುದೇ ಇಲ್ಲ.

ಆಗ ಸುಭದ್ದನು ತನ್ನನ್ನೂ ಅವರ ಧರ್ಮಕ್ಕೆ ಸೇರಿಸಿಕೊಳ್ಳುವಂತೆ ಕೇಳಿಕೊಂಡನು. ಬುದ್ಧನು ಅವನನ್ನು ಸೇರಿಸಿಕೊಂಡನು. ಹೀಗೆ ಸುಭದ್ದನು ಪರಿವರ್ತಿತನಾದ ಕೊನೆಯ ಶಿಷ್ಯನಾದನು. ನಲವತ್ತೈದು ವರ್ಷಗಳ ಹಿಂದೆ ಬನಾರಸ್ಸಿನ ಜಿಂಕೆಗಳ ಉದ್ಯಾನದಲ್ಲಿ ಕೊಂಡಣ್ಣನೆಂಬುವನು ಪರಿವರ್ತಿತನಾದ ಮೊಟ್ಟಮೊದಲನೆಯ ಶಿಷ್ಯನಾಗಿದ್ದನು.

ಬುದ್ಧನ ಉಪದೇಶವನ್ನು ಪ್ರಾಮಾಣಿಕವಾಗಿ, ಪರಿಶ್ರಮದಿಂದ ಸಾಧಿಸಿದ್ದರಿಂದ ಸುಭದ್ದನು ಬಹುಬೇಗ ಅರ್ಹಂತನಾದನು.

# ೬೨. ಬುದ್ಧನ ಕೊನೆಯ ಉಪದೇಶದ ವಾಕ್ಯಗಳು

ಸುಭದ್ದನನ್ನು ಶಿಷ್ಯನನ್ನಾಗಿ ಪರಿವರ್ತಿಸಿ ಸ್ವೀಕರಿಸಿದ ನಂತರ ಬುದ್ಧನು ಮತ್ತೆ ಆನಂದನಿಗೆ ಹೇಳಿದನು-''ಇಲ್ಲಿ ಕೇಳು ಆನಂದ ಕೆಲವರು ಮಹಾನ್ ಗುರುವಾದ ಬುದ್ಧನಿಲ್ಲದಿದ್ದರೆ ಮುಂದೆ ನಮಗೆ ಮಾರ್ಗದರ್ಶನ ಮಾಡುವ ಗುರುವೇ ಇಲ್ಲ ಎಂದು ಹೇಳಿಕೊಳ್ಳಬಹುದು. ಆದರೆ ಹಾಗಲ್ಲ. ನೀವುಗಳು ಈ ರೀತಿ ಯೋಚಿಸಲೇಬಾರದು. ನಾನು ನಿಮಗೆ ಬೋಧಿಸಿರುವ ಸೂತ್ರಗಳೂ, (ಧಮ್ಮ) ನಿಯಮಗಳೂ (ವಿನಯ) ನನ್ನ ನಂತರ, ನಿಮ್ಮ ಗುರುಗಳಾಗಿರುತ್ತವೆ. ''

ನಂತರ ಬುದ್ಧನು ಇತರ ಭಿಕ್ಷುಗಳನ್ನುದ್ದೇಶಿಸಿ ಹೇಳಿದನು- ''ನಿಮ್ಮಲ್ಲಿ ಯಾರಿಗಾದರೂ ಬುದ್ಧನ ಕುರಿತಾದಲೀ ಅಥವಾ ಅವನ ಉಪದೇಶ ಮತ್ತು ಸಂಘದ ಬಗ್ಗೆಯಾಗಲೀ ಅನುಮಾನಗಳಿದ್ದರೆ ಈಗಲೇ ಪರಿಹರಿಸಿಕೊಳ್ಳಿ. ಯಾಕೆಂದರೆ ನಾನು ಹೋದ ನಂತರ, ಅಯ್ಯೋ ನಾವು ಬುದ್ಧನನ್ನು ಕೇಳಲಿಲ್ಲವಲ್ಲಾ ಎಂದು ಶೋಕಪಡುವುದು ಬೇಡ''.

ಆದರೆ ಯಾವ ಭಿಕ್ಷುವೂ ಏನನ್ನೂ ಕೇಳಲಿಲ್ಲ. ಯಾರಿಗೂ ಏನೂ ಕೇಳಬೇಕಾಗಿಯೂ ಇರಲಿಲ್ಲ. ಎಲ್ಲರೂ ಮೌನವಾಗಿ ಕುಳಿತಿದ್ದರು. ಬುದ್ಧನು ಎರಡು, ಮೂರು ಸಲ ಹೇಳಿದ್ದಾಗ್ಯೂ ಎಲ್ಲರೂ ಮೌನವಾಗೇ ಇದ್ದರು.

ಆಗ ಬುದ್ಧನು ಹೇಳಿದನು- ''ನಿಮ್ಮ ಗುರುವಿನ ಮೇಲಿರುವ ಗೌರವದಿಂದ ನೀವುಗಳು ಏನೂ ಪ್ರಶ್ನೆ ಮಾಡದಿರಬಹುದು. ಶಿಷ್ಯರೇ, ಒಬ್ಬ ಮಿತ್ರನು ಇನ್ನೊಬ್ಬ ಮಿತ್ರನಿಗೆ ಹೇಳಿ ಅವನ ಮೂಲಕ ಪ್ರಶ್ನೆ ಕೇಳಿ'' ಆಗಲೂ ಎಲ್ಲರೂ ಸುಮ್ಮನಿದ್ದರು.

ಆಗ ಆನಂದನು ಮಾತನಾಡಿದನು-''ಪ್ರಭುವೇ, ಇದು ತುಂಬಾ ಆಶ್ಚರ್ಯಕರವಾಗಿದೆ. ಇಂತಹ ದೊಡ್ಡ ಸಂಘದಲ್ಲಿ ಒಬ್ಬ ಶಿಷ್ಯನಿಗಾದರೂ ಬುದ್ಧನಾಗಲೀ, ಅವನ ಉಪದೇಶದಲ್ಲಾಗಲೀ, ಸಂಘದ ವಿಚಾರವಾಗಿ ಆಗಲೀ ಈ ದಾರಿಯಲ್ಲಾಗಲೀ, ತರಬೇತಿಯಲ್ಲಾಗಲೀ ಯಾವುದೇ ಸಂದೇಹವಿಲ್ಲವೆಂದರೆ ನಾನು ನಂಬುತ್ತೇನೆ''.

''ನಿನಗೆ ಇದೊಂದು ನಂಬಿಕೆಯಾಗಿರಬಹುದು ಆನಂದಾ, ಇಲ್ಲಿ ಯಾರಿಗೂ ಏನೂ ಸಂದೇಹವಿಲ್ಲವೆಂಬುದನ್ನೂ ನಾನು ಬಲ್ಲೆ. ಇಲ್ಲಿರುವ ಐದುನೂರು ಭಿಕ್ಷುಗಳಲ್ಲಿ ಸೋತಾಪನ್ನನಾಗಿ ಬಹಳ ಹಿಂದುಳಿದಿದ್ದಾನೋ ಅಂಥವನು ಕೂಡಾ ಈ ದೃಢಶ್ರದ್ಧೆಯ ಹಂತದಿಂದ ಕೆಳಗಿಳಿಯಲಾರನು. ಖಂಡಿತವಾಗಿಯೂ ಅವನಿಗೆ ಜ್ಞಾನೋದಯವಾಗುತ್ತದೆ''.

ನಂತರ ಬುದ್ಧನು ಎಲ್ಲ ಭಿಕ್ಷುಗಳಿಗೂ ಉಪದೇಶ ಮಾಡಿದನು. ಅವನ ಕೊಟ್ಟ ಕೊನೆಯ ವಾಕ್ಯಗಳೆಂದರೆ

''ಎಲೈ ಭಿಕ್ಷುಗಳೇ, ಇಲ್ಲಿ ಕೇಳಿರಿ. ಇದೇ ನನ್ನ ಕೊನೆಯ ಉಪದೇಶ : ಪ್ರಪಂಚದಲ್ಲಿರುವ ಎಲ್ಲಾ ವಸ್ತುಗಳೂ ಬದಲಾವಣೆ ಹೊಂದುತ್ತಿರುತ್ತವೆ. ಅವು ಎಂದಿಗೂ ಶಾಶ್ವತವಲ್ಲ. ನಿಮ್ಮ

ಮುಕ್ತಿಯನ್ನು ಪಡೆಯಲು ನೀವು ಬಹಳ ಅಪ್ರಮಾದದಿಂದ ಶ್ರಮಪಡಬೇಕು''.

ನಂತರ ಬುದ್ಧನು ಹಂತಹಂತವಾಗಿ ಧ್ಯಾನದ ಅಗಾಧವಾದ ಆಳಕ್ಕೆ ಹೋಗತೊಡಗಿದನು. ಧ್ಯಾನದಿಂದ ಹೊರಗೆ ಬಂದನು. ಮತ್ತೆ ಸ್ವಲ್ಪ ಧ್ಯಾನದಲ್ಲಿದ್ದು ನಂತರ ಪರಿನಿರ್ವಾಣಕ್ಕೆ ಹೊರಟುಹೋದನು. ಮತ್ತೆ ಇಲ್ಲಿಯೇ ಆಗಲೀ ಇನ್ಯಾವುದೇ ಲೋಕದಲ್ಲಿ ಮತ್ತೆ ಹುಟ್ಟಲು ಕಾರಣಗಳಾದ ಎಲ್ಲವನ್ನೂ ಇಲ್ಲಿಯೇ ಕಳಚಿಹಾಕಿ ಹೋದನು.

ಬುದ್ಧನು ಪರಿನಿರ್ವಾಣವನ್ನು ಹೊಂದಿದ್ದು ಕ್ರಿ. ಪೂ. ೫೪೩ರಲ್ಲಿ. ಅಂದು ವೈಶಾಖ ಪೂರ್ಣಿಮೆಯಾಗಿತ್ತು.

# ೬೩. ಮೊದಲನೆಯ ಬೌದ್ಧಸಮ್ಮೇಳನ

ಬುದ್ಧನ ಪರಿನಿರ್ವಾಣದಿಂದ ಅನಾಗಾಮಿಗಳು ಮತ್ತು ಅರ್ಹಂತರ ಹೊರತಾಗಿ ಮಿಕ್ಕವರೆಲ್ಲ ದುಃಖದಲ್ಲಿ ಮುಳುಗಿ ಅಳುತ್ತಾ ಕರೆಯುತ್ತಾ ಇದ್ದರು. ಒಬ್ಬ ನೀತಿಯಲ್ಲದ ಮುದುಕನು ಸಂಘವನ್ನು ಮುದಿ ವಯಸ್ಸಿನಲ್ಲಿ ಸೇರಿದ್ದವನು ಮಾತ್ರ ಬುದ್ಧನ ಮರಣದಿಂದ ಸಂತೋಷಗೊಂಡಿದ್ದನು.

ಅವನು ಹೇಳುತ್ತಿದ್ದನು- ''ದುಃಖಿಸಬೇಡಿ ಸಹೋದರರೇ, ಅಳಬೇಡಿ. ಆ ದೊಡ್ಡ ಸನ್ಯಾಸಿಯಿಂದ ಈಗ ನಾವು ಬಿಡುಗಡೆಗೊಂಡಿದ್ದೇವೆ. ಆತ ಯಾವಾಗಲೂ ಇದು ಸರಿಯಾಗಿದೆ. ಇದು ಸರಿಯಾಗಿಲ್ಲ ಎಂದು ನಮ್ಮನ್ನು ಗೋಳಾಡಿಸುತ್ತಿದ್ದನು. ಈಗ ನಾವು ಬೇಕಾದ್ದನ್ನು ಮಾಡಲಿಕ್ಕೆ ಸ್ವತಂತ್ರರಿದ್ದೇವೆ.''

ಒಬ್ಬ ಸನ್ಯಾಸಿಯ ಬಾಯಿಂದ ಇಂತಹ ನಿರೀಕ್ಷಿಸಲಾಗದ ಮಾತುಗಳನ್ನು ಕೇಳಿ ಬುದ್ಧನ ಮೂರನೇ ಮುಖ್ಯ ಶಿಷ್ಯನಾದ ಮಾನ್ಯ ಮಹಾಕಸ್ಸಪನಿಗೆ ಬಹಳ ದಿಗಿಲಾಯಿತು. ಆತನು ಬಹಳ ಮುಂಚೂಣಿಯಲ್ಲಿದ್ದ ಅರ್ಹಂತರನ್ನೆಲ್ಲಾ ಒಂದೆಡೆ ಸೇರಿಸಿ ಬುದ್ಧನ ಉಪದೇಶಗಳನ್ನು ಕಾಪಾಡಿಟ್ಟುಕೊಳ್ಳಲು ಬೇಕಾದ ಕೆಲಸವನ್ನು ಮಾಡಬೇಕೆಂದು ತನ್ನ ಯೋಜನೆಯನ್ನು ಅವರ ಮುಂದಿಟ್ಟನು. ಅವರೆಲ್ಲ ಅವನ ಸಲಹೆಯನ್ನು ಸಮ್ಮತಿಸಿದರು.

ರಾಜನಾದ ಅಜಾತಶತ್ರುವಿಗೆ ಈ ವಿಷಯವನ್ನು ತಿಳಿಸಲಾಯಿತು. ಅವನು ಸಂತೋಷದಿಂದ ಭಿಕ್ಷುಗಳೆಲ್ಲರೂ ರಾಜಗೃಹದ ಸತ್ತಪಣ್ಣಿ ಗುಹೆಯ ಹೊರಭಾಗದಲ್ಲಿ ಬಂದು ಸೇರಲು ತಕ್ಕ ಏರ್ಪಾಟುಗಳನ್ನು ಮಾಡಿದನು.

ಆ ದೊಡ್ಡ ಹಜಾರದಲ್ಲಿ ಸಮ್ಮೇಳನಕ್ಕಾಗಿ ಐದುನೂರು ಆಸನಗಳನ್ನು ಸಿದ್ಧಪಡಿಸಲಾಯಿತು. ಆದರೆ ೪೯೯ ಜನ ಪ್ರಸಿದ್ಧರಾದ ಅರ್ಹಂತರನ್ನು ಚುನಾಯಿಸಲಾಯಿತು. ಇನ್ನೊಂದು ಖಾಲಿಯಾದ ಆಸನವನ್ನು ಪೂಜ್ಯ ಆನಂದನಿಗಾಗಿ ಮೀಸಲಿಡಲಾಯಿತು. ಆಗಿನ್ನೂ ಅವನು ಅರ್ಹಂತನಾಗಿರಲಿಲ್ಲ. ಕೇವಲ ಸೋತಾಪನ್ನನಾಗಿದ್ದನು.

ಸಮ್ಮೇಳನಕ್ಕೆ ಇನ್ನೊಂದು ದಿನ ಮಾತ್ರ ಉಳಿದಿತ್ತು. ಆನಂದನು ಯೋಚಿಸಿದನು-''ಸಮ್ಮೇಳನ ನಾಳೆ ನಡೆಯುತ್ತದೆ. ನಾನು ಇನ್ನು ಕಲಿಯುತ್ತಿರುವ ವಿದ್ಯಾರ್ಥಿ. ನಾನಿನ್ನೂ ಅರ್ಹಂತನಾಗಿಲ್ಲ. ಹಾಗಿರುವಾಗ ನಾನು ಅಲ್ಲಿಗೆ ಹೋಗುವುದು ಸರಿಯಲ್ಲ. ಈಗ ಉಳಿದಿರುವ ಇಷ್ಟು ಸಮಯದಲ್ಲಿ ನಾನು ಕಷ್ಟಪಟ್ಟು ನನ್ನ ಮನಸ್ಸನ್ನು ಪವಿತ್ರಗೊಳಿಸಿಕೊಳ್ಳಲು ಪ್ರಯತ್ನಿಸಬೇಕು''.

ಅವನು ಆ ರಾತ್ರಿ ಬಹಳ ಹೊತ್ತು ಧ್ಯಾನಾಸಕ್ತನಾಗಿದ್ದನು. ಮನಸ್ಸನ್ನು ಶುಚಿಗೊಳಿಸುವ ಈ ವಿಧಾನವನ್ನು ಬುದ್ಧನು ಹೇಳಿಕೊಟ್ಟಿದ್ದನು. ಇನ್ನೇನು ಬೆಳಗಾಗುತ್ತಾ ಬಂದಿತು ಈಗ ಸ್ವಲ್ಪ ಮಲಗೋಣ ಎಂದುಕೊಂಡು ತನ್ನ ಶರೀರವನ್ನು ಜಾಗರೂಕವಾಗೇ ಇಟ್ಟುಕೊಂಡಿದ್ದನು. ಅವನ ತಲೆಯು ದಿಂಬನ್ನು ಮುಟ್ಟಲಿಕ್ಕೆ ಮುಂಚೆ ತನ್ನ ಕಾಲುಗಳನ್ನು ಭೂಮಿಯಿಂದ ಎತ್ತುತ್ತಿದ್ದಂತೆ ಅವನ ಮನೋವಿಕಾರಗಳೆಲ್ಲಾ

ಮಾಯವಾಗಿ ಅವನು ಅರ್ಹಂತನಾದನು. ಬೆಳಿಗ್ಗೆ ಅರ್ಹಂತನಾಗಿಯೇ ಸಭೆಗೆ ಹೋದನು.

ಬುದ್ಧನು ಕಾಲವಾದ ಮೂರು ತಿಂಗಳ ನಂತರ ಸಮ್ಮೇಳನವು ನಡೆಯಿತು. ಆ ಸಮ್ಮೇಳನವನ್ನು - ಬೌದ್ಧರ ಮೊದಲ ಸಮ್ಮೇಳನವೆಂದು (ಸಂಗಾಯನ) ಗುರ್ತಿಸಲಾಯಿತು.

ಈ ಮೊದಲ ಸಮ್ಮೇಳನದ ಅಧ್ಯಕ್ಷತೆಯನ್ನು ಪೂಜ್ಯನಾದ ಮಹಾಕಶ್ಯಪನು ವಹಿಸಿದ್ದನು. ಪೂಜ್ಯನಾದ ಉಪಾಲಿಯೂ ವಿನಯದ ಬಗ್ಗೆ ಮತ್ತು ಭಿಕ್ಷುಗಳ ಶಿಸ್ತು ಹಾಗೂ ನಿಯಮಗಳ ಬಗ್ಗೆ ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲು ಚುನಾಯಿಸಲ್ಪಟ್ಟನು. ಪೂಜ್ಯನಾದ ಆನಂದನು ಬುದ್ಧನ ಎಲ್ಲ ಉಪದೇಶಗಳನ್ನೂ ಕೇಳಿದ್ದನು. ಅಲ್ಲದೆ ಅವನಿಗೆ ಒಳ್ಳೆಯ ಜ್ಞಾಪಕ ಶಕ್ತಿಯೂ ಇದ್ದಿತು. ಆದ್ದರಿಂದ ಅವನು ಆ ಉಪದೇಶದ ಸೂತ್ರಗಳನ್ನು ಹೇಳಲು ಮತ್ತು ಕೇಳಲ್ಪಡುವ ಪ್ರಶ್ನೆಗಳಿಗೆ ಉತ್ತರಿಸಲು ಆರಿಸಲ್ಪಟ್ಟನು.

ಮೊದಲ ಬೌದ್ಧ ಸಮ್ಮೇಳನವು ಪಾಲಿ ತ್ರಿಪಿಟಕ ಅಥವಾ ಬೌದ್ಧ ಧರ್ಮ ಶಾಸ್ತ್ರವನ್ನು ಸಂಗ್ರಹ ಮಾಡಿತು. ನಂತರ ಅದು ಒಂದು ತಲೆಮಾರಿನ ಭಿಕ್ಷುಗಳಿಂದ ಇನ್ನೊಂದು ತಲೆಮಾರಿನವರೆಗೆ ಹರಡುತ್ತಿರುವ ಮೊದಲ ಕಾಲದಲ್ಲಿ ಉಪದೇಶಗಳು ಲಿಖಿತಬದ್ಧವಾಗಿ ದಾಖಲಾಗಿರಲಿಲ್ಲ. ಎಲ್ಲ ಭಿಕ್ಷುಗಳೂ ಆ ಸೂತ್ರಗಳನ್ನು ಬಾಯಿಪಾಠ ಮಾಡಿಕೊಂಡು ಮುಂದಿನವರಿಗೂ ಬಾಯಿಪಾಠ ಮಾಡಿಸಬೇಕಾಗುತ್ತಿತ್ತು. ಹೀಗೆ ಕಂಠಪಾಠ ಸಂಪ್ರದಾಯವೇ ನಡೆದುಬಂದಿತು.

ಮೊದಲನೆಯ ಸಮ್ಮೇಳನದ ೧೦೦ ವರ್ಷಗಳ, ಹಾಗೂ ೨೩೬ ವರ್ಷಗಳ ನಂತರ ಬೌದ್ಧರ ಎರಡನೆಯ ಮತ್ತು ಮೂರನೆಯ ಸಮ್ಮೇಳನಗಳು ನಡೆದುವು. ಆಗ ಬುದ್ಧನು ಹೇಳಿದ್ದ ಉಪದೇಶಗಳಲ್ಲಿ ಭ್ರಷ್ಟತೆಯುಂಟಾಗಬಹುದೆಂದು ಮತ್ತೆ ಮತ್ತೆ ಬುದ್ಧನು ಹೇಳಿದ್ದ ಪವಿತ್ರವಾದ ಶಬ್ದಗಳನ್ನು ಪುನರುಚ್ಚರಿಸಲಾಯಿತು.

ಕ್ರಿ.ಪೂ. ೮೩ರಲ್ಲಿ ಸಿಂಹಳವನ್ನು ಧರ್ಮಾಚಾರಿ ವಟ್ಟಗಾಮಿ ಅಭಯನೆಂಬ ರಾಜನು ಆಳುತ್ತಿದ್ದನು. ಇವನ ಕಾಲದಲ್ಲಿ ಶ್ರೀಲಂಕಾದಲ್ಲಿ ಅರ್ಹಂತರ ಸಮ್ಮೇಳನವು ನಡೆದು ಬೌದ್ಧಮತದ ಇತಿಹಾಸದಲ್ಲಿ ಮೊಟ್ಟಮೊದಲಿಗೆ ಆ ಉಪದೇಶಗಳನ್ನು ತಾಡಪತ್ರಗಳ ಮೇಲೆ ಬರೆದು ಸಂರಕ್ಷಿಸಲಾಯಿತು. ಈ ಐತಿಹಾಸಿಕ ಸಮ್ಮೇಳನವು ಶ್ರೀಲಂಕಾದ ಅಲುವಿಹಾರ ಎಂಬ ಹಳ್ಳಿಯಲ್ಲಿ ನಡೆಯಿತು.

*"Wherever the Buddha's teachings have flourished,*

*either in cities or countrysides,*

*people would gain inconceivable benefits.*

*The land and people would be enveloped in peace.*

*The sun and moon will shine clear and bright.*

*Wind and rain would appear accordingly,*

*and there will be no disasters.*

*Nations would be prosperous*

*and there would be no use for soldiers or weapons.*

*People would abide by morality and accord with laws.*

*They would be courteous and humble,*

*and everyone would be content without injustices.*

*There would be no thefts or violence.*

*The strong would not dominate the weak*

*and everyone would get their fair share."*

*THE BUDDHA SPEAKS OF
THE INFINITE LIFE SUTRA OF
ADORNMENT, PURITY, EQUALITY
AND ENLIGHTENMENT OF
THE MAHAYANA SCHOOL*

## Taking Refuge with a mind of Bodhichitta

In the Buddha, the Dharma and the Sangha,
I shall always take refuge
Until the attainment of full awakening.

Through the merit of practicing generosity
and other perfections,
May I swiftly accomplish Buddhahood,
And benefit of all sentient beings.

## The Prayers of the Bodhisattvas

With a wish to awaken all beings,
I shall always go for refuge
To the Buddha, Dharma, and Sangha,
Until I attain full enlightenment.

Possessing compassion and wisdom,
Today, in the Buddha's presence,
I sincerely generate
the supreme mind of Bodhichitta
For the benefit of all sentient beings.

"As long as space endures,
As long as sentient beings dwell,
Until then, may I too remain
To dispel the miseries of all sentient beings."

## GREAT VOW
## BODHISATTVA EARTH-TREASURY
## ( BODHISATTVA KSITIGARBHA )

**" Unless Hells become empty,**
**I vow not to attain Buddhahood;**
**Till all have achieved the Ultimate Liberation,**
**I shall then consider my Enlightenment full !"**

**Bodhisattva Earth-Treasury is**
**entrusted as the Caretaker of the World until**
**Buddha Maitreya reincarnates on Earth**
**in 5.7 billion years.**

**Reciting the Holy Name:**
**NAMO BODHISATTVA KSITIGARBHA**

**Karma-erasing Mantra:**
**OM BA LA MO LING TO NING SVAHA**

With bad advisors forever left behind,
From paths of evil he departs for eternity,
Soon to see the Buddha of Limitless Light
And perfect Samantabhadra's Supreme Vows.

The supreme and endless blessings
of Samantabhadra's deeds,
I now universally transfer.
May every living being, drowning and adrift,
Soon return to the Pure Land of Limitless Light!

**✻ The Vows of Samantabhadra ✻**

I vow that when my life approaches its end,
All obstructions will be swept away;
I will see Amitabha Buddha,
And be born in His Western Pure Land of
Ultimate Bliss and Peace.

When reborn in the Western Pure Land,
I will perfect and completely fulfill
Without exception these Great Vows,
To delight and benefit all beings.

**✻ The Vows of Samantabhadra Avatamsaka Sutra ✻**

## DEDICATION OF MERIT

May the merit and virtue
accrued from this work
adorn Amitabha Buddha's Pure Land,
repay the four great kindnesses above,
and relieve the suffering of
those on the three paths below.
May those who see or hear of these efforts
generate Bodhi-mind,
spend their lives devoted to the Buddha Dharma,
and finally be reborn together in
the Land of Ultimate Bliss.
Homage to Amita Buddha!

**NAMO AMITABHA**

南無阿彌陀佛

《印度 KANNADA 文：LIFE OF THE BUDDHA FOR CHILDREN》

財團法人佛陀教育基金會 印贈
台北市杭州南路一段五十五號十一樓

Printed and donated for free distribution by
**The Corporate Body of the Buddha Educational Foundation**
11F., 55 Hang Chow South Road Sec 1, Taipei, Taiwan, R.O.C.
Tel: 886-2-23951198 , Fax: 886-2-23913415
Email: overseas@budaedu.org
Website:http://www.budaedu.org
Mobile Web: m.budaedu.org

**This book is strictly for free distribution, it is not to be sold.**
ಈ ಪುಸ್ತಕ ಕೇವಲ ಉಚಿತ ಹಂಚಿಕೆಗಾಗಿ. ಮಾರಾಟ ಮಾಡಕೂಡದು

Printed in Taiwan
10,000 copies; November 2015
IN027 - 13694